ಮಗು ಮತ್ತು ಕಾನೂನು ಕೇಂದ್ರ
ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ

ನಾಗರಭಾವಿ, ಬೆಂಗಳೂರು - 560 072, ಭಾರತ
ದೂರವಾಣಿ: +91-080-2301 0000
ಈಮೇಲ್: ccl@nls.ac.in
ವೆಬ್‌ಸೈಟ್: https://ccl.nls.ac.in



# ಹಸಿವು ಮತ್ತು ಅಪೌಷ್ಟಿಕತೆ ಮುಕ್ತ ಗ್ರಾಮ ಪಂಚಾಯಿತಿಯೆಡೆಗೆ

## ಗ್ರಾಮ ಪಂಚಾಯಿತಿಯ ಪಾತ್ರ ಮತ್ತು ಹೊಣೆಗಾರಿಕೆಗಳು

CENTRE FOR CHILD AND THE LAW (CCL)
National Law School of India University (NLSIU)

# ಹಸಿವು ಮತ್ತು ಅಪೌಷ್ಟಿಕತೆ ಮುಕ್ತ ಗ್ರಾಮ ಪಂಚಾಯಿತಿಯೆಡೆಗೆ

## *ಗ್ರಾಮ ಪಂಚಾಯಿತಿಯ ಪಾತ್ರ ಮತ್ತು ಹೊಣೆಗಾರಿಕೆಗಳು*


ಮಗು ಮತ್ತು ಕಾನೂನು ಕೇಂದ್ರ

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ಯುನಿವರ್ಸಿಟಿ. ಬೆಂಗಳೂರು

**2021**

**ಮಗು ಮತ್ತು ಕಾನೂನು ಕೇಂದ್ರ**

**ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ಯುನಿವರ್ಸಿಟಿ. ಬೆಂಗಳೂರು**
**2021**

ಈ ಪ್ರಕಟಣೆಯ ಯಾವುದೇ ಭಾಗವನ್ನು ಮಗು ಮತ್ತು ಕಾನೂನು ಕೇಂದ್ರದ (ಸಿಸಿಎಲ್) ಸೂಕ್ತ ಒಪ್ಪಿಗೆ ಪಡೆದು ಮರು–ಪ್ರಕಟಿಸಬಹುದು.

| | |
|---|---|
| **ಮೊದಲ ಆವೃತ್ತಿ** | : **2021** |
| **ಲೇಖಕರು** | : ಸುಧಾ ರೆಡ್ಡಿ |
| **ಮಾಹಿತಿ** | : ಡಾ. ನೀತು ಶರ್ಮ |
| **ಸಂಪಾದನೆ** | : ಶೃತಿ ರಾಮನ್ |
| **ಐಎಸ್‌ಬಿಎನ್ ಸಂಖ್ಯೆ** | : 978–93–91111–28–1 |
| **ವಿನ್ಯಾಸ** | : **ಹರ್ಷ** |
| **ಮುದ್ರಣ** | : |

**ಪ್ರಕಟಣೆ:**

ಮಗು ಮತ್ತು ಕಾನೂನು ಕೇಂದ್ರ (ಸಿಸಿಎಲ್)
**ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ಯುನಿವರ್ಸಿಟಿ**
ನಾಗರಬಾವಿ, ಬೆಂಗಳೂರು – 560 072, ಭಾರತ
ದೂರವಾಣಿ: + 91–80–2301 0000
ಇ–ಮೇಲ್: ccl@nls.ac.in
ಜಾಲತಾಣ: http://ccl.nls.ac.in
ಫೇಸ್‌ಬುಕ್: @centreforchildandthelaw
ಲಿಂಕ್ಡ್ ಇನ್ : @ccl-nlsiu

# ವಿ ಷ ಯ ಸೂ ಚಿ


| | |
|---|---|
| ಸಂಕ್ಷಿಪ್ತಾಕ್ಷರಗಳು | i |
| ಕೃತಜ್ಞತೆಗಳು | iv |
| ಮುನ್ನುಡಿ | v |
| ಪರಿಚಯ | 1 |
| ಪಂಚಾಯತ್ ರಾಜ್ ವ್ಯವಸ್ಥೆ – ಸಂಕ್ಷಿಪ್ತ ಪರಿಚಯ | 4 |
| ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಅಪೌಷ್ಟಿಕತೆ ಮತ್ತು ಆಹಾರ ಹಕ್ಕಿನ ಅವಲೋಕನ | 8 |
| ರಾಷ್ಟ್ರೀಯ ಆಹಾರ ಸುರಕ್ಷತೆ ಅಧಿನಿಯಮ, 2013:<br>ಹಸಿವು ಮತ್ತು ಅಪೌಷ್ಟಿಕತೆಯ ನಿವಾರಣೆಗಾಗಿ ರಚಿಸಿದ ಕಾನೂನು | 13 |
| ‘ಹಸಿವು ಮತ್ತು ಅಪೌಷ್ಟಿಕತೆ ಮುಕ್ತ ಗ್ರಾಮ ಪಂಚಾಯಿತಿ’ಯನ್ನು ಸುನಿಶ್ಚಿತಗೊಳಿಸುವಲ್ಲಿ<br>ಗ್ರಾಮ ಪಂಚಾಯಿತಿಯ ಪಾತ್ರ ಮತ್ತು ಹೊಣೆಗಾರಿಕೆಗಳು | 19 |
| ರಾಷ್ಟ್ರೀಯ ಆಹಾರ ಸುರಕ್ಷತೆ ಅಧಿನಿಯಮದ ವ್ಯಾಪ್ತಿ ಮೀರಿ ಆಹಾರದ ಮತ್ತು<br>ಪೌಷ್ಟಿಕತೆಯ ಸುರಕ್ಷತೆಯನ್ನು ಖಾತರಿಪಡಿಸುವುದು | 40 |
| ಅನುಬಂಧ 1: ಕರ್ನಾಟಕದಲ್ಲಿ ಮತ್ತು ಭಾರತದಲ್ಲಿ ಕ್ರಿಯಾಶೀಲ ಗ್ರಾಮ ಪಂಚಾಯಿತಿಗಳು ಯಶಸ್ವಿ ಕಥೆಗಳು | 54 |
| ಅನುಬಂಧ 2: ಸಾರ್ವಜನಿಕ ಸೇವೆಗಳ ಮೇಲ್ವಿಚಾರಣಾ ಸಾಧನ (ಟೂಲ್) | 61 |
| ಉಲ್ಲೇಖಗಳು | 63 |

## ಕೋಷ್ಟಕಗಳ ಪಟ್ಟಿ


| | | |
|---|---|---|
| ಕೋಷ್ಟಕ 1 : | ಮಕ್ಕಳಲ್ಲಿ ನ್ಯೂನ ಪೌಷ್ಟಿಕತೆಯ ಮೂರು ಸ್ಥೂಲ ವಿಧಗಳು | 10 |
| ಕೋಷ್ಟಕ 2 : | ಎನ್‌ಎಫ್‌ಎಸ್‌ಎ, 2013ಕ್ಕೆ ಹೆಚ್ಚುವರಿಯಾಗಿ ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಹಸಿವು ಮತ್ತು ಅಪೌಷ್ಟಿಕತೆಯನ್ನು ಹೋಗಲಾಡಿಸಲು ಇರುವ ಪ್ರಮುಖ ಕಾರ್ಯಕ್ರಮಗಳು ಮತ್ತು ಯೋಜನೆಗಳು | 11 |
| ಕೋಷ್ಟಕ 3 : | ಎನ್‌ಎಫ್‌ಎಸ್‌ಎ, 2013ರ ಅಡಿಯಲ್ಲಿನ ಪ್ರಕರಣಗಳು, ಉಪಲಬ್ಧಿಗಳು, ಯೋಜನೆಗಳು, ಪೌಷ್ಟಿಕತೆಯ ಗುಣಮಟ್ಟಗಳು ಮತ್ತು ವಿತರಣೆ ಕೇಂದ್ರಗಳು | 13 |
| ಕೋಷ್ಟಕ 4 : | ಗ್ರಾಮ ಪಂಚಾಯಿತಿಯು ಏನು ಮಾಡಬಹುದು: ಎನ್‌ಎಫ್‌ಎಸ್‌ಎ, 2013ರ ಅಡಿಯಲ್ಲಿ ಉಪಬಂಧಗಳ ಮತ್ತು ಯೋಜನೆಗಳ ಅನುಷ್ಠಾನ | 19 |
| ಕೋಷ್ಟಕ 5 : | ಎನ್‌ಎಫ್‌ಎಸ್‌ಎ, 2013ರ ಅಡಿಯಲ್ಲಿ ಸ್ಕೀಮುಗಳಿಗೆ ಸಂಬಂಧಿಸಿದ ಸಹಾಯವಾಣಿಗಳು ಮತ್ತು ಕರೆ ಕೇಂದ್ರಗಳು | 32 |
| ಕೋಷ್ಟಕ 6 : | 11ನೇ ಅನುಸೂಚಿಯ ಅಡಿಯಲ್ಲಿ ಆಹಾರ ಮತ್ತು ಪೌಷ್ಟಿಕ ಆಹಾರದ ವಿಷಯಗಳಿಗೆ ಸಂಬಂಧಿಸಿದ ಸಚಿವಾಲಯಗಳು ಮತ್ತು ಯೋಜನೆಗಳು | 40 |
| ಕೋಷ್ಟಕ 7 : | ಪ್ರಮುಖ ಕಾರ್ಯಕ್ರಮಗಳು ಮತ್ತು ಸಂಬಂಧಪಟ್ಟ ಇಲಾಖೆಗಳು | 53 |


## ರೇಖಾಚಿತ್ರಗಳ ಪಟ್ಟಿ


| | | |
|---|---|---|
| ರೇಖಾಚಿತ್ರ 1 : | ಕರ್ನಾಟಕದಲ್ಲಿ ಮಕ್ಕಳ ಪೌಷ್ಟಿಕಾಂಶದ ಸ್ಥಿತಿಗತಿ | 9 |
| ರೇಖಾಚಿತ್ರ 2 : | ಕರ್ನಾಟಕದ ಜಿಲ್ಲೆಗಳಲ್ಲಿ ಅಪೌಷ್ಟಿಕತೆ | 9 |
| ರೇಖಾಚಿತ್ರ 3 : | ಮಕ್ಕಳ ಬೆಳವಣಿಗೆ ಮೇಲೆ ಅಪೌಷ್ಟಿಕತೆಯ ಪ್ರಭಾವ | 10 |

# ಸಂಕ್ಷಿಪ್ತಾಕ್ಷರಗಳು

| | |
|---|---|
| **ಎಎವೈ** | *ಅಂತ್ಯೋದಯ ಅನ್ನ ಯೋಜನೆ* |
| **ಎಎನ್‌ಎಮ್** | ಸಹಾಯಕ ಶುಶ್ರೂಷಕಿ |
| **ಎಪಿಎಲ್** | ಬಡತನ ರೇಖೆಗಿಂತ ಮೇಲಿನ |
| **ಎಎಸ್‌ಹೆಚ್‌ಎ (ಆಶಾ)** | ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತರು |
| **ಎಡಬ್ಲ್ಯುಸಿ** | ಅಂಗನವಾಡಿ ಕೇಂದ್ರ |
| **ಎಡಬ್ಲ್ಯುಡಬ್ಲ್ಯು** | ಅಂಗನವಾಡಿ ಕಾರ್ಯಕರ್ತರು |
| **ಬಿಬಿಬಿಪಿ** | *ಬೇಟಿ ಬಚಾವೋ ಬೇಟಿ ಪಡಾವೋ* |
| **ಬಿಪಿಎಲ್** | ಬಡತನ ರೇಖೆಗಿಂತ ಕೆಳಗಿನ |
| **ಬಿವಿಎಸ್** | *ಬಾಲ ವಿಕಾಸ ಸಮಿತಿ* |
| **ಸಿಬಿಎಮ್‌ಪಿ** | ಸಮುದಾಯ–ಆಧಾರಿತ ಮೇಲ್ವಿಚಾರಣೆ ಮತ್ತು ಯೋಜನೆ |
| **ಸಿಡಿಪಿಒ** | ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿ |
| **ಸಿಎನ್‌ಎನ್‌ಎಸ್** | ಸಮಗ್ರ ರಾಷ್ಟ್ರೀಯ ಪೌಷ್ಟಿಕಾಂಶ ಸಮೀಕ್ಷೆ |
| **ಸಿಎಸ್‌ಆರ್** | ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ |
| **ಡಿಎವೈ–ಎನ್‌ಆರ್‌ಎಲ್‌ಎಂ** | *ದೀನದಯಾಳ್ ಅಂತ್ಯೋದಯ ಯೋಜನೆ – ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಮಿಷನ್)* |
| **ಡಿಜಿಆರ್‌ಒ** | ಜಿಲ್ಲಾ ಕುಂದುಕೊರತೆ ಪರಿಹಾರ ಅಧಿಕಾರಿ |
| **ಎಫ್‌ಪಿಎಸ್** | ನ್ಯಾಯಬೆಲೆ ಅಂಗಡಿ |
| **ಜಿಪಿ** | ಗ್ರಾಮ ಪಂಚಾಯಿತಿ |
| **ಜಿಪಿಡಿಪಿ** | ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ |
| **ಜಿಪಿಒಡಿ** | ಗ್ರಾಮ ಪಂಚಾಯಿತಿ ಸಾಂಸ್ಥಿಕ ಅಭಿವೃದ್ಧಿ |
| **ಜಿಆರ್‌ಎಮ್** | ಕುಂದುಕೊರತೆ ಪರಿಹಾರ ವ್ಯವಸ್ಥೆ |
| **ಐಸಿಎಆರ್** | ಭಾರತ ಕೃಷಿ ಸಂಶೋಧನಾ ಪರಿಷತ್ |
| **ಐಸಿಡಿಎಸ್** | ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳು |
| **ಐಸಿಪಿಎಸ್** | ಸಮಗ್ರ ಮಕ್ಕಳ ಸಂರಕ್ಷಣಾ ಸಂಘ |
| **ಐಜಿಎಮ್‌ಎಸ್‌ವೈ** | ಇಂದಿರಾ ಗಾಂಧಿ ಮಾತೃತ್ವ ಸಹಯೋಗ ಯೋಜನೆ |
| **ಐಜಿಎನ್‌ಒಎಪಿಎಸ್** | ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ ಯೋಜನೆ |
| **ಐಜಿಎನ್‌ಡಿಪಿಎಸ್** | ಇಂದಿರಾ ಗಾಂಧಿ ರಾಷ್ಟ್ರೀಯ ಅಂಗವಿಕಲರ ಪಿಂಚಣಿ ಯೋಜನೆ |
| **ಐಜಿಎನ್‌ಡಬ್ಲ್ಯುಪಿಎಸ್** | ಇಂದಿರಾ ಗಾಂಧಿ ರಾಷ್ಟ್ರೀಯ ವಿಧವಾ ಪಿಂಚಣಿ ಯೋಜನೆ |
| **ಐಜಿಆರ್‌ಎಮ್** | ಅಂತರಾಷ್ಟ್ರೀಯ ಕುಂದುಕೊರತೆ ಪರಿಹಾರ ವ್ಯವಸ್ಥೆ |

| | |
|---|---|
| **ಜೆಸಿಎಸ್** | ಜಾಬ್ ಕಾರ್ಡ್ಸ್ |
| **ಜೆಎಸ್‌ವೈ** | *ಜನನಿ ಸುರಕ್ಷಾ ಯೋಜನೆ* |
| **ಕೆವಿಕೆ** | *ಕೃಷಿ ವಿಜ್ಞಾನ ಕೇಂದ್ರ* |
| **ಎಲ್‌ಎಮ್** | ಹಾಲುಣಿಸುವ ತಾಯಂದಿರು |
| **ಎಮ್‌ಬಿಎಸ್** | ಪ್ರಸೂತಿ ಪ್ರಯೋಜನ ಯೋಜನೆ |
| **ಎಮ್‌ಡಿಎಮ್‌ಎಸ್** | ಮಧ್ಯಾಹ್ನ ಬಿಸಿ ಊಟ ಯೋಜನೆ |
| **ಎಮ್‌ಜಿಎನ್‌ಆರ್‌ಇಜಿಎ** | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ |
| **ಎಮ್‌ಜಿಎನ್‌ಆರ್‌ಇಜಿಎಸ್** | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ |
| **ಎಮ್‌ಐಡಿಹೆಚ್** | ಸಮಗ್ರ ತೋಟಗಾರಿಕೆ ಅಭಿವೃದ್ಧಿ ಅಭಿಯಾನ (ಮಿಷನ್) |
| **ಎನ್‌ಎಡಿಇಪಿ** | ನಾರಾಯಣ ಡಿಯೋಟಾ ಪಂಡರಿಪಾಂಡೆ ರಸಗೊಬ್ಬರ ವಿಧಾನ |
| **ಎನ್‌ಎಫ್‌ಬಿಎಸ್** | ರಾಷ್ಟ್ರೀಯ ಕುಟುಂಬ ಪ್ರಯೋಜನ ಯೋಜನೆ |
| **ಎನ್‌ಎಫ್‌ಹೆಚ್‌ಎಸ್** | ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ |
| **ಎನ್‌ಎಫ್‌ಎಸ್‌ಎ** | ರಾಷ್ಟ್ರೀಯ ಆಹಾರ ಸುರಕ್ಷತೆ ಅಧಿನಿಯಮ |
| **ಎನ್‌ಎಫ್‌ಎಸ್‌ಎಮ್** | ರಾಷ್ಟ್ರೀಯ ಆಹಾರ ಸುರಕ್ಷತಾ ಅಭಿಯಾನ (ಮಿಷನ್) |
| **ಎನ್‌ಹೆಚ್‌ಎಮ್** | ರಾಷ್ಟ್ರೀಯ ಆರೋಗ್ಯ ಅಭಿಯಾನ (ಮಿಷನ್) |
| **ಎನ್‌ಐಟಿಐ ಆಯೋಗ** | ಭಾರತ ಪರಿವರ್ತನಾ ರಾಷ್ಟ್ರೀಯ ಸಂಸ್ಥೆ |
| **ಎನ್‌ಎಮ್‌ಬಿಎಸ್** | ರಾಷ್ಟ್ರೀಯ ಪ್ರಸೂತಿ ಪ್ರಯೋಜನ ಯೋಜನೆ |
| **ಎನ್‌ಎನ್‌ಎಮ್** | ರಾಷ್ಟ್ರೀಯ ಪೌಷ್ಟಿಕ ಆಹಾರ ಮಾಸ |
| **ಎನ್‌ಆರ್‌ಸಿ** | ಪೌಷ್ಟಿಕ ಆಹಾರ ಪುನರ್ವಸತಿ ಕೇಂದ್ರ |
| **ಎನ್‌ಆರ್‌ಡಿಡಬ್ಲ್ಯುಪಿ** | ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ |
| **ಎನ್‌ಆರ್‌ಹೆಚ್‌ಎಮ್** | ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಮಿಷನ್) |
| **ಎನ್‌ಆರ್‌ಎಲ್‌ಎಮ್** | ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಮಿಷನ್) |
| **ಎನ್‌ಎಸ್‌ಎಪಿ** | ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮ |
| **ಪಿಡಿಎಸ್** | ಸಾರ್ವಜನಿಕ ವಿತರಣಾ ವ್ಯವಸ್ಥೆ |
| **ಪಿಹೆಚ್‌ಹೆಚ್** | ಆದ್ಯತೆಯ ಕುಟುಂಬಗಳು |
| **ಪಿಕೆವಿವೈ** | *ಪರಂಪರಾನುಗತ ಕೃಷಿ ವಿಕಾಸ ಯೋಜನೆ* |
| **ಪಿಎಮ್‌ಎವೈ** | *ಪ್ರಧಾನ ಮಂತ್ರಿ ಆವಾಸ್ ಯೋಜನೆ* |
| **ಪಿಎಮ್‌ಕೆಎಸ್‌ವೈ** | *ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ* |
| **ಪಿಆರ್‌ಎ** | ಗ್ರಾಮೀಣ ಸಹಭಾಗಿತ್ವ ಮೌಲ್ಯಮಾಪನ |
| **ಪಿಆರ್‌ಐ** | ಪಂಚಾಯತ್ ರಾಜ್ ಸಂಸ್ಥೆ |
| **ಪಿಟಿಎ** | ಪೋಷಕ–ಶಿಕ್ಷಕರ ಸಹಭಾಗಿತ್ವ ಸಂಘ |

| | |
|---|---|
| **ಪಿಡಬ್ಲ್ಯು** | ಗರ್ಭಿಣಿ ಮಹಿಳೆ |
| **ಆರ್‌ಸಿಹೆಚ್** | ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ |
| **ಆರ್‌ಡಿಪಿಆರ್** | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ |
| **ಆರ್‌ಜಿಎಸ್‌ಸಿಎಜಿ** | ರಾಜೀವ್ ಗಾಂಧಿ ಕಿಶೋರಿ ಸಬಲೀಕರಣ ಯೋಜನೆ |
| **ಆರ್‌ಕೆವಿವೈ** | *ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ* |
| **ಎಸ್‌ಡಿಎಮ್‌ಸಿ** | ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ |
| **ಎಸ್‌ಎಫ್‌ಸಿ** | ರಾಜ್ಯ ಆಹಾರ ಆಯೋಗ |
| **ಎಸ್‌ಹೆಚ್‌ಸಿ** | ಮಣ್ಣು ಗುಣಮಟ್ಟ ಚೀಟಿ (ಸಾಯಿಲ್ ಹೆಲ್ತ್ ಕಾರ್ಡ್) |
| **ಎಸ್‌ಹೆಚ್‌ಜಿ** | ಸ್ವ-ಸಹಾಯ ಗುಂಪು |
| **ಎಸ್‌ಎನ್‌ಪಿ** | ಪೂರಕ ಪೋಷಕ ಆಹಾರ ಕಾರ್ಯಕ್ರಮ |
| **ಎಸ್‌ಎಸ್‌ಎ** | *ಸರ್ವ ಶಿಕ್ಷಾ ಅಭಿಯಾನ* |
| **ಓಪಿಡಿಎಸ್** | ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆ |
| **ಟಿಎಸ್‌ಸಿ** | ಸಮಗ್ರ ನೈರ್ಮಲ್ಯ ಆಂದೋಲನ |
| **ಯುಎಲ್‌ಬಿ** | ನಗರ ಸ್ಥಳೀಯ ಸಂಸ್ಥೆಗಳು |
| **ಯುಟಿ** | ಒಕ್ಕೂಟ ರಾಜ್ಯಕ್ಷೇತ್ರ |
| **ವಿಇಸಿ** | ಗ್ರಾಮ ಶಿಕ್ಷಣ ಸಮಿತಿ |
| **ವಿಹೆಚ್‌ಎನ್‌ಡಿ** | ಗ್ರಾಮ ಆರೋಗ್ಯ ಮತ್ತು ಪೋಷಕ ಆಹಾರ ದಿನ |
| **ವಿಹೆಚ್‌ಎಸ್‌ಎನ್‌ಸಿ** | ಗ್ರಾಮ ಆರೋಗ್ಯ ನೈರ್ಮಲ್ಯ ಮತ್ತು ಪೋಷಕ ಆಹಾರ ಸಮಿತಿ |
| **ಡಬ್ಲ್ಯುಎಎಸ್‌ಹೆಚ್** | ನೀರು, ನೈರ್ಮಲ್ಯ ಮತ್ತು ಸ್ವಚ್ಛತೆ |
| **ಡಬ್ಲ್ಯುಐಎಫ್‌ಎಸ್** | ಕಬ್ಬಿಣ ಮತ್ತು ಫಾಲಿಕ್ ಆಸಿಡ್ ಪೂರೈಕೆ ಸಾಪ್ತಾಹಿಕ ಕಾರ್ಯಕ್ರಮ |

# ಕೃತಜ್ಞತೆಗಳು

ಈ ಕೈಪಿಡಿಯು, ರಾಷ್ಟ್ರೀಯ ಆಹಾರ ಸುರಕ್ಷತೆ ಅಧಿನಿಯಮ, 2013ರ ಕಾರ್ಯಚೌಕಟ್ಟಿನಲ್ಲಿ ಆಹಾರ, ಪೋಷಕಾಂಶಗಳ ಮತ್ತು ಮಕ್ಕಳ ಹಕ್ಕುಗಳ ದೃಷ್ಟಿಯಿಂದ, ಗ್ರಾಮ ಪಂಚಾಯಿತಿ ವ್ಯಾಪ್ತಿಯೊಳಗೆ, ಹಸಿವು ಮತ್ತು ಅಪೌಷ್ಟಿಕತೆಯನ್ನು ಹೋಗಲಾಡಿಸುವ ದಿಸೆಯಲ್ಲಿ ಗ್ರಾಮ ಪಂಚಾಯಿತಿಯ ಕಾರ್ಯನಿರ್ವಾಹಕರ ಮತ್ತು ಚುನಾಯಿತ ಪ್ರತಿನಿಧಿಗಳ ಪಾತ್ರವನ್ನು ಮತ್ತು ಹೊಣೆಗಾರಿಕೆಗಳನ್ನು ಕುರಿತು ತಿಳಿಸುವ ಕಡೆಗೆ ಗಮನವನ್ನು ಕೇಂದ್ರೀಕರಿಸುವ ಒಂದು ಪ್ರಯತ್ನವಾಗಿದೆ.

ಕರ್ನಾಟಕದ ಗ್ರಾಮಗಳಲ್ಲಿ, ಗ್ರಾಮ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳೊಂದಿಗೆ ಮತ್ತು ಮುಂಚೂಣಿ ಕಾರ್ಯಕರ್ತರೊಂದಿಗೆ ಹಲವಾರು ಸಾಮರ್ಥ್ಯ ನಿರ್ಮಾಣ ಅಧಿವೇಶನಗಳನ್ನು ಮತ್ತು ಸಂವಾದಗಳನ್ನು ನಡೆಸಿದಾಗ ದೊರೆತ ಸಾಕಷ್ಟು ಕ್ಷೇತ್ರ ಅನುಭವಗಳು ಈ ಕೈಪಿಡಿಯನ್ನು ಹೊರತರುವಲ್ಲಿ ಪ್ರೇರಣೆ ನೀಡಿವೆ. ತಳಮಟ್ಟದ ಸ್ಥಿತಿಗತಿಯನ್ನು ಮತ್ತು ಪಂಚಾಯಿತಿಗಳ ಪ್ರಸ್ತುತ ಮತ್ತು ಭವಿಷ್ಯದ ಪಾತ್ರವನ್ನು ತಿಳಿದುಕೊಳ್ಳುವಲ್ಲಿ, ನಮಗೆ ನೆರವು ನೀಡಿದ ನಮ್ಮ ಸಮುದಾಯ ಪ್ರೇರಕರಿಗೆ, ಗ್ರಾಮ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳಿಗೆ, ಮುಂಚೂಣಿ ಕಾರ್ಯನಿರ್ವಾಹಕರಿಗೆ ಮತ್ತು ಸಮುದಾಯಕ್ಕೆ ನಾವು ಅತ್ಯಂತ ಕೃತಜ್ಞರಾಗಿದ್ದೇವೆ.

**ಮಗು ಮತ್ತು ಕಾನೂನು ಕೇಂದ್ರ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ.**
**ಬೆಂಗಳೂರು (ಸಿಸಿಎಲ್, ಎನ್‌ಎಲ್‌ಎಸ್‌ಐಯು)**

ಶಿಲ್ಪಾ ನಾಗ್ ಭಾ.ಆ.ಸೇ.,
ನಿರ್ದೇಶಕರು (ಇ-ಆಡಳಿತ)
**SHILPA NAG I.A.S.,**
Director (e-Governance)

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
Government of Karnataka
Rural Development & Panchayath Raj Dept.

## FOREWORD

Peoples' participation in the governance is at the heart of democratic values and principles that ought to inspire the modern liberal democracies. Local self-governance, especially in rural areas, is a critical link that strives to bridge the gap between people and the government. Panchayati Raj Institutions, the PRIs have a crucial role in enabling participation of people in the governance and making people feel part of the democratic processes. For more than 833 million people living in villages, PRIs are the most intimate point of governance. A combination of the authority vested in PRIs by the 73rd amendment and then the respective state law on decentralised governance on one hand, and the familiarity and understanding of the challenge faced by people and position of PRIs as one of the most decisive actors in the administrative machinery, especially when it comes to addressing problems and overcoming bottlenecks.

PRIs have been playing a major role towards implementation of a number of local schemes and programmes aimed at addressing peoples' problems, be it access to facilities such as road, electricity or provisioning of health, water and food. Implementation of schemes and programmes on the ground will remain a distant reality without cooperation and proactive engagement of PRIs. It is hence very important to carve out specific roles and create opportunities for their effective engagement in the process of implementation of schemes, and programmes.

The National Food Security Act 2013 (NFSA) addresses the most cardinal need of people of the country. The vision of *ensuring food and nutrition security in the life cycle approach* cannot be achieved without proactive involvement of the gram panchayat representatives. Fortunately, the NFSA does create an explicit role for the local authorities and the same has been mentioned in the Act. Further elaboration of their role will definitely help them play their role more effectively.

Centre for Child and the Law (CCL) of the National Law School of India University (NLSIU), Bangalore has been involved in research, training and teaching of food security and nutrition related issues and has closely looked at the implementation of NFSA as a tool for eradicating hunger and malnutrition. I am glad to know that the Centre has taken the initiative of elaborating the role of PRIs in this context and has also generated capacity building material to help them understand, appreciate and carry on their functions, both

I congratulate the author, Ms. Sudha Reddy and the CCL Team for compiling and interpreting all the useful information into this Manual that captures the very essence of PRIs' role, especially of gram panchayats in implementation of NFSA, while also reflecting upon the theoretical, conceptual and normative understanding of food as a right. I believe that this Manual will trigger the desired responses from the panchayat representatives and will act as a foundation for more work in this area.

(Shilpa Nag)

ರೂಮ್ ನಂ. 201, 3ನೇ ಗೇಟ್, 2ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು - 560 001. Room No. 201, 3rd Gate, 2nd Floor, M.S. Building, Bengaluru - 560 001.
Tel. : 080-2203 2238 Mobile : 94808 50101, E-mail : diregov.rdpr@gov.in , shilpanag.ct@ias.nic.in

# ಪರಿಚಯ

ಬಡತನ, ಸಂಘರ್ಷಗಳು, ಹವಾಮಾನ ವೈಪರೀತ್ಯಗಳು ಮತ್ತು ಆರ್ಥಿಕ ಅಸ್ಥಿರತೆ ಒಳಗೊಂಡಂತೆ ಸಾಕಷ್ಟು ಜಾಗತಿಕ ಸವಾಲುಗಳು ಎದುರಾಗಿರುವ ಇಂದಿನ ಸಂಕಷ್ಟ ಸಮಯದಲ್ಲಿಯೇ, 2020ನೇ ವರ್ಷವು ವಿಶ್ವದಾದ್ಯಂತ ಹಬ್ಬಿದ ಕೋವಿಡ್–19 ಖಂಡಾಂತರ ಸಾಂಕ್ರಾಮಿಕ ಪಿಡುಗೂ ಒಂದು ಕಾರಣವಾಗಿದೆ. ಭಾರತಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಮುಖ್ಯವಾಗಿ ಬಡವರು ಮತ್ತು ದುರ್ಬಲ ವರ್ಗಗಳಲ್ಲಿ, ಆಹಾರ ಮತ್ತು ಪೋಷಕಾಂಶಗಳ ಕೊರತೆಗೆ ನಿರಂತರ ಕಾರಣವಾಗಿದೆ. ಪ್ರತಿಯೊಬ್ಬರಿಗೂ ಆಹಾರ ಮತ್ತು ಪೋಷಕ ಆಹಾರ ಸುರಕ್ಷತೆಯನ್ನು ಸುನಿಶ್ಚಿತಗೊಳಿಸುವುದಕ್ಕೆ, ವೈವಿಧ್ಯಮಯ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಹಮ್ಮಿಕೊಂಡಾಗ್ಯೂ, ವಿಶ್ವದಾದ್ಯಂತದ ಅಪೌಷ್ಟಿಕತೆಯಿಂದ ಬಳಲುವ ಜನರ ಪೈಕಿ ಕಾಲು ಭಾಗದಷ್ಟು ಜನರು ಇರುವುದರಿಂದ, ಭಾರತವು, ಜಾಗತಿಕ ಮಟ್ಟದಲ್ಲಿ[1] ಹಸಿವು ನಿವಾರಣೆಗೆ ಮುಖ್ಯವಾಗಿ ಗಮನ ಹರಿಸಬೇಕಾದ ದೇಶವಾಗಿದೆ. 2020ರ ಜಾಗತಿಕ ಹಸಿವು ಸೂಚ್ಯಂಕದಲ್ಲಿ (ಜಿಹೆಚ್ಐ), 107 ಹಸಿವು ಪೀಡಿತ ದೇಶಗಳ ಪೈಕಿ ಈ ದೇಶವು 94ನೇ ಸ್ಥಾನದಲ್ಲಿದ್ದು, 'ಗಂಭೀರ' ಸ್ಥಿತಿಯಲ್ಲಿರುವ ದೇಶವಾಗಿದೆ.

ಈಗ, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5, 2010–20ರಿಂದ ಲಭ್ಯವಿರುವ ಹಲವಾರು ರಾಜ್ಯಗಳ (ಸಮೀಕ್ಷೆಯಿಂದ ಎನ್ಎಫ್ಹೆಚ್ಎಸ್–5) ಕಂಡುಬಂದಿರುವಂತೆ, ಮುಖ್ಯವಾಗಿ ದೇಶದ ದುರ್ಬಲ ವರ್ಗಗಳಲ್ಲಿನ ಐದು ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಹಾಗೂ ಮಹಿಳೆಯರಲ್ಲಿ, ಪೋಷಕಾಂಶದ ಸ್ಥಿತಿಯು ಶೋಚನೀಯವಾಗಿರುವ ಬೆಚ್ಚಿಬೀಳಿಸುವ ಚಿತ್ರಣವನ್ನು ಇದು ಮುಂದಿಟ್ಟಿದ್ದು, ಇದೊಂದು ಗಂಭೀರ ಪ್ರಶ್ನೆಯಾಗಿದೆ. ಇದಲ್ಲದೆ, ಪೋಷಕಾಂಶಗಳನ್ನು ಪಡೆಯುವಲ್ಲಿ ಉಂಟಾದ ಅಡೆತಡೆಗಳು ಮತ್ತು ಜೀವನೋಪಾಯದ ನಷ್ಟಗಳಿಂದಾಗಿ, ಕೋವಿಡ್–19 ಅವಧಿಯಲ್ಲಿ ಈ ಪೋಷಕಾಂಶ ಸೂಚ್ಯಂಕಗಳ ವಸ್ತುಸ್ಥಿತಿಯನ್ನು ಮತ್ತಷ್ಟು ಶೋಚನೀಯವನ್ನಾಗಿಸಿ ತೋರಿಸಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ, ಅಪೌಷ್ಟಿಕತೆಯ ಪ್ರಮಾಣ ಬಹಳಷ್ಟು ಹೆಚ್ಚಾಗಿದ್ದು, ಐದು ವರ್ಷ ವಯಸ್ಸಿನೊಳಗಿನ ಮಕ್ಕಳಲ್ಲಿ ಶೇಕಡ 36ರಷ್ಟು ಬೆಳವಣಿಗೆ ಕುಂಠಿತವಾಗಿದೆ ಮತ್ತು ಶೇಕಡ 35ರಷ್ಟು ಮಕ್ಕಳು ಕಡಿಮೆ ತೂಕದವರಾಗಿದ್ದಾರೆ. ಅಲ್ಲದೆ, ದಕ್ಷಿಣದ ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ಅಪೌಷ್ಟಿಕ ಮಕ್ಕಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿದೆ.

ಸಾಕಷ್ಟು ಪ್ರಮಾಣದ ಮತ್ತು ಉತ್ತಮ ಗುಣಮಟ್ಟದ ಆಹಾರ ಸೇವನೆ ಮಾಡುವುದರಿಂದ, ನ್ಯೂನ ಪೌಷ್ಟಿಕತೆಯನ್ನು ತಡೆಗಟ್ಟಲು ಮತ್ತು ನಿರಂತರ ಬೆಳವಣಿಗೆ ಕೊರತೆಗಳನ್ನು ತಪ್ಪಿಸಲು ಅತ್ಯಗತ್ಯವಾಗಿದ್ದು, ಇದು ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟಗಳಲ್ಲಿ, ಇತರ ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಹೇಳಿರುವಂತೆ, ಹಸಿವನ್ನು ಕೊನೆಗೊಳಿಸುವ ಆಹಾರ ಸುರಕ್ಷತೆ ಸಾಧಿಸುವ, ಪೌಷ್ಟಿಕತೆಯನ್ನು ಸುಧಾರಿಸುವ ಮತ್ತು ಸುಸ್ಥಿರ ಕೃಷಿ ಉತ್ತೇಜನದ ಗುರಿ ಇಟ್ಟುಕೊಂಡಿರುವ, ಸುಸ್ಥಿರ ಅಭಿವೃದ್ಧಿ ಗುರಿ (ಎಸ್‌ಡಿಜಿ) –2ರ ಸಾಧನೆಗೆ ಮುಖ್ಯವಾದುದಾಗಿದೆ.

---

[1] https://www.wfp.org/countries/india

ಅಪೌಷ್ಟಿಕತೆಯು, ದೇಶದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗೆ ಮತ್ತು ಮಾನವ ಕ್ಷೇಮಾಭಿವೃದ್ಧಿಗೆ ಬಹುದೊಡ್ಡ ಅಡ್ಡಿಯನ್ನುಂಟು ಮಾಡಿದೆ. ಸಮರ್ಥ ಸಂವಿಧಾನಿಕ, ಶಾಸನಾತ್ಮಕ ಕ್ರಮಗಳಿದ್ದಾಗ್ಯೂ ಮತ್ತು ಕಾರ್ಯನೀತಿ, ಯೋಜನೆ ಹಾಗೂ ಕಾರ್ಯಕ್ರಮಗಳಿಗೆ ಬದ್ಧವಾಗಿದ್ದರೂ, ಭಾರತದಲ್ಲಿ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಅಪೌಷ್ಟಿಕತೆಯ ಪ್ರಮಾಣ ತೀವ್ರವಾಗಿ ಹೆಚ್ಚುತ್ತಿರುವುದು ನೀತಿ ನಿರೂಪಕರಿಗೆ ಮತ್ತು ನಾಗರಿಕ ಸಮಾಜಕ್ಕೆ ತೀವ್ರ ಕಾಳಜಿಯ ವಿಷಯವಾಗಿದೆ. ರಾಷ್ಟ್ರೀಯ ಆಹಾರ ಸುರಕ್ಷತೆ ಅಧಿನಿಯಮ, 2013ರಂಥ (ಎನ್‌ಎಫ್‌ಎಸ್‌ಎ–2013) ಶಾಸನಗಳು, ಬಡ ಸಮುದಾಯಗಳಿಗೆ, ಮಕ್ಕಳಿಗೆ, ಗರ್ಭಿಣಿಯರಿಗೆ ಮತ್ತು ಹಾಲುಣಿಸುವ ತಾಯಂದಿರಿಗೆ, ಆಹಾರ ಮತ್ತು ಪೋಷಕ ಆಹಾರ ಒದಗಿಸುವುದನ್ನು ಕಡ್ಡಾಯಗೊಳಿಸಿರುವುದಷ್ಟೇ ಅಲ್ಲದೆ, ಮುಖ್ಯವಾಗಿ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಪೋಷಕ ಆಹಾರಗಳನ್ನು ಅತ್ಯಂತ ಅಗತ್ಯತೆ ಇರುವ ಸಮಯದಲ್ಲಿ ಒದಗಿಸುವ ಕಾರ್ಯಕ್ರಮಗಳು, ಪೋಷಕಾಂಶಗಳನ್ನು ಸುರಕ್ಷಿತಗೊಳಿಸುವ, ಬೆಂಬಲಿಸುವ ಮತ್ತು ಉತ್ತೇಜಿಸುವ ಸಮರ್ಥ ವ್ಯವಸ್ಥೆಯನ್ನು ಸಹ ಒದಗಿಸುತ್ತವೆ.

ಅಪೌಷ್ಟಿಕತೆಯನ್ನು ನಿವಾರಿಸುವ ದಿಸೆಯಲ್ಲಿ ಪ್ರಯತ್ನಗಳನ್ನು ಉತ್ತೇಜಿಸುವ ದೃಷ್ಟಿಯಿಂದ, ಮಕ್ಕಳು, ಗರ್ಭಿಣಿ ಮಹಿಳೆಯರಲ್ಲಿ ಮತ್ತು ಹಾಲುಣಿಸುವ ತಾಯಂದಿರಲ್ಲಿ, ಪೌಷ್ಟಿಕತೆ ಸುಧಾರಿಸುವ ಹಾಗೂ ಕುಂಠಿತ ಬೆಳವಣಿಗೆ, ಕಡಿಮೆ ತೂಕ, ರಕ್ತಹೀನತೆ ಮತ್ತು ಜನನ ಕಾಲದಲ್ಲಿ ಕಡಿಮೆ ತೂಕ ಇರುವಂಥ ಪ್ರಕರಣಗಳನ್ನು 2022ರ ಹೊತ್ತಿಗೆ ತಗ್ಗಿಸುವ ಗುರಿಯೊಂದಿಗೆ, ಕೇಂದ್ರ ಸರ್ಕಾರವು 2017ನೇ ಸಾಲಿನಲ್ಲಿ ತನ್ನ ಪ್ರಮುಖ ರಾಷ್ಟ್ರೀಯ ಪೋಷಕಾಂಶ ಅಭಿಯಾನವಾದ **'ಪೋಷಣ ಅಭಿಯಾನ'**ವನ್ನು ಪ್ರಾರಂಭಿಸಿತು. 2017ರಲ್ಲಿ ನೀತಿ ಆಯೋಗವು, ಪೌಷ್ಟಿಕ ಭಾರತ – ರಾಷ್ಟ್ರೀಯ ಪೋಷಕಾಂಶ ಕಾರ್ಯತಂತ್ರ ಚೌಕಟ್ಟು ಯೋಜಿಸಿ, ಇದಕ್ಕಾಗಿ **'ಅಪೌಷ್ಟಿಕತೆ ಮುಕ್ತ ಭಾರತ'** ಎಂಬ ಕರಡನ್ನು ಸಿದ್ಧಪಡಿಸಿತು ಮತ್ತು ಅದನ್ನು ದೇಶದ ಎಲ್ಲ ರಾಜ್ಯಗಳಿಗೆ/ ಜಿಲ್ಲೆಗಳಿಗೆ, ಜೀವನ ಚಕ್ರ ಪರ್ಯಂತ ಅಪೌಷ್ಟಿಕತೆ ಮುಕ್ತವಾದ **'ಸ್ವಚ್ಛ ಭಾರತ ಮತ್ತು ಸ್ವಸ್ಥ ಭಾರತ'** ಯೋಜನೆಗೆ ಸಂಪರ್ಕಿಸಲಾಯಿತು. ಇದು, ಪ್ರಸವಾವಧಿಯಲ್ಲಿ ಆಗುವ ಮರಣದ, ಶಿಶುಗಳ ಮತ್ತು ಎಳೆ ಮಕ್ಕಳ ಮರಣ ಪ್ರಮಾಣವನ್ನು ಮತ್ತು ಅಪೌಷ್ಟಿಕತೆಯನ್ನು ತಗ್ಗಿಸುವಂಥ ಮತ್ತು ಜಾಗತಿಕ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು[2] ಸಾಧಿಸುವ ದಿಸೆಯಲ್ಲಿ ಸಮಗ್ರ ಬೆಳವಣಿಗೆಗಾಗಿ, ಪ್ರಮುಖ ರಾಷ್ಟ್ರೀಯ ಅಭಿವೃದ್ಧಿ ಗುರಿಗಳಿಗೆ ಅವಕಾಶ ಕಲ್ಪಿಸುವ ರಾಷ್ಟ್ರೀಯ ಅಭಿವೃದ್ಧಿ ಕಾರ್ಯಸೂಚಿಯ ಪ್ರಮುಖ ವೇದಿಕೆಗೆ ಪೌಷ್ಟಿಕತೆಯ ವಿಷಯವನ್ನು ತಂದಿತು.

ರಾಷ್ಟ್ರೀಯ ಪೌಷ್ಟಿಕತೆ ಕಾರ್ಯತಂತ್ರವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕೈಗೊಂಡ ಕ್ರಮದ ಒಂದು ಮುಖ್ಯ ತತ್ತ್ವವೆಂದರೆ, ಪಂಚಾಯಿತಿ ರಾಜ್ ಸಂಸ್ಥೆಗಳ (ಪಿಆರ್‌ಐಗಳ) ಮತ್ತು ನಗರ ಸ್ಥಳೀಯ ಸಂಸ್ಥೆಗಳ (ಯುಎಲ್‌ಬಿಗಳ) ಮಾಲಿಕತ್ವ. ಪಂಚಾಯತ್ ರಾಜ್ ವ್ಯವಸ್ಥೆಯು, **ಗ್ರಾಮ ಸ್ವರಾಜ್** ಗುರಿಯೊಂದಿಗೆ ಸಾಮೂಹಿಕವಾಗಿ ಆಡಳಿತ ನಡೆಸುವ ತಳಮಟ್ಟದಲ್ಲಿನ ಜನರ ಕೈಗಳಲ್ಲಿ ವಿಕೇಂದ್ರಿಕೃತ ಪ್ರಜಾಪ್ರಭುತ್ವದ ಅಧಿಕಾರಗಳನ್ನು ನೀಡಲಾಗಿರುವ ಒಂದು

---

[2] ನೀತಿ ಆಯೋಗ 'ಪೋಷಕ ಭಾರತ – ರಾಷ್ಟ್ರೀಯ ಪೌಷ್ಟಿಕತೆ ಕಾರ್ಯತಂತ್ರ' ಭಾರತ ಸರ್ಕಾರ

ವಿಶಿಷ್ಟ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯಾಗಿದೆ. ಪಂಚಾಯಿತ್ ರಾಜ್ ತತ್ತ್ವವು, ಸ್ವಾವಲಂಬನೆಯಿಂದ ಕೂಡಿದ ಮತ್ತು ಘನತೆಯೊಂದಿಗೆ ಜೀವಿಸುವ ಸಮಾಜದ ಕಟ್ಟಕಡೆಯ ವ್ಯಕ್ತಿಯ ಧ್ಯೇಯೋದ್ದೇಶಗಳಿಂದ ಮಾರ್ಗದರ್ಶನ ಪಡೆದಿದೆ. ಪಿಆರ್‌ಐಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮಾಲಿಕತ್ವವನ್ನು ಬಲಪಡಿಸುವುದರ ಮುಖ್ಯ ತತ್ತ್ವವೆಂದರೆ, ತಳಮಟ್ಟಗಳಲ್ಲಿ ಕೈಗೊಂಡ ಕ್ರಮಗಳ ಸಮಗ್ರತೆಯ ಮೇಲೆ ಪರಿಣಾಮ ಬೀರುವಂಥ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯು ಹೊಂದಿರುವ, ಉತ್ತೇಜಿಸುತ್ತಿರುವ, ಮೇಲ್ವಿಚಾರಣೆ ನಡೆಸುತ್ತಿರುವ ಮತ್ತು ಸುಸ್ಥಿರ ಪೌಷ್ಟಿಕತೆಯ ಉಪಕ್ರಮಗಳನ್ನು ಸುನಿಶ್ಚಿತಗೊಳಿಸುವುದೇ ಆಗಿದೆ.

1992ರಲ್ಲಿ ಅಂಗೀಕರಿಸಿದ ಸಂವಿಧಾನದ 73ನೇ ತಿದ್ದುಪಡಿಯು, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಲ್ಲಿ (ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ) ಗ್ರಾಮೀಣ ಬಡ ಜನರು ಪಾಲ್ಗೊಳ್ಳುವುದಕ್ಕೆ ಅಡಿಪಾಯ ಹಾಕುತ್ತದೆ. ಆರೋಗ್ಯ ಮತ್ತು ನೈರ್ಮಲ್ಯ, ಕುಟುಂಬ ಕಲ್ಯಾಣ, ಕುಡಿಯುವ ನೀರು, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ಸಾರ್ವಜನಿಕ ವಿತರಣಾ ವ್ಯವಸ್ಥೆ, ಕೃಷಿ, ಶಿಕ್ಷಣ, ಬಡತನ ನಿವಾರಣೆ ಮತ್ತು ಸಮಾಜ ಕಲ್ಯಾಣಗಳಂಥ ಕ್ಷೇತ್ರಗಳೂ ಒಳಗೊಂಡಂತೆ, ನ್ಯೂನ ಪೋಷಕಾಂಶಗಳಂಥ ಅಡೆತಡೆಗಳನ್ನು ಕೂಡಲೇ ಮತ್ತು ಹೆಚ್ಚು ಗಮನ ನೀಡಿ ನಿವಾರಿಸುವುದು ಇವು, 73ನೇ ತಿದ್ದುಪಡಿಯಲ್ಲಿ ಒಳಗೊಂಡ ಸ್ಥಳೀಯ (ಸ್ವಯಂ ಆಡಳಿತ) ಸಂಸ್ಥೆಗಳಿಗೆ ಹಂಚಿಕೆ ಮಾಡಿದ ವಿಷಯಗಳಾಗಿವೆ[3].

ಇದಕ್ಕೆ ಸಂವಾದಿಯಾಗಿ, ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ, ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆಯನ್ನು (ಜಿಪಿಡಿಪಿ) ಸಿದ್ಧಪಡಿಸಲು, 73ನೇ ತಿದ್ದುಪಡಿಯು ಪಂಚಾಯಿತಿಗಳಿಗೆ ಅವಕಾಶ ಕಲ್ಪಿಸಿದೆ. ಈ ನಿಟ್ಟಿನಲ್ಲಿ, 2018ರಲ್ಲಿ, ಭಾರತ ಸರ್ಕಾರದ ಪಂಚಾಯತ್ ರಾಜ್ಯ ಮಂತ್ರಾಲಯವು, ಅಪೌಷ್ಟಿಕತೆ ಮತ್ತು ಹಸಿವು ನಿವಾರಿಸುವಲ್ಲಿ ಹಾಗೂ ಗ್ರಾಮ ಪಂಚಾಯಿತಿಗಳ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಇರುವುದನ್ನು ಸಾಧ್ಯಗೊಳಿಸುವಂತೆ ಮಾಡುವುದೂ ಒಳಗೊಂಡಂತೆ, ಅಭಿವೃದ್ಧಿ ಕಾರ್ಯಕ್ರಮಗಳನ್ನು ಯೋಜಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ ಗ್ರಾಮ ಪಂಚಾಯಿತಿಗಳ ಕಾರ್ಯನಿರ್ವಾಹಕರನ್ನು ಮತ್ತು ಚುನಾಯಿತ ಸದಸ್ಯರನ್ನು, ಸಂಬಂಧಪಟ್ಟ ಇಲಾಖೆಗಳನ್ನು ಹಾಗೂ ದುರ್ಬಲ ಸಮುದಾಯಗಳನ್ನು ಸಮರ್ಥಗೊಳಿಸುವುದಕ್ಕಾಗಿ ಮತ್ತು ಸಬಲೀಕರಿಸುವುದಕ್ಕಾಗಿ, ರಾಜ್ಯ ಇಲಾಖೆಗಳೊಂದಿಗೆ ಮತ್ತು ಸಂಬಂಧಪಟ್ಟ ಸಂಸ್ಥೆಗಳೊಂದಿಗೆ ಸಮಾಲೋಚಿಸಿ, ಜಿಪಿಡಿಪಿಗಳನ್ನು ಸಿದ್ಧಪಡಿಸುವುದಕ್ಕಾಗಿ ಸಮಗ್ರ ಮಾರ್ಗಸೂಚಿಗಳನ್ನು ಹೊರತಂದಿದೆ. ಈ ಯೋಜನೆಗಳು ಸ್ಥಳೀಯ ಮಟ್ಟದಲ್ಲಿ ಎಸ್‌ಡಿಜಿಗಳ ಅನುಷ್ಠಾನವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಅನುಗುಣವಾಗಿವೆ. 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಲ್ಲಿ ಸಹ, 73ನೇ ತಿದ್ದುಪಡಿ ಮೂಲಕ ನಿರೂಪಿಸಿದ ಮೂರು–ಹಂತದ ಸಾಂಸ್ಥಿಕ ರಚನೆಯನ್ನು ಅಳವಡಿಸಿಕೊಳ್ಳಲಾಗಿದೆ.

---

[3] ನೀತಿ ಆಯೋಗ 'ಪೋಷಕ ಭಾರತ – ರಾಷ್ಟ್ರೀಯ ಪೌಷ್ಟಿಕತೆ ಕಾರ್ಯತಂತ್ರ' ಭಾರತ ಸರ್ಕಾರ

ದೇಶದಾದ್ಯಂತ, ಅಭಿವೃದ್ಧಿ ಕಾರ್ಯಕ್ರಮಗಳ ವಿಕೇಂದ್ರಿಕೃತ ಯೋಜನೆಯನ್ನು ಸಿದ್ಧಪಡಿಸುವ ಮತ್ತು ಅನುಷ್ಠಾನಗೊಳಿಸುವ ದಿಸೆಯಲ್ಲಿ, ಸ್ಥಳೀಯ ಸಂಸ್ಥೆಗಳಿಗೆ ನಿಯತಕಾಲಿಕ ತರಬೇತಿಗಾಗಿ ವ್ಯವಸ್ಥೆ ಮಾಡಲಾಗಿದೆ. ಗ್ರಾಮ ಮಟ್ಟದಲ್ಲಿ, ನಿರ್ದಿಷ್ಟವಾಗಿ ಪೋಷಕಾಂಶಗಳ ಮತ್ತು ಸಂವೇದನಾಶೀಲತೆಯಿಂದ ಕೂಡಿದ ಪೋಷಕಾಂಶಗಳ ಅನುಷ್ಠಾನದ ವಿಷಯದಲ್ಲಿ ಕ್ರಮ ಕೈಗೊಂಡು, ನ್ಯೂನ ಪೋಷಕಾಂಶಗಳ ಬಗ್ಗೆ ಕೂಡಲೇ ಮತ್ತು ಮುಖ್ಯ ನಿರ್ಣಾಯಕ ಅಂಶಗಳನ್ನು ನಿರ್ಧರಿಸುವುದಕ್ಕಾಗಿ ಎಲ್ಲಾ ಸಂಬಂಧಪಟ್ಟ ಇಲಾಖೆಗಳು, ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಸಮಗ್ರವಾಗಿ ಅನುಷ್ಠಾನಗೊಳಿಸುತ್ತಲಿವೆ.

ಅನುಷ್ಠಾನ ಹಂತದಲ್ಲಿ, ಸುದುದ್ದೇಶದಿಂದ ಕೂಡಿದ ಕಾರ್ಯತಂತ್ರಗಳನ್ನು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾಗ್ಯೂ, ಅಡ್ಡಿ–ಅಡಚಣೆಗಳಿಂದಾಗಿ ತೀವ್ರಗೊಂಡ ನ್ಯೂನ ಪೌಷ್ಟಿಕತೆಯು, ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಮುಂದುವರಿಯುತ್ತಿರುವುದರ ವಿರುದ್ಧ ಹೋರಾಡುವಲ್ಲಿ ಅವು ವಿಫಲವಾಗಿವೆ. ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ ಸ್ಥಾನಮಾನಗಳಲ್ಲಿರುವ ವ್ಯತ್ಯಾಸಗಳು ಬಡತನ, ಸಾಮಾಜಿಕ ಬಹಿಷ್ಕಾರ ಮತ್ತು ಲಿಂಗ ತಾರತಮ್ಯ ಇವುಗಳಿಗೆ ಸಂಬಂಧಿಸಿದ ವ್ಯವಸ್ಥಿತ ಸಮಸ್ಯೆಗಳನ್ನು, ಸಮಗ್ರವಾದ ಮತ್ತು ಏಕೀಕೃತ ದೃಷ್ಟಿಕೋನದಿಂದ ಪರಿಹರಿಸದೇ ಪ್ರತ್ಯೇಕವಾಗಿ ಪರಿಹರಿಸಲಾಗುತ್ತಿದೆ.

ಆಹಾರ ಹಕ್ಕನ್ನು ಸಫಲಗೊಳಿಸುವ ಗುರಿ ಹೊಂದಿರುವ ಎನ್‌ಎಫ್‌ಎಸ್‌ಎ–2013 ಇದು, ಎಲ್ಲಾ ಹಿತಾಸಕ್ತಿದಾರರ, ಅಷ್ಟೇ ಅಲ್ಲದೇ, ವಿವಿಧ ರಾಜ್ಯಗಳ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಕಾರ್ಯನಿರ್ವಾಹಕರ ಮತ್ತು ಚುನಾಯಿತ ಪ್ರತಿನಿಧಿಗಳ ಮನಸ್ಸಿನಲ್ಲಿ ಮತ್ತು ಕೆಲಸ–ಕಾರ್ಯಗಳಲ್ಲಿ ಇನ್ನೂ ಬೇರೂರಬೇಕಾಗಿದೆ. ಯೋಜಿತ ಕಾರ್ಯತಂತ್ರಗಳು, ಸೇವೆಗಳನ್ನು ಒದಗಿಸುವ ದಿಸೆಯಲ್ಲಿ ಮಕ್ಕಳ ಮತ್ತು ಮಹಿಳೆಯರ ಹಕ್ಕುಗಳನ್ನು ಅಸ್ಥಿರಗೊಳಿಸುವಂತಾಗಿದೆ. ಉದಾಹರಣೆಗೆ, ಮಹಿಳೆಯರು ಮತ್ತು ಮಕ್ಕಳಿಗಾಗಿ ನಡೆಸಲಾಗುವ ವಿಶೇಷ ಗ್ರಾಮ ಸಭೆಗಳನ್ನು ಸಾಮಾನ್ಯವಾಗಿ ನಿರ್ಲಕ್ಷಿಸಲಾಗುತ್ತದೆ. ಸಮುದಾಯಗಳು ಮತ್ತು ಸೇವೆಗಳನ್ನು ಒದಗಿಸುವವರು ಸಾಮಾನ್ಯವಾಗಿ, ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳು (ಐಸಿಡಿಎಸ್), ಮಧ್ಯಾಹ್ನದ ಬಿಸಿ ಊಟ ಯೋಜನೆ (ಎಮ್‌ಡಿಎಮ್‌ಎಸ್), ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆ (ಟಿಪಿಡಿಎಸ್) ಅಥವಾ ನಗದು ಆಧಾರಿತ ಪ್ರಸೂತಿ ಪ್ರಯೋಜನ ಯೋಜನೆಯಂಥ (ಎಮ್‌ಬಿಎಸ್) ಆಹಾರ–ಆಧಾರಿತ ಕಾರ್ಯಕ್ರಮಗಳ ಮೂಲಕ ಲಭ್ಯವಿರುವ ಪ್ರಯೋಜನಗಳ ಬಗ್ಗೆ ತಿಳಿದಿರುವುದಿಲ್ಲ. ಎನ್‌ಎಫ್‌ಎಸ್‌ಎಯಲ್ಲಿ ಅವಕಾಶ ಕಲ್ಪಿಸಿ ಜಾಗ್ರತೆಯಿಂದ ಇರುವ ಬಗ್ಗೆ ಹೇಳಿರುವ ಮೇಲ್ವಿಚಾರಣೆ ಮತ್ತು ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆಗಳನ್ನು ಕುರಿತು ಗ್ರಾಮದಿಂದ ರಾಜ್ಯದವರೆಗೆ ಅರಿವು ಇರುವುದಿಲ್ಲ. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005 (ಎಮ್‌ಜಿಎನ್‌ಆರ್‌ಇಜಿಎ) 2009ರ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಅಧಿನಿಯಮಗಳಂಥ ನಿರ್ಣಾಯಕ ಶಾಸನಗಳು ಹಾಗೂ ಮಹಿಳಾ ಸಬಲೀಕರಣ, ಆರೋಗ್ಯ, ನೈರ್ಮಲ್ಯ, ಜೈವಿಕ ವೈವಿಧ್ಯತೆ ಮತ್ತು ಕೃಷಿ ಸಂಬಂಧಿ ಕಾರ್ಯಕ್ರಮಗಳು ತಳಮಟ್ಟದಲ್ಲಿ ಆಹಾರ ಮತ್ತು ಪೌಷ್ಟಿಕತೆ ಆಧಾರಿತ ಯೋಜನೆಗಳಿಗೆ ಅನುಗುಣವಾಗಿರುವುದಿಲ್ಲ. ಅತ್ಯಂತ ದುರ್ಬಲ ಸಮುದಾಯಗಳು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವುದರಿಂದ, ದುರ್ಬಲ

ವರ್ಗದ ಜನರ ಹಕ್ಕುಗಳನ್ನು ಮನಗಾಣುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು, ಮುಖ್ಯವಾಗಿ, ಗ್ರಾಮ ಪಂಚಾಯಿತಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ.

ಎನ್‌ಎಫ್‌ಎಸ್‌ಎ ಮತ್ತು ಇತರ ಎಲ್ಲಾ ಸಂಬಂಧಪಟ್ಟ ಅಧಿನಿಯಮಗಳ ಮತ್ತು ಕಾರ್ಯಕ್ರಮಗಳ ಸಮಗ್ರ ದೃಷ್ಟಿಕೋನ ಮತ್ತು ಪರಿಣಾಮಕಾರಿ ಅನುಷ್ಠಾನದಿಂದಾಗಿ, ಹಸಿವು ಮತ್ತು ಅಪೌಷ್ಟಿಕತೆಯನ್ನು ಹೋಗಲಾಡಿಸಿ, ಆಹಾರ ಅಥವಾ ಪೂರಕ ಸೇವೆಗಳನ್ನು ಒದಗಿಸುವುದು, ನಿರ್ದಿಷ್ಟವಾಗಿ ಪೌಷ್ಟಿಕತೆ ಕ್ರಮಗಳನ್ನು ಗುರಿಯಾಗಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗಿರುವುದು ಮಾತ್ರವಲ್ಲದೆ, ನೀರು, ನೈರ್ಮಲ್ಯ ಮತ್ತು ಸ್ವಚ್ಛತೆ (ಡಬ್ಲ್ಯುಎಎಸ್‌ಹೆಚ್–ವಾಷ್), ಕೃಷಿ, ಮಹಿಳಾ ಸಬಲೀಕರಣ, ಶಿಕ್ಷಣ, ಪರಿಸರ, ಇತ್ಯಾದಿಗಳಂಥ ಪೌಷ್ಟಿಕತೆ–ಸಂವೇದಿ ಕ್ರಮಗಳ ಕಡೆಗೆ ಸಹ ಗಮನವನ್ನು ಕೇಂದ್ರೀಕರಿಸುವಲ್ಲಿ ಹಾಗೂ ರಾಜ್ಯದಲ್ಲಿ ಹಸಿವು ಮತ್ತು ಅಪೌಷ್ಟಿಕತೆ ಮುಕ್ತ ಗ್ರಾಮ ಪಂಚಾಯಿತಿಗಳನ್ನು ಯಶಸ್ವಿಗೊಳಿಸುವಲ್ಲಿ ಮತ್ತು ಅಂಥ ಗುರಿ ಸಾಧಿಸುವಲ್ಲಿ ಅವು ನಿರ್ಣಾಯಕವಾಗಿವೆ. ಸೂಕ್ತ ಕಾರ್ಯನೀತಿಗಳು ಮತ್ತು ಬದ್ಧತೆ ಇರುವ ನಾಯಕತ್ವದ ಮೂಲಕ ಪ್ರಗತಿಪಥದಲ್ಲಿ ಸಾಗುವಂಥ ಪರಿಸರ ನಿರ್ಮಾಣದ ಕನಸನ್ನು ನನಸಾಗಿಸಲು ಸಾಧ್ಯ. ಈ ಗುರಿಯನ್ನು ಈಡೇರಿಸುವ ಹೊಣೆಗಾರಿಕೆಯು, ಪ್ರಾಥಮಿಕ ಸ್ಥಳೀಯ ಕಾರ್ಯನಿರ್ವಾಹಕ ಸಂಸ್ಥೆಗಳ – ಗ್ರಾಮ ಪಂಚಾಯಿತಿಗಳ ಮತ್ತು ಅದರ ಚುನಾಯಿತ ಪ್ರತಿನಿಧಿಗಳ ಮೇಲಿದೆ.

ಖಂಡಾಂತರ ಸಾಂಕ್ರಾಮಿಕ ರೋಗದಿಂದಾಗಿ, ಭಾರತದಲ್ಲಿ ಕಡಿಮೆ ತೂಕ ಇರುವ, ಕುಂಠಿತ ಬೆಳವಣಿಗೆ, ಶಿಕ್ಷಣದಲ್ಲಿ ಮತ್ತು ಕೆಲಸ–ಕಾರ್ಯಗಳಲ್ಲಿ ನಷ್ಟ ಇಂಥ ಕೋವಿಡ್–19ರ ನಂತರದ ಪರಿಣಾಮಗಳಿಂದ 375 ದಶಲಕ್ಷ ಮಕ್ಕಳು ಬಳಲುವಂತಾಗಿದೆ[4]. ಇಂಥ ಸಂಕೀರ್ಣ ಸವಾಲುಗಳನ್ನು ಎದುರಿಸಲು, ರಾಜ್ಯದ ಗ್ರಾಮ ಪಂಚಾಯಿತಿಗಳ ಕಾರ್ಯನಿರ್ವಾಹಕರನ್ನು ಮತ್ತು ಚುನಾಯಿತ ಪ್ರತಿನಿಧಿಗಳಲ್ಲಿ ಮಾದರಿ ಬದಲಾವಣೆ ತರುವುದು, ಅವರನ್ನು ಪುನಃ ಸನ್ನದ್ಧರನ್ನಾಗಿಸುವುದು ಮತ್ತು ಸಮರ್ಥಗೊಳಿಸುವುದು ಇಂದಿನ ತುರ್ತು ಅವಶ್ಯಕತೆಯಾಗಿದೆ. ಮಗು ಮತ್ತು ಕಾನೂನು ಕೇಂದ್ರವು, ಕರ್ನಾಟಕದಲ್ಲಿ ಕೋವಿಡ್–19ರ ಮತ್ತು ಲಾಕ್‌ಡೌನ್‌ನ ಪ್ರಭಾವ ಕುರಿತು ವ್ಯಾಪಕ ಸಮೀಕ್ಷೆಯನ್ನು (2020)[5] ಕೈಗೊಂಡಿದ್ದು, ಸುಸ್ಥಿರ ವಿಧಾನದಲ್ಲಿ, ಆಹಾರ ಸುರಕ್ಷತೆಗೆ ಪ್ರತಿಸ್ಪಂದಿಸಲು ಸ್ಥಳೀಯ ವ್ಯವಸ್ಥೆಗಳನ್ನು ಬಲಪಡಿಸುವ ಮತ್ತು ಸ್ಥಳೀಯ ಪ್ರಾಧಿಕಾರಗಳನ್ನು ಸಜ್ಜುಗೊಳಿಸುವ ಅವಶ್ಯಕತೆಯ ಕಡೆಗೆ ಸಹ ಗಮನ ಸೆಳೆದಿದೆ.

---

4 ಭಾರತ ರಾಷ್ಟ್ರದ ಪರಿಸರ–2021ರ ವರದಿಯ, ಡೌನ್ ಟು ಅರ್ಥ್, ವಿಜ್ಞಾನ ಮತ್ತು ಪರಿಸರ ಕೇಂದ್ರ (ಸಿಎಸ್‌ಇ) 2021

5 ಬೆಂಗಳೂರಿನ **ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ಯುನಿವರ್ಸಿಟಿ, ಮಗು ಮತ್ತು** ಕಾನೂನು ಕೇಂದ್ರವು ಕೈಗೊಂಡಿದ್ದ 'ಗ್ರಾಮೀಣ ಕರ್ನಾಟಕದಲ್ಲಿ ಆಹಾರ ಮತ್ತು ಪೌಷ್ಟಿಕ ಸುರಕ್ಷತೆ ಮೇಲೆ ಕೋವಿಡ್–19 ಲಾಕ್‌ಡೌನ್‌ನ ಪರಿಣಾಮ'ದ ವ್ಯಾಪಕ ವಿಶ್ಲೇಷಣೆ.

## ಕೈಪಿಡಿಯ ಅಗತ್ಯತೆ

ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳೊಂದಿಗೆ ಮತ್ತು ರಾಜ್ಯ ಸರ್ಕಾರದೊಂದಿಗೆ ಕಾರ್ಯನಿರ್ವಹಿಸಿದ ಅಪಾರ ಅನುಭವದೊಂದಿಗೆ, ಮಗು ಮತ್ತು ಕಾನೂನು ಕೇಂದ್ರ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ಬೆಂಗಳೂರು ಇದು, **"ಹಸಿವು ಮತ್ತು ಅಪೌಷ್ಟಿಕತೆ ಮುಕ್ತ ಗ್ರಾಮ ಪಂಚಾಯಿತಿಯೆಡೆಗೆ: ಗ್ರಾಮ ಪಂಚಾಯಿತಿಯ ಪಾತ್ರ ಮತ್ತು ಹೊಣೆಗಾರಿಕೆಗಳು"** ಎಂಬ ಈ ಕೈಪಿಡಿಯ ಮೂಲಕ, ರಾಜ್ಯದ ಗ್ರಾಮ ಪಂಚಾಯಿತಿಗಳ ಕಾರ್ಯನಿರ್ವಾಹಕರು ಮತ್ತು ಚುನಾಯಿತ ಪ್ರತಿನಿಧಿಗಳಿಗೆ, ಪುನರ್‌ಮನನ ತರಬೇತಿ (ಓರಿಯಂಟ್) ನೀಡುವ ಗುರಿ ಹೊಂದಿದೆ. ಈ ಕೈಪಿಡಿಯು, ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ, ಆಹಾರ ಮತ್ತು ಪೋಷಕಾಂಶ ಸುರಕ್ಷತೆ ಕುರಿತು ವಿಶೇಷವಾಗಿ ಗಮನ ಹರಿಸುತ್ತದೆ.

ಈ ಕೈಪಿಡಿಯು, ಪಂಚಾಯತ್ ರಾಜ್ ವ್ಯವಸ್ಥೆಯ, ವಿಶೇಷವಾಗಿ ಕರ್ನಾಟಕಕ್ಕೆ ಸಂಬಂಧಿಸಿದ ಸಂಕ್ಷಿಪ್ತ ಹಿನ್ನೆಲೆ, ಭಾರತ ಸಂವಿಧಾನದಲ್ಲಿ ಅಧಿನಿಯಮದ 73ನೇ ತಿದ್ದುಪಡಿ, ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸಮಗ್ರ ಎನ್‌ಎಫ್‌ಎಸ್‌ಎ, 2013, **ಹಸಿವು ಮತ್ತು ಅಪೌಷ್ಟಿಕತೆ ಮುಕ್ತ ಗ್ರಾಮ ಪಂಚಾಯಿತಿ**ಯನ್ನು ರೂಪಿಸುವಲ್ಲಿ ಗ್ರಾಮ ಪಂಚಾಯಿತಿಗಳ ಪಾತ್ರಗಳನ್ನು ಮತ್ತು ಹೊಣೆಗಾರಿಕೆಗಳನ್ನು ಅರಿತುಕೊಳ್ಳುವುದು ಹಾಗೂ ಗ್ರಾಮ ಪಂಚಾಯಿತಿಯ ಕಾರ್ಯನಿರ್ವಹಣೆಯಲ್ಲಿ ಜನರು ಪ್ರಜಾಸತ್ತಾತ್ಮಕ ರೀತಿಯಲ್ಲಿ ಪಾಲ್ಗೊಂಡು, ಯಶಸ್ವಿಗೊಳಿಸುವುದರ ಕಡೆಗೆ ಗಮನ ಹರಿಸಲು ಹಿತಾಸಕ್ತಿದಾರರಿಗೆ ಸಾಧ್ಯವಾಗುವಂತೆ ಮಾಡುತ್ತದೆ. ವಿಶೇಷವಾಗಿ ಕರ್ನಾಟಕದಲ್ಲಿ ಮಹಿಳಾ ಸದಸ್ಯೆಯರು ಸಕಾರಾತ್ಮಕವಾಗಿ ಕಾರ್ಯನಿರ್ವಹಿಸಿದ ಗ್ರಾಮ ಪಂಚಾಯಿತಿ ನಾವಿನ್ಯತೆಗಳ ಕೆಲವು ಯಶಸ್ವಿ ಸಂಗತಿಗಳನ್ನು ಸಹ ಈ ಕೈಪಿಡಿಯಲ್ಲಿ ತೋರಿಸಲಾಗಿದೆ.

ಈ ಕೈಪಿಡಿಯ ಮುಖಾಂತರ, ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಂಬಂಧಪಟ್ಟ ಇಲಾಖೆಗಳು, ಮುಂಚೂಣಿ ಕಾರ್ಯಕರ್ತರು, ಸಮುದಾಯ ಆಧಾರಿತ ಸಂಸ್ಥೆಗಳು ಮತ್ತು ಗ್ರಾಮಗಳಲ್ಲಿನ ದುರ್ಬಲ ಸಮುದಾಯಗಳು, ಚುನಾಯಿತ ಪ್ರತಿನಿಧಿಗಳು ಸಾಮೂಹಿಕ ಪ್ರಯತ್ನಗಳನ್ನು ಮಾಡಿ, "ಹಸಿವು ಮತ್ತು ಅಪೌಷ್ಟಿಕತೆ ಮುಕ್ತ ಗ್ರಾಮ ಪಂಚಾಯಿತಿಯೆಡೆಗೆ" ಸಾಗುವುದೇ ನಮ್ಮ ಪ್ರಯತ್ನವಾಗಿದೆ.

# ಪಂಚಾಯತ್ ರಾಜ್ ವ್ಯವಸ್ಥೆ – ಸಂಕ್ಷಿಪ್ತ ಪರಿಚಯ

ಭಾರತ ಸಂವಿಧಾನದ 73ನೇ ತಿದ್ದುಪಡಿಯು (1992), ಭಾರತದ ರಾಜಕೀಯ ವ್ಯವಸ್ಥೆಯಲ್ಲಿ, ಮೂರನೇ ಹಂತದ ಆಡಳಿತ ವ್ಯವಸ್ಥೆಯನ್ನು ರೂಪಿಸಿರುವುದು, ಭಾರತದ ಪಂಚಾಯಿತಿಗಳ ವಿಕಾಸ ಪಥದಲ್ಲಿ ಒಂದು ಪ್ರಮುಖ ಮೈಲುಗಲ್ಲಾಗಿದೆ. ಸ್ವಯಂ ಆಡಳಿತ ಸಂಸ್ಥೆಗಳ ಜೊತೆಗೆ, ಸಂವಿಧಾನದಲ್ಲಿ ಹೇಳಿದಂತೆ ಸ್ಥಳೀಯ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯವನ್ನು ಖಚಿತಪಡಿಸುವುದು ಪಂಚಾಯತ್ ರಾಜ್ ವ್ಯವಸ್ಥೆಯ ಎರಡು ಉದ್ದೇಶಗಳಾಗಿವೆ.

ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಗುರಿಯನ್ನು ಸಾಧಿಸುವ ದಿಸೆಯಲ್ಲಿ, ಪಂಚಾಯಿತಿಗಳು ಭಾರತದ ಬೆನ್ನೆಲುಬಾಗಿವೆ ಹಾಗೂ ಭಾರತ ಸಂವಿಧಾನದಲ್ಲಿ ಸಾಂಸ್ಥಿಕ ವ್ಯವಸ್ಥೆಯಾಗಿರುವ **ಗ್ರಾಮ ಸಭೆಯು**, ಗ್ರಾಮ ಮಟ್ಟದಲ್ಲಿ ಬಹುಮುಖಿ ಕಾರ್ಯಗಳನ್ನು ಮಾಡುವ ನ್ಯಾಯಸಮ್ಮತ ಶಾಸನಬದ್ಧ ಸಂಸ್ಥೆಯಾಗಿದೆ.[6]

1992ರ ಸಂವಿಧಾನ (73ನೇ ತಿದ್ದುಪಡಿ) ಅಧಿನಿಯಮದಲ್ಲಿ ಸೇರಿರುವ IXನೇ ಭಾಗವು, 16 ಅನುಚ್ಛೇದಗಳು ಮತ್ತು ಸಂವಿಧಾನದ ಹನ್ನೊಂದನೇ ಅನುಸೂಚಿಯನ್ನು ಒಳಗೊಂಡಿದೆ. 73ನೇ ತಿದ್ದುಪಡಿಯಲ್ಲಿ, ರಾಜ್ಯ ವಿಧಾನಮಂಡಲಗಳು **ಗ್ರಾಮ ಸಭೆಗೆ** ವಹಿಸಿದ ಕಾರ್ಯಗಳನ್ನು ನೆರವೇರಿಸಲು ಮತ್ತು ಅಧಿಕಾರಗಳನ್ನು ಚಲಾಯಿಸಲು, **ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ** ಗ್ರಾಮಸಭೆಗೆ ಅಡಿಪಾಯ ಹಾಕಿರುವುದನ್ನು ಸ್ಪಷ್ಟಪಡಿಸಲಾಗಿದೆ. ಗ್ರಾಮೀಣ ಜನರ ಸಮಗ್ರ ಅಭಿವೃದ್ಧಿಯನ್ನು ಸುನಿಶ್ಚಿತಗೊಳಿಸಲು, ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯೊಳಗೆ 29 ಕಾರ್ಯನಿರ್ವಹಣೆಗೆ ಸಂಬಂಧಿಸಿದ ವಿಷಯಗಳನ್ನು ಒಳಗೊಂಡ 11ನೇ ಅನುಸೂಚಿಯನ್ನು ಸೇರಿಸಲಾಗಿದೆ (ದಯವಿಟ್ಟು ಹೆಚ್ಚಿನ ಮಾಹಿತಿಗಾಗಿ 5ನೇ ಅಧ್ಯಾಯವನ್ನು ನೋಡಿ)

[6] ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಸಭೆ: ರಿಸರ್ಚ್ ಪರಿಪೆಕ್ಸ್ – ಸಂಪುಟ:5 / ಸಂಚಿಕೆ: 9 / ಸೆಪ್ಟಂಬರ್, 2016

**73ನೇ ತಿದ್ದುಪಡಿ ಅಧಿನಿಯಮದ ಉದ್ದೇಶಗಳು:** ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯು, ಮಹಾತ್ಮ ಗಾಂಧಿಯವರ **ಗ್ರಾಮ ಸ್ವರಾಜ್** ತತ್ವಗಳನ್ನಾಧರಿಸಿದೆ. 73ನೇ ಸಂವಿಧಾನ ತಿದ್ದುಪಡಿ ಅಧಿನಿಯಮದ ಉದ್ದೇಶಗಳು ಈ ಮುಂದಿನಂತಿವೆ:

- **ಪಂಚಾಯತ್ ರಾಜ್ ವ್ಯವಸ್ಥೆಗೆ** ಸಂವಿಧಾನಿಕ ಮಾನ್ಯತೆ ನೀಡುವುದು
- ಆಡಳಿತದಲ್ಲಿ ಜನರ ಸಮಾನ ಪಾಲ್ಗೊಳ್ಳುವಿಕೆಯನ್ನು ಸುನಿಶ್ಚಿತಗೊಳಿಸುವುದು
- ವಿಕೇಂದ್ರೀಕೃತ ಯೋಜನೆಯ ಹೊಣೆಗಾರಿಕೆಯನ್ನು ರೂಪಿಸುವುದು
- ತಳಮಟ್ಟದಲ್ಲಿ ಜನರ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದಂತೆ ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸುವುದು
- ಆಡಳಿತಾತ್ಮಕ, ಆರ್ಥಿಕ ಮತ್ತು ರಾಜಕೀಯ ವಿಕೇಂದ್ರೀಕರಣಕ್ಕೆ ಅವಕಾಶ ಕಲ್ಪಿಸುವುದು

***73ನೇ ತಿದ್ದುಪಡಿ ಅಧಿನಿಯಮದ ಪ್ರಮುಖ ಲಕ್ಷಣಗಳು***

- *ಸಂವಿಧಾನದಲ್ಲಿ ಸಾಂಸ್ಥಿಕ ರೂಪ ಪಡೆದಿರುವ **ಗ್ರಾಮ ಸಭೆಯು,** ಗ್ರಾಮ ಮಟ್ಟದಲ್ಲಿ ಬಹುಮುಖ ಕಾರ್ಯಗಳನ್ನು ನಿರ್ವಹಿಸುವ ನ್ಯಾಯಬದ್ಧ ಶಾಸನಾತ್ಮಕ ಸಂಸ್ಥೆಯಾಗಿದೆ*
- ಮೂರು ಹಂತದ ಪಂಚಾಯಿತಿ ರಾಜ್ ವ್ಯವಸ್ಥೆ
- ಎಲ್ಲಾ ಹಂತಗಳಲ್ಲೂ ಜನತಾ ಪ್ರತಿನಿಧಿಗಳ ನೇರ ಚುನಾವಣೆ
- ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳಿಗೆ ಮೀಸಲಾತಿ
- ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಜನಸಂಖ್ಯೆಗನುಗುಣವಾಗಿ ಅವರಿಗೆ ಮೀಸಲಾತಿ

➢ ಮಹಿಳೆಯರಿಗೆ 1/3ರಷ್ಟು ಮೀಸಲಾತಿ (ಪ್ರಸ್ತುತ, ಕರ್ನಾಟಕದಲ್ಲಿ ಮಹಿಳೆಯರಿಗೆ ಶೇಕಡ 50ರಷ್ಟು ಮೀಸಲಾತಿಯನ್ನು ಒದಗಿಸಲಾಗಿದೆ)
➢ ರಾಜ್ಯದ ವಿವೇಚನೆಯನುಸಾರ ಹಿಂದುಳಿದ ಸಮುದಾಯಗಳಿಗೆ ಮೀಸಲಾತಿ
➢ ಐದು ವರ್ಷಗಳಿಗೊಮ್ಮೆ ಕಡ್ಡಾಯವಾಗಿ ಚುನಾವಣೆಗಳನ್ನು ನಡೆಸುವುದು
➢ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸಲು ವಿಶೇಷ ಚುನಾವಣಾ ಆಯೋಗದ ರಚನೆ
➢ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಣಕಾಸು ಅನುದಾನಗಳನ್ನು ನಿರ್ಧರಿಸುವುದಕ್ಕಾಗಿ ರಾಜ್ಯ ಹಣಕಾಸು ಆಯೋಗದ ರಚನೆ
➢ ಪಂಚಾಯತ್ ರಾಜ್ ಸಂಸ್ಥೆಗಳ ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಆಡಳಿತಾತ್ಮಕ ಅಧಿಕಾರಗಳ ಮತ್ತು ಹೊಣೆಗಾರಿಕೆಗಳ ವಿತರಣೆ

**ಕರ್ನಾಟಕದ ಗ್ರಾಮ ಪಂಚಾಯಿತಿಗಳ ಸಬಲೀಕರಣಕ್ಕಾಗಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ: ಐತಿಹಾಸಿಕ ಪಯಣದ ಪಕ್ಷಿನೋಟ**

ಪಂಚಾಯತ್ ರಾಜ್, ಇದು ಒಂದು ಆಡಳಿತ ವ್ಯವಸ್ಥೆಯಾಗಿದ್ದು, ಅದರಲ್ಲಿ ಗ್ರಾಮ ಪಂಚಾಯಿತಿಗಳು *ಬ್ಲಾಕ್/ ತಾಲ್ಲೂಕು* ಮಟ್ಟದಲ್ಲಿ *ತಾಲ್ಲೂಕು ಪಂಚಾಯಿತಿಗಳು* ಮತ್ತು ಜಿಲ್ಲಾ ಮಟ್ಟದಲ್ಲಿ *ಜಿಲ್ಲಾ ಪಂಚಾಯಿತಿಗಳು* ಆಡಳಿತದ ಮೂಲ ಘಟಕಗಳಾಗಿರುತ್ತವೆ. **"ಪಂಚಾಯತ್"** ಎಂದರೆ, ಐದು ಜನರಿರುವ **(ಪಂಚರ)** ಸಭೆ **(ಆಯತ್)** ಮತ್ತು **"ರಾಜ್"** ಎಂದರೆ ಆಡಳಿತ ನಡೆಸುವುದು. **ಪಂಚಾಯಿತಿಗಳು** ಸಾಂಪ್ರದಾಯಿಕವಾಗಿ, ಸ್ಥಳೀಯ ಜನ ಸಮುದಾಯವು ಆಯ್ಕೆ ಮಾಡಿದ ಮತ್ತು ಜನ ಸಮುದಾಯದಿಂದ ಆಯ್ಕೆಗೊಂಡ ಹಿರಿಯ ಮತ್ತು ಬುದ್ಧಿವಂತ ವ್ಯಕ್ತಿಗಳನ್ನು ಒಳಗೊಂಡಿರುತ್ತವೆ. ಸಾಮಾನ್ಯವಾಗಿ ಅವರು ಜನರ ಮತ್ತು ಗ್ರಾಮಗಳ ನಡುವಿನ ವಿವಾದಗಳನ್ನು ಇತ್ಯರ್ಥಗೊಳಿಸುತ್ತಾರೆ. **ಪಂಚಾಯಿತಿಯ** ಮುಖಂಡನನ್ನು **ಮುಖಿಯಾ ಅಥವಾ ಸರ್‌ಪಂಚ್** ಎಂದು ಕರೆಯಲಾಗುತ್ತದೆ.

ಆದಾಗ್ಯೂ, ಈ ಸಾಂಪ್ರದಾಯಿಕ ಪಂಚಾಯತ್ ವ್ಯವಸ್ಥೆಯು, ಸಾಮಾಜಿಕ ನ್ಯಾಯದ ವಿಚಾರವನ್ನಾಧರಿಸಿರಲಿಲ್ಲ. ವಿವಾದಗಳನ್ನು ಇತ್ಯರ್ಥಗೊಳಿಸುವ ಪ್ರಕ್ರಿಯೆಯಲ್ಲಿ, ಪ್ರಾಬಲ್ಯ ಹೊಂದಿದ್ದ ಮೇಲ್ಜಾತಿಯ, ಶ್ರೀಮಂತ ಮತ್ತು ಬಲಿಷ್ಠರಾದ ವ್ಯಕಿಗಳ ನಿರ್ಣಯಗಳನ್ನು ಸಾಮಾನ್ಯ ಜನರು ವಿರೋಧಿಸುವ



ಸ್ಥಿತಿಯಲ್ಲಿರಲಿಲ್ಲ. ಈ ರೀತಿಯ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯು, ಭಾರತದಲ್ಲಿ ಬ್ರಿಟೀಷರ ಆಡಳಿತಕ್ಕೆ ಮುಂಚೆ ಮತ್ತು ಅವರ ಆಡಳಿತಾವಧಿಯಲ್ಲಿ ರೂಢಿಯಲ್ಲಿತ್ತು. 1884ರಲ್ಲಿ, ಬ್ರಿಟೀಷರು ಜಿಲ್ಲೆಯನ್ನು ಆಡಳಿತ ಘಟಕವನ್ನಾಗಿ ಸೃಜಿಸಿ, ಸ್ಥಳೀಯ ಆಡಳಿತವನ್ನು ನಿರ್ವಹಿಸಲು ನಾಮನಿರ್ದೇಶಿತ ಜನತಾ ಪ್ರತಿನಿಧಿಗಳು ಮತ್ತು ಭೂಮಾಲೀಕರು ಸದಸ್ಯರಾಗಿರುವಂಥ ಹಾಗೂ ಜಿಲ್ಲಾಧಿಕಾರಿಯ ನೇತೃತ್ವದಲ್ಲಿ ಕಾರ್ಯನಿರ್ವಹಿಸುವ **'ಸ್ಥಳೀಯ ನಿಧಿ ಸಮಿತಿ (ಲೋಕಲ್ ಫಂಡ್ ಕಮಿಟಿ)'**ಯನ್ನು ಸ್ಥಾಪಿಸಿದ್ದರು.

ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಅದರ ದೀರ್ಘ ಪ್ರಾಯೋಗಿಕ ಅನುಭವದ ಬಗ್ಗೆ ಕರ್ನಾಟಕಕ್ಕೆ ಸಂಬಂಧಿಸಿದಂತೆ ಅಷ್ಟೇನೂ ತಿಳಿದುಬರುವುದಿಲ್ಲ. ರಾಜ್ಯದಲ್ಲಿ, ಸ್ಥಳೀಯ ನಿಕಾಯಗಳಿಗೆ ಅಧಿಕಾರಗಳನ್ನು ವರ್ಗಾಯಿಸುವ ಪ್ರಯತ್ನಗಳನ್ನು ಸ್ವಾತಂತ್ರ್ಯಕ್ಕೆ ಮೊದಲೇ ಪ್ರಾರಂಭಿಸಲಾಗಿತ್ತು. ಆಗಿನ ಮೈಸೂರು ಪ್ರದೇಶದಲ್ಲಿ, ಗ್ರಾಮೀಣ ಸ್ಥಳೀಯ ಆಡಳಿತವನ್ನು ಪುನರುಜ್ಜೀವನಗೊಳಿಸುವ ಸಲುವಾಗಿ, 1902ರಲ್ಲಿ **ಮೈಸೂರು ಸ್ಥಳೀಯ ಮಂಡಳಿ ನಿಯಂತ್ರಣ ಅಧಿನಿಯಮವನ್ನು** ಅಂಗೀಕರಿಸಲಾಗಿತ್ತು. ಈ ಅಧಿನಿಯಮಕ್ಕನುಸಾರವಾಗಿ ಸ್ಥಳೀಯ ಸ್ವಯಂ ಆಡಳಿತವನ್ನು ಈ ಕೆಳಗಿನಂತೆ ವಿಂಗಡಿಸಲಾಗಿತ್ತು:

➢ ***ಜಿಲ್ಲಾ ಮಂಡಳಿ***
➢ ***ತಾಲ್ಲೂಕು ಮಂಡಳಿ***
➢ ***ಪಂಚಾಯತ್ ಸಂಘಟನೆ***

1918ರಲ್ಲಿ, ಅಧಿಕಾರ ವಿಕೇಂದ್ರೀಕರಣಗೊಳಿಸುವ ಸಲುವಾಗಿ, ಜಿಲ್ಲಾ ಮತ್ತು **ತಾಲ್ಲೂಕು** ಮಟ್ಟಗಳಲ್ಲಿ ಪ್ರತಿನಿಧಿಗಳನ್ನು ಚುನಾಯಿಸುವುದಕ್ಕಾಗಿ ಉಪಬಂಧ ಕಲ್ಪಿಸಿ, **ಮೈಸೂರು ಸ್ಥಳೀಯ ಮಂಡಳಿ ಮತ್ತು ಗ್ರಾಮ ಪಂಚಾಯಿತಿ ಅಧಿನಿಯಮ**ವನ್ನು ಅಧಿನಿಯಮಿತಗೊಳಿಸಲಾಗಿತ್ತು. 1926ರ ಮೈಸೂರು ಜಿಲ್ಲಾ ಮತ್ತು ಮೈಸೂರು ಗ್ರಾಮ ಪಂಚಾಯಿತಿಗಳ ಅಧಿನಿಯಮದಲ್ಲಿ, **ಗ್ರಾಮ ಪಂಚಾಯಿತಿ** ಚುನಾವಣೆಗಳಿಗೆ ಪ್ರಾಮುಖ್ಯತೆ ನೀಡಲಾಗಿತ್ತು. ಆದರೆ, 21 ವರ್ಷ ವಯಸ್ಸಿಗಿಂತ ಮೇಲ್ಪಟ್ಟ ಪುರುಷರು ಮಾತ್ರವೇ ಮತ ಚಲಾಯಿಸಲು ಹಕ್ಕುಳ್ಳವರಾಗಿದ್ದರು. ಇತಿಹಾಸದಲ್ಲಿ ಮೊದಲ ಬಾರಿಗೆ ಚುನಾಯಿತ ಸದಸ್ಯರಲ್ಲಿ ಒಬ್ಬನನ್ನು **ಗ್ರಾಮ ಪಂಚಾಯಿತಿಗೆ** ಕಾರ್ಯದರ್ಶಿಯನ್ನಾಗಿ ನಾಮನಿರ್ದೇಶಿಸಲಾಗುತ್ತಿತ್ತು. 1926ರ ಈ ಅಧಿನಿಯಮವು ಮೈಸೂರು ರಾಜ್ಯದಲ್ಲಿ 1954ರವರೆಗೆ ಜಾರಿಯಲ್ಲಿತ್ತು.[7]

ಸ್ವಾತಂತ್ರ್ಯಾ ನಂತರ, ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯಲ್ಲಿನ ಅಂತರಗಳನ್ನು ಮತ್ತು ಸಮಸ್ಯೆಗಳನ್ನು ಗುರುತಿಸುವ ಸಲುವಾಗಿ, 1950ರಲ್ಲಿ ವೆಂಕಟಪ್ಪ ಸಮಿತಿಯು ಒಂದು ಅಧ್ಯಯನ ಕೈಗೊಂಡಿತ್ತು. ಈ ಪ್ರಗತಿಪರ ಅಧ್ಯಯನವು, ಗ್ರಾಮ ಮತ್ತು ಜಿಲ್ಲಾ ಮಟ್ಟದಲ್ಲಿ, **ಜಿಲ್ಲಾ ಮಂಡಳಿ** ಇರುವಂಥ ಎರಡು ಹಂತಗಳ

---

7 **ಗ್ರಾಮ ಪಂಚಾಯಿತಿ ಸದಸ್ಯರ ತರಬೇತಿ ಕೈಪಿಡಿ** – ನಿರ್ದೇಶಕರು, ಎಎನ್‌ಎಸ್‌ಎಸ್‌ಐಆರ್‌ಡಿ ಮತ್ತು ಪಿಆರ್, ಮೈಸೂರು, 2015, ಹೊಸದಾಗಿ ಚುನಾಯಿತರಾದ ಗ್ರಾಮ ಪಂಚಾಯಿತಿ ಸದಸ್ಯರಿಗಾಗಿ ಪ್ರಕಟಿಸಿದ ತರಬೇತಿ ಕೈಪಿಡಿ.

ವ್ಯವಸ್ಥೆಯನ್ನಲ್ಲದೆ, **ಗ್ರಾಮ ಪಂಚಾಯಿತಿಗಳ** ಎಲ್ಲಾ ಅಧ್ಯಕ್ಷರು ಇರುವಂಥ **ತಾಲ್ಲೂಕು ಸಮನ್ವಯ ಸಮಿತಿಯನ್ನು** ಸ್ಥಾಪಿಸಲು ಶಿಫಾರಸ್ಸು ಮಾಡಿತು.

ರಾಷ್ಟ್ರ ಮಟ್ಟದಲ್ಲಿ **ಬಲವಂತ್ ರಾಯ್ ಮೆಹ್ತಾ ಸಮಿತಿಯು** (16ನೇ ಜನವರಿ, 1957ರಂದು ರಚಿಸಲಾಗಿತ್ತು) ಮಾಡಿದ ಶಿಫಾರಸ್ಸುಗಳು, ರಾಜ್ಯಗಳಲ್ಲಿ **ಪಂಚಾಯತ್ ರಾಜ್** ವ್ಯವಸ್ಥೆಯಲ್ಲಿ ಹೊಸ ಬದಲಾವಣೆಗಳನ್ನು ತಂದಿತು. ಸಮಿತಿಯು, 24ನೇ ನವೆಂಬರ್, 1957ರಂದು ತನ್ನ ವರದಿಯನ್ನು ಸಲ್ಲಿಸಿ, **'ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ'**ದ ಯೋಜನೆಯ ಸ್ಥಾಪನೆಗೆ ಶಿಫಾರಸ್ಸು ಮಾಡಿತು, ಸ್ಥಳೀಯವಾಗಿ ಉದ್ಭವಿಸುವ ಸಮಸ್ಯೆಗಳನ್ನು ಇತ್ಯರ್ಥಪಡಿಸುವ ಮತ್ತು ಜನರನ್ನು ರಾಜಕೀಯವಾಗಿ ಪ್ರಜ್ಞಾವಂತರನ್ನಾಗಿಸುವ ಗುರಿಯೊಂದಿಗೆ, ಅಂತಿಮವಾಗಿ, ಪಂಚಾಯಿತ್ ರಾಜ್ ಎಂಬ ಹೆಸರಿನಿಂದ ಅದು ಜಾರಿಗೆ ಬಂದಿತು. 1959ರಿಂದ, ಎಲ್ಲಾ ರಾಜ್ಯಗಳು ಸ್ಥಳೀಯ ಆಡಳಿತದಲ್ಲಿ 3 ಹಂತಗಳ **ಪಂಚಾಯತ್ ರಾಜ್** ವ್ಯವಸ್ಥೆಯನ್ನು ಜಾರಿಗೆ ತಂದವು. ಈ ವ್ಯವಸ್ಥೆಯಲ್ಲಿ, ತಾಲ್ಲೂಕು ಮಂಡಳಿಗಳಿಗೆ ಹೆಚ್ಚು ಅಧಿಕಾರಗಳನ್ನು ನೀಡಲಾಗಿತ್ತು. ಕರ್ನಾಟಕದಲ್ಲಿ, ರಾಜಕೀಯ ರಚನಾ ವ್ಯವಸ್ಥೆಗಳನ್ನು ವಿಕೇಂದ್ರೀಕರಿಸುವ ಗಂಭೀರ ಪ್ರಯತ್ನಗಳನ್ನು 1980ರ ಸುಮಾರಿನಲ್ಲಿ ಮಾಡಲಾಯಿತು. **ನ್ಯಾಯ ಪಂಚಾಯತ್‌ಗಳ ಅಧಿನಿಯಮ, 1983** ಇದು, ಕರ್ನಾಟಕದಲ್ಲಿ ಮೊದಲ ಪ್ರಮುಖ ಮೈಲುಗಲ್ಲು ಶಾಸನವಾಗಿದ್ದು, ಅದು, ಎರಡು ಹಂತದ ಹಾಗೂ ಚುನಾಯಿತ ಉಪ–ರಾಜ್ಯ ಮಟ್ಟದ ಆಡಳಿತ ರಚನೆಯನ್ನು ಜಾರಿಗೊಳಿಸಿತು. 1987 ಮತ್ತು 1992ರ ನಡುವೆ, **ಮಂಡಲ್ ಪಂಚಾಯತ್** ಮತ್ತು **ಜಿಲ್ಲಾ ಪರಿಷತ್** ವ್ಯವಸ್ಥೆಯು, ಕರ್ನಾಟಕದಲ್ಲಿ ಪ್ರಮುಖ ವಿಕೇಂದ್ರೀಕರಣ ಅಧಿಕಾರಗಳನ್ನು ಪಡೆದುಕೊಂಡಿತ್ತು.

ಜನರು ಪ್ರಜಾಸತ್ತಾತ್ಮಕ ರೀತಿಯಲ್ಲಿ ರಾಜಕೀಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವಲ್ಲಿ ಶ್ರೀ ಅಬ್ದುಲ್ ನಜೀರ್‌ಸಾಬ್ ಅವರು ತೋರಿದ ಬದ್ಧತೆಯಿಂದಾಗಿ, **ಗ್ರಾಮ ಸಭೆಗಳ** ರಚನೆ ಮತ್ತು ಮಹಿಳೆಯರಿಗೆ, ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ, ರಾಜಕೀಯ ಮೀಸಲಾತಿ ಲಭ್ಯವಾಗುವಂತೆ ಮಾಡಿದ ಕೀರ್ತಿ ಅವರದ್ದಾಗಿದೆ. ಕರ್ನಾಟಕದ ರಾಜಕೀಯ ನಾಯಕರ ಪ್ರಗತಿಪರ ಕಾರ್ಯಗಳು ಮತ್ತು ಬದ್ಧತೆಯು, ಎಲ್ಲಾ ರಾಜ್ಯಗಳಲ್ಲಿ 3 ಹಂತದ ಪಂಚಾಯತ್ ರಾಜ್ಯ ವ್ಯವಸ್ಥೆಯ ಅನುಷ್ಠಾನದ ಮೇಲೆ ಪ್ರಭಾವ ಬೀರಿತು. ಸಂವಿಧಾನದಲ್ಲಿ ಇದನ್ನು ಕಡ್ಡಾಯಗೊಳಿಸುವುದಕ್ಕೆ ಮೊದಲೇ, ಈ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇಕಡ 25ರಷ್ಟು ಮೀಸಲಾತಿ ಕಲ್ಪಿಸಿದ್ದು, ಗಮನಾರ್ಹ ಲಕ್ಷಣವಾಗಿತ್ತು. 1987ರಲ್ಲಿ ಈ ಅಧಿನಿಯಮದ ಮೇರೆಗೆ ಚುನಾವಣೆಗಳನ್ನು ನಡೆಸಲಾಯಿತು.

**ಮುಂಚೂಣಿಯಲ್ಲಿರುವ ಕರ್ನಾಟಕ: ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993**

73ನೇ ತಿದ್ದುಪಡಿ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವ ನಿಟ್ಟಿನಲ್ಲಿ ಉಳಿದೆಲ್ಲಾ ರಾಜ್ಯಗಳು ಪಂಚಾಯತ್ ರಾಜ್ ವ್ಯವಸ್ಥೆಗಳಿಗೆ ತಿದ್ದುಪಡಿ ಮಾಡುವ ಪ್ರಯತ್ನದಲ್ಲಿದ್ದಾಗ, ಕರ್ನಾಟಕವು ಅದಾಗಲೇ ಮುಂಚೂಣಿಯಲ್ಲಿತ್ತು. 1993ರಲ್ಲಿ ಕರ್ನಾಟಕವು ತಕ್ಷಣವೇ 73ನೇ ತಿದ್ದುಪಡಿ ಅಧಿನಿಯಮವನ್ನು ಅನುಷ್ಠಾನಕ್ಕೆ ತಂದು, 73ನೇ ತಿದ್ದುಪಡಿ ಅಧಿನಿಯಮದ ಎಲ್ಲಾ ಕಡ್ಡಾಯ ಉಪಬಂಧಗಳನ್ನು ಅಳವಡಿಸಿಕೊಂಡು, ಹೊಸ ಪಂಚಾಯತ್ ರಾಜ್ ಅಧಿನಿಯಮವನ್ನು ಅಧಿನಿಯಮಿತಗೊಳಿಸಿತು. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕಾರ (25.2.2016ರಿಂದ ಜಾರಿಗೆ ಬರುವಂತೆ 2015ರ ಅಧಿನಿಯಮ ಸಂಖ್ಯೆ 44ರ ಮೂಲಕ **"ಪಂಚಾಯತ್ ರಾಜ್"** ಪದಗಳನ್ನು ಸೇರಿಸಲಾಯಿತು)

ಅಧಿಕಾರಗಳ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣವು, ಜನರು ಬಹುದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡು, ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಗುರಿ ಹಮ್ಮಿಕೊಳ್ಳಲಾಗಿದೆ.[8]

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಮುಖ ಲಕ್ಷಣಗಳು**

- ಈ ಅಧಿನಿಯಮವು ಮೂರು ಹಂತದ ರಚನೆಗೆ ಉಪಬಂಧ ಕಲ್ಪಿಸುತ್ತದೆ:
  - *ಜಿಲ್ಲಾ ಪಂಚಾಯತ್ (ಜಿಲ್ಲಾ ಮಟ್ಟ)*
  - *ತಾಲ್ಲೂಕು ಪಂಚಾಯತ್ (ಬ್ಲಾಕ್ ಮಟ್ಟ)*
  - *ಗ್ರಾಮ ಪಂಚಾಯತ್ (ಗ್ರಾಮ ಮಟ್ಟ)*
- 73ನೇ ತಿದ್ದುಪಡಿ ಅಧಿನಿಯಮದ ಎಲ್ಲಾ ಮುಖ್ಯ ಅಂಶಗಳನ್ನು ಯಾವುದೇ ಮಾರ್ಪಾಡುಗಳಿಲ್ಲದೆ ಅಳವಡಿಸಿಕೊಳ್ಳಲಾಯಿತು.
- ಎಲ್ಲರಿಗೂ 'ಸಾಮಾಜಿಕ ನ್ಯಾಯ'ದ ಕಾರ್ಯಚೌಕಟ್ಟಿನೊಳಗೆ, 'ಅಭಿವೃದ್ಧಿ' ಸಾಧನೆ ಕಡೆಗೆ ಗಮನ ಕೇಂದ್ರೀಕರಿಸಲಾಯಿತು.
- 'ಆದ್ಯತೆ ಶ್ರೇಣಿ'ಯು, ಮೂಲಾಧಾರಗಳಿಗೆ ಮತ್ತು ಕೆಳಗಿನಿಂದ–ಮೇಲ್ಮುಖದ ನಿಲುವು ಯೋಜನೆಗೆ ಆಧಾರವಾಗಿದೆ.
- ಮಹಿಳೆಯರಿಗೆ, ಇತರ ಹಿಂದುಳಿದ ವರ್ಗಗಳಿಗೆ, ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಮೀಸಲಾತಿ ಕಲ್ಪಿಸಲಾಗಿದೆ. ಈ ಮೀಸಲಾತಿಯು ಸದಸ್ಯರ ಆಯ್ಕೆಗೆ ಮಾತ್ರವಲ್ಲದೆ, ಈ ಸಂಸ್ಥೆಗಳ ಪದಾಧಿಕಾರಿಗಳ ಅಥವಾ ಅಧ್ಯಕ್ಷರ ಆಯ್ಕೆಗೂ ಸಹ ಅನ್ವಯವಾಗುತ್ತದೆ.
- ಸ್ವತಂತ್ರವಾಗಿ ಮತ್ತು ಘನತೆಯೊಂದಿಗೆ ಕಾರ್ಯನಿರ್ವಹಿಸಲು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರನ್ನು ಕಿರುಕುಳ ಮತ್ತು ದುರುಪಯೋಗದಿಂದ ರಕ್ಷಿಸಲು ಹಾಗೂ ಪಂಚಾಯಿತಿಗಳಿಗೆ ಶೇಕಡ 50ಕ್ಕಿಂತ ಹೆಚ್ಚು ಮಹಿಳೆಯರನ್ನು ಆಯ್ಕೆ ಮಾಡಲು ಸೂಕ್ತ ಪರಿಸರ ರೂಪಿಸಲು ವಿಶೇಷ ಗಮನ ನೀಡಲಾಗಿದೆ.

---

[8] ಕರ್ನಾಟಕ ಪಂಚಾಯತ್ ಕೈಪಿಡಿ, ಹತ್ತನೇ ಆವೃತ್ತಿ 2021, ಕರ್ನಾಟಕ ಲಾ ಜರ್ನಲ್ ಪಬ್ಲಿಕೇಷನ್‌ನಿಂದ ಪ್ರಕಟಿತ

- ಗ್ರಾಮ ಸಭಾ/ ವಾರ್ಡ್ ಸಭಾಗಳು, ಕಾನೂನುಬದ್ಧವಾಗಿ ಮನ್ನಣೆ ಪಡೆದವುಗಳಾಗಿದ್ದು, ಅವುಗಳ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2002ರಲ್ಲಿ ಸ್ಪಷ್ಟವಾಗಿ ಪರಿಭಾಷಿಸಲಾಗಿದೆ
- ಗ್ರಾಮ ಮಟ್ಟದಲ್ಲಿ ಗ್ರಾಮ ಸಭೆಯು, ಸ್ವಯಂ ಆಡಳಿತದ ಮೂಲ ಘಟಕವಾಗಿದೆ
- ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಸಬಲೀಕರಣಕ್ಕಾಗಿ, ಮಹಿಳೆಯರ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಮತ್ತು ಸಬಲೀಕರಣಕ್ಕಾಗಿ ಪ್ರತ್ಯೇಕ ಗ್ರಾಮ ಸಭೆಯು, ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಅಂತಿಮಗೊಳಿಸುತ್ತದೆ
- ಗ್ರಾಮ ಪಂಚಾಯಿತಿಗಳ ಚುನಾಯಿತ ಸದಸ್ಯರನ್ನು 'ಹಿಂದಕ್ಕೆ ಕರೆಸಿಕೊಳ್ಳುವ ಹಕ್ಕು' ಗ್ರಾಮ ಸಭೆಗಿದೆ. ಗ್ರಾಮ ಸಭೆಯು ದಾಖಲಿಸಿದ ದೂರಿಗೆ ಪ್ರತಿಕ್ರಿಯೆಯಾಗಿ, ಒಟ್ಟು ಸದಸ್ಯರ ಪೈಕಿ ಶೇಕಡ 50ರಷ್ಟು ಸದಸ್ಯರು ಹಾಜರಿದ್ದು ಮತ ಚಲಾಯಿಸಿದಲ್ಲಿ ಮತ್ತು 2.3ರಷ್ಟು ಸದಸ್ಯರು ಹಾಜರಿದ್ದು ನಿರ್ಣಯದ ಪರವಾಗಿ ಮತ ಚಲಾಯಿಸಿದಲ್ಲಿ, ರಾಜ್ಯ ಚುನಾವಣಾ ಆಯೋಗವು ಸದಸ್ಯತ್ವದಿಂದ ತೆಗೆದುಹಾಕುವುದೂ ಒಳಗೊಂಡಂತೆ ವಿವಿಧ ದಂಡಗಳನ್ನು ವಿಧಿಸಬಹುದಾಗಿದೆ
- ಮೂರೂ ಹಂತಗಳಲ್ಲಿನ ಎಲ್ಲಾ ಪಂಚಾಯಿತಿಗಳು, 'ಮುಖ್ಯ ಕಾರ್ಯದರ್ಶಿಗಳನ್ನು' ಒಳಗೊಂಡ ಏಕರೂಪದ ಸಿಬ್ಬಂದಿ ವ್ಯವಸ್ಥೆಯನ್ನು ಹೊಂದಿದ್ದು, ಅವರು ಸಂಬಂಧಪಟ್ಟ ಪಂಚಾಯಿತಿಗಳ ಆಡಳಿತ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುವರು.
- ಪಂಚಾಯತ್ ರಾಜ್ ಸಂಸ್ಥೆಗಳ ಸುಗಮ ಕಾರ್ಯನಿರ್ವಹಣೆಗೆ ಅನುಕೂಲ ಕಲ್ಪಿಸಲು, ಪ್ರತ್ಯೇಕ ಪಂಚಾಯಿತಿಗಳ ಕಮೀಷನರೇಟ್ ಅಥವಾ ನಿರ್ದೇಶನಾಲಯವನ್ನು ಸ್ಥಾಪಿಸುವುದು
- ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ), ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿ (ಇಒ) ಮತ್ತು ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) ಇವರು, ಆಯಾಯ ಹಂತಗಳಲ್ಲಿ ಸಂಬಂಧಪಟ್ಟ ಪಂಚಾಯಿತಿಗಳ ಮುಖ್ಯ ಕಾರ್ಯದರ್ಶಿಗಳಾಗಿ ನೇಮಕಗೊಂಡವರಾಗಿರಬೇಕು
- ರಾಜ್ಯ ಸರ್ಕಾರವು, ಎಲ್ಲಾ ಮೂರೂ ಹಂತಗಳ ಪಂಚಾಯಿತಿಗಳ ಚುನಾಯಿತ ಸದಸ್ಯರಿಗೆ ಮತ್ತು ಸಿಬ್ಬಂದಿಗೆ, ಅವರ ಹೊಣೆಗಾರಿಕೆಗಳನ್ನು ಈಡೇರಿಸಲು ಅಗತ್ಯವಿರುವ ಜ್ಞಾನ, ನಡವಳಿಕೆ ಮತ್ತು ಕೌಶಲ್ಯಗಳಿಗೆ ಸಂಬಂಧಪಟ್ಟಂತೆ ತರಬೇತಿ ನೀಡಿ, ಅವರ ಸಾಮರ್ಥ್ಯ ನಿರ್ಮಾಣಕ್ಕೆ ಅವಶ್ಯವಿರುವ ನಿಧಿಗಳ ಆಯವ್ಯಯ (ಬಜೆಟ್) ಹಂಚಿಕೆಯನ್ನು ಸಿದ್ಧಪಡಿಸುವುದು
- ತಾಲ್ಲೂಕು ಮಟ್ಟದಲ್ಲಿ ಮಹಿಳಾ ಸಹಕಾರ ಬ್ಯಾಂಕನ್ನು ಸ್ಥಾಪಿಸಿ, ಬ್ಯಾಂಕಿನಲ್ಲಿ ಪದನಿಮಿತ್ತ ನಿರ್ದೇಶಕರನ್ನಾಗಿ ತಾಲ್ಲೂಕು ಪಂಚಾಯಿತಿಯ ಮೂವರು ನಾಮನಿರ್ದೇಶಿತ ಮಹಿಳಾ ಸದಸ್ಯೆಯರು ಇರುವಂತೆ ಮಾಡುವುದು
- ಪಂಚಾಯಿತಿಗಳಿಗೆ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವನ್ನು ಶಕ್ತಗೊಳಿಸಲು 'ಕರ್ನಾಟಕ ರಾಜ್ಯ ವಿಕೇಂದ್ರಿಕೃತ ಯೋಜನೆ ಮತ್ತು ಅಭಿವೃದ್ಧಿ ಮಂಡಳಿ'ಯನ್ನು ಸ್ಥಾಪಿಸಬೇಕು

## ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಅಪೌಷ್ಟಿಕತೆ ಮತ್ತು ಆಹಾರ ಹಕ್ಕಿನ ಅವಲೋಕನ

ಅಪೌಷ್ಟಿಕತೆಗೆ 'ಗುಪ್ತ ಹಸಿವು' ಎಂದೂ ಸಹ ಕರೆಯಲಾಗುತ್ತಿದ್ದು, ಇದು ಕ್ಯಾಲೋರಿಗಳ, ಪ್ರೋಟೀನ್‌ಗಳ ಅಥವಾ ಪೌಷ್ಟಿಕಾಂಶಗಳ ಅಸಮರ್ಪಕ ಸೇವನೆಯನ್ನು ಕುರಿತು ತಿಳಿಸುತ್ತದೆ. ಆದ್ದರಿಂದ, ಅಪೌಷ್ಟಿಕತೆಯು ನ್ಯೂನ ಪೌಷ್ಟಿಕತೆಯನ್ನು ಒಳಗೊಂಡಿರುತ್ತದೆ. ಅನೇಕ ಮಹಿಳೆಯರು, ಪುರಷರು ಮತ್ತು ಮಕ್ಕಳು ನಿರಂತರವಾಗಿ ನ್ಯೂನ ಪೋಷಕಾಂಶಗಳಿಂದ ಬಾಧಿತರಾಗಿದ್ದು, 'ತೀವ್ರ ಹಸಿವಿ'ನಿಂದ ಬಳಲುತ್ತಿರುತ್ತಾರೆ. ಇದರರ್ಥ, ಅವರ ದಿನನಿತ್ಯ ಸೇವಿಸುವ ಆಹಾರದಲ್ಲಿ ಕ್ಯಾಲೋರಿಗಳ ಪ್ರಮಾಣವು, ಬದುಕುಳಿಯಲು ಅವಶ್ಯಕವಾದ ಕನಿಷ್ಠ ಅಗತ್ಯಕ್ಕಿಂತ ಸಾಕಷ್ಟು ಕಡಿಮೆಯಾಗಿರುತ್ತದೆ. ಅನೇಕ ಜನರು, ಮುಖ್ಯವಾಗಿ ಬಡ ಸಮುದಾಯಗಳಲ್ಲಿ ಹಸಿವಿನಿಂದ ಸಹ ಮರಣ ಹೊಂದುತ್ತಿದ್ದಾರೆ.

ಆಹಾರವು ಮಾನವನ ಮೂಲ ಅಗತ್ಯವಾಗಿದೆ. ಆಹಾರದ ಪ್ರಮಾಣ, ಗುಣಮಟ್ಟ ಮತ್ತು ಪೌಷ್ಟಿಕತೆಯ ಅಂಶವು ಮಕ್ಕಳ ಬೆಳವಣಿಗೆ ಮತ್ತು ವಿಕಾಸದಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಆಹಾರದ ಹಕ್ಕು, ಮಾನವ ಹಕ್ಕಾಗಿದೆ. ಇದರರ್ಥ, ಗೌರವದಿಂದ, ಎಲ್ಲಾ ಸಮಯಗಳಲ್ಲಿ ಸಮರ್ಪಕ ಆಹಾರ **ಪಡೆಯು**ವುದೇ ಆಗಿದೆ. ಇದು, ಹಸಿವಿನಿಂದ ಆಹಾರ ಅಸುರಕ್ಷತೆಯಂಥ ಮತ್ತು ಅಪೌಷ್ಟಿಕತೆಯಿಂದ ಮುಕ್ತರಾಗಿ ಜೀವಿಸುವ ಎಲ್ಲಾ ಮಾನವರ ಹಕ್ಕುಗಳನ್ನು ಗೌರವಪೂರ್ವಕವಾಗಿ ಸಂರಕ್ಷಿಸುತ್ತದೆ. 'ಆಹಾರ ಹಕ್ಕು' ಧರ್ಮಾರ್ಥವಾಗಿರದೆ, ಎಲ್ಲಾ ಜನರು ಗೌರವದಿಂದ ತಮ್ಮ ಆಹಾರ ಸೇವಿಸವುದನ್ನು ಸುನಿಶ್ಚಿತಪಡಿಸುವ ವಿಷಯವಾಗಿದೆ. ಸಮರ್ಪಕ ಪ್ರಮಾಣದ ಮತ್ತು ಗುಣಮಟ್ಟದ ಆಹಾರ ಲಭ್ಯತೆ; ಪೌಷ್ಟಿಕತೆ ದೃಷ್ಟಿಯಿಂದ ಮತ್ತು ಸಾಂಸ್ಕೃತಿಕವಾಗಿ ಸ್ವೀಕಾರಾರ್ಹವಾದ; ವಾಸ್ತವವಾಗಿ ಮತ್ತು ಆರ್ಥಿಕವಾಗಿ ಪಡೆಯಲು ಸಾಧ್ಯವಿರುವಂಥ ಆಹಾರದ ಹಕ್ಕನ್ನು ಎಲ್ಲಾ ಮಾನವರು ಹೊಂದಿದ್ದಾರೆ.

**ಆಹಾರ ಹಕ್ಕನ್ನು ಮನವರಿಕೆ ಮಾಡಿಕೊಡಲು ಇರುವ ನಾಲ್ಕು ಮುಖ್ಯ ಷರತ್ತುಗಳೆಂದರೆ:**

- ಆಹಾರ ಲಭ್ಯತೆ ಅಥವಾ ಭೂಮಿ ಮತ್ತು ಎಲ್ಲಾ ಸಮಯಗಳಲ್ಲೂ ನೀರು ಲಭ್ಯವಿರುವಂಥ ಉತ್ಪಾದನೆಯ ಮಾರ್ಗೋಪಾಯಗಳು
- ಗುಣಮಟ್ಟ, ಸುರಕ್ಷತೆ ಮತ್ತು ಪರಸ್ಪರ ಸಾಂಸ್ಕೃತಿಕ ಬಾಂಧವ್ಯದ ದೃಷ್ಟಿಯಿಂದ ಆಹಾರದ ಪ್ರಮಾಣವು ಸಮರ್ಪಕವಾಗಿರುವುದು
- ದೈಹಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳಿಗಳಿಗೆ ಸಂಬಂಧಿಸಿದಂತೆ ಆಹಾರ ಪಡೆಯುವ ಸಾಧ್ಯತೆ
- ಆಹಾರ ಉತ್ಪಾದನೆ ಮತ್ತು ಬಳಕೆಗೆ ಸಂಬಂಧಿಸಿದಂತೆ ಸುಸ್ಥಿರತೆ

**ಆಹಾರ ಹಕ್ಕನ್ನು ಮನಗಾಣಿಸುವಲ್ಲಿ ಇರುವ ಪ್ರಮುಖ ಸಾಧನೋಪಾಯಗಳು**

- ಉತ್ಪಾದಕ ಸಂಪನ್ಮೂಲಗಳನ್ನು ಪಡೆಯುವುದು
- ಗೌರವಯುತ ಉದ್ಯೋಗ
- ರಾಜ್ಯದ ಹೊಣೆಗಾರಿಕೆ: ದುರ್ಬಲ ವರ್ಗಗಳಿಗೆ ಸಾಮಾಜಿಕ ಭದ್ರತೆ/ ಕ್ಷೇಮಾಭಿವೃದ್ಧಿ ಯೋಜನೆಗಳು

**ಆಹಾರ ಹಕ್ಕಿನ ಉಲ್ಲಂಘನೆಗೆ ಪ್ರಮುಖ ಕಾರಣಗಳು**

ಉತ್ಪಾದಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವುದಕ್ಕೆ ನಿರಾಕರಣೆ, ಉದ್ಯೋಗವಕಾಶಗಳ ಕೊರತೆ, ಬಡತನ ಮತ್ತು ದುರ್ಬಲ ವರ್ಗಗಳಿಗೆ ಸಮರ್ಪಕ ಕ್ಷೇಮಾಭಿವೃದ್ಧಿ ಯೋಜನೆ ಇಲ್ಲದಿರುವುದು, ಆರೋಗ್ಯ ಸಾಂಕ್ರಾಮಿಕತೆ, ಯುದ್ಧಗಳು, ಸಂಘರ್ಷಗಳು ಮತ್ತು ರಾಜ್ಯ ಅಥವಾ ಖಾಸಗಿ ಕಂಪನಿಗಳ ಅಭಿವೃದ್ಧಿ ಯೋಜನೆಗಳಿಂದ ಉಂಟಾದ ಸ್ಥಳಾಂತರದ ಕಾರಣದಿಂದ ಆಹಾರ ಹಕ್ಕನ್ನು ಉಲ್ಲಂಘಿಸಲಾಗುತ್ತದೆ.

ಮೇಲಿನ ಕಾರಣಗಳಲ್ಲದೆ, ಕಾರ್ಯನಿರ್ವಾಹಣೆ ಸಾಧ್ಯವಾಗದ ವಿತರಣಾ ವ್ಯವಸ್ಥೆ, ಹಕ್ಕುದಾರರಲ್ಲಿ ಅರಿವಿನ ಕೊರತೆ, ಕಾರ್ಯನಿರ್ವಾಹಕರಲ್ಲಿ ಸಾಮರ್ಥ್ಯದ ಕೊರತೆ, ಅಸಮರ್ಪಕ ಸಂಪನ್ಮೂಲ ಹಂಚಿಕೆ, ಎಲ್ಲಾ ಹಂತಗಳಲ್ಲಿ ಭ್ರಷ್ಟಾಚಾರ, ತಾಂತ್ರಿಕ ದೋಷಗಳು (ಆಧಾರ್ ಕಾರ್ಡಿಗೆ ಸಂಪರ್ಕಿಸುವುದು) ಇವು ಆಹಾರ ಹಕ್ಕಿನ ಉಲ್ಲಂಘನೆಗೆ ದಾರಿ ಮಾಡಿಕೊಡುವಂಥ ಕೆಲವು ಅಂಶಗಳಾಗಿವೆ.

21ನೇ ಅನುಚ್ಛೇದದ ಭಾಗವಾಗಿ, ಎಂದರೆ ಜೀವಿಸುವ ಹಕ್ಕಿನ ಭಾಗವಾಗಿ, ಮಕ್ಕಳ ಆಹಾರ ಹಕ್ಕನ್ನು ಭಾರತ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಭಾಗ–IIIರ ಅಡಿಯಲ್ಲಿ ಸಹ ಗುರುತಿಸಲಾಗಿದೆ. ಇದಲ್ಲದೆ, ಭಾಗ– IVರಲ್ಲಿ ಉಪಬಂಧಿಸಿರುವ ರಾಜ್ಯ ನೀತಿ ನಿರ್ದೇಶಕ ತತ್ವಗಳು ಸಹ ಮಕ್ಕಳ ಸಂದರ್ಭದಲ್ಲಿ ಸುಸಂಗತವಾಗಿವೆ.

ಮಕ್ಕಳ ಆಹಾರ ಹಕ್ಕನ್ನು ಕುರಿತು ತಿಳಿದುಕೊಳ್ಳುವುದು, 18 ವರ್ಷ ವಯಸ್ಸಿನ ಎಲ್ಲಾ ಮಕ್ಕಳು, ನೇರವಾಗಿಯಾಗಲಿ ಅಥವಾ ಕುಟುಂಬಗಳ ಮೂಲಕವಾಗಿಯಾಗಲಿ, ಎಲ್ಲಾ ಸಮಯದಲ್ಲಿ ನಿಯತವಾಗಿ ಸಾಕಷ್ಟು ಆಹಾರ ಪಡೆಯುವುದನ್ನು ಅವಶ್ಯಕವನ್ನಾಗಿಸುತ್ತದೆ. ಹಾಲುಣಿಸುವ ಅವಕಾಶವನ್ನು ಒಳಗೊಂಡಂತೆ, ಬೆಳವಣಿಗೆಯ ವಿವಿಧ ಹಂತಗಳಲ್ಲಿ ಮಕ್ಕಳು ಅಗತ್ಯವಿರುವ ಸಮರ್ಪಕ ಪೌಷ್ಟಿಕ ಆಹಾರವನ್ನು ಪಡೆಯಬೇಕೆಂಬುದೇ ಇದರ ಅರ್ಥ. ಮಕ್ಕಳು ದುರ್ಬಲರಾಗಿರುತ್ತಾರಾದ್ದರಿಂದ ಹಾಗೂ ಬಡ ಕುಟುಂಬಗಳು ತಮ್ಮ ಹಸಿವನ್ನು ಹೋಗಲಾಡಿಸುವಂಥ ಮತ್ತು ತಮ್ಮ ಆಹಾರವನ್ನು ಬದಲಾಯಿಸಿಕೊಳ್ಳುವಂಥ ಸಾಧನ ಅಥವಾ ಸಂಪನ್ಮೂಲಗಳನ್ನು ಹೊಂದಿರುವುದಿಲ್ಲವಾದ್ದರಿಂದ, ಮಕ್ಕಳ ವಿಕಾಸಕ್ಕೆ ಅಗತ್ಯವಿರುವ ಪೌಷ್ಟಿಕಾಂಶಗಳಿಂದ ಅವರು ವಂಚಿತರಾಗುತ್ತಾರೆ ಮತ್ತು ತತ್ಪರಿಣಾಮವಾಗಿ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಗುರಿಯಾಗುತ್ತಾರೆ.

ಕುಟುಂಬದೊಳಗೆ ಮತ್ತು ಹೊರಗೆ, ಮಕ್ಕಳಿಗೆ ಆಹಾರದ ಹಕ್ಕನ್ನು ತಿಳಿದುಕೊಳ್ಳುವುದಕ್ಕೆ ಅವಕಾಶ ಕಲ್ಪಿಸುವ ಹೊಣೆಗಾರಿಕೆ ರಾಜ್ಯದ ಮೇಲಿದೆ. ರಾಜ್ಯವು ನಡೆಸುವ ಕ್ಷೇಮಾಭಿವೃದ್ಧಿ ಯೋಜನೆಗಳ ಮುಖಾಂತರ, ದುರ್ಬಲ ವರ್ಗದ ಮಕ್ಕಳ ಆಹಾರ ಹಕ್ಕನ್ನು ಅವರಿಗೆ ತಿಳಿಸಿಕೊಡುವ ಬಹು ದೊಡ್ಡ ಜವಾಬ್ದಾರಿ ರಾಜ್ಯದ್ದಾಗಿದೆ.

**ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಹಸಿವಿನ ಸಮಸ್ಯೆಯ ತೀವ್ರತೆ**


2020ರ ಜಾಗತಿಕ ಹಸಿವು ಸೂಚ್ಯಂಕದ ಪ್ರಕಾರ, ಅಂದಾಜು 690 ದಶಲಕ್ಷ ಜನರು ನಿರಂತರವಾಗಿ ನ್ಯೂನ ಪೌಷ್ಟಿಕತೆಗೊಳಗಾಗಿದ್ದಾರೆ ಮತ್ತು 144 ದಶಲಕ್ಷ ಮಕ್ಕಳು ಕುಂಠಿತ ಬೆಳವಣಿಗೆ, ನಿರಂತರ ನ್ಯೂನ ಪೌಷ್ಟಿಕತೆಯ ಲಕ್ಷಣದಿಂದ ಬಳಲುತ್ತಿದ್ದಾರೆ. ಇದಲ್ಲದೆ, 47 ದಶಲಕ್ಷ ಮಕ್ಕಳು, ತೀವ್ರ ನ್ಯೂನ ಪೌಷ್ಟಿಕತೆಯಿಂದಾಗಿ ಕ್ಷೀಣಿಸುತ್ತಿದ್ದಾರೆ. ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಅರ್ಥ ವ್ಯವಸ್ಥೆ ಇದ್ದಾಗ್ಯೂ, ಹಸಿವಿನ ವ್ಯಾಪ್ತಿಯಲ್ಲಿ ಬರುವ 107 ದೇಶಗಳ ಪೈಕಿ, ಭಾರತವು 94ನೇ ಸ್ಥಾನದಲ್ಲಿದ್ದು, ಜಾಗತಿಕ ಹಸಿವು ಸೂಚ್ಯಂಕ, 2020ರ ಪ್ರಕಾರ 'ತೀವ್ರ ಹಸಿವು' ಪ್ರವರ್ಗದಲ್ಲಿರುವುದು ಮುಂದುವರಿಯುತ್ತಿದೆ.[10] ಇದರರ್ಥ, ತಮ್ಮ ಹಸಿವನ್ನು ತಣಿಸಿಕೊಳ್ಳಲು ಅವರಿಗೆ ಸಾಕಷ್ಟು ಆಹಾರ ಇರುವುದಿಲ್ಲ. ಬಹಳಷ್ಟು ಮಕ್ಕಳು, ಸೇವಿಸಲು ಸುರಕ್ಷಿತವಾದಂಥ ಎಲ್ಲಾ ಪೌಷ್ಟಿಕಾಂಶಗಳನ್ನು ಒಳಗೊಂಡಂಥ ಆಹಾರವನ್ನು ಪಡೆಯದಿರುವ ಕಾರಣದಿಂದಾಗಿ ನ್ಯೂನ ಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ.

---

9 ಮಗು ಮತ್ತು ಕಾನೂನು ಕೇಂದ್ರ, ನ್ಯಾಷನಲ್ ಲಾಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ಬೆಂಗಳೂರು ಇವರು 2013 ರಲ್ಲಿ ಪ್ರಕಟಿಸಿರುವ 'ರಾಷ್ಟ್ರೀಯ ಆಹಾರ ಸುರಕ್ಷತೆ ಅಧಿನಿಯಮ, 2013ರ ವಿಶೇಷ ಉಲ್ಲೇಖದೊಂದಿಗೆ ಮಕ್ಕಳ ಆಹಾರ ಹಕ್ಕು ಮತ್ತು ಕಾನೂನು ಕುರಿತು ಮತ್ತೆ ಮತ್ತೆ ಕೇಳಲಾಗುವ ಪ್ರಶ್ನೆಗಳು' 2013


10 https://www.globalhungerindex.org/india.html

**ರೇಖಾಚಿತ್ರ 1**: ಕರ್ನಾಟಕದ ಮಕ್ಕಳ ಪೌಷ್ಟಿಕತೆಯ ಸ್ಥಿತಿಗತಿ




ರೇಖಾಚಿತ್ರ 1 ಇದು, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಹೆಚ್‌ಎಸ್)–3 (2005–06), ಎನ್‌ಎಫ್‌ಹೆಚ್‌ಎಸ್–4 (2015–16), ಸಮಗ್ರ ರಾಷ್ಟ್ರೀಯ ಪೌಷ್ಟಿಕತೆ ಸಮೀಕ್ಷೆ (ಸಿಎನ್‌ಎನ್‌ಎಸ್, 2016–18) ಮತ್ತು ಎನ್‌ಎಫ್‌ಹೆಚ್‌ಎಸ್–5 ಇವುಗಳಿಂದ, ಕರ್ನಾಟಕದಲ್ಲಿ ಮಕ್ಕಳ ಪೌಷ್ಟಿಕತೆ ಸ್ಥಿತಿಗತಿಯ ಸಮಗ್ರ ಚಿತ್ರಣ ತಿಳಿದುಬರುತ್ತದೆ. ಎನ್‌ಎಫ್‌ಹೆಚ್‌ಎಸ್–5 (2019–20) ಇದು, ಶೇಕಡ 35.4ರಷ್ಟು ಮಕ್ಕಳು ಕುಂಠಿತ ಬೆಳವಣಿಗೆಯಿಂದ (ವಯಸ್ಸಿಗೆ ತಕ್ಕ ಎತ್ತರ), ಶೇಕಡ 19.5ರಷ್ಟು ಮಕ್ಕಳು ಮಧ್ಯಮ ಕ್ಷಯಿಸುವಿಕೆಯಿಂದ (ಎತ್ತರಕ್ಕೆ ತಕ್ಕ ಕಡಿಮೆ ತೂಕ), ಶೇಕಡ 8.4ರಷ್ಟು ಮಕ್ಕಳು ತೀವ್ರ ಕ್ಷಯಿಸುವಿಕೆಯಿಂದ ಬಳಲುತ್ತಿದ್ದಾರೆ ಮತ್ತು ಶೇಕಡ 32.9ರಷ್ಟು ಮಕ್ಕಳು ಕಡಿಮೆ ತೂಕವುಳ್ಳವರಾಗಿದ್ದಾರೆ ಎಂದು ತಿಳಿಸುತ್ತದೆ.

**ರೇಖಾಚಿತ್ರ 2**: ಕರ್ನಾಟಕದ ಜಿಲ್ಲೆಗಳಲ್ಲಿ ಅಪೌಷ್ಟಿಕತೆ ಪ್ರಮಾಣ



**ರಾಜ್ಯದಲ್ಲಿ ಅಪೌಷ್ಟಿಕತೆ**

| 2–10% | 10–20% | 20–30% |
|---|---|---|
| ಹಾಸನ | ಶಿವಮೊಗ್ಗ | ಹಾವೇರಿ |
| ದಕ್ಷಿಣ ಕನ್ನಡ | ಕೊಡಗು | ಕಲಬುರಗಿ |
| ಬೆಂಗಳೂರು ಗ್ರಾಮೀಣ | ಚಿಕ್ಕಬಳ್ಳಾಪುರ | ಧಾರವಾಡ |
| ರಾಮನಗರ | ಮೈಸೂರು | ಬಳ್ಳಾರಿ |
| ಉಡುಪಿ | ಚಾಮರಾಜನಗರ | ಯಾದಗಿರಿ |
| ಕೋಲಾರ | ದಾವಣಗೆರೆ | ಗದಗ |
| ಮಂಡ್ಯ | ಚಿತ್ರದುರ್ಗ | ರಾಯಚೂರು |
| ಬೆಂಗಳೂರು ನಗರ | ಬೆಳಗಾವಿ | ಕೊಪ್ಪಳ |
| ಚಿಕ್ಕಮಗಳೂರು | ಬಾಗಲಕೋಟೆ | ಬೀದರ್ |
| ತುಮಕೂರು | ವಿಜಯಪುರ | |
| ಉತ್ತರ ಕನ್ನಡ | | |


ಮೂಲ: ರಾಷ್ಟ್ರೀಯ ಆರೋಗ್ಯ ಸಮೀಕ್ಷೆ–4:
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

**ಕೋಷ್ಟಕ 1**: ಮಕ್ಕಳಲ್ಲಿ ನ್ಯೂನ ಪೌಷ್ಟಿಕತೆಯ ಮೂರು ಸ್ಥೂಲ ವಿಧಗಳು

| ವಿಧ | ಲಕ್ಷಣ | ಕಾರಣ |
|---|---|---|
| ತೀವ್ರ ಅಪೌಷ್ಟಿಕತೆ | ಕ್ಷಯಿಸುವಿಕೆ ಅಥವಾ ತೆಳ್ಳಗಿರುವುದು | ತೀವ್ರ ತೂಕ ನಷ್ಟ ಅಥವಾ ಸಾಮಾನ್ಯ ತೂಕ ಗಳಿಸುವುದಕ್ಕೆ ಕಾರಣವಾಗುವ ಪೌಷ್ಟಿಕತೆಯ ತೀವ್ರ ಅಸಮರ್ಪಕತೆ |
| ನಿರಂತರ ಅಪೌಷ್ಟಿಕತೆ | ಕುಂಠಿತ ಬೆಳವಣಿಗೆ ಅಥವಾ ಕುಳ್ಳಗಿರುವುದು | ಉದ್ದ ಬೆಳವಣಿಗೆಯ ವಿಫಲತೆಗೆಡೆ ಮಾಡಿಕೊಡುವ ದೀರ್ಘ ಸಮಯದವರೆಗಿನ ಅಸಮರ್ಪಕ ಪೌಷ್ಟಿಕಾಂಶ |
| ತೀವ್ರ ಮತ್ತು ನಿರಂತರ ಅಪೌಷ್ಟಿಕತೆ | ಕಡಿಮೆ ತೂಕ | ಕ್ಷಯಿಸುವಿಕೆ ಅಥವಾ ಕುಂಠಿತ ಬೆಳವಣಿಗೆ ಅಥವಾ ಎರಡರ ಸಂಯೋಜನೆಯ ಪರಿಣಾಮವಾಗಿ ಬರುತ್ತದೆ |

ಕೆಲವೊಮ್ಮೆ, ಒಂದು ಅಥವಾ ಎರಡು ವಿಧಗಳ ಅಪೌಷ್ಟಿಕತೆಯು, ಕುಟುಂಬದಲ್ಲಿ ಮಾತ್ರವಲ್ಲದೆ, ಒಬ್ಬೊಬ್ಬ ವ್ಯಕ್ತಿಯಲ್ಲೂ ಒಟ್ಟಿಗೆ ಇರಬಹುದಾಗಿದೆ.

**ರೇಖಾಚಿತ್ರ 3**: ಮಕ್ಕಳ ಬೆಳವಣಿಗೆಯ ಮೇಲೆ ಅಪೌಷ್ಟಿಕತೆಯ ಪರಿಣಾಮ




*ಮೂಲ: ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳು, ಸಿಸಿಎಲ್, ಎನ್‌ಎಲ್‌ಎಸ್‌ಐಯುನ ಕಾರ್ಯನಿರ್ವಾಹಕರಿಗೆ ಪೌಷ್ಟಿಕತೆ ಕುರಿತ ತರಬೇತಿ ಮಾದರಿ.*

**ಕ್ಷಯಿಸುವಿಕೆಯು** ಮಕ್ಕಳ ಎತ್ತರಕ್ಕೆ ತಕ್ಕಂತೆ ಕಡಿಮೆ ತೂಕವಾಗಿರುತ್ತದೆಯಾದರೂ ಅವರು ಕುಳ್ಳರಾಗಿರುವುದಿಲ್ಲ. ಮಕ್ಕಳಲ್ಲಿ ಕ್ಷಯಿಸುವಿಕೆಯು ತೀವ್ರ ನ್ಯೂನ ಪೌಷ್ಟಿಕತೆಯ ಲಕ್ಷಣವಾಗಿರುತ್ತದೆ ಮತ್ತು ಸಾಮಾನ್ಯವಾಗಿ ಇದು ಅಸಮರ್ಪಕ ಆಹಾರ ಸೇವನೆಯ ಅಥವಾ ಸೋಂಕುಕಾರಕ ರೋಗಗಳ, ಮುಖ್ಯವಾಗಿ ಅತಿಸಾರದಂಥ ಹೆಚ್ಚಿನ ಘಟನೆಗಳ ಪರಿಣಾಮವಾಗಿರುತ್ತದೆ. ಇಂಥ ಮಕ್ಕಳು ಸಾಮಾನ್ಯವಾಗಿ ಪೌಷ್ಟಿಕತೆ ಇರುವ ಮಗುವಿಗಿಂತ ಸಾಮಾನ್ಯ ರೋಗಗಳಿಂದಾಗಿ ಮರಣ ಹೊಂದುವ ಹೆಚ್ಚಿನ ಅಪಾಯಸಾಧ್ಯತೆಗೆ ಗುರಿಯಾಗಬಹುದು.

**ಕುಂಠಿತ ಬೆಳವಣಿಗೆಯು,** ಮಗುವು ಆಕೆಯ/ಆತನ ವಯಸ್ಸಿಗೆ ತಕ್ಕಂತೆ ಇರಬೇಕಾದ ಎತ್ತರಕ್ಕಿಂತ ಕಡಿಮೆ ಎತ್ತರ ಇರುವಾಗ, ತೆಳ್ಳಗೆ ಇರಬೇಕೆಂದೇನು ಅಲ್ಲ. ಸಾಮಾನ್ಯವಾಗಿ, ಇದು ನಿರಂತರ ಅಪೌಷ್ಟಿಕತೆ, ಪುನರಾವರ್ತಿತ ಸೋಂಕು ರೋಗಗಳು ಮತ್ತು/ಅಥವಾ ಕಡಿಮೆ ಸಾಮಾಜಿಕ ಉತ್ತೇಜನದ ಕಾರಣದಿಂದ ಉಂಟಾಗುತ್ತದೆ. ಕುಂಠಿತ ಬೆಳವಣಿಗೆಯು, ಮಗುವಿನ ಆರೋಗ್ಯದ ಮೇಲೆ ಪರಿಣಾಮ ಬೀರುವುದಷ್ಟೇ ಅಲ್ಲದೆ, ಅವರನ್ನು ರೋಗ ಮತ್ತು ಸೋಂಕುಗಳಿಗೆ ಹೆಚ್ಚು ಈಡು ಮಾಡುತ್ತದೆಯಷ್ಟೇ ಅಲ್ಲದೆ, ಅವರ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗೂ ಅಡಚಣೆಯಾಗುತ್ತದೆ. ಎಂದರೆ, ಕುಂಠಿತ ಬೆಳವಣಿಗೆಯಿಂದ ಬಳಲುತ್ತಿರುವ ಮಕ್ಕಳು, ತಮ್ಮ ಪೂರ್ಣ ಎತ್ತರವನ್ನು ತಲುಪುವ ವೇಳೆಗೆ ಮತ್ತು ವಯಸ್ಕರರಾದಾಗ, ಅವರಲ್ಲಿ ಜ್ಞಾನ ಗ್ರಹಿಸುವ ಸಾಮರ್ಥ್ಯ ಕಡಿಮೆಯಾಗುವ ಸಾಧ್ಯತೆ ಇರುತ್ತದೆ.

**ಕಡಿಮೆ ತೂಕವು,** ಮಗುವು ತೆಳ್ಳಗಿದ್ದಾಗ ಅಥವಾ ಆಕೆಯ/ಆತನ ವಯಸ್ಸಿಗೆ ತಕ್ಕಷ್ಟು ಎತ್ತರವಿರದೆ ಕುಳ್ಳಗಿರುವಾಗ, ಅವರ ವಯಸ್ಸಿಗೆ ತಕ್ಕಷ್ಟು ಇರದೆ ಕಡಿಮೆ ತೂಕವನ್ನು ಇರುವುದನ್ನು ಸೂಚಿಸುತ್ತದೆ. ಈ ಸ್ಥಿತಿಯು ತೀವ್ರ ಮತ್ತು ನಿರಂತರ ಅಪೌಷ್ಟಿಕತೆ ಇವೆರಡರ ಕಾರಣದಿಂದಿರಬಹುದು.

ಕುಂಠಿತ ಬೆಳವಣಿಗೆ ಇರುವ ಮತ್ತು ಕಡಿಮೆ ತೂಕದ ಮಕ್ಕಳು ಅನಾರೋಗ್ಯಕ್ಕೆ ಹೆಚ್ಚು ಗುರಿಯಾಗುತ್ತಾರೆ ಮತ್ತು ಕ್ಷೀಣ ಬೆಳವಣಿಗೆಯಿಂದ ಬಳಲುತ್ತಿರುತ್ತಾರೆ. 1–3 ವರ್ಷ ವಯೋಮಾನದ ನಡುವಿನ ಶಿಶುಗಳಲ್ಲಿ ಮತ್ತು ಮಕ್ಕಳಲ್ಲಿ ಕಂಡುಬರುವ ತೀವ್ರ ಅಪೌಷ್ಟಿಕತೆಯು, ಪ್ರೋಟೀನ್ ಮತ್ತು ಎನರ್ಜಿ (ಶಕ್ತಿ) ಕೊರತೆಯಾಗಿ ಪರಿಣಮಿಸುತ್ತದೆ.

ಅಪೌಷ್ಟಿಕತೆಯು ಅನಾರೋಗ್ಯದ ಮುಖ್ಯ ಕಾರಣವಾಗಿದೆ. ಅಪೌಷ್ಟಿಕತೆ ಇರುವ ಜನರಿಗೆ, ರೋಗಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವಲ್ಲಿ ಸಾಮರ್ಥ್ಯ ಇರುವುದಿಲ್ಲವಾದ್ದರಿಂದ, ಅತ್ಯಂತ ಸುಲಭವಾಗಿ ಅನಾರೋಗ್ಯಕ್ಕೀಡಾಗುತ್ತಾರೆ ಮತ್ತು ದೀರ್ಘ ಕಾಲದವರೆಗೆ ಅನಾರೋಗ್ಯ ಪೀಡಿತರಾಗಿರುತ್ತಾರೆ. ಅತಿಸಾರ, ದಡಾರ, ಮಲೇರಿಯಾ ಮತ್ತು ಶೀತಜ್ವರ (ನ್ಯುಮೋನಿಯ) ಗಳಂಥ ರೋಗಗಳು, ಸಾಮಾನ್ಯವಾಗಿ ಅಪೌಷ್ಟಿಕತೆ ಇರುವ ಜನರ ಮರಣಕ್ಕೆ ಕಾರಣವಾಗುತ್ತವೆ.

ಅಪೌಷ್ಟಿಕತೆಯು, ಪೀಳಿಗೆಯಿಂದ ಪೀಳಿಗೆಗೆ ಮುಂದುವರಿಯುವುದಕ್ಕೆ ಸಂಬಂಧಿಸಿದ ವಿಷಯವಾಗಿದ್ದು, ಬಡತನ, ಪೌಷ್ಟಿಕ ಆಹಾರದ ಕೊರತೆ, ರಕ್ತಹೀನತೆ, 'ಮಹಿಳೆಯರು, ಎಲ್ಲರ ಊಟವಾದ ನಂತರ ತಿನ್ನಬೇಕು' ಎಂಬಂಥ ಮತ್ತು ಲಿಂಗ ತಾರತಮ್ಯದಂಥ ಪಿತೃಪ್ರಧಾನ ಆಚರಣೆ ಇವೆಲ್ಲವುಗಳ ಒಟ್ಟಾರೆ ಕಾರಣದಿಂದ ಕಂಡುಬರುತ್ತದೆ. ಈ ಎಲ್ಲಾ ಅಡ್ಡಿ–ಆತಂಕಗಳನ್ನು ಕೊನೆಗಾಣಿಸುವ ಅಗತ್ಯವಿದ್ದು, ಅದಕ್ಕಾಗಿ, ಕಾರ್ಯನೀತಿಗಳು, ಕಾರ್ಯಕ್ರಮಗಳು ಮತ್ತು ಸುಧಾರಿತ ಆಚರಣೆಗಳಂಥ ಬಹು–ಮುಖ ಮಾರ್ಗೋಪಾಯಗಳನ್ನು ಅನುಸರಿಸಬೇಕಾದ ಅಗತ್ಯವಿದೆ.

**ಮಕ್ಕಳಿಗೆ ಆಹಾರ ಹಕ್ಕನ್ನು ಬೆಂಬಲಿಸುವುದಕ್ಕೆ ಇರುವ ವಿವಿಧ ಕಾರ್ಯನೀತಿಗಳು**

ರಾಷ್ಟ್ರ ಮಟ್ಟದಲ್ಲಿ, ಮಕ್ಕಳ ಆಹಾರ ಹಕ್ಕಿನ ಮೇಲೆ ಈ ಮುಂದಿನ ಕಾರ್ಯನೀತಿಗಳು ಆಧಾರವಾಗಿವೆ:

- ರಾಷ್ಟ್ರೀಯ ಪೌಷ್ಟಿಕತೆ ಕಾರ್ಯನೀತಿ, 1993
- ರಾಷ್ಟ್ರೀಯ ಮಕ್ಕಳ ಕಾರ್ಯನೀತಿ, 2013
- ಆರಂಭಿಕ ಬಾಲ್ಯಾವಸ್ಥೆಯಲ್ಲಿ ರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯನೀತಿ, 2013

**ಕೋಷ್ಟಕ 2**: ಎನ್‌ಎಫ್‌ಎಸ್‌ಎ, 2013ಕ್ಕೆ ಹೆಚ್ಚುವರಿಯಾಗಿ, ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಹಸಿವು ಮತ್ತು ಅಪೌಷ್ಟಿಕತೆಯನ್ನು ಹೋಗಲಾಡಿಸಲು ಇರುವ ಪ್ರಮುಖ ಕಾರ್ಯಕ್ರಮಗಳು ಮತ್ತು ಯೋಜನೆಗಳು.

| ಉದ್ದೇಶಿತ ಗುಂಪು | ಕಾರ್ಯಕ್ರಮಗಳು ಮತ್ತು ಯೋಜನೆಗಳು | ಕರ್ನಾಟಕದಲ್ಲಿನ ಹೆಚ್ಚುವರಿ ರಾಜ್ಯ ಯೋಜನೆಗಳು/ ಕಾರ್ಯಕ್ರಮಗಳು |
|---|---|---|
| **0–3 ವರ್ಷ ವಯಸ್ಸಿನ ಮಕ್ಕಳು** | ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ–II (ಆರ್‌ಸಿಹೆಚ್– II), ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್‌ಆರ್‌ಹೆಚ್‌ಎಂ), ರಾಜೀವ್ ಗಾಂಧಿ ರಾಷ್ಟ್ರೀಯ ಶಿಶುಧಾಮ ಯೋಜನೆ (ಆರ್‌ಜಿಎನ್‌ಸಿಎಸ್) | *ಕ್ಷೀರ ಭಾಗ್ಯ – ಹಾಲು ಒದಗಿಸುವುದು*<br>*ಸೃಷ್ಟಿ – ಮೊಟ್ಟೆ ಒದಗಿಸುವುದು* |
| **3–6 ವರ್ಷ ವಯಸ್ಸಿನ ಮಕ್ಕಳು** | ಆರ್‌ಸಿಹೆಚ್– II, ಎನ್‌ಆರ್‌ಹೆಚ್‌ಎಮ್, ಆರ್‌ಜಿಎನ್‌ಸಿಎಸ್, ಸಮಗ್ರ ನೈರ್ಮಲ್ಯ ಆಂದೋಲನ (ಟಿಎಸ್‌ಸಿ), ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮ (ಎನ್‌ಆರ್‌ಡಿಡಬ್ಲ್ಯುಪಿ) | *ಕ್ಷೀರ ಭಾಗ್ಯ, ಸೃಷ್ಟಿ* |
| **6–14 ವರ್ಷ ವಯಸ್ಸಿನ ಮಕ್ಕಳು (ಶಾಲೆಗೆ ಹೋಗುವ ಮಕ್ಕಳು)** | *ಸರ್ವ ಶಿಕ್ಷಾ ಅಭಿಯಾನ (ಎಸ್‌ಎಸ್‌ಎ), ಕಬ್ಬಿಣ ಮತ್ತು ಫೋಲಿಕ್ ಆಸಿಡ್ ಪೂರೈಕೆ ಸಾಪ್ತಾಹಿಕ ಕಾರ್ಯಕ್ರಮ (ಡಬ್ಲ್ಯುಐಎಫ್‌ಎಸ್‌ಪಿ)* | *ಕ್ಷೀರ ಭಾಗ್ಯ* |
| **11–18 ವರ್ಷ ವಯಸ್ಸಿನ ಕಿಶೋರಿ ಬಾಲಕಿಯರು** | ರಾಜೀವ್ ಗಾಂಧಿ ಕಿಶೋರಿ ಬಾಲಕಿಯರ ಸಬಲೀಕರಣ ಯೋಜನೆ (ಆರ್‌ಜಿಎಸ್‌ಸಿಎಜಿ–ಎಸ್‌ಎಬಿಎಎಲ್‌ಎ), *ಕಿಶೋರಿ ಶಕ್ತಿ ಯೋಜನೆ* (ಕೆಎಸ್‌ವೈ), ಟಿಎಸ್‌ಸಿ, ಎನ್‌ಆರ್‌ಡಿಡಬ್ಲ್ಯುಪಿ, ಡಬ್ಲ್ಯುಐಎಫ್‌ಎಸ್‌ಪಿ | |
| **ಗರ್ಭಿಣಿ ಮಹಿಳೆಯರು ಮತ್ತು ಹಾಲುಣಿಸುವ ತಾಯಂದಿರು** | ಆರ್‌ಸಿಹೆಚ್– II, *ಜನನಿ ಸುರಕ್ಷಾ ಯೋಜನೆ* (ಜೆಎಸ್‌ವೈ), ಇಂದಿರಾ ಗಾಂಧಿ *ಮಾತೃತ್ವ ಸಹಯೋಗ ಯೋಜನೆ* (ಐಜಿಎಮ್‌ಎಸ್‌ವೈ)– ಸಿಎಮ್‌ಬಿ ಯೋಜನೆ | ಮಾತೃಪೂರ್ಣ – ಗರ್ಭಿಣಿ ಮಹಿಳೆಯರಿಗೆ ಮತ್ತು ಹಾಲುಣಿಸುವ ತಾಯಂದಿರಿಗೆ ಬಿಸಿ ಊಟ – *ಸೃಷ್ಟಿ* |
| **ಪ್ರೌಢ ವಯಸ್ಕರು** | ರಾಷ್ಟ್ರೀಯ ಆಹಾರ ಸುರಕ್ಷತೆ ಅಭಿಯಾನ (ಎನ್‌ಎಫ್‌ಎಸ್‌ಎಮ್), ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಎಮ್‌ಜಿಎನ್‌ಆರ್‌ಇಜಿಎ), ಮಹಿಳಾ ಕ್ಷೇಮಾಭಿವೃದ್ಧಿ ಮತ್ತು ಬೆಂಬಲ ಕಾರ್ಯಕ್ರಮ (ಡಬ್ಲ್ಯುಡಬ್ಲ್ಯುಎಸ್‌ಪಿ) *ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಆರ್‌ಕೆವಿವೈ)*, ಟಿಎಸ್‌ಸಿ, ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಹೆಚ್‌ಎಮ್), ಎನ್‌ಐಡಿಡಿಸಿಆರ್, ಪೌಷ್ಟಿಕತೆ ಶಿಕ್ಷಣ ಮತ್ತು ವಿಸ್ತರಣೆ, *ಭಾರತ ನಿರ್ಮಾಣ ರಾಷ್ಟ್ರೀಯ ಸ್ವಾಸ್ಥ್ಯ ಬೀಮಾ ಯೋಜನೆ (ಆರ್‌ಎಸ್‌ಬಿವೈ)* | ಉಚಿತ ಪಡಿತರ ಒದಗಿಸುವುದು |

## ರಾಷ್ಟ್ರೀಯ ಆಹಾರ ಸುರಕ್ಷತೆ ಅಧಿನಿಯಮ, 2013: ಹಸಿವು ಮತ್ತು ಅಪೌಷ್ಟಿಕತೆ ನಿವಾರಣೆಗಾಗಿ ರಚಿಸಿದ ಕಾನೂನು

ರಾಷ್ಟ್ರೀಯ ಆಹಾರ ಸುರಕ್ಷತೆ ಅಧಿನಿಯಮವನ್ನು 2013ರಲ್ಲಿ ಅಧಿನಿಯಮಿತಗೊಳಿಸಲಾಗಿದೆ. ಆಹಾರ ಹಕ್ಕಿಗೆ ನೀಡಿದ ಕಾನೂನು ಮಾನ್ಯತೆಯು, ವಿಶ್ವದಲ್ಲಿಯೇ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಹಸಿದ ಜನರಿರುವ ದೇಶಗಳ ಪೈಕಿ, ಈ ಒಂದು ದೇಶದಲ್ಲಿ ಅತ್ಯಂತ ಮುಖ್ಯ ಕೇಂದ್ರ ಶಾಸನವಾಗಿ ಜಾರಿಗೆ ಬರಲು ಸಾಧ್ಯವಾಗಿದೆ. ಪ್ರಸ್ತುತ ಆಹಾರ ಸಂಬಂಧಿತ ಯೋಜನೆಗಳ ಕೆಲವು ಅಂಶಗಳನ್ನು, ಎನ್‌ಎಫ್‌ಎಸ್‌ಎ ಮೂಲಕ 'ಕಾನೂನುಬದ್ಧ ಹಕ್ಕು'ಗಳನ್ನಾಗಿ ಪರಿವರ್ತಿಸಲಾಗಿದೆ. ಜೀವನ ಚಕ್ರ ಸಾಗಿಸುವುದಕ್ಕೆ ಆಹಾರ ಮತ್ತು ಪೌಷ್ಟಿಕತೆ ಹಕ್ಕು ಹೊಂದಿರುವ ಜನರ ಪಾಲ್ಗೊಳ್ಳುವಿಕೆಯನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ಇದರ ಕರಡನ್ನು (ಡ್ರಾಫ್ಟ್) ರಚಿಸಲಾಗಿದೆ (ವಾರ್ಧಕ್ಯದ ಪರಿಕಲ್ಪನೆ ಇದರಲ್ಲಿ ಅಡಕವಾಗಿದೆ)

### ಎನ್‌ಎಫ್‌ಎಸ್‌ಎ ಉದ್ದೇಶಗಳು, 2013

ಎನ್‌ಎಫ್‌ಎಸ್‌ಎ, 2013ರ ಉದ್ದೇಶವನ್ನು, ಇದರ ಪತ್ರದಲ್ಲಿಯೇ ಸುಸ್ಪಷ್ಟವಾಗಿ ಹೇಳಲಾಗಿದೆ, ಎಂದರೆ – ***"ಜನರು ಗೌರವದಿಂದ ಜೀವನ ನಡೆಸುವುದಕ್ಕಾಗಿ, ಅವರಿಗೆ ಕೈಗೆಟುಕುವ ಬೆಲೆಗಳಲ್ಲಿ ಸಾಕಷ್ಟು ಪ್ರಮಾಣದ ಉತ್ತಮ ಗುಣಮಟ್ಟದ ಆಹಾರ ಪಡೆಯುವ ಅವಕಾಶವನ್ನು ಸುನಿಶ್ಚಿತಪಡಿಸಿ, ಅವರ ಜೀವನದಲ್ಲಿ ಆಹಾರ ಮತ್ತು ಪೌಷ್ಟಿಕಾಂಶ ಸುರಕ್ಷತೆಯನ್ನು ಒದಗಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ ಇದಾಗಿದೆ."*** ಈ ಅಧಿನಿಯಮವು ಹದಿಮೂರು ಅಧ್ಯಾಯಗಳನ್ನು ಮತ್ತು ನಾಲ್ಕು ಅನುಸೂಚಿಗಳನ್ನು ಒಳಗೊಂಡಿದೆ.

ಇದೊಂದು ಅತಿ ಮುಖ್ಯ ಅಧಿನಿಯಮವಾಗಿದೆ. ಎನ್‌ಎಫ್‌ಎಸ್‌ಎ ಇದು, ಆಹಾರ ಹಕ್ಕನ್ನು ಸಾಕಾರಗೊಳಿಸುವಲ್ಲಿ ಒಂದು ಮಹತ್ವಪೂರ್ಣ ಹೆಜ್ಜೆಯಾಗಿದೆ. ಈ ಅಧಿನಿಯಮದ ಅತಿ ಮುಖ್ಯ ಅಂಶಗಳಲ್ಲಿ, ಈ ಮೊದಲು ಸಾರ್ವಜನಿಕ ವಿತರಣೆ ವ್ಯವಸ್ಥೆ (ಪಿಡಿಎಸ್), ಐಸಿಡಿಎಸ್ ಯೋಜನೆ, ಎಮ್‌ಡಿಎಮ್‌ಎಸ್ ಮತ್ತು ಎಮ್‌ಬಿಎಸ್ ಎಂಬ ನಾಲ್ಕು ಯೋಜನೆಗಳ ಅಡಿಯಲ್ಲಿ ಅವಕಾಶ ಕಲ್ಪಿಸಲಾಗಿದ್ದ ಪ್ರಯೋಜನಗಳನ್ನು ಎತ್ತಿ ಹಿಡಿದಿರುವುದೂ ಒಂದು ಮುಖ್ಯ ಅಂಶವಾಗಿದೆ. ಇದು ಆಹಾರ ಹಕ್ಕನ್ನು ಕಾನೂನು ಬದ್ಧಗೊಳಿಸಿರುವುದರಿಂದ, ಇದನ್ನು ಅಧಿನಿಯಮದ ಅತ್ಯಂತ ಪ್ರಮುಖ ಲಕ್ಷಣವೆಂಬುದಾಗಿ ಪರಿಗಣಿಸಲಾಗಿದೆ. ಇದು, ಭಾರತ ಸಂವಿಧಾನದ 47ನೇ ಅನುಚ್ಛೇದಕ್ಕೆ ಅನುಗುಣವಾಗಿದ್ದು, ಅದರಲ್ಲಿ – ***"ರಾಷ್ಟ್ರವು ತನ್ನ ಜನತೆಯ ಪೌಷ್ಟಿಕತೆಯ ಮಟ್ಟವನ್ನು ಹಾಗೂ ಜೀವನದ ಮಟ್ಟವನ್ನು ಹೆಚ್ಚಿಸುವುದು ಮತ್ತು ಸಾರ್ವಜನಿಕ ಆರೋಗ್ಯವನ್ನು ಸುಧಾರಿಸುವುದು ತನ್ನ ಪ್ರಾಥಮಿಕ ಕರ್ತವ್ಯಗಳಲ್ಲಿ ಸೇರಿದೆಯೆಂದು ಪರಿಗಣಿಸತಕ್ಕದ್ದು..."*** ಎಂದು ಹೇಳಲಾಗಿದೆ.

## ಆಹಾರ ಸುರಕ್ಷತೆಯನ್ನು ಸುನಿಶ್ಚಿತಗೊಳಿಸುವಲ್ಲಿ ಜೀವನಚಕ್ರದ ಮಹತ್ವ

ವಿಶ್ವದಲ್ಲೇ ಅತ್ಯಂತ ಹೆಚ್ಚು ಸಂಖ್ಯೆಯ ಹಸಿದ ಜನರಿರುವ ದೇಶದಲ್ಲಿ, ಆಹಾರ ಸುರಕ್ಷತೆಯ ಕಾನೂನುಬದ್ಧ ಹಕ್ಕಿಗೆ ಪರಮೋಚ್ಚ ಪ್ರಾಮುಖ್ಯತೆ ನೀಡಲಾಗಿದೆ. ಎನ್‌ಎಫ್‌ಎಸ್‌ಎ, 2013ರ ವಿಶಿಷ್ಟ ಲಕ್ಷಣವೆಂದರೆ, ಅಪೌಷ್ಟಿಕತೆಯ ಕೊರತೆ ತೀವ್ರವಾಗಿರುವ ಕಾಲದಲ್ಲಿ ಆಹಾರ ಅಸುರಕ್ಷತೆಯನ್ನು ಎದುರಿಸುವಲ್ಲಿ ಜೀವನ ಚಕ್ರದ ಮಹತ್ವವನ್ನು ಮತ್ತು ಮಾನವ ಅಭಿವೃದ್ಧಿ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಇರುವ ಅವಕಾಶಗಳನ್ನು ಗುರುತಿಸುವುದೇ ಆಗಿದೆ.

ಆಹಾರ ಮತ್ತು ಪೌಷ್ಟಿಕಾಂಶ ಸುರಕ್ಷತೆಗೆ ಸಂಬಂಧಿಸಿದಂತೆ ನ್ಯೂನ ಅಪೌಷ್ಟಿಕತೆಯು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಯವರೆಗೆ ಮುಂದುವರಿಯುತ್ತಿರುವುದನ್ನು, ಜೀವನ ಚಕ್ರದ ಮಹತ್ವವನ್ನು ಗುರುತಿಸಿ, ಎಲ್ಲಾ ಗರ್ಭಿಣಿ ಮಹಿಳೆಯರಿಗೆ ಗರ್ಭಾವಸ್ಥೆಯ ಪ್ರಾರಂಭದಿಂದ ಮತ್ತು ತಾಯಿ ಹಾಲುಣಿಸುವವರೆಗೆ ಹಾಗೂ ಶೈಶವಾವಸ್ಥೆಯಿಂದ, ಆರಂಭಿಕ ಬಾಲ್ಯಾವಸ್ಥೆಯಲ್ಲಿ (ಆರು ವರ್ಷಗಳವರೆಗೆ), 6–14 ವರ್ಷಗಳವರೆಗೆ, ಹೀಗೆ ಮಗುವಿನ ದೈಹಿಕ ಬೆಳವಣಿಗೆಯ ವಿವಿಧ ಹಂತಗಳಲ್ಲಿ, ಪ್ರೌಢಾವಸ್ಥೆಯಲ್ಲಿ, ಪ್ರೌಢ ಹಾಗೂ ವೃದ್ಧಾಪ್ಯದಲ್ಲಿ ಪೌಷ್ಟಿಕ ಆಹಾರ ಒದಗಿಸುವ ಕಾರ್ಯದಲ್ಲಿ ನಂಬಿಕೆ ಇಡಲಾಗಿದೆ.

### ಆಹಾರ ಸುರಕ್ಷತೆಗಾಗಿ ಎನ್‌ಎಫ್‌ಎಸ್‌ಎ, 2013ರ ಅಡಿಯಲ್ಲಿನ ಉಪಬಂಧಗಳು ಮತ್ತು ಹಕ್ಕುಗಳು

ಎನ್‌ಎಫ್‌ಎಸ್‌ಎ, 2013ರ IIನೇ ಅಧ್ಯಾಯವು, 3, 4, 5, 6 ಮತ್ತು 7ನೇ ಪ್ರಕರಣಗಳ ಅಡಿಯಲ್ಲಿನ ಉಪಬಂಧಗಳು, ಹಕ್ಕುಗಳನ್ನು ಮತ್ತು ಅನುಷ್ಠಾನವನ್ನು ಎತ್ತಿ ತೋರಿಸುತ್ತದೆ. 2013ರ ಎನ್‌ಎಫ್‌ಎಸ್‌ಎ ಇದು, ಗರ್ಭಿಣಿಯರಿಗೆ ಮತ್ತು ಹಾಲುಣಿಸುವ ತಾಯಂದಿರಿಗೆ, 6 ತಿಂಗಳುಗಳಿಂದ 6 ವರ್ಷಗಳವರೆಗಿನ ವಯೋಗುಂಪಿನಲ್ಲಿ ಬರುವ ಮಕ್ಕಳಿಗೆ, VIIIನೇ ತರಗತಿವರೆಗಿನ ಶಾಲೆಗೆ ಹೋಗುವ ಅಥವಾ 14 ವರ್ಷ ವಯಸ್ಸಿನವರೆಗಿನ ಮಕ್ಕಳಿಗೆ ವಿವಿಧ ರೀತಿಯ ಪೌಷ್ಟಿಕ ಆಹಾರಕ್ಕೆ ನೆರವನ್ನು ಹಾಗೂ ರಾಜ್ಯ ಸರ್ಕಾರಗಳು ಗುರುತಿಸುವ ಬಡ ಕುಟುಂಬಗಳಿಗೆ ಕಡಿಮೆ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಒದಗಿಸುವುದಕ್ಕೆ ಉಪಬಂಧ ಕಲ್ಪಿಸುತ್ತದೆ.

**ಕೋಷ್ಟಕ 3**: ಎನ್ಎಫ್ಎಸ್ಎ, 2013ರ ಅಡಿಯಲ್ಲಿನ ಪ್ರಕರಣಗಳು, ಹಕ್ಕುಗಳು, ಯೋಜನೆಗಳು, ಪೌಷ್ಟಿಕತೆಯ ಗುಣಮಟ್ಟಗಳು ಮತ್ತು ವಿತರಣೆ ಕೇಂದ್ರಗಳು

| ಎನ್ಎಫ್ಎಸ್ಎ, 2013ರ ಪ್ರಕರಣಗಳು | ಹಕ್ಕುದಾರರು | ಎನ್ಎಫ್ಎಸ್ಎ, 2013ರ ಅಡಿಯಲ್ಲಿನ ಹಕ್ಕುಗಳು | ಯೋಜನೆ | ಪೌಷ್ಟಿಕತೆ ಗುಣಮಟ್ಟಗಳು ಅನುಸೂಚಿ–II | | ವಿತರಣೆ/ ಅನುಷ್ಠಾನ ಅಂಶ |
|---|---|---|---|---|---|---|
| | | | | ಕ್ಯಾಲೋರಿ (ಕೆಇಎಲ್) | ಪ್ರೋಟೀನ್ (ಜಿ) | |
| 3 | ಎಎವೈ ಯಿಂದ ಕುಟುಂಬಗಳಿಗೆ ದೊರೆಯುವ ಹಕ್ಕುಗಳು/ ಲಭ್ಯವಿರುವ ಪ್ರಯೋಜನಗಳು | ಅನುಸೂಚಿ–Iರಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಪ್ರತಿ ತಿಂಗಳಿಗೆ ಪತಿ ಕುಟುಂಬಕ್ಕೆ 35 ಕೆಜಿ ಆಹಾರ ಧಾನ್ಯಗಳು | ಟಿಪಿಡಿಎಸ್ | | | ನ್ಯಾಯ ಬೆಲೆ ಅಂಗಡಿ (ಎಫ್‌ಪಿಎಸ್) |
| 3 | ಪಿಹೆಚ್‌ಹೆಚ್‌ಗೆ ಅರ್ಹ ಕುಟುಂಬಗಳು/ ಅದರಿಂದ ಲಭ್ಯವಿರುವ ಪ್ರಯೋಜನಗಳು | ಅನುಸೂಚಿ–Iರಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ರಾಜ್ಯ ಸರ್ಕಾರದಿಂದ ಪ್ರತಿ ತಿಂಗಳಿಗೆ ಪ್ರತಿ ಕುಟುಂಬಕ್ಕೆ 35 ಕೆಜಿ ಆಹಾರ ಧಾನ್ಯಗಳು (ಪ್ರತಿ ಒಂದು ಕೆಜಿ ಅಕ್ಕಿಗೆ 3 ರೂ. ಪ್ರತಿ 2 ಕೆಜಿ ಗೋಧಿಗೆ 2 ರೂ. ಪ್ರತಿ 1 ಕೆಜಿ ಉರುಟು ಧಾನ್ಯಗಳಿಗೆ 1 ರೂ.) | ಟಿಪಿಡಿಎಸ್ | | | ಎಫ್‌ಪಿಎಸ್ |
| 4 | ಪ್ರಯೋಜನಕ್ಕೆ ಹಕ್ಕುಳ್ಳ/ ಪ್ರಯೋಜನ ಪಡೆಯುತ್ತಿರುವ ಗರ್ಭಿಣಿ ಮಹಿಳೆಯರು ಮತ್ತು ಹಾಲುಣಿಸುವ ತಾಯಂದಿರು | ಅನುಸೂಚಿ–IIರಲ್ಲಿ ನಿರ್ದಿಷ್ಟಪಡಿಸಿದ ಪೌಷ್ಟಿಕತೆ ಗುಣಮಟ್ಟಗಳನ್ನು ಈಡೇರಿಸಲು ಗರ್ಭಾವಸ್ಥೆಯಲ್ಲಿ ಮತ್ತು ಮಗುವಿನ ಜನನದ ನಂತರ ಆರು ತಿಂಗಳುಗಳವರೆಗೆ, ಉಚಿತ ಬಿಸಿ ಊಟ/ ಉಚಿತ ಮನೆಗೊಯ್ಯುವ ಪಡಿತರ (ಟಿಹೆಚ್ಆರ್) | ಐಸಿಡಿಎಸ್ | 600 | 18–20 | ಅಂಗನವಾಡಿ ಕೇಂದ್ರ (ಎಡಬ್ಲ್ಯುಸಿ) |
| 5 | ಪ್ರಯೋಜನಕ್ಕೆ ಅರ್ಹರಿರುವ/ ಪ್ರಯೋಜನ ಪಡೆಯುತ್ತಿರುವ ಮಕ್ಕಳು (6 ತಿಂಗಳಿನಿಂದ 3 ವರ್ಷಗಳು) | ಟಿಹೆಚ್ಆರ್–6 ತಿಂಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ, ವಿಶೇಷವಾಗಿ ಎದೆ ಹಾಲುಣಿಸುವುದನ್ನು ಉತ್ತೇಜಿಸತಕ್ಕದ್ದು | ಐಸಿಡಿಎಸ್ | 500 | 12–15 | ಎಡಬ್ಲ್ಯುಸಿ |
| 5 | ಸೇವೆಗಳನ್ನು ಪಡೆಯಲು ಅರ್ಹರಿರುವ/ ಪಡೆಯುತ್ತಿರುವ ಮೂರರಿಂದ ಆರು ವರ್ಷ ವಯಸ್ಸಿನ ನಡುವಿನ ಮಕ್ಕಳು | ಬೆಳಗಿನ ತಿಂಡಿ ಮತ್ತು ಬಿಸಿ ಊಟ | ಐಸಿಡಿಎಸ್ | | | ಎಡಬ್ಲ್ಯುಸಿ |
| 6 | ಅಪೌಷ್ಟಿಕತೆ ಇರುವ 6 ತಿಂಗಳಿಂದ 6 ವರ್ಷಗಳ ನಡುವಿನ ಮಕ್ಕಳು | ಅನುಸೂಚಿ–IIರಲ್ಲಿ ನಿರ್ದಿಷ್ಟಪಡಿಸಿದ ಪೌಷ್ಟಿಕತೆಯನ್ನು ಈಡೇರಿಸಲು ಹೆಚ್ಚುವರಿ ಪೂರಕ ಆಹಾರ ಸಹಿತ ಉಚಿತ ಟಿಹೆಚ್ಆರ್ | ಐಸಿಡಿಎಸ್ | 800 | 20–25 | ಎಡಬ್ಲ್ಯುಸಿ |

| | | | | | | |
|---|---|---|---|---|---|---|
| 5 | ಪ್ರಯೋಜನಗಳು ಲಭ್ಯವಿರುವ 6–14 ವರ್ಷ ವಯಸ್ಸಿನ ಮಕ್ಕಳು | ಸ್ಥಳೀಯ ಸಂಸ್ಥೆಗಳು, ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳು ನಡೆಸುತ್ತಿರುವ ಎಲ್ಲಾ ಶಾಲೆಗಳಲ್ಲಿ, ಶಾಲಾ ರಜಾ ದಿನಗಳನ್ನು ಹೊರತುಪಡಿಸಿ, ಪ್ರತಿ ದಿನ ಉಚಿತವಾಗಿ ಒಂದು ಮಧ್ಯಾಹ್ನದ ಬಿಸಿ ಊಟ | ಎಮ್‌ಡಿ ಎಂಎಸ್ | 450<br><br>700 | 12<br><br>20 | ಲೋವರ್ ಪ್ರಾಥಮಿಕ ಶಾಲೆ<br><br>ಅಪ್ಪರ್ ಪ್ರಾಥಮಿಕ ಶಾಲೆ |
| 4 | ಪ್ರಯೋಜನಕ್ಕೆ ಅರ್ಹರಿರುವ/ ಪ್ರಯೋಜನ ಪಡೆಯುತ್ತಿರುವ ಗರ್ಭಿಣಿ ಮಹಿಳೆಯರು ಮತ್ತು ಹಾಲುಣಿಸುವ ತಾಯಂದಿರು | ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ, ಕಂತುಗಳ ರೂಪದಲ್ಲಿ 6000/– ರೂ.ಗಳಿಗಿಂತ ಕಡಿಮೆ ಇರದ ಪ್ರಸೂತಿ ಪ್ರಯೋಜನಗಳು | ಎಂಬಿಎಸ್ | | | ಎಡಬ್ಲ್ಯುಸಿ |
| 8 | ಓಪಿಡಿಎಸ್, ಐಸಿಡಿಎಸ್ ಮತ್ತು ಎಮ್‌ಡಿಎಮ್‌ಎಸ್ ನಿಂದ ಅರ್ಹ ಪ್ರಮಾಣದ ಆಹಾರ ಧಾನ್ಯಗಳನ್ನು ಅಥವಾ ಊಟವನ್ನು ಪಡೆಯದಂಥವರಿಗೆ | ಆಹಾರ ಸುರಕ್ಷತೆ ಭತ್ಯೆ | | | | |

ಎನ್‌ಎಫ್‌ಎಸ್‌ಎ ಇದರ 3ನೇ ಪ್ರಕರಣವು, ಅರ್ಹ ಕುಟುಂಬಗಳ ಜನರು ಕಡಿಮೆ ಬೆಲೆಯಲ್ಲಿ ಟಿಪಿಡಿಎಸ್ ಪ್ರಯೋಜನಗಳನ್ನು ಪಡೆಯಲು ಅರ್ಹರಿರುವರು. ಇದು, ಗ್ರಾಮೀಣ ಪ್ರದೇಶಗಳ ಶೇಕಡ 75ರಷ್ಟು ಜನರು ಮತ್ತು ನಗರ ಪ್ರದೇಶಗಳ ಶೇಕಡ 50ರಷ್ಟು ಜನರು ಅರ್ಹರಿರುವರೆಂಬುದನ್ನು ಸಹ ಕಡ್ಡಾಯಪಡಿಸುತ್ತದೆ. ಇದು, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿದ ಮಾರ್ಗಸೂಚಿಗಳಿಗನುಸಾರ ಆಹಾರ ಧಾನ್ಯಗಳ ಅರ್ಹ ಪ್ರಮಾಣದ ಬದಲಾಗಿ ಗೋಧಿ ಹಿಟ್ಟನ್ನು ಒದಗಿಸಲು ರಾಜ್ಯ ಸರ್ಕಾರಕ್ಕೆ ಅವಕಾಶ ಕಲ್ಪಿಸಿದೆ.

ಐಸಿಡಿಎಸ್ ಮತ್ತು ಎಮ್‌ಡಿಎಮ್‌ಎಸ್ ಅಡಿಯಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಕೆಗೆ ಹೆಚ್ಚುವರಿಯಾಗಿ, ಪ್ರತಿಯೊಂದು ಶಾಲೆಯಲ್ಲಿ ಮತ್ತು ಎಡಬ್ಲ್ಯುಸಿಯಲ್ಲಿ ಅಡುಗೆ ಮಾಡಲು, ಕುಡಿಯುವ ನೀರಿಗಾಗಿ ಮತ್ತು ನೈರ್ಮಲ್ಯ ಸೌಲಭ್ಯಗಳು ಇರತಕ್ಕದ್ದೆಂದು 5ನೇ ಪ್ರಕರಣವು ಕಡ್ಡಾಯಗೊಳಿಸುತ್ತದೆ; ಪರಂತು, ಕೇಂದ್ರ ಸರ್ಕಾರವು ಹೊರಡಿಸಿದ ಮಾರ್ಗಸೂಚಿಗಳ ಅನುಸಾರ, ನಗರ ಪ್ರದೇಶಗಳಲ್ಲಿ, ಅಗತ್ಯವಿರುವೆಡೆಯಲ್ಲಿ, ಅಡುಗೆ ಮಾಡಲು ಕೇಂದ್ರೀಕೃತ ಅಡುಗೆ ಮನೆಗಳ ಸೌಲಭ್ಯಗಳನ್ನು ಸಹ ಬಳಸಿಕೊಳ್ಳಬಹುದು.

7ನೇ ಪ್ರಕರಣವು, ಹಕ್ಕುಗಳನ್ನು ಪಡೆಯುವುದಕ್ಕಾಗಿ ಯೋಜನೆಗಳ ಅನುಷ್ಠಾನವನ್ನು ಕಡ್ಡಾಯಪಡಿಸುತ್ತದೆ. ಕೇಂದ್ರ ಸರ್ಕಾರವು ನಿಯಮಿಸಿದಂತೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಡುವೆ, ವೆಚ್ಚ–ಹಂಚಿಕೆಯೂ ಒಳಗೊಂಡಂತೆ, ಮಾರ್ಗಸೂಚಿಗಳನುಸಾರ ಗರ್ಭಿಣಿ ಮಹಿಳೆಯರು, ಹಾಲುಣಿಸುವ ತಾಯಂದಿರು ಮತ್ತು ಮಕ್ಕಳ ಹಕ್ಕುಗಳ ಅಗತ್ಯಗಳನ್ನು ಭರಿಸುವ ಯೋಜನೆಗಳನ್ನು ರಾಜ್ಯ ಸರ್ಕಾರವು ಅನುಷ್ಠಾನಗೊಳಿಸತಕ್ಕದ್ದು ಎಂದು ಅದು ಉಪಬಂಧಿಸುತ್ತದೆ.

## ಆಹಾರ ಭತ್ಯೆಗಳು

8ನೇ ಪ್ರಕರಣವು, ಕೆಲವು ಸಂದರ್ಭಗಳಲ್ಲಿ ಆಹಾರ ಸುರಕ್ಷತಾ ಭತ್ಯೆಯನ್ನು ಪಡೆಯುವ ಹಕ್ಕನ್ನು ಕಡ್ಡಾಯಗೊಳಿಸುತ್ತದೆ. ಅರ್ಹ ವ್ಯಕ್ತಿಗಳಿಗೆ ಅರ್ಹ ಪ್ರಮಾಣದ ಆಹಾರ ಧಾನ್ಯಗಳನ್ನು ಮತ್ತು ಊಟವನ್ನು ಪೂರೈಸಲಾಗದಿದ್ದ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಸಮಯದೊಳಗೆ ಮತ್ತು ರೀತಿಯಲ್ಲಿ, ಪ್ರತಿಯೊಬ್ಬ ವ್ಯಕ್ತಿಗೆ ಸಂಬಂಧಪಟ್ಟ ರಾಜ್ಯ ಸರ್ಕಾರದಿಂದ ಲಭ್ಯವಿರುವ ಆಹಾರ ಸುರಕ್ಷತೆ ಭತ್ಯೆಯನ್ನು ಪಡೆಯಲು ಅಂಥ ವ್ಯಕ್ತಿಗಳು ಅರ್ಹರಿರುತ್ತಾರೆಂದು ಅದು ಉಪಬಂಧಿಸುತ್ತದೆ. ಈ ಉಪಬಂಧಗಳು ಆಹಾರ ಸುರಕ್ಷತೆ ಭತ್ಯೆ ನಿಯಮಗಳು, 2015ರ ಮೂಲಕ ನಿಯಂತ್ರಿತವಾಗುತ್ತವೆ.

ಆಹಾರ ಮತ್ತು ನಾಗರಿಕ ಪೂರೈಕೆ ಮಂತ್ರಾಲಯವು, ಟಿಪಿಡಿಎಸ್ ಅನುಷ್ಠಾನಕ್ಕೆ, ಶಿಕ್ಷಣ ಮಂತ್ರಾಲಯವು ಮಧ್ಯಾಹ್ನದ ಬಿಸಿ ಊಟ ಕಲ್ಪಿಸುವುದಕ್ಕೆ ಜವಾಬ್ದಾರವಾಗಿವೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯವು, ಅನುಕ್ರಮವಾಗಿ ಐಸಿಡಿಎಸ್ ಅನುಷ್ಠಾನಕ್ಕೆ ಮತ್ತು ಪ್ರಸೂತಿ ಪ್ರಯೋಜನ ಒದಗಿಸಲು ಜವಾಬ್ದಾರವಾಗಿವೆ.

### ಅರ್ಹ ಕುಟುಂಬಗಳನ್ನು ಗುರುತಿಸುವುದು

9ನೇ ಪ್ರಕರಣವು, ಟಿಪಿಡಿಎಸ್ ವ್ಯಾಪ್ತಿಯೊಳಗೆ ಜನರು ಬರುವಂತೆ ಮಾಡಲು ಉಪಬಂಧ ಕಲ್ಪಿಸುತ್ತದೆ. ಇದು, 3ನೇ ಪ್ರಕರಣದ (2)ನೇ ಉಪ–ಪ್ರಕರಣಕ್ಕೆ ಒಳಪಟ್ಟು, ಪ್ರತಿಯೊಂದು ರಾಜ್ಯಕ್ಕೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಟಿಪಿಡಿಎಸ್ ವ್ಯಾಪ್ತಿಯಲ್ಲಿ ಬರುವ ಶೇಕಡಾವಾರು ಪ್ರಮಾಣವನ್ನು ಕೇಂದ್ರ ಸರ್ಕಾರವು ನಿರ್ಧರಿಸತಕ್ಕದ್ದು ಹಾಗೂ ಇದರಲ್ಲಿ ಒಳಗೊಳ್ಳಬೇಕಾದ ವ್ಯಕ್ತಿಗಳ ಒಟ್ಟು ಸಂಖ್ಯೆಯನ್ನು, ಅದು ಸುಸಂಗತ ಅಂಕಿಸಂಖ್ಯೆಗಳನ್ನು ಪ್ರಕಟಿಸಿರುವ ಜನಗಣತಿಯ ಪ್ರಕಾರ ಅಂದಾಜು ಮಾಡಲಾದ ಜನಸಂಖ್ಯೆಯ ಆಧಾರದ ಮೇಲೆ ಲೆಕ್ಕ ಹಾಕತಕ್ಕದ್ದು ಎಂದು ಉಪಬಂಧಿಸುತ್ತದೆ.

10ನೇ ಪ್ರಕರಣವು, ಆದ್ಯತೆಯ ಕುಟುಂಬಗಳನ್ನು ಗುರುತಿಸಲು ರಾಜ್ಯ ಸರ್ಕಾರಗಳು ಮಾರ್ಗಸೂಚಿಗಳನ್ನು ಸಿದ್ಧಪಡಿಸಬೇಕೆಂದು ಉಪಬಂಧಿಸುತ್ತದೆ. ಇದು, ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ 9ನೇ ಪ್ರಕರಣದ ಅಡಿಯಲ್ಲಿ ನಿರ್ಧರಿಸಿದ ಅರ್ಹ ವ್ಯಕ್ತಿಗಳ ಸಂಖ್ಯೆಯಲ್ಲಿ, ರಾಜ್ಯ ಸರ್ಕಾರವು ಈ ಮುಂದಿನ ಕುಟುಂಬಗಳನ್ನು ಗುರುತಿಸತಕ್ಕದ್ದು ಎಂದು ಉಪಬಂಧ ಕಲ್ಪಿಸುತ್ತದೆ. ಎಂದರೆ:

ಎ) ಎಎವೈ ಯೋಜನೆಗೆ ಅನ್ವಯವಾಗುವ ಮಾರ್ಗ ಸೂಚಿಗಳಿಗನುಸಾರವಾಗಿ ಸದರಿ ಯೋಜನೆಯ ಅಡಿಯಲ್ಲಿ ಒಳಗೊಳ್ಳಬೇಕಾದ ಕುಟುಂಬಗಳು; ಮತ್ತು

ಬಿ) ಉಳಿದ ಕುಟುಂಬಗಳನ್ನು, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸುವ ಮಾರ್ಗಸೂಚಿಗಳಿಗನುಸಾರವಾಗಿ ಟಿಪಿಡಿಎಸ್ ವ್ಯಾಪ್ತಿಯಲ್ಲಿ ಆದ್ಯತೆಯ ಕುಟುಂಬ ಗಳಾಗಿ ಒಳಗೊಳ್ಳಬೇಕು.

ಅಷ್ಟೇ ಅಲ್ಲದೆ, ರಾಜ್ಯ ಸರ್ಕಾರವು, ಸಾಧ್ಯವಿದ್ದಷ್ಟೂ ಬೇಗನೆ, ಆದರೆ, ಈ ಉದ್ದೇಶಕ್ಕಾಗಿ ರೂಪಿಸಿದ ಮಾರ್ಗಸೂಚಿಗಳಗನುಸಾರ, ನೂರಾ ಎಂಭತ್ತು ದಿನಗಳಿಗೆ ಮೀರದ ಅವಧಿಯೊಳಗೆ ಅರ್ಹ ಕುಟುಂಬಗಳನ್ನು ಗುರುತಿಸತಕ್ಕದ್ದೆಂದು ಉಪಬಂಧ ಕಲ್ಪಿಸುತ್ತದೆ. ಇದು, ಅಂಥ ಕುಟುಂಬಗಳ ಗುರುತಿಸುವಿಕೆಯು ಪೂರ್ಣಗೊಳ್ಳುವವರೆಗೆ, ರಾಜ್ಯ ಸರ್ಕಾರವು, ಅಸ್ತಿತ್ವದಲ್ಲಿರುವ ಟಿಪಿಡಿಎಸ್ ವ್ಯಾಪ್ತಿಯಲ್ಲಿ ಆಹಾರ ಧಾನ್ಯಗಳ ಹಂಚಿಕೆ ಪಡೆಯುವುದನ್ನು ಮುಂದುವರಿಸತಕ್ಕದ್ದು ಎಂದೂ ಸಹ ಉಪಬಂಧಿಸುತ್ತದೆ. ಇದು, ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ 9ನೇ ಪ್ರಕರಣದ ಅಡಿಯಲ್ಲಿ ನಿರ್ಧರಿಸಿದಷ್ಟು ಸಂಖ್ಯೆಯ ಜನರು ಇರಬೇಕೆಂದು ಹಾಗೂ ಅರ್ಹ ಕುಟುಂಬಗಳ ಪಟ್ಟಿಯನ್ನು, ಈ ಉದ್ದೇಶಕ್ಕಾಗಿ ರೂಪಿಸಿದ ಮಾರ್ಗಸೂಚಿಗಳಿಗನುಸಾರ ರಾಜ್ಯ ಸರ್ಕಾರವು ನವೀಕರಿಸತಕ್ಕದ್ದು ಎಂದು ಉಪಬಂಧಿಸುತ್ತದೆ.

11ನೇ ಪ್ರಕರಣವು, ಅರ್ಹ ಕುಟುಂಬಗಳ ಪಟ್ಟಿಯ ಪ್ರಕಟಣೆ ಮತ್ತು ಪ್ರದರ್ಶಿಸುವುದಕ್ಕೆ ಅವಕಾಶ ಕಲ್ಪಿಸುತ್ತದೆ. ರಾಜ್ಯ ಸರ್ಕಾರಗಳು ಅರ್ಹ ಕುಟುಂಬಗಳ ಪಟ್ಟಿಯನ್ನು ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿರಿಸಬೇಕು ಮತ್ತು ಪ್ರದರ್ಶಿಸಬೇಕು ಎಂಬುದನ್ನು ಸಹ ಸದರಿ ಪ್ರಕರಣವು ಅಗತ್ಯಪಡಿಸುತ್ತದೆ.

### ಮಹಿಳಾ ಸಬಲೀಕರಣ

13ನೇ ಪ್ರಕರಣವು ಮಹಿಳಾ ಸಬಲೀಕರಣದ ಬಗ್ಗೆ ತಿಳಿಸುತ್ತದೆ. ಪಡಿತರ ಚೀಟಿಗಳನ್ನು ನೀಡುವ ಉದ್ದೇಶಕ್ಕಾಗಿ, ಹದಿನೆಂಟು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನ ಕುಟುಂಬದ ಅತ್ಯಂತ ಹಿರಿಯ ಮಹಿಳೆಯು, ಕುಟುಂಬದ ಮುಖ್ಯಸ್ಥಳಾಗಿರತಕ್ಕದ್ದು ಎಂದು ಉಪಬಂಧಿಸುತ್ತದೆ. ಇದಲ್ಲದೆ, ಅಂಥ ಮಹಿಳೆಯು ಅಥವಾ ಹದಿನೆಂಟು ವರ್ಷ ವಯಸ್ಸಿನ ಮಹಿಳೆಯು, ಯಾವುದೇ ಕಾಲದಲ್ಲಿ ಕುಟುಂಬದಲ್ಲಿ ಇರದಿದ್ದಲ್ಲಿ, ಆದರೆ 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಮಹಿಳಾ ಸದಸ್ಯೆ ಇದ್ದಲ್ಲಿ, ಆಗ ಕುಟುಂಬದ ಅತ್ಯಂತ ಹಿರಿಯ ಪುರುಷ ಸದಸ್ಯನು, ಪಡಿತರ ಚೀಟಿ ನೀಡುವ ಉದ್ದೇಶಕ್ಕಾಗಿ ಕುಟುಂಬದ ಮುಖ್ಯಸ್ಥನಾಗಿರತಕ್ಕದ್ದು ಹಾಗೂ ಮಹಿಳಾ ಸದಸ್ಯೆಯು 18 ವರ್ಷ ವಯಸ್ಸನ್ನು ತಲುಪಿದ ಕೂಡಲೇ, ಪುರುಷ ಸದಸ್ಯನ ಸ್ಥಾನದಲ್ಲಿ ಅಂಥ ಪಡಿತರ ಚೀಟಿಗಳಿಗೆ ಸಂಬಂಧಿಸಿದಂತೆ ಆಕೆಯು ಕುಟುಂಬದ ಮುಖ್ಯಸ್ಥಳಾಗತಕ್ಕದ್ದು ಎಂದು ಉಪಬಂಧಿಸುತ್ತದೆ.

### ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆ (ಜಿಆರ್ಎಂ)

ಆಂತರಿಕ ಕುಂದುಕೊರತೆ ಪರಿಹಾರ ವ್ಯವಸ್ಥೆಗಾಗಿ, ರಾಜ್ಯ ಸರ್ಕಾರವು ಜಿಲ್ಲಾ ಕುಂದುಕೊರತೆ ಪರಿಹಾರ ಅಧಿಕಾರಿಯು (ಡಿಜಿಆರ್ಒ) ಆಂತರಿಕ ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆಗಳನ್ನು ಮತ್ತು ರಾಜ್ಯ ಆಹಾರ ಆಯೋಗವನ್ನು (ಎಸ್ಎಫ್‌ಸಿ) ರಚಿಸಲು ಜಿಆರ್ಎಮ್ ಉಪಬಂಧ ಕಲ್ಪಿಸುತ್ತದೆ.

### ಗ್ರಾಮ ಮಟ್ಟದಲ್ಲಿ ಆಂತರಿಕ ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆ (ಐಜಿಆರ್ಎಮ್)

ಎನ್ಎಫ್ಎಸ್ಎ, 2013ರ 14ನೇ ಪ್ರಕರಣವು, ಐಜಿಆರ್ಎಮ್ ಸ್ಥಾಪನೆಗೆ ಉಪಬಂಧ ಕಲ್ಪಿಸುತ್ತದೆ. ಸದರಿ ಪ್ರಕರಣವು ಕರೆ ಕೇಂದ್ರಗಳ, ಸಹಾಯವಾಣಿಗಳ, ನೋಡಲ್ ಅಧಿಕಾರಿಗಳ ನಿಯೋಜನೆ ಅಥವಾ ನಿಯಮಿಸಬಹುದಾದಂಥ ಇತರ ವ್ಯವಸ್ಥೆಗಳಲ್ಲಿ ಒಳಗೊಂಡಂತೆ ಆಂತರಿಕ ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆಯನ್ನು ರಾಜ್ಯ ಸರ್ಕಾರಗಳು ಸ್ಥಾಪಿಸಬೇಕೆಂದು ಉಪಬಂಧಿಸುತ್ತದೆ.

### ಜಿಲ್ಲಾ ಮಟ್ಟದಲ್ಲಿ ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆ

15ನೇ ಪ್ರಕರಣವು, ಜಿಲ್ಲಾ ಕುಂದುಕೊರತೆ ಪರಿಹಾರ ಅಧಿಕಾರಿಯ ನೇಮಕಕ್ಕೆ ಉಪಬಂಧ ಕಲ್ಪಿಸುತ್ತದೆ. ಸದರಿ ಪ್ರಕರಣವು, ಅಧಿನಿಯಮದ ಅಡಿಯಲ್ಲಿನ ಹಕ್ಕುಗಳನ್ನು ದೊರಕಿಸಿಕೊಡುವುದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಉದ್ಭವಿಸುವ ಕುಂದುಕೊರತೆಗಳ ಪರಿಹಾರಕ್ಕಾಗಿ, ರಾಜ್ಯ ಸರ್ಕಾರವು, ಪ್ರತಿಯೊಂದು ಜಿಲ್ಲೆಗೆ ಡಿಜಿಆರ್ಒರನ್ನು ನೇಮಿಸತಕ್ಕದ್ದು ಅಥವಾ ನಿಯೋಜಿಸತಕ್ಕದ್ದು ಎಂದು ಉಪಬಂಧ ಕಲ್ಪಿಸುತ್ತದೆ. ಡಿಜಿಆರ್ಒವರು, ಹಕ್ಕುಳ್ಳ ಆಹಾರ ಧಾನ್ಯಗಳ ಅಥವಾ ಊಟ ವಿತರಣೆಯಾಗದಿರುವ ಸಂದರ್ಭದಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಪಟ್ಟ ದೂರುಗಳನ್ನು ಆಲಿಸಿ, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ

ಸಮಮಯದೊಳಗಾಗಿ ಅವುಗಳ ಪರಿಹಾರಕ್ಕೆ ಅವಶ್ಯಕ ಕ್ರಮ ತೆಗೆದುಕೊಳ್ಳತಕ್ಕದ್ದು ಹಾಗೂ ಯಾವ ಅಂಥ ಅಧಿಕಾರಿಯು ಹೊರಡಿಸಿದ ಆದೇಶದ ವಿರುದ್ಧ ಯಾವ ಅಧಿಕಾರಿಯ ಅಥವಾ ಪ್ರಾಧಿಕಾರಿಯ ವಿರುದ್ಧ ಕುಂದುಕೊರತೆ ಪರಿಹಾರದಿಂದ ತೃಪ್ತರಾಗದಿದ್ದ ಯಾರೇ ದೂರುದಾರನು ಎಸ್‌ಎಫ್‌ಸಿ ಮುಂದೆ ಅಂಥ ಆದೇಶದ ವಿರುದ್ಧ ಅಪೀಲು ಸಲ್ಲಿಸಬಹುದು.

**ರಾಜ್ಯ ಮಟ್ಟದಲ್ಲಿ ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆ**

16ನೇ ಪ್ರಕರಣವು, ಸ್ವತಂತ್ರ ಎಸ್‌ಎಫ್‌ಸಿ ಸ್ಥಾಪನೆಗೆ ಮತ್ತು ಅದು ನಿರ್ವಹಿಸಬೇಕಾದ ಪ್ರಕಾರ್ಯಗಳನ್ನು ಕುರಿತು ಉಪಬಂಧ ಕಲ್ಪಿಸುತ್ತದೆ. ಸದರಿ ಪ್ರಕರಣವು, ಪ್ರತಿಯೊಂದು ರಾಜ್ಯ ಸರ್ಕಾರವು ಎನ್‌ಎಫ್‌ಎಸ್‌ಎ, 2013ರ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವ ಮತ್ತು ಪುನರ್‌ಪರಿಶೀಲಿಸುವ ಉದ್ದೇಶಕ್ಕಾಗಿ ಒಂದು ಎಸ್‌ಎಫ್‌ಸಿಯನ್ನು ಸ್ಥಾಪಿಸತಕ್ಕದ್ದೆಂದು ಉಪಬಂಧ ಕಲ್ಪಿಸುತ್ತದೆ.

**ಆಹಾರ ಸುರಕ್ಷತೆಗಾಗಿ ಕೇಂದ್ರ ಸರ್ಕಾರದ ಹೊಣೆಗಾರಿಕೆಗಳು**

22ನೇ ಪ್ರಕರಣವು, ಕೇಂದ್ರ ತಂಡಕ್ಕೆ ಆಹಾರ ಧಾನ್ಯಗಳನ್ನು ಸಂಗ್ರಹಿಸಲು ಮತ್ತು ಟಿಪಿಡಿಎಸ್ ಅಡಿಯಲ್ಲಿ ರಾಜ್ಯ ಸರ್ಕಾರಗಳಿಗೆ ಅಗತ್ಯ ಪ್ರಮಾಣದ ಆಹಾರ ಧಾನ್ಯಗಳ ಹಂಚಿಕೆ ಮಾಡಲು, ಕೇಂದ್ರ ಸರ್ಕಾರದ ಮೇಲೆ ಹೊಣೆಗಾರಿಕೆಗಳನ್ನು ವಿಧಿಸುತ್ತದೆ.

23ನೇ ಪ್ರಕರಣವು, ಕೆಲವು ಸಂದರ್ಭಗಳಲ್ಲಿ ಅಥವಾ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಆಹಾರ ಧಾನ್ಯಗಳ ಕಡಿಮೆ ಪೂರೈಕೆಯ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಗಳಿಗೆ ನಿಧಿಗಳ ಹಂಚಿಕೆ ಮಾಡಲು ಉಪಬಂಧ ಕಲ್ಪಿಸುತ್ತದೆ.

**ಆಹಾರ ಸುರಕ್ಷತೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಹೊಣೆಗಾರಿಕೆಗಳು**

24ನೇ ಪ್ರಕರಣವು, ಪರಿಣಾಮಕಾರಿ ಅನುಷ್ಠಾನಕ್ಕೆ ಮತ್ತು ಆಹಾರ ಭದ್ರತೆಯನ್ನು ಸುನಿಶ್ಚಿತಗೊಳಿಸುವ ಯೋಜನೆಗಳ ಮೇಲ್ವಿಚಾರಣೆಗೆ ರಾಜ್ಯ ಸರ್ಕಾರವನ್ನು ಜವಾಬ್ದಾರಿಯನ್ನಾಗಿಸುತ್ತದೆ.

**ಆಹಾರ ಸುರಕ್ಷತೆಗೆ ಸಂಬಂಧಿಸಿದಂತೆ ಸ್ಥಳೀಯ ಪ್ರಾಧಿಕಾರಗಳ ಹೊಣೆಗಾರಿಕೆಗಳು**

25ನೇ ಪ್ರಕರಣವು, ಟಿಪಿಡಿಎಸ್ ಅನುಷ್ಠಾನಕ್ಕೆ ಉಪಬಂಧ ಕಲ್ಪಿಸುತ್ತದೆ. ಸದರಿ ಪ್ರಕರಣವು, ಸ್ಥಳೀಯ ಪ್ರಾಧಿಕಾರಗಳು, ಅವುಗಳಿಗೆ ಸಂಬಂಧಿಸಿದ ಪ್ರದೇಶಗಳಲ್ಲಿ ಅಧಿನಿಯಮದ ಸೂಕ್ತ ಅನುಷ್ಠಾನಕ್ಕೆ ಜವಾಬ್ದಾರವಾಗಿರತಕ್ಕದ್ದು ಹಾಗೂ ರಾಜ್ಯ ಸರ್ಕಾರಗಳು ಟಿಪಿಡಿಸ್ ಅನುಷ್ಠಾನದಲ್ಲಿ ಸ್ಥಳೀಯ ಪ್ರಾಧಿಕಾರಗಳಿಗೆ ಹೆಚ್ಚುವರಿ ಹೊಣೆಗಾರಿಕೆಗಳನ್ನು ಸಹ ವಹಿಸಬಹುದು ಎಂದು ಉಪಬಂಧ ಕಲ್ಪಿಸುತ್ತದೆ.

26ನೇ ಪ್ರಕರಣವು, ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರಗಳ ಸಚಿವಾಲಯಗಳ ಅಥವಾ ಇಲಾಖೆಗಳ ವಿವಿಧ ಯೋಜನೆಗಳ ಅನುಷ್ಠಾನದಲ್ಲಿ, ಸ್ಥಳೀಯ ಪ್ರಾಧಿಕಾರಗಳು, ಸಂಬಂಧಪಟ್ಟ ರಾಜ್ಯ ಸರ್ಕಾರಗಳು, ಅಧಿಸೂಚನೆಯ ಮೂಲಕ ಅವರಿಗೆ ವಹಿಸಬಹುದಾದಂಥ ಕರ್ತವ್ಯಗಳನ್ನು ಮತ್ತು ಹೊಣೆಗಾರಿಕೆಗಳನ್ನು ನಿರ್ವಹಿಸಲು ಜವಾಬ್ದಾರವಾಗಿರತಕ್ಕದ್ದೆಂದು ಉಪಬಂಧ ಕಲ್ಪಿಸುತ್ತದೆ.

**ಪಾರದರ್ಶಕತೆ ಮತ್ತು ಉತ್ತರದಾಯಿತ್ವ**

27ನೇ ಪ್ರಕರಣವು, ದಾಖಲೆಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಇಟ್ಟಿರಬೇಕೆಂದು ಮತ್ತು ಸಾರ್ವಜನಿಕರು ಅವುಗಳನ್ನು ಪರಿಶೀಲಿಸಲು ಮುಕ್ತವಾಗಿರಿಸಬೇಕೆಂದು ಉಪಬಂಧಿಸುತ್ತದೆ.

28ನೇ ಪ್ರಕರಣವು, ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು ಅಥವಾ ಯಾವುದೇ ಇತರ ಪ್ರಾಧಿಕಾರವು ಅಥವಾ ಸಂಸ್ಥೆಯು, ಎಫ್‌ಪಿಎಸ್, ಟಿಪಿಡಿಎಸ್ ಹಾಗೂ ಇತರ ಕ್ಷೇಮಾಭಿವೃದ್ಧಿ ಯೋಜನೆಗಳ ಕಾರ್ಯನಿರ್ವಹಣೆ ಬಗ್ಗೆ, ರಾಜ್ಯ ಸರ್ಕಾರವು ಅಧಿಕೃತಗೊಳಿಸಿದಂತೆ ಮತ್ತು ಕೇಂದ್ರ ಸರ್ಕಾರವು ಪ್ರಾಧಿಕೃತಗೊಳಿಸಿದರೆ, ಸ್ವತಂತ್ರ ಏಜನ್ಸಿಯು ನಿಯತಕಾಲಿಕವಾಗಿ ಸಾಮಾಜಿಕ ಪರಿಶೋಧನೆ ನಡೆಸತಕ್ಕದ್ದು ಎಂದು ತಿಳಿಸುತ್ತದೆ.

29ನೇ ಪ್ರಕರಣವು ಪಾರದರ್ಶಕತೆ ಮತ್ತು ಟಿಪಿಡಿಎಸ್‌ನ ಸೂಕ್ತ ಕಾರ್ಯನಿರ್ವಹಣೆಯನ್ನು ಹಾಗೂ ಅಂಥ ವ್ಯವಸ್ಥೆಯಲ್ಲಿನ ಕಾರ್ಯನಿರ್ವಹಣೆಗಳ ಉತ್ತರದಾಯಿತ್ವವನ್ನು ಸುನಿಶ್ಚಿತಗೊಳಿಸಲು ವಿವಿಧ ಹಂತಗಳಲ್ಲಿ, ರಾಜ್ಯ ಸರ್ಕಾರವು ಜಾಗೃತ ಸಮಿತಿಗಳನ್ನು (ವಿಸಿಗಳನ್ನು) ಸ್ಥಾಪಿಸುವುದಕ್ಕೆ ಉಪಬಂಧ ಕಲ್ಪಿಸುತ್ತದೆ. ಸದರಿ ಪ್ರಕರಣವು ವಿಸಿಗಳ ಕಾರ್ಯನಿರ್ವಹಣೆಗಳನ್ನು ಸಹ ನಿರ್ದಿಷ್ಟಪಡಿಸುತ್ತದೆ.

**ಆಹಾರ ಸುರಕ್ಷತೆಯನ್ನು ಮುಂದುವರಿಸುವುದಕ್ಕೆ ಸಂಬಂಧಿಸಿದ ಉಪಬಂಧಗಳು**

30ನೇ ಪ್ರಕರಣವು, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು, ಅಧಿನಿಯಮದ ಉಪಬಂಧಗಳನ್ನು ಮತ್ತು ನಿರ್ದಿಷ್ಟಪಡಿಸಿದ ಹಕ್ಕುಗಳು ದೊರಕುವಂತೆ ಮಾಡುವುದಕ್ಕೆ ಸಂಬಂಧಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ, ದುರ್ಬಲ ವರ್ಗಗಳ, ವಿಶೇಷವಾಗಿ ದೂರದ ಪ್ರದೇಶಗಳ ಮತ್ತು ಸಂಪರ್ಕಿಸಲು ಕಷ್ಟಕರವಾಗಿರುವ ಇತರ ಪ್ರದೇಶಗಳಲ್ಲಿನ, ಗುಡ್ಡಗಾಡು ಮತ್ತು ಬುಡಕಟ್ಟು ಪ್ರದೇಶಗಳ ಜನರ ಆಹಾರ ಸುರಕ್ಷತೆಯನ್ನು ಸುನಿಶ್ಚಿತಗೊಳಿಸುವುದಕ್ಕೆ, ಅವರ ಅವಶ್ಯಕತೆಗಳ ಕಡೆಗೆ ವಿಶೇಷ ಗಮನ ಹರಿಸತಕ್ಕದ್ದು ಎಂದು ಉಪಬಂಧ ಕಲ್ಪಿಸುತ್ತದೆ.

31ನೇ ಪ್ರಕರಣವು, ಆಹಾರ ಮತ್ತು ಪೌಷ್ಟಿಕತೆ ಸುರಕ್ಷತೆಯನ್ನು ಮುಂದುವರಿಸಿಕೊಂಡು ಹೋಗುವುದನ್ನು ತ್ವರಿತಗೊಳಿಸುವುದಕ್ಕೆ ತೆಗೆದುಕೊಳ್ಳಬೇಕಾದ ಕ್ರಮಗಳಿಗೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತದೆ. ಸದರಿ ಪ್ರಕರಣವು, ಆಹಾರ ಮತ್ತು ಪೌಷ್ಟಿಕತೆಯ ಸುರಕ್ಷತೆಯನ್ನು ಮುಂದುವರಿಸಿಕೊಂಡು ಹೋಗುವ ತ್ವರಿತಗೊಳಿಸುವ ಉದ್ದೇಶಕ್ಕಾಗಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಅನುಸೂಚಿ–IIIರಲ್ಲಿ ಹೇಳಿದ ಉದ್ದೇಶಗಳ ಈಡೇರಿಕೆಗಾಗಿ ಹಂತ ಹಂತವಾಗಿ ಶ್ರಮಿಸತಕ್ಕದ್ದು ಎಂದು ಉಪಬಂಧ ಕಲ್ಪಿಸುತ್ತದೆ.

## ‘ಹಸಿವು ಮತ್ತು ಅಪೌಷ್ಟಿಕತೆ ಮುಕ್ತ ಗ್ರಾಮ ಪಂಚಾಯಿತಿ’ಯನ್ನು ಸುನಿಶ್ಚಿತಗೊಳಿಸುವಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ ಮತ್ತು ಹೊಣೆಗಾರಿಕೆಗಳು

**(ಹಸಿವು ಮುಕ್ತ ಮತ್ತು ಅಪೌಷ್ಟಿಕತೆ ಮುಕ್ತ ಗ್ರಾಮ ಪಂಚಾಯತ್)**

***“ನೀವು ನೋಡಿರಬಹುದಾದಂಥ ಅತ್ಯಂತ ಬಡ ಮತ್ತು ದುರ್ಬಲ ಪುರುಷನ (ಮಹಿಳೆಯ) ಮುಖವನ್ನು ನೆನಪಿಸಿಕೊಳ್ಳಿ, ಮತ್ತು ನಿಮ್ಮನ್ನು ನೀವು ಕೇಳಿಕೊಳ್ಳಿ, ನೀವು ಯೋಜಿಸುತ್ತಿರುವ ಕ್ರಮವು ಆತನಿಗೆ (ಆಕೆಗೆ) ಯಾವುದೇ ರೀತಿಯಲ್ಲಿ ಉಪಯೋಗವಾಗುವಂತಿದೆಯೇ. ಇದು, ಆತನ (ಆಕೆಯ) ಜೀವನ ಮತ್ತು ಉದ್ದೇಶದ ಮೇಲೆ ಆತನಿಗೆ (ಆಕೆಗೆ) ಹಿಡಿತವನ್ನು ಪುನಃ ದೊರಕಿಸಿಕೊಡುವುದೇ?, ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಅದು, ಹಸಿದ ಮತ್ತು ಆಧ್ಯಾತ್ಮ ಪಿಪಾಸುಗಳಾದ ಲಕ್ಷಾಂತರ ಜನರಿಗೆ ಸ್ವರಾಜ್ (ಸ್ವಾತಂತ್ರ್ಯ) ಕಡೆಗೆ ಒಯ್ಯುವುದೇ?***

***– ಮಹಾತ್ಮ ಗಾಂಧಿ***

ಎನ್‌ಎಫ್‌ಎಸ್‌ಎ–2013 ಇದು, ಎಲ್ಲಾ ದುರ್ಬಲ ಜನರಿಗೆ ಸಾಕಷ್ಟು ಪ್ರಮಾಣದಲ್ಲಿ ಗುಣಮಟ್ಟದ ಆಹಾರವನ್ನು ಮತ್ತು ಪೌಷ್ಟಿಕಾಂಶಗಳನ್ನು ಸುನಿಶ್ಚಿತಪಡಿಸುವಂಥ ಉಪಬಂಧಗಳ ಮತ್ತು ಮುಖ್ಯವಾಗಿ ಯೋಜನೆಗಳ ಅನುಷ್ಠಾನದಲ್ಲಿ ಸ್ಥಳೀಯ ಪ್ರಾಧಿಕಾರಗಳ ಹೊಣೆಗಾರಿಕೆಯನ್ನು ನಿರ್ದಿಷ್ಟಪಡಿಸುತ್ತದೆ. ಎನ್‌ಎಫ್‌ಎಸ್‌ಎ, 2013ರ 25ನೇ ಮತ್ತು 26ನೇ ಪ್ರಕರಣಗಳು, ಸದರಿ ಅಧಿನಿಯಮದ ಅಡಿಯಲ್ಲಿನ ಎಲ್ಲ ಯೋಜನೆಗಳ ಅನುಷ್ಠಾನದಲ್ಲಿ ಪಂಚಾಯತ್ ರಾಜ್ಯ ಸಂಸ್ಥೆಗಳೂ ಒಳಗೊಂಡಂತೆ ಸ್ಥಳೀಯ ಪ್ರಾಧಿಕಾರಗಳಿಗೆ ಹೊಣೆಗಾರಿಕೆಗಳನ್ನು ನಿಗದಿಪಡಿಸುತ್ತದೆ.

25ನೇ ಪ್ರಕರಣದ ಅನುಷ್ಠಾನವನ್ನು ಬಲಪಡಿಸುವಲ್ಲಿ, 2015ರ ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆ (ನಿಯಂತ್ರಣ) ಆದೇಶವು, ಅರ್ಹ ಕುಟುಂಬಗಳನ್ನು ಗುರುತಿಸುವುದು, ಆಹಾರ ಧಾನ್ಯಗಳನ್ನು ಸಾಗಿಸುವುದು, ರಾಜ್ಯಗಳು ಆಹಾರ ಧಾನ್ಯಗಳನ್ನು ವಿತರಿಸುವುದು, ಎಫ್‌ಪಿಎಸ್ ಕಾರ್ಯಾಚರಣೆ ನಡೆಸುವುದು, ಪಾರದರ್ಶಕತೆ ಮತ್ತು ಜಿಪಿ/ಪಿಆರ್‌ಐಗಳನ್ನು ಒಳಗೊಳ್ಳಲು ಎಫ್‌ಪಿಎಸ್ ಮಾಲೀಕನ ಹೊಣೆಗಾರಿಕೆ ಮತ್ತು ಎಫ್‌ಪಿಎಸ್ ಲೈಸೆನ್ಸ್ ನೀಡಿಕೆಯಲ್ಲಿ ಆದ್ಯತೆಯಂಥ ಸಮಗ್ರ ವಿಷಯಗಳಿಗೆ ಉಪಬಂಧ ಕಲ್ಪಿಸುತ್ತದೆ.

25ನೇ ಪ್ರಕರಣವು ಟಿಪಿಡಿಎಸ್‌ಗಳು ಒಳಗೊಂಡಿದ್ದರೆ, 26ನೇ ಪ್ರಕರಣದಲ್ಲಿ ಐಸಿಡಿಎಸ್, ಎಂಬಿಎಸ್ ಮತ್ತು ಎಂಡಿಎಂಎಸ್‌ನಂಥ ಎನ್‌ಎಫ್‌ಎಸ್‌ಎ, 2013ರ ಅಡಿಯಲ್ಲಿನ ಇತರ ಎಲ್ಲಾ ಅತ್ಯಾವಶ್ಯಕ ಆಹಾರ–ಆಧಾರಿತ ಯೋಜನೆಗಳನ್ನು, ತಮ್ಮ ತಮ್ಮ ಪ್ರದೇಶಗಳಲ್ಲಿ ಇರುವ ಹಕ್ಕುಳ್ಳವರಿಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕೆ ಸ್ಥಳೀಯ ಪ್ರಾಧಿಕಾರಗಳನ್ನು ಹೊಣೆಗಾರರನ್ನಾಗಿಸುತ್ತದೆ.

**ಕೋಷ್ಟಕ 4:** ಗ್ರಾಮ ಪಂಚಾಯಿತಿಯು ಏನು ಮಾಡಬಹುದು: ಎನ್‌ಎಫ್‌ಎಸ್‌ಎ, 2013ರ ಅಡಿಯಲ್ಲಿನ ಉಪಬಂಧಗಳ ಮತ್ತು ಯೋಜನೆಗಳ ಅನುಷ್ಠಾನ

| | |
|---|---|
| **ಯೋಜನೆ** | ❖ ಎನ್‌ಎಫ್‌ಎಸ್‌ಎ, 2013ರ; ಟಿಪಿಡಿಎಸ್ (ನಿಯಂತ್ರಣ) ಆದೇಶ; ಐಸಿಡಿಎಸ್; ಎಂಬಿಎಸ್; ಎಂಡಿಎಂಎಸ್; ಮತ್ತು ಪೌಷ್ಟಿಕತೆ–ಸಂವೇದಿ ಯೋಜನೆಗಳ ಅನುಷ್ಠಾನದ ಸ್ಥಿತಿಗತಿಗಳ ಅಧ್ಯಯನ ಮತ್ತು ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಯೋಜನೆಯಲ್ಲಿ (ಜಿಪಿಡಿಪಿ) ವಾಸ್ತವಿಕ ಅನುಷ್ಠಾನಕ್ಕೆ ಯೋಜಿಸುವುದು.<br>❖ ವಿಕೇಂದ್ರೀಕೃತ ಯೋಜನೆ ಮತ್ತು ಪುನರ್‌ಪರಿಶೀಲನಾ ಸಭೆಗಳಲ್ಲಿ, ಸ್ಥಳೀಯ ಸಮಿತಿಗಳು ಮತ್ತು ಸಿಬಿಓಗಳು ತೊಡಗಿಕೊಳ್ಳುವುದು.<br>❖ ಐಸಿಡಿಎಸ್ ಮತ್ತು ಎಮ್‌ಡಿಎಮ್‌ಎಸ್ ಅನುಷ್ಠಾನದ ವಾರ್ಷಿಕ ಪರಿಶೀಲನಾ ಸಭೆಗಳಲ್ಲಿ ಪಾಲ್ಗೊಳ್ಳುವುದು.<br>❖ ಎನ್‌ಎಫ್‌ಎಸ್‌ಎ, 2013 ಮತ್ತು ಅದಕ್ಕೆ ಸಂಬಂಧಿಸಿದ ಯೋಜನೆಗಳು ಕುರಿತು ಪಂಚಾಯಿತಿಗಳ ಕಾರ್ಯನಿರ್ವಾಹಕರಿಗೆ, ಮಹಿಳಾ ಸದಸ್ಯೆಯರೂ ಒಳಗೊಂಡಂತೆ ಚುನಾಯಿತ ಪ್ರತಿನಿಧಿಗಳಿಗೆ, ಗ್ರಾಮ ಪಂಚಾಯಿತಿಯು ಹಸಿವು ಮತ್ತು ಅಪೌಷ್ಟಿಕತೆ ಮುಕ್ತವಾಗುವಂತೆ ಮಾಡುವಲ್ಲಿ, ನಿಯತಕಾಲಿಕವಾಗಿ ತರಬೇತಿ ನೀಡುವುದು. ಯೋಜನೆಯ ಸುಗಮ ಅನುಷ್ಠಾನವನ್ನು ಸುನಿಶ್ಚಿತಪಡಿಸಲು ಪ್ರತಿಯೊಬ್ಬ ಸದಸ್ಯನಿಗೆ ವಾರ್ಡ್‌ಗಳನ್ನು ಹಂಚಿಕೆ ಮಾಡಬಹುದು.<br>❖ ಅಡುಗೆ ಕೋಣೆ ಮತ್ತು ಗೋದಾಮಿನ ಸುರಕ್ಷಿತ ನಿರ್ವಹಣೆಗಾಗಿ ತರಬೇತಿ ನೀಡುವುದು. |
| **ಅನುಷ್ಠಾನಕ್ಕೆ ಅನುಕೂಲ ಕಲ್ಪಿಸುವುದು** | ❖ ಬಿಪಿಎಲ್ ಅಡಿಯಲ್ಲಿರುವ ಎಎವೈ ಮತ್ತು ಎಪಿಎಲ್, ನಿರ್ಗತಿಕರು, ಒಂಟಿ ಮಹಿಳೆಯರು/ ವಿಧವೆಯರು/ ವೃದ್ಧರು, ವಿಶೇಷ ಚೇತನ ವ್ಯಕ್ತಿಗಳು, ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಅಲ್ಪಸಂಖ್ಯಾತ ವ್ಯಕ್ತಿಗಳು, ಮುಂತಾದ ಅರ್ಹ ಹಾಗೂ ಆದ್ಯತಾ ಕುಟುಂಬಗಳ ದತ್ತಾಂಶ ನಿರ್ವಹಣೆ.<br>❖ ಶಾಲಾ ಅಭಿವೃದ್ಧಿ ನಿರ್ವಹಣಾ ಸಮಿತಿ (ಎಸ್‌ಡಿಎಮ್‌ಸಿ) ಮುಖಾಂತರ: ಶಾಲಾ ಮಟ್ಟದಲ್ಲಿ ಎಲ್ಲಾ ದಾಖಲೆಗಳನ್ನು ನಿರ್ವಹಿಸುವುದು (ಆಹಾರ ಧಾನ್ಯಗಳು, ದಾಸ್ತಾನು ರಿಜಿಸ್ಟರ್, ಗುಣಮಟ್ಟ ನಿರ್ವಹಣೆ ರಿಜಿಸ್ಟರ್, ವಿದ್ಯಾರ್ಥಿ ದಾಖಲಾತಿ ರಿಜಿಸ್ಟರ್, ಸಂದರ್ಶಕರ ದಾಖಲೆ, ರುಚಿಗೆ ಸಂಬಂಧಿಸಿದ ರಿಜಿಸ್ಟರ್, ನಗದು ಪುಸ್ತಕ, ಇತ್ಯಾದಿ).<br>❖ ಪಂಚಾಯಿತಿಗೆ ಸೇರಿದ ಜಮೀನಿನಲ್ಲಿ ಲಭ್ಯವಿದ್ದ ಎಡಬ್ಲ್ಯುಸಿಗೆ ಸ್ಥಳ ಮತ್ತು ಐಸಿಡಿಎಸ್ ಅಡಿಯಲ್ಲಿ ಮಕ್ಕಳ–ಸ್ನೇಹಿ ಎಡಬ್ಲ್ಯುಸಿಗಳ ನಿರ್ಮಾಣ. |
| | ❖ ಪ್ರತಿಯೊಂದು ಕಂದಾಯ ಗ್ರಾಮದಲ್ಲಿ ಲೋವರ್ ಮತ್ತು ಅಪ್ಪರ್ ಪ್ರಾಥಮಿಕ ಶಾಲೆಗಳ ಮತ್ತು ಪಂಚಾಯತ್ ಕೇಂದ್ರಸ್ಥಾನದಲ್ಲಿ ಕನಿಷ್ಠಪಕ್ಷ ಒಂದು ಪ್ರೌಢ ಶಾಲೆ ನಿರ್ಮಾಣಕ್ಕಾಗಿ ಸ್ಥಳ. (ಎಂಡಿಎಂಎಸ್)<br>❖ ಎಡಬ್ಲ್ಯುಸಿಗಳ ಮತ್ತು ಶಾಲೆಗಳ ನಿರ್ಮಾಣಕ್ಕಾಗಿ, ಎಂಜಿಎನ್‌ಆರ್‌ಇಜಿಎ ಅಥವಾ ಇತರ ಲಭ್ಯ ಯೋಜನೆಗಳನ್ನು ಸೇರಿಸುವುದು (ಐಸಿಡಿಎಸ್ ಮತ್ತು ಎಮ್‌ಡಿಎಮ್‌ಎಸ್)<br>❖ ಕುಡಿಯುವ ನೀರಿನ ಸೌಲಭ್ಯ ಸಹಿತ, ಸೂಕ್ತ ಅಡುಗೆ ಕೋಣೆ ಮತ್ತು ಉಗ್ರಾಣ ಕೊಠಡಿಗಳು ಮತ್ತು ಎಲ್ಲಾ ಎಡಬ್ಲ್ಯುಸಿ ಮತ್ತು ಶಾಲೆಗಳಲ್ಲಿ ಎಲ್ಲಾ ಸೌಲಭ್ಯಗಳು (ಐಸಿಡಿಎಸ್ ಮತ್ತು ಎಮ್‌ಡಿಎಮ್‌ಎಸ್)<br>❖ ಎಡಬ್ಲ್ಯುಸಿಗಳಲ್ಲಿ ಮಕ್ಕಳ–ಸ್ನೇಹಿ ಶೌಚಾಲಯಗಳ ಕಾರ್ಯನಿರ್ವಹಣೆ ಮತ್ತು ಶಾಲಾ ಕಟ್ಟಡಗಳಲ್ಲಿ, ಬಾಲಕರಿಗಾಗಿ ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳು (ಐಸಿಡಿಎಸ್ ಮತ್ತು ಎಮ್‌ಡಿಎಮ್‌ಎಸ್)<br>❖ ಎಲ್ಲಾ ಗರ್ಭಿಣಿ ಮಹಿಳೆಯರು ಮತ್ತು ಹಾಲುಣಿಸುವ ತಾಯಂದಿರು ಅಗತ್ಯ ದಸ್ತಾವೇಜುಗಳನ್ನು ನೀಡಿ, ಅಂಗನವಾಡಿ ಕೇಂದ್ರಗಳಲ್ಲಿ ದೊರೆಯುವ ಪ್ರಸೂತಿ ಸೌಲಭ್ಯಗಳಿಗಾಗಿ ನೋಂದಣಿ ಮಾಡಿಕೊಳ್ಳಲು ಬ್ಯಾಂಕ್ ಖಾತೆಗಳನ್ನು ತೆರೆಯುವುದು. (ಎಮ್‌ಬಿಎಸ್)<br>❖ ಆಧಾರ್ ಲಿಂಕ್ ಮತ್ತು ಬಯೋಮೆಟ್ರಿಕ್ ಸಹಿತ ಬೆಂಬಲಿತ ಎಲ್ಲ ಅರ್ಹ ವ್ಯಕ್ತಿಗಳಿಗೆ/ ಕುಟುಂಬಗಳಿಗೆ ಆದ್ಯತಾ ಕುಟುಂಬ ಕಾರ್ಡ್‌ಗಳನ್ನು ನೀಡುವುದು (ಟಿಪಿಡಿಎಸ್)<br>❖ ಗ್ರಾಮ ಪಂಚಾಯತ್ ಸದಸ್ಯರು, ಸಮುದಾಯ–ಆಧಾರಿತ ಯೋಜನೆಯಲ್ಲಿ ತೊಡಗಿಕೊಳ್ಳಲು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಸೇವೆಗಳನ್ನು ಒದಗಿಸುವುದರ ಉಸ್ತುವಾರಿ ಮೇಲ್ವಿಚಾರಣೆ ಮಾಡಲು ಮತ್ತು ಸಮನ್ವಯಗೊಳಿಸುವಲ್ಲಿ ಉತ್ತೇಜನ ನೀಡುವುದು.<br>❖ ಶಾಲೆಗಳಲ್ಲಿ ಅಡುಗೆ ಮಾಡುವ ಏಜನ್ಸಿಯ ಆಯ್ಕೆಯಲ್ಲಿ ಸಕ್ರಿಯ ಪಾತ್ರ ವಹಿಸುವುದು (ಎಮ್‌ಡಿಎಮ್‌ಎಸ್).<br>❖ ಸಮಯಕ್ಕೆ ಸರಿಯಾಗಿ ಆಹಾರ ಧಾನ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಬ್ಲಾಕ್ ಮಟ್ಟದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವುದು ಮತ್ತು ಸಾಕಷ್ಟು ಪ್ರಮಾಣದ ಆಹಾರ ಧಾನ್ಯಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು (ಟಿಪಿಡಿಎಸ್, ಎಮ್‌ಡಿಎಮ್‌ಎಸ್ ಮತ್ತು ಐಸಿಡಿಎಸ್) |
| **ದಾಖಲಾತಿ** | ❖ ಯಾವುದೇ ತಾರತಮ್ಯವಿಲ್ಲದೆ ಟಿಪಿಡಿಎಸ್ ಅಡಿ ಕುಟುಂಬಗಳು<br>❖ ಯಾವುದೇ ತಾರತಮ್ಯವಿಲ್ಲದೆ ಐಸಿಡಿಎಸ್ ಅಡಿಯಲ್ಲಿ ಮಕ್ಕಳು, ಗರ್ಭಿಣಿ ಮಹಿಳೆಯರು ಮತ್ತು ಕಿಶೋರಿ ಬಾಲಕಿಯರು<br>❖ ಯಾವುದೇ ತಾರತಮ್ಯವಿಲ್ಲದೆ ಎಂಡಿಎಂಎಸ್ ಅಡಿಯಲ್ಲಿ ಬರುವ ಮಕ್ಕಳು |

| | |
|---|---|
| **ಸುನಿಶ್ಚಿತಪಡಿಸಿ ಕೊಳ್ಳುವುದು** | **ಟಿಪಿಡಿಎಸ್:**<br>❖ ಯಾವುದೇ ತಾರತಮ್ಯವಿಲ್ಲದೆ, ಮುಖ್ಯವಾಗಿ ದುರ್ಬಲ ವರ್ಗಗಳಿಗೆ ಸೇರಿದ ಎಲ್ಲಾ ಹಕ್ಕುದಾರರನ್ನು ಸೇರಿಸಿಕೊಳ್ಳುವುದು.<br>❖ ವಾರ್ಡ್‌ನಲ್ಲಿನ ಕುಟುಂಬಗಳ ಸಂಖ್ಯೆಯ ಅನುಪಾತಕ್ಕನುಸಾರವಾಗಿ ಸಾಕಷ್ಟು ಸಂಖ್ಯೆಯ ನ್ಯಾಯ ಬೆಲೆ ಅಂಗಡಿಗಳನ್ನು (ಎಫ್‌ಪಿಎಸ್) ಸ್ಥಾಪಿಸುವುದು.<br>❖ ನ್ಯಾಯ ಬೆಲೆ ಅಂಗಡಿಯು, ಅಂಗಡಿ ಹೊರಗೆ ಎಲ್ಲಾ ಬಾಬುಗಳ ಮತ್ತು ವಿ.ಸಿ. ಸಮಿತಿ ಸದಸ್ಯರ ಹೆಸರುಗಳನ್ನು ಪ್ರದರ್ಶಿಸುವುದು.<br>❖ ಯಾವುದೇ ತಾರತಮ್ಯವಿಲ್ಲದೆ, ಎಲ್ಲಾ ಹಕ್ಕುದಾರರಿಗಾಗಿ ಸಕಾಲದಲ್ಲಿ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯುವುದು ಮತ್ತು ಧಾನ್ಯಗಳನ್ನು ಒದಗಿಸುವುದು.<br>❖ ಎಲ್ಲಾ ನ್ಯಾಯ ಬೆಲೆ ಅಂಗಡಿಗಳಲ್ಲಿ ಸಾಕಷ್ಟು ಪ್ರಮಾಣದ ಮತ್ತು ಗುಣಮಟ್ಟದ ಸಬ್ಸಿಡಿ ದರಗಳ ಆಹಾರ ಧಾನ್ಯಗಳ ಲಭ್ಯತೆ.<br>❖ ನ್ಯಾಯ ಬೆಲೆ ಅಂಗಡಿಗಳ ಮೂಲಕ ಪಡಿತರದ ನಿಷ್ಪಕ್ಷಪಾತ ವಿತರಣೆ ಮತ್ತು ನ್ಯಾಯ ಬೆಲೆ ಅಂಗಡಿಗಳಲ್ಲಿ ಯಾವುದೇ ದುರುಪಯೋಗ ಅಥವಾ ಪದಾರ್ಥಗಳನ್ನು ಅನ್ಯ ಉದ್ದೇಶಕ್ಕಾಗಿ ಸಾಗಿಸುವುದರ ಮೇಲೆ ನಿಗಾ ವಹಿಸುವುದು<br>❖ ನ್ಯಾಯ ಬೆಲೆ ಅಂಗಡಿ (ಎಫ್‌ಪಿಎಸ್) ಮಟ್ಟದಲ್ಲಿ ನಿಯಮಾನುಸಾರ ಜಾಗೃತ ಸಮಿತಿ ಸದಸ್ಯರ ಸಂಖ್ಯೆ (ವಿ.ಸಿ.)<br>❖ ನ್ಯಾಯ ಬೆಲೆ ಅಂಗಡಿ (ಇಪಿಎಸ್) ಮಟ್ಟದಲ್ಲಿ ಜಾಗೃತ ಸಮಿತಿಯ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಚುರುಕುಗೊಳಿಸುವುದು, ನೋಡಿಕೊಳ್ಳುವುದು ಮತ್ತು ಮೇಲ್ವಿಚಾಣೆ ಮಾಡುವುದು.<br>❖ ವಿಪತ್ತಿನ ಸಮಯದಲ್ಲಿ ಅವಶ್ಯಕತೆ ಉಳ್ಳವರಿಗೆ ಪಡಿತರ ವಿತರಣೆ.<br><br>**ಐಸಿಡಿಎಸ್ ಮತ್ತು ಎಮ್‌ಬಿಎಸ್**<br>❖ ಯಾವುದೇ ತಾರತಮ್ಯವಿಲ್ಲದೆ ಮುಖ್ಯವಾಗಿ ದುರ್ಬಲ ವರ್ಗಗಳಿಗೆ ಸೇರಿದ ಎಲ್ಲಾ ಹಕ್ಕುದಾರರ ಸೇರ್ಪಡೆ.<br>❖ ಐಸಿಡಿಎಸ್ ಪೂರಕ ಪೋಷಕ ಆಹಾರ ವ್ಯಾಪ್ತಿಯೊಳಗೆ 6 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಎಲ್ಲಾ ಮಕ್ಕಳು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರು, ಕಿಶೋರಿ ಬಾಲಕಿಯರು ಒಳಗೊಳ್ಳುವಂತೆ ಮಾಡುವುದು.<br>❖ 6 ವರ್ಷದ ಒಳಗಿನ ಮಕ್ಕಳ ಬೆಳವಣಿಗೆಯ ಮೇಲೆ ನಿಗಾ ಇರಿಸುವುದು.<br>❖ 3 ವರ್ಷ ಕೆಳಗಿನ ಎಲ್ಲಾ ಮಕ್ಕಳಿಗೆ ಟಿಹೆಚ್‌ಆರ್.<br>❖ ಕಿಶೋರಿ ಬಾಲಕಿಯರಿಗೆ, ಗರ್ಭಿಣಿ ಮಹಿಳೆಯರಿಗೆ ಮತ್ತು ಹಾಲುಣಿಸುವ ತಾಯಂದಿರಿಗೆ ಟಿಹೆಚ್‌ಆರ್/ಬಿಸಿ ಊಟ.<br>❖ ಎಲ್ಲಾ ನಿವಾಸಿಗಳ ಮತ್ತು ಸಮುದಾಯಗಳ ಮಕ್ಕಳಿಗೆ ಮತ್ತು ಮಕ್ಕಳಿಗೆ ಅವಕಾಶವಿರುವಷ್ಟು ಸಾಕಷ್ಟು ಸಂಖ್ಯೆಯ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸುವುದು.<br>❖ ಅಂಗನವಾಡಿ ಕೇಂದ್ರಗಳಲ್ಲಿ ಗುಣಮಟ್ಟದ ಮೂಲಸೌಕರ್ಯ ಮತ್ತು ತರಬೇತಿ ಪಡೆದ ಸಿಬ್ಬಂದಿ.<br>❖ ಅಂಗನವಾಡಿ ಕೇಂದ್ರಗಳನ್ನು ಮಕ್ಕಳ–ಸ್ನೇಹಿಯನ್ನಾಗಿಸಲು ಸಾಕಷ್ಟು ಸೌಲಭ್ಯಗಳನ್ನು ಕಲ್ಪಿಸುವುದು.<br>❖ ಅಂಗನವಾಡಿ ಕೇಂದ್ರಗಳಲ್ಲಿ ಅಥವಾ ಹೊರಗೆ, ಯೋಜನೆಗಳ ಮತ್ತು ಉಪಬಂಧಗಳ ಹಾಗೂ ಹಕ್ಕುಗಳ ಬಗ್ಗೆ ಮಾಹಿತಿ ಪ್ರದರ್ಶಿಸುವುದು.<br>❖ ಅಂಗನವಾಡಿ ಕೇಂದ್ರಗಳಲ್ಲಿ ದೈನಿಕ/ ಮಾಸಿಕ ಖಾದ್ಯಗಳ ಪಟ್ಟಿ (ಮೆನು) ಪ್ರದರ್ಶಿಸುವುದು.<br>❖ ಅಂಗನವಾಡಿ ಕೇಂದ್ರಗಳಲ್ಲಿ ಸುರಕ್ಷಿತ ಕುಡಿಯುವ ನೀರಿನ ಸಂಗ್ರಹ, ಸ್ವಚ್ಛತೆ, ನೈರ್ಮಲ್ಯ, ಶೌಚಾಲಯಗಳ ನಿರ್ವಹಣೆ.<br>❖ ಅಂಗನವಾಡಿ ಕೇಂದ್ರಗಳಲ್ಲಿ ಮತ್ತು ಶಾಲೆಗಳಲ್ಲಿ ಬಾಲಕಿಯರ ಮತ್ತು ಸೌಲಭ್ಯವಂಚಿತ ಮಕ್ಕಳ ದಾಖಲಾತಿ ಮತ್ತು ಹಾಜರಾತಿ.<br>❖ ಮಕ್ಕಳಿಗೆ, ಕಿಶೋರಿ ಬಾಲಕಿಯರಿಗೆ ಮತ್ತು ಗರ್ಭಿಣಿಯರಿಗೆ ಮತ್ತು ಹಾಲುಣಿಸುವ ತಾಯಂದಿರಿಗೆ ಒಣ ಆಹಾರ ಪಡಿತರ, ಬಿಸಿಯಾಗಿ ಸಿದ್ಧಪಡಿಸಿದ ಊಟದ ವಿತರಣೆ, ರೋಗ ಪ್ರತಿರಕ್ಷಣೆ, ಪೌಷ್ಟಿಕತೆ ಪೂರಕಗಳು.<br>❖ ವಾರ್ಡ್‌ಗಳಲ್ಲಿರುವ ಎಲ್ಲಾ ಗರ್ಭಿಣಿ ಮಹಿಳೆಯರ ಮತ್ತು ಹಾಲುಣಿಸುವ ತಾಯಂದಿರ ಹೆಸರುಗಳನ್ನು, ಅಂಗನವಾಡಿ ಕೇಂದ್ರಗಳಲ್ಲಿ ನೋಂದಾಯಿಸುವುದು ಮತ್ತು ಐಸಿಡಿಎಸ್ ಹಾಗೂ ಎಂಬಿಎಸ್ ಅಡಿಯಲ್ಲಿ ಪೌಷ್ಟಿಕತೆ ಮತ್ತು ಹಣಕಾಸು ಸೇವೆಗಳ ಲಭ್ಯತೆ.<br>❖ ಎಸ್‌ಎಬಿಎಲ್‌ಎ ಮುಖಾಂತರ ಶಾಲೆಯ ಹೊರಗಿನ ಕಿಶೋರಿ ಬಾಲಕಿಯರಿಗೆ ಪೌಷ್ಟಿಕ ಆಹಾರಗಳ ಪ್ರಯೋಜನವು ಲಭ್ಯವಾಗುವಂತೆ ಮಾಡುವುದು, ಬಲಪಡಿಸುವುದು ಮತ್ತು ವಿಸ್ತರಿಸುವುದು.<br>❖ ಬಾಲಕಿಯರಲ್ಲಿಯ ಅಪೌಷ್ಟಿಕತೆ, ಆರೋಗ್ಯ, ಶಿಕ್ಷಣ ಮತ್ತು ಅಭಿವೃದ್ಧಿಗೆ ಅಡ್ಡಿಯುಂಟು ಮಾಡುವಂಥ ತಾರತಮ್ಯದಾಯಕ ಸಾಮಾಜಿಕ ಆಚರಣೆಗಳಿಂದ ಅವರನ್ನು ಮುಖ್ಯವಾಗಿ ಸಂರಕ್ಷಿಸಬೇಕಾದ ಅಗತ್ಯತೆ.<br>❖ ಅಂಗನವಾಡಿ ಕೇಂದ್ರಗಳಲ್ಲಿನ ಕಾರ್ಯನಿರ್ವಹಣೆ ಮತ್ತು ಸೇವಾ ಗುಣಮಟ್ಟದ ನಿಯತ ಮೇಲ್ವಿಚಾರಣೆ.<br>❖ ನಿಯಮಗಳನುಸಾರ, ಬಾಲ ವಿಕಾಸ ಸಮಿತಿಯನ್ನು (ಚೈಲ್ಡ್ ಡೆವಲಪ್‌ಮೆಂಟ್ ಕಮಿಟಿ) ಸ್ಥಾಪಿಸುವುದು ಮತ್ತು ಸಕ್ರಿಯಗೊಳಿಸುವುದು.<br>❖ ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕತೆ ಸಮಿತಿಗಳಲ್ಲಿ (ವಿಹೆಚ್‌ಎಸ್‌ಎನ್‌ಸಿಗಳಲ್ಲಿ) ಪ್ರಮುಖ ಹಿತಾಸಕ್ತಿದಾರರ ಪಾಲ್ಗೊಳ್ಳುವಿಕೆಯನ್ನು ಸುನಿಶ್ಚಿತಗೊಳಿಸಲು ನಿಗಾವಹಿಸುವುದು ಮತ್ತು ಮೇಲ್ವಿಚಾರಣೆ ನಡೆಸುವುದು ಹಾಗೂ ಗ್ರಾಮ ಆರೋಗ್ಯ ಮತ್ತು ಪೌಷ್ಟಿಕತೆ ದಿನಾಚರಣೆ (ವಿಹೆಚ್‌ಎನ್‌ಡಿ). |

| | |
|---|---|
| | ❖ ಅಂಗನವಾಡಿ ಕೇಂದ್ರದ ಮಟ್ಟದಲ್ಲಿ, ಸಮುದಾಯ–ಆಧಾರಿತ ನಿರ್ವಹಣೆಯೊಂದಿಗೆ ಸಂಪರ್ಕಿಸುವ ಮೂಲಕ, ತೀವ್ರ ಗಂಭೀರ ಅಪೌಷ್ಟಿಕತೆಯನ್ನು ಹೆಚ್ಚಿನ ಕಾಳಜಿ, ವೈದ್ಯೋಪಚಾರಕ್ಕಾಗಿ ವ್ಯವಸ್ಥೆ ಮಾಡುವುದು ಮತ್ತು ಸೌಲಭ್ಯ ಆಧಾರಿತ ನಿರ್ವಹಣೆ ಮಾಡುವುದು.<br><br>**ಎಮ್‌ಡಿಎಮ್‌ಎಸ್:**<br><br>❖ ಯಾವುದೇ ತಾರತಮ್ಯವಿಲ್ಲದೆ, ಮುಖ್ಯವಾಗಿ ದುರ್ಬಲ ವರ್ಗಗಳಿಗೆ ಸೇರಿದ ಶಾಲೆಗಳಲ್ಲಿನ 6 ವರ್ಷ ಮೇಲ್ಪಟ್ಟ ಎಲ್ಲಾ ಮಕ್ಕಳ, ಬಾಲಕರ ಮತ್ತು ಬಾಲಕಿಯರ ಸೇರ್ಪಡೆ.<br>❖ ಶಾಲೆಗಳಲ್ಲಿ ಎಸ್‌ಡಿಎಮ್‌ಸಿಯ ಕಾರ್ಯನಿರ್ವಹಣೆ.<br>❖ ಶಾಲೆಯಲ್ಲಿ ಸಾಗಿಸಬಹುದಾದ ನೀರಿನ ಲಭ್ಯತೆ.<br>❖ ಸೂಚಕ ಖಾದ್ಯ ಪಟ್ಟಿಯನುಸಾರ, ಆಹಾರ ಖಾದ್ಯ ಪಟ್ಟಿಯ ಮತ್ತು ಆಹಾರ ತಯಾರಿಸುವ ಪಟ್ಟಿಯ ಸಿದ್ಧತೆಯಲ್ಲಿ ಬೆಂಬಲ/ ಮಾರ್ಗಸೂಚಿ.<br>❖ ಸ್ಥಳೀಯವಾಗಿ ಲಭ್ಯವಿರುವ ಮತ್ತು ಜನರು ಒಪ್ಪಬಹುದಾದ ಹಾಗೂ ಮಕ್ಕಳು ಇಷ್ಟಪಡುವ ಪದಾರ್ಥಗಳನ್ನಾಧರಿಸಿ ಆಹಾರವನ್ನು ಸಿದ್ಧಪಡಿಸುವುದಕ್ಕಾಗಿ ತೆಗೆದುಕೊಳ್ಳಬೇಕಾದ ಕ್ರಮಗಳು.<br>❖ ಇಲಾಖೆಯು ಸಲಹೆ ನೀಡುವ ಆಹಾರ ಖಾದ್ಯ ಪಟ್ಟಿ ಮತ್ತು ನಿಯಮಿಸಬಹುದಾದ ಆಹಾರ ಗುಣಮಟ್ಟವನ್ನನುಸರಿಸುವುದು.<br>❖ ಹಸಿರು ಆಧಾರಿತ ಖಾದ್ಯಗಳನ್ನು ಆಹಾರ ಖಾದ್ಯ ಪಟ್ಟಿಯಲ್ಲಿ ಸೇರಿಸುವುದು.<br>❖ ಸ್ವೀಕರಿಸಿದ ಆಹಾರ ಧಾನ್ಯಗಳ ಗುಣಮಟ್ಟದ ವಿವರಗಳನ್ನು ಮತ್ತು ಹಂಚಿಕೆಗಳಿಗೆ ಪ್ರತಿಯಾಗಿ ಸ್ವೀಕರಿಸಿದ ದಿನಾಂಕವನ್ನು ದಾಖಲಿಸುವುದು.<br>❖ ಆಹಾರ ಧಾನ್ಯಗಳನ್ನು ತೂಕ ಮಾಡುವ ಮೂಲಕ ರವಾನಿಸಿದ ಆಹಾರ ಧಾನ್ಯಗಳ ಹಂಚಿಕೆಯನ್ನು ಸ್ಥಿರೀಕರಿಸುವುದು. ಯಾವುದೇ ವಿಷಯವಿದ್ದರೆ, ಅವುಗಳನ್ನು ಸಕಾಲಕ್ಕೆ ವರದಿ ಮಾಡುವುದು.<br>❖ ಎಮ್‌ಡಿಎಮ್‌ಎಸ್ ಅಡಿಯಲ್ಲಿ ಗುಣಮಟ್ಟ ಮತ್ತು ಸಂರಕ್ಷಣಾ ಅಂಶಗಳಿಗೆ ಸಂಬಂಧಿಸಿದಂತೆ ಸಚಿವಾಲಯವು ನೀಡಿದ ಎಲ್ಲಾ ಮಾರ್ಗಸೂಚಿಗಳನ್ನು ಅನುಸರಿಸುವುದು.<br>❖ ಸ್ಥಳದಲ್ಲಿ ಮತ್ತು ಶಾಲೆಗಳಲ್ಲಿ ಸೂಕ್ತ ಅಗ್ನಿ ಶಾಮಕ ವ್ಯವಸ್ಥೆಗಳನ್ನು, ಕಾರ್ಯನಿರ್ವಹಿಸುತ್ತಿರುವ ಅಗ್ನಿ ಶಾಮಕಗಳೊಂದಿಗೆ ಉತ್ತಮವಾಗಿ ಅಳವಡಿಸಿರುವುದು.<br>❖ ಸೂಚಿಸಲಾದ ಮಾನದಂಡಗಳ ಪ್ರಕಾರ, ಪರೀಕ್ಷಾ ಪ್ರಯೋಗಾಲಯಗಳು ಮತ್ತು ಪ್ರಾಧಿಕಾರಗಳು ಅಗತ್ಯಪಡಿಸಿದಂತೆ ಆಹಾರ ಮಾದರಿಗಳು.<br>❖ ಜಿಲ್ಲಾ ಪ್ರಾಧಿಕಾರಗಳ ಸಮನ್ವಯದೊಂದಿಗೆ ಯಾವುದೇ ಅನಪೇಕ್ಷಿತ ಘಟನೆ/ ಆರೋಗ್ಯ ಸಂಬಂಧಿ ವಿಷಯಗಳ ಸಂದರ್ಭದಲ್ಲಿ ಆಹಾರ ಮಾದರಿಗಳನ್ನು ಪರೀಕ್ಷಿಸುವುದು.<br>❖ ಅಡುಗೆ ಕೋಣೆ ಮತ್ತು ಉಗ್ರಾಣ ತರಗತಿ ಕೊಠಡಿಗಳಿಂದ ದೂರ, ಆದರೆ ಸುರಕ್ಷಿತ ಮತ್ತು ಸುಲಭಲಭ್ಯ ಅಂತರದಲ್ಲಿರಬೇಕು ಹಾಗೂ ಹುಲ್ಲಿನ ಛಾವಣಿ ಹೊದಿಸಿರಬಾರದು ಅಥವಾ ಸುಲಭವಾಗಿ ಬೆಂಕಿ ಹೊತ್ತಿಕೊಳ್ಳುವಂತಿರಬಾರದು.<br>❖ 5 ವರ್ಷಗಳಿಗೊಮ್ಮೆ ಬದಲಾಯಿಸುವ ಅಗತ್ಯವಿರುವಂಥ ಅಡುಗೆ ಸಾಧನಗಳನ್ನು ಗುರುತಿಸುವುದು.<br>❖ ಯೋಜನೆಗಳ ವಿವಿಧ ಕಾರ್ಯಚಟುವಟಿಕೆಗಳಿಗಾಗಿ ಸರದಿ ಆಧಾರದ ಮೇಲೆ ಗ್ರಾಮ ಪಂಚಾಯಿತಿಗಳ/ ಎಸ್‌ಡಿಎಮ್‌ಸಿಯ ಬೆಂಬಲದಿಂದ ಸಮುದಾಯ ಸದಸ್ಯರನ್ನು ತೊಡಗಿಸಿಕೊಳ್ಳುವುದು.<br>❖ ಶಿಕ್ಷಕರೊಂದಿಗೆ ಎಸ್‌ಡಿಎಮ್‌ಸಿ ಸದಸ್ಯ/ ಶಾಲೆಗೆ ಹೋಗುವ ಮಗುವಿನ ಪಾಲಕರು, ಸರದಿ ಆಧಾರದ ಮೇಲೆ ಆಹಾರದ ರುಚಿ ನೋಡಬೇಕು.<br>❖ ಸಮುದಾಯ ಸದಸ್ಯರು ನೀಡಿದ ಅಭಿಪ್ರಾಯಗಳಿಗೆ ಪ್ರೋತ್ಸಾಹ ನೀಡಬೇಕು ಮತ್ತು ಅವರ ಅಭಿಪ್ರಾಯಗಳನ್ನು ದಾಖಲಿಸಲು ರಿಜಿಸ್ಟರನ್ನು ನಿರ್ವಹಿಸಬೇಕು.<br>❖ ಪ್ರತಿಯೊಬ್ಬರಿಗೂ ಕಾಣುವ ಸ್ಥಳದಲ್ಲಿ ಈ ಮುಂದಿನ ಮಾಹಿತಿಯನ್ನು ಪೂರ್ವನಿಯಮಿತವಾಗಿ ಬಹಿರಂಗಪಡಿಸುವುದು:<br>✓ ಮಕ್ಕಳ ಉಪಲಬ್ಧಿಗಳು (ಆಹಾರ ಮಾನದಂಡಗಳು)<br>✓ ಸ್ವೀಕರಿಸಿದ ಆಹಾರ ಧಾನ್ಯಗಳ ಗುಣಮಟ್ಟ ಮತ್ತು ಸ್ವೀಕೃತಿ ದಿನಾಂಕ<br>✓ ಬಳಸಿದ ಆಹಾರ ಧಾನ್ಯಗಳ ಗುಣಮಟ್ಟ<br>✓ ಖರೀದಿಸಿದ ಇತರ ಪದಾರ್ಥಗಳು<br>✓ ಮಧ್ಯಾಹ್ನದ ಬಿಸಿ ಊಟ ಲಭ್ಯತೆ ಇರುವ ಮಕ್ಕಳ ಸಂಖ್ಯೆ<br>✓ ದೈನಂದಿನ ಆಹಾರ ಖಾದ್ಯ ಪಟ್ಟಿ<br>✓ ಮೇಲ್ವಿಚಾರಣೆ ಮತ್ತು ನಿಗಾ ವಹಿಸುವುದಕ್ಕಾಗಿ ಸಮುದಾಯ ಸದಸ್ಯರ ಸರದಿ ಪಟ್ಟಿ<br><br>❖ ತಪಾಸಣಾ ವರದಿಯ ನಿರ್ಣಯಗಳನ್ನಾಧರಿಸಿದ ಅನುಸರಣಾ ಕ್ರಮ.<br>❖ ಮಧ್ಯಾಹ್ನದ ಬಿಸಿ ಊಟವನ್ನು ಕೇಂದ್ರೀಕೃತ ಏಜನ್ಸಿ ಮೂಲಕ ಏರ್ಪಾಡು ಮಾಡಿದ ಸಂದರ್ಭದಲ್ಲಿ, ಅವರ ಅಡುಗೆ ಕೋಣೆಗಳ ಮತ್ತು ಕೈಗೊಂಡ ಪ್ರಕ್ರಿಯೆಗಳ ನಿಯತ ಪರಿಶೀಲನೆ ಕೈಗೊಳ್ಳುವುದು ಮತ್ತು ಮೇಲ್ವಿಚಾರಣೆ ಮಾಡುವುದು.<br>❖ ಆರೋಗ್ಯ ಸಮೀಕ್ಷೆಗಳಿಗೆ ಸಂಪರ್ಕಿಸಿದ ಕಾಲಿಕ ಪೌಷ್ಟಿಕತೆ ಸಮೀಕ್ಷೆಯನ್ನು ನಿಯತವಾಗಿ ನಡೆಸುವುದು. |

| | |
|---|---|
| **ನಿರ್ಮಾಣ** | ❖ ಪೌಷ್ಟಿಕ ಆಹಾರ ಶಿಕ್ಷಣಕ್ಕಾಗಿ ಮಾಹಿತಿ, ಶಿಕ್ಷಣ ಮತ್ತು ಸಮುದಾಯ (ಐಇಸಿ) ಕಾರ್ಯತಂತ್ರ/ ವಿಷಯ ಸಾಮಗ್ರಿಗಳು (ಎನ್‌ಎಫ್‌ಎಸ್‌ಎ 2013, ಯೋಜನೆಗಳು ಮತ್ತು ಸಂಬಂಧಪಟ್ಟ ಸಾಮಾಜಿಕ ಕ್ಷೇಮಾಭಿವೃದ್ಧಿ ಯೋಜನೆಗಳು).<br>❖ ನೀರು, ಸ್ವಚ್ಛತೆ ಮತ್ತು ನೈರ್ಮಲ್ಯ, ಮುಂಜಾಗರೂಕ ಆರೋಗ್ಯ ಪಾಲನೆ, ಬಾಲಕಿಯರ ಆರೋಗ್ಯ ಮತ್ತು ಶಿಕ್ಷಣ, ಬಾಲ್ಯ ವಿವಾಹ, ಸ್ಥಳೀಯ ಆಹಾರ ಧಾನ್ಯ ಬಳಕೆ ಕಾರ್ಯತಂತ್ರ ಕುರಿತ ಐಇಸಿ.<br>❖ ನಿರ್ಗತಿಕರಿಗೆ ಮತ್ತು ಹಿರಿಯ ನಾಗರಿಕರಿಗೆ ಭರವಸೆದಾಯಕ ಪೌಷ್ಟಿಕ ಆಹಾರಕ್ಕೆ ಸಂಬಂಧಿಸಿದಂತೆ ಸಮುದಾಯ ಬೆಂಬಲಿತ ವ್ಯವಸ್ಥೆ |
| **ಉತ್ತೇಜನ** | ❖ ಸಮುದಾಯಗಳಲ್ಲಿ ಸುಧಾರಣೆಗೊಳ್ಳುತ್ತಿರುವ ಪೌಷ್ಟಿಕತೆಯ ಸ್ಥಿತಿಗತಿಗೆ ಸಂಬಂಧಿಸಿದಂತೆ ಎದೆ ಹಾಲು ಕುಡಿಯುತ್ತಿರುವ ಶಿಶುಗಳು (ಐಸಿಡಿಎಸ್).<br>❖ ಅಂಗನವಾಡಿ ಕೇಂದ್ರಗಳಲ್ಲಿ ಮತ್ತು ಶಾಲಾ ಅಡುಗೆ ಕೊಠಡಿಗಳಲ್ಲಿ ಸ್ಥಳೀಯವಾಗಿ ಲಭ್ಯವಿರುವ ಪೌಷ್ಟಿಕ ಆಹಾರ (ಐಸಿಡಿಎಸ್ ಮತು ಎಮ್‌ಡಿಎಮ್‌ಎಸ್).<br>❖ ಜಾಗೃತಿ ಆಂದೋಲನಗಳು, ರ್‍ಯಾಲಿಗಳು, ಜಾಥಾಗಳು, ಗೊಂಬೆ ಮತ್ತು ಚಲನಚಿತ್ರ ಪ್ರದರ್ಶನಗಳನ್ನು ಆಯೋಜಿಸುವ ಮೂಲಕ, ಇಲಾಖೆಯ ಸಹಯೋಗದೊಂದಿಗೆ ಎದೆ ಹಾಲು ಕುಡಿಸುವುದು, ಶೈಶವಾವಸ್ಥೆಯಲ್ಲಿ ಪಾಲನೆ, ಬಾಲಕಿಯರ ಶಿಕ್ಷಣ, ಬಾಲ್ಯ ವಿವಾಹಗಳ ಪ್ರತಿಕೂಲ ಪರಿಣಾಮ ಮತ್ತು ತತ್ಸಂಬಂಧಿ ವಿಷಯಗಳನ್ನು ಕುರಿತು ಅರಿವು ಮೂಡಿಸುವುದು (ಐಸಿಡಿಎಸ್).<br>❖ ಮುಂಚೂಣಿ ಕಾರ್ಯನಿರ್ವಾಹಕರೊಂದಿಗೆ ನಿಯತ ಸಭೆಗಳನ್ನು ನಡೆಸುವುದು ಮತ್ತು ಸಮುದಾಯಗಳಲ್ಲಿ ಮಾಸಿಕ ಪೌಷ್ಟಿಕತೆ ಮತ್ತು ಆರೋಗ್ಯ ಶಿಬಿರಗಳನ್ನು ಆಯೋಜಿಸುವುದು (ಐಸಿಡಿಎಸ್).<br>❖ ಪೌಷ್ಟಿಕ ಆಹಾರದ ಪ್ರಾಮುಖ್ಯತೆ, ರಕ್ತಹೀನತೆಯ ದುಷ್ಪರಿಣಾಮಗಳು, ನೈರ್ಮಲ್ಯ ಹಾಗೂ ತಾಯಿ ಮತ್ತು ಮಕ್ಕಳ ಸ್ವಚ್ಛತೆ ಕಾಪಾಡುವುದು ಮತ್ತು ಲಸಿಕೆ ಹಾಕಿಸುವುದರ ಬಗ್ಗೆ ವಿವರಿಸಲು ಪ್ರತಿ ಗ್ರಾಮದಲ್ಲಿ ***ಪೋಷಣ್*** ಪಂಚಾಯಿತಿಗಳನ್ನು ನಡೆಸುವುದು. (ಐಸಿಡಿಎಸ್).<br>❖ ಪ್ರತಿಯೊಂದು ಸರ್ಕಾರಿ ಶಾಲೆಯಲ್ಲಿ ***ಪೋಷಣ್*** ಮೇಲ್ವಿಚಾರಣೆ ಮತ್ತು ಪ್ರತಿಯೊಂದು ಅಂಗನವಾಡಿ ಕೇಂದ್ರದಲ್ಲಿ ***ಪೋಷಣ್ ಗಾರ್ಡನ್***. (ಐಸಿಡಿಎಸ್)<br>❖ ಮಧ್ಯಾಹ್ನದ ಬಿಸಿ ಊಟ, ಸಮತೋಲಿತ ಮತ್ತು ಪೋಷಕಾಂಶಯುಕ್ತ ಆಹಾರಗಳ ಪ್ರಾಮುಖ್ಯತೆ, ಕೈಗೊಳ್ಳಬೇಕಾದ ಸುರಕ್ಷಾ ಮತ್ತು ಸ್ವಚ್ಛತಾ ಕ್ರಮಗಳು, ಸಮುದಾಯ ಪಾಲ್ಗೊಳ್ಳುವಿಕೆ ಇತ್ಯಾದಿ ಬಗ್ಗೆ ವಿವಿಧ ಹಂತಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಬೇಕು. (ಎಮ್‌ಡಿಎಮ್‌ಎಸ್)<br>❖ ಸಾಧ್ಯವಿರುವಲ್ಲಿ ಪಂಚಾಯತ್ ಮಟ್ಟದಲ್ಲಿ ಮನೆ ಮನೆ ಭೇಟಿ ಕೈಗೊಳ್ಳುವುದು. (ಐಸಿಡಿಎಸ್, ಎಮ್‌ಡಿಎಮ್‌ಎಸ್)<br>❖ **ಗ್ರಾಮ ಸಭೆಯಲ್ಲಿ** ಗ್ರಾಮಗಳ ಟಿಪಿಡಿಎಸ್, ಅಂಗನವಾಡಿ ಕೇಂದ್ರಗಳಲ್ಲಿ ಐಸಿಡಿಎಸ್, ಎಂಬಿಎಸ್, ಶಾಲೆಗಳಲ್ಲಿ ಎಮ್‌ಡಿಎಮ್‌ಎಸ್ ಬಗ್ಗೆ ಮಾಹಿತಿ ಪ್ರಸಾರ ಮಾಡುವುದು, ಅದು ಮಕ್ಕಳ/ ವಿದ್ಯಾರ್ಥಿಗಳ ಸಂಖ್ಯೆಯನ್ನು, ಅವರ ಆರೋಗ್ಯ ಮಟ್ಟ, ಸಾಧನೆಗಳು, ಗುಣಮಟ್ಟ, ಇತ್ಯಾದಿಯನ್ನು ಒಳಗೊಳ್ಳುವುದು<br>❖ ಗ್ರಾಮ ಮಟ್ಟದಲ್ಲಿ ***ಆಧಾರ್ ಅದಾಲತ್*** (ಟಿಪಿಡಿಎಸ್).<br>❖ ಅಂಗನವಾಡಿ ಕೇಂದ್ರಗಳಲ್ಲಿ ಮತ್ತು ಶಾಲೆಗಳಲ್ಲಿ ಪೌಷ್ಟಿಕ ಆಹಾರ ಗಾರ್ಡನ್‌ಗಳು ಹಾಗೂ ಗ್ರಾಮಗಳ ಸಮುದಾಯ ಧಾನ್ಯ ಬ್ಯಾಂಕ್‌ಗಳು.<br>❖ ಉತ್ಪಾದಕತೆ ಮತ್ತು ಉತ್ಪಾದನೆ ಹೆಚ್ಚಿಸುವಂಥ, ಮೊದಲಿದ್ದ ಕೃಷಿ ಪದ್ಧತಿಗಳ ಅನುಷ್ಠಾನಕ್ಕಾಗಿ, ಪರಿಸರ ವ್ಯವಸ್ಥೆಯ ನಿರ್ವಹಣೆಗಾಗಿ ಮತ್ತು ಆಹಾರ ಪೂರೈಕೆಯಲ್ಲಿ ನೆರವಿಗಾಗಿ ಗ್ರಾಮ ಸಮುದಾಯವನ್ನು ಸಂವೇದನಾಶೀಲವನ್ನಾಗಿಸುವುದು.<br>❖ ಭೂಮಿ ಮತ್ತು ಮಣ್ಣಿನ ಗುಟಣಮಟ್ಟವನ್ನು ಸುಧಾರಿಸುವ ಮೊದಲಿದ್ದ ಕೃಷಿ ಪದ್ಧತಿಗಳ ಅನುಷ್ಠಾನ ಹಾಗೂ ಹಸಿವು ಮತ್ತು ಅಪೌಷ್ಟಿಕತೆಯನ್ನು ಪರಿಹರಿಸುವಲ್ಲಿ ಈ ಕ್ರಮಗಳು ಹೇಗೆ ಸಹಾಯಕವಾಗಿವೆ ಎಂಬುದನ್ನು ಕುರಿತು ಸಂಶೋಧನೆ.<br>❖ ಚಾಲ್ತಿಯಲ್ಲಿರುವ ಉಪಕ್ರಮಗಳ ಮುಖಾಂತರ ಮಹಿಳಾ ಸಬಲೀಕರಣಕ್ಕೆ ಪ್ರೋತ್ಸಾಹ ನೀಡುವುದು – ಎನ್‌ಎಮ್‌ಇಡಬ್ಲ್ಯು, ಎನ್‌ಆರ್‌ಎಲ್‌ಎಮ್, ಇತ್ಯಾದಿ.<br>❖ ಮಹಿಳಾ ಸ್ವ–ಸಹಾಯ ಗುಂಪುಗಳ (ಎಸ್‌ಹೆಚ್‌ಜಿಗಳ)/ ಒಕ್ಕೂಟಗಳ ತರಬೇತಿ ಮುಖಾಂತರ ಸ್ಥಳೀಯವಾಗಿ ಲಭ್ಯವಿರುವ ಪೌಷ್ಟಿಕ ಆಹಾರಗಳ ಸಂಸ್ಕರಣೆ ಮತ್ತು ಇಂಥ ಪೌಷ್ಟಿಕ ಆಹಾರವನ್ನು ಸಮುದಾಯಕ್ಕಾಗಿ ಬಳಸುವುದು. |

| | |
|---|---|
| **ಸಂಯೋಜನೆ** | ❖ ಮಹಿಳೆಯರ, ಪುರುಷರ, ಬಾಲಕಿಯರ ಮತ್ತು ಬಾಲಕರ ವೈವಿಧ್ಯಮಯ ಆಹಾರ ಸುರಕ್ಷತೆ ಮತ್ತು ಪೌಷ್ಟಿಕತೆಯ ಅವಶ್ಯಕತೆಗಳನ್ನು ಈಡೇರಿಸಲು ಪ್ರಮುಖ ಕಾರ್ಯಕ್ರಮಗಳ ಮತ್ತು ಸಹಭಾಗಿತ್ವದ ಸ್ಥಳೀಯ ಯೋಜನೆಯನ್ನು ಸಂಯೋಜಿಸುವುದಕ್ಕಾಗಿ ಮತ್ತು ಸಮನ್ವಯಗೊಳಿಸುವುದಕ್ಕಾಗಿ ಬಡತನ ನಿರ್ಮೂಲನಾ ಉಪಕ್ರಮಗಳೊಂದಿಗೆ (ಡಿಎವೈ-ಎನ್‌ಆರ್‌ಎಲ್‌ಎಮ್, ಎನ್‌ಎಸ್‌ಎಪಿ, ಎಮ್‌ಜಿಎನ್‌ಆರ್‌ಇಜಿಎ, ಪಿಎಮ್‌ಎವೈಗಳಂಥ) ಪೌಷ್ಟಿಕ ಆಹಾರ ಉಪಕ್ರಮಗಳನ್ನು ಮತ್ತು ಶಾಲಾ ಆರೋಗ್ಯ ಕಾರ್ಯಕ್ರಮಗಳನ್ನು ಸಂಯೋಜಿಸುವುದು.<br>❖ ಅನಪೇಕ್ಷಿತ ಘಟನೆಗಳ ಮತ್ತು ಇತರ ಸಂಬಂಧಪಟ್ಟ ಅಡೆತಡೆಗಳಿಂದಾಗಿ, ಆರಂಭದಲ್ಲಿಯೇ ಮಕ್ಕಳ ಪ್ರಾರಂಭಿಕ ಚಿಕಿತ್ಸೆಯನ್ನು ಸುನಿಶ್ಚಿತಗೊಳಿಸಲು ಪಿಹೆಚ್‌ಎಸ್/ ಸಿಹೆಚ್‌ಎಸ್/ ಜಿಲ್ಲಾ ಆಸ್ಪತ್ರೆಗಳು/ ಅಗ್ನಿ ಶಾಮಕ ಸೇವೆಗಳು/ ಪೊಲೀಸ್‌ರೊಂದಿಗೆ ಸಂಪರ್ಕ ಸಾಧಿಸುವುದನ್ನು ಖಚಿತಪಡಿಸುವುದು.<br>❖ ಪೌಷ್ಟಿಕವಾಗಿ ದುರ್ಬಲ ಗುಂಪುಗಳ ಜೀವನೋಪಾಯ ಮತ್ತು ಆಹಾರ ಸುರಕ್ಷತೆಯನ್ನು ಸುಧಾರಿಸುವುದಕ್ಕಾಗಿ ಎಮ್‌ಜಿಎನ್‌ಆರ್‌ಇಜಿಎನಂಥ ಇತರ ಯೋಜನೆಗಳೊಂದಿಗೆ **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯನ್ನು** ಸಂಯೋಜಿಸಿ ಬಲಪಡಿಸುವುದು.<br>❖ ಪೌಷ್ಟಿಕ ಆಹಾರ ಸುರಕ್ಷತಾ ಅಭಿಯಾನ, ರಾಷ್ಟ್ರೀಯ ತೋಟಗಾರಿಕೆ ಅಭಿಯಾನದ ಮುಖಾಂತರ ಆಹಾರ ಮತ್ತು ಪೌಷ್ಟಿಕತೆಯ ಸುರಕ್ಷತೆಯಲ್ಲಿ ಸುಧಾರಣೆಯನ್ನು ಬಲಪಡಿಸುವುದು. |

## ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ಪರಿಣಾಮಕಾರಿ ಮೇಲ್ವಿಚಾರಣೆಯನ್ನು ಸುನಿಶ್ಚಿತಗೊಳಿಸುವಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ

ಪ್ರಜಾಸತ್ತಾತ್ಮಕ ಆಡಳಿತದ ನಿರ್ಣಾಯಕ ಲಕ್ಷಣವಾಗಿರುವ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಸಾಂಸ್ಥಿಕ ನಿಕಾಯಗಳಲ್ಲಿ ಆಚರಣೆಗೆ ತರುವುದು ಸ್ವಲ್ಪಮಟ್ಟಿಗೆ ಸವಾಲಿನದ್ದಾಗಿದೆ. ಸಾಮಾಜಿಕ ಪರಿಶೋಧನೆ, ಜಾಗೃತ ಸಮಿತಿಗಳಂಥ ಸಾಧನೋಪಾಯಗಳು ಮತ್ತು ಕಾರ್ಯವ್ಯವಸ್ಥೆಗಳು, ಆಡಳಿತದ ಪರಿಣಾಮಕಾರಿ ನಿರ್ವಹಣೆಯನ್ನು ಖಾತರಿಗೊಳಿಸುವ ಪಾತ್ರ ವಹಿಸುತ್ತವೆ.

### *ಸಾಮಾಜಿಕ ಪರಿಶೋಧನೆಗಳು – ಗ್ರಾಮ ಪಂಚಾಯಿತಿಯ ಪಾತ್ರ*

### i. ಎಫ್‌ಪಿಎಸ್‌ಗಳಲ್ಲಿ ಟಿಪಿಡಿಎಸ್‌ಗಳ ಸಾಮಾಜಿಕ ಪರಿಶೋಧನೆ

ಸರ್ಕಾರಿ ಯೋಜನೆಗಳ ಮತ್ತು ಪಂಚಾಯಿತಿಗಳ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ, ಪಾಲ್ಗೊಳ್ಳುವಿಕೆ, ಸಮಾಲೋಚನೆ ಮತ್ತು ಉತ್ತರದಾಯಿತ್ವವನ್ನು ಸುನಿಶ್ಚಿತಗೊಳಿಸುವಲ್ಲಿ, ಸಾಮಾಜಿಕ ಪರಿಶೋಧನೆಯು ಪರಿಣಾಮಕಾರಿ ಸಾಧನವಾಗಿದೆ. ಎನ್‌ಎಫ್‌ಎಸ್‌ಎ, 2013ರ 28ನೇ ಪ್ರಕರಣದಲ್ಲಿ ಉಲ್ಲೇಖಿಸಿರುವಂತೆ, ಗ್ರಾಮ ಪಂಚಾಯಿತಿಯು, ಎಫ್‌ಪಿಎಸ್‌ಗಳ ಕಾರ್ಯನಿರ್ವಹಣೆ ಕುರಿತು ಕಾಲಿಕ ಸಾಮಾಜಿಕ ಪರಿಶೋಧನೆಗಳನ್ನು ನಡೆಸುವ ಮತ್ತು / ಅಥವಾ ಸಾಮಾಜಿಕ ಪರಿಶೋಧನೆಗಳನ್ನು ನಡೆಸುವಲ್ಲಿ, ಯಾವುದೇ ಪ್ರಾಧಿಕೃತ ಸ್ವತಂತ್ರ ಏಜನ್ಸಿಯೊಂದಿಗೆ ಸಮನ್ವಯ ಸಾಧಿಸುವ ಹೊಣೆಗಾರಿಕೆಯನ್ನು ಹೊಂದಿದೆ. ಪಾರದರ್ಶಕತೆ ಮತ್ತು ಉತ್ತರದಾಯಿತ್ವಕ್ಕೆ ಸಂಬಂಧಿಸಿದಂತೆ, ಹಕ್ಕುದಾರರೊಂದಿಗೆ ಪ್ರತ್ಯೇಕವಾಗಿ ತಾಳೆ ನೋಡುವುದು ನಿರ್ಣಾಯಕವಾದುದಾಗಿದೆ.

ಕರ್ನಾಟಕದಲ್ಲಿ, ಎಮ್‌ಜಿಎನ್‌ಆರ್‌ಇಜಿಎ ಅಡಿಯಲ್ಲಿ ಸ್ಥಾಪಿಸಿದ ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯವು, ಎನ್‌ಎಫ್‌ಎಸ್‌ಎ ಅಡಿಯಲ್ಲಿ ಸಾಮಾಜಿಕ ಪರಿಶೋಧನಾ ನಿಯಮಗಳ ಅನುಷ್ಠಾನಕ್ಕೆ ಜವಾಬ್ದಾರವಾಗಿದೆ. ಜಾಗೃತ ಸಮಿತಿ ಸದಸ್ಯರ ಸಾಮರ್ಥ್ಯ ನಿರ್ಮಾಣ ಮಾಡುವುದಕ್ಕೆ, ಅವರ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ನಡೆಸುವುದಕ್ಕೆ ಮತ್ತು ಗ್ರಾಮ/ ಗ್ರಾಮ ಪಂಚಾಯತ್ ಮಟ್ಟಗಳಲ್ಲಿ ಸಾಮಾಜಿಕ ಪರಿಶೋಧನೆ ನಡೆಸುವುದು ಅದರ ಅಗತ್ಯತೆಯಾಗಿದೆ.

ಎಫ್‌ಪಿಎಸ್ ಮಟ್ಟದಲ್ಲಿ, ಅಂಗಡಿ ಪ್ರದೇಶದಲ್ಲಿ, ಎಫ್‌ಪಿಎಸ್ ಮತ್ತು ಟಿಪಿಡಿಎಸ್‌ನ ಕಾರ್ಯನಿರ್ವಹಣೆ ಕುರಿತು ಜಾಗೃತ ಸಮಿತಿ ಸದಸ್ಯರು, ವಿಶೇಷವಾಗಿ ಈ ಮುಂದಿನ ವಿಷಯಗಳ ಬಗ್ಗೆ ಸೌಲಭ್ಯ ಕಲ್ಪಿಸುವರು:

- ➢ ಹಕ್ಕು ಇರುವಷ್ಟು ಆಹಾರ ಧಾನ್ಯಗಳು
- ➢ ಅಂಗಡಿಯಲ್ಲಿ ಆಹಾರ ಧಾನ್ಯಗಳ ಸಂಗ್ರಹಣೆ
- ➢ ಪ್ರಮಾಣಿತ ತೂಕ ಮಾಡುವ ಮಾಪಕಗಳು
- ➢ ಕೆಲಸದ ಅವಧಿಯಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯುವುದು
- ➢ ಬಿಲ್ಲುಗಳನ್ನು ನೀಡುವುದು
- ➢ ಹೆಚ್ಚು ದರ ನಿಗದಿ
- ➢ ಆಹಾರ ಧಾನ್ಯಗಳನ್ನು ಬೇರೆ ಉದ್ದೇಶಕ್ಕಾಗಿ ಸಾಗಿಸುವುದು
- ➢ ಕಡಿಮೆ ಸಂದಾಯ
- ➢ ನಕಲಿ ಕಾರ್ಡುಗಳಿರುವುದು
- ➢ ಮಾಹಿತಿ ಪ್ರದರ್ಶನ
- ➢ ಜಾಗೃತ ಸಮಿತಿ ವರದಿಗಳ ನಿರ್ವಹಣೆ
- ➢ ಕಾರ್ಡ್ ಇರುವವರ ಸಂಬಂಧದಲ್ಲಿ ಪ್ರತ್ಯೇಕವಾಗಿ ತಾಳೆ ನೋಡುವುದು

## ii. ಶಾಲೆಯಲ್ಲಿ ಎಮ್‌ಡಿಎಮ್‌ಎಸ್‌ನ ಸಾಮಾಜಿಕ ಪರಿಶೋಧನೆ

ಶಾಲೆಗಳಲ್ಲಿ, ಎಮ್‌ಡಿಎಮ್‌ಎಸ್‌ಗಾಗಿ ಸಾಮಾಜಿಕ ಪರಿಶೋಧನೆಯನ್ನು, ಕರ್ನಾಟಕದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಕೈಗೊಳ್ಳುತ್ತದೆ. ಇಲಾಖೆಯು, ಸ್ವತಂತ್ರ ಖಾಸಗಿ ಸಂಸ್ಥೆಗೆ ಸಾಮಾಜಿಕ ಪರಿಶೋಧನೆ ನಡೆಸಲು ಹೊರಗುತ್ತಿಗೆ ನೀಡಬಹುದಾಗಿದೆ. ಗ್ರಾಮ ಪಂಚಾಯಿತಿಯು, ಎಸ್‌ಡಿಎಮ್‌ಸಿ ಭಾಗವಾಗಿ, ಶಾಲೆಗಳಲ್ಲಿ ಎಮ್‌ಡಿಎಮ್‌ಎಸ್‌ನ ಸಾಮಾಜಿಕ ಪರಿಶೋಧನೆ ನಡೆಸುವ ಪ್ರಕ್ರಿಯೆಗೆ ಸೌಲಭ್ಯ ಕಲ್ಪಿಸುವುದು. ಟಿಪಿಡಿಎಸ್ ಸಾಮಾಜಿಕ ಪರಿಶೋಧನೆಯಲ್ಲಿ ಹೇಳಿದ ವಿಷಯಗಳಿಗೆ ಹೆಚ್ಚುವರಿಯಾಗಿ, ಗ್ರಾಮ ಪಂಚಾಯಿತಿ ಮತ್ತು ಎಸ್‌ಡಿಎಮ್‌ಸಿಯು ಪರಿಶೀಲನೆ ನಡೆಸಬೇಕು:

- ಎಮ್‌ಡಿಎಮ್‌ಎಸ್‌ಗೆ ಸಂಬಂಧಿಸಿದ ಶಾಲಾ ಹಂತದಲ್ಲಿ, ಎಲ್ಲಾ ದಾಖಲೆಗಳು (ಆಹಾರ ಧಾನ್ಯಗಳು, ಸಂಗ್ರಹ ರಿಜಿಸ್ಟರ್, ಗುಣಮಟ್ಟ ನಿರ್ವಹಣೆ ರಿಜಿಸ್ಟರ್, ವಿದ್ಯಾರ್ಥಿ ದಾಖಲಾತಿ ರಿಜಿಸ್ಟರ್, ಸಂದರ್ಶಕ ದಾಖಲೆ, ರುಚಿಗೆ ಸಂಬಂಧಿಸಿದ ರಿಜಿಸ್ಟರ್, ನಗದು ಪುಸ್ತಕ)
- ಸಚಿವಾಲಯವು ಒದಗಿಸಿದ ಅಡುಗೆ ಕೋಣೆಯ ಮತ್ತು ಉಗ್ರಾಣದ ಮೂಲ ಮಾದರಿ ವಿನ್ಯಾಸವನ್ನು ಅನುಸರಿಸಬೇಕು.
- ಶಾಲೆಯಲ್ಲಿ ಕುಡಿಯುವ ನೀರು ಮತ್ತು ಎಲ್ಲಾ ಸೌಲಭ್ಯಗಳ ಸಹಿತ ಸೂಕ್ತ ಅಡುಗೆ ಕೋಣೆ ಮತ್ತು ಉಗ್ರಾಣ.
- ಶಾಲಾ ಕಟ್ಟಡಗಳಲ್ಲಿ ಬಾಲಕ ಮತ್ತು ಬಾಲಕಿಯರಿಗಾಗಿ ಪ್ರತ್ಯೇಕ ಶೌಚಾಲಯಗಳ ಕಾರ್ಯನಿರ್ವಹಣೆ.
- ಇಲಾಖೆಯು ಸಲಹೆ ಮಾಡಿದ ಆಹಾರ ಪದಾರ್ಥಗಳ ಖಾದ್ಯಪಟ್ಟಿ (ಮೆನು) ಮತ್ತು ನಿಯಮಿಸಿದ ಆಹಾರ ಗುಣಮಟ್ಟವನ್ನು ಅನುಸರಿಸುವುದು.
- ವಾಸ್ತವವಾಗಿ ಹಂಚಿಕೆ ಮಾಡಿದ ಆಹಾರ ಧಾನ್ಯಗಳನ್ನು ರವಾನಿಸಿದ ಬಗ್ಗೆ ದೃಢೀಕರಣ (ಆಹಾರ ಧಾನ್ಯಗಳನ್ನು ತೂಕ ಮಾಡುವ ಮೂಲಕ).
- ಎಮ್‌ಡಿಎಮ್‌ಎಸ್ ಅಡಿಯಲ್ಲಿ ಗುಣಮಟ್ಟ ಮತ್ತು ಸುರಕ್ಷತೆಯ ಅಂಶಗಳಿಗೆ ಸಂಬಂಧಿಸಿದಂತೆ ಸಚಿವಾಲಯವು ನೀಡಿದ ಎಲ್ಲಾ ಮಾರ್ಗಸೂಚಿಗಳನ್ನು ಪಾಲಿಸಬೇಕು.
- ಸುಸ್ಥಿತಿಯಲ್ಲಿರುವ ಅಗ್ನಿ ಶಾಮಕಗಳ ಸಹಿತ ಸ್ಥಳದಲ್ಲಿ ಮತ್ತು ಶಾಲೆಗಳಲ್ಲಿ ಸೂಕ್ತ ಅಗ್ನಿ ಶಾಮಕ ವ್ಯವಸ್ಥೆಯನ್ನು ಉತ್ತಮವಾಗಿ ಸಜ್ಜುಗೊಳಿಸಿರಬೇಕು.
- ಸೂಚಿಸಿದ ಮಾನದಂಡಗಳ ಪ್ರಕಾರ ಪರೀಕ್ಷಾ ಪ್ರಯೋಗಾಲಯಗಳು ಮತ್ತು ಪ್ರಾಧಿಕಾರಗಳು ಅಗತ್ಯಪಡಿಸಿದಂತೆ ಆಹಾರ ಮಾದರಿಗಳು.
- ಅನಪೇಕ್ಷಿತ ಘಟನೆ/ ಆರೋಗ್ಯ ಸಂಬಂಧಿ ಸಮಸ್ಯೆಗಳು ಉದ್ಭವಿಸಿದ ಸಂದರ್ಭದಲ್ಲಿ, ಜಿಲ್ಲಾ ಪ್ರಾಧಿಕಾರಗಳ ಸಹಯೋಗದಲ್ಲಿ ಆಹಾರ ಮಾದರಿಗಳನ್ನು ಪರೀಕ್ಷಿಸುವುದು.
- ಎಮ್‌ಡಿಎಮ್‌ಎಸ್ ಕಾರ್ಯವಿಧಾನ ಮತ್ತು ದೈನಂದಿನ ಖಾದ್ಯಪಟ್ಟಿಯ (ಮೆನು) ಬಗ್ಗೆ ಮಾಹಿತಿ ಪ್ರದರ್ಶನ.
- ಕಟ್ಟುನಿಟ್ಟಿನ ನಿಯಮವಾಗಿ, ಯಾವುದೇ ಸಮಸ್ಯೆ ಇಲ್ಲದೆ ಆಹಾರ ಧಾನ್ಯಗಳನ್ನು ಹಕ್ಕುದಾರರು ಪಡೆಯುತ್ತಿರುವ ಬಗ್ಗೆ ಅವರಿಗೆ ಸಂಬಂಧಿಸಿದಂತೆ ಪರಿಶೀಲಿಸುವುದು.

## iii. ಅಂಗನವಾಡಿ ಕೇಂದ್ರದಲ್ಲಿ ಐಸಿಡಿಎಸ್‌ನ ಸಾಮಾಜಿಕ ಪರಿಶೋಧನೆ

ಕರ್ನಾಟಕದಲ್ಲಿ ಐಸಿಡಿಎಸ್‌ನ ಸಾಮಾಜಿಕ ಪರಿಶೋಧನೆ ನಡೆಸಲು ಯಾವುದೇ ನಿರ್ದಿಷ್ಟ ಸಂಸ್ಥೆ ಇಲ್ಲ. ಗ್ರಾಮ ಪಂಚಾಯಿತಿ ಸದಸ್ಯರನ್ನು ಒಳಗೊಂಡ, ಅಂಗನವಾಡಿ ಕೇಂದ್ರಗಳಲ್ಲಿ ಬಿವಿಎಸ್ ಬಗ್ಗೆ ಮತ್ತು ಗ್ರಾಮ ಮಟ್ಟದಲ್ಲಿ ಮತ್ತು/ ಅಥವಾ ಗ್ರಾಮ ಪಂಚಾಯಿತಿಯು, ಐಸಿಡಿಎಸ್‌ಗಳ ಅನುಷ್ಠಾನದ ಬಗ್ಗೆ ಮತ್ತು ಗ್ರಾಮದ ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆಯ ಸಾಮಾಜಿಕ ಪರಿಶೋಧನೆ ಬಗ್ಗೆ ವಿಹೆಚ್‌ಎಸ್‌ಎನ್‌ಸಿಗಳಂಥ ಜಾಗೃತ ಸಮಿತಿಗಳು ಪರಿಶೋಧನೆ ನಡೆಸುತ್ತಿವೆ.

**ಗ್ರಾಮ ಪಂಚಾಯಿತಿಯು ಪರಿಶೀಲಿಸಬಹುದಾದ ಅಂಶಗಳು:**

- ಮಾರ್ಗಸೂಚಿಗಳಿಗನುಸಾರ, ಐಸಿಡಿಎಸ್‌ಗೆ ಸಂಬಂಧಿಸಿದಂತೆ, ಅಂಗನವಾಡಿ ಕೇಂದ್ರದಲ್ಲಿನ ಎಲ್ಲಾ ದಾಖಲೆಗಳು (ಎಲ್ಲಾ ಆಹಾರ ಪದಾರ್ಥಗಳು, ಹಾಲಿನ ಪುಡಿ, ಮೊಟ್ಟೆಗಳು, ಪೌಷ್ಟಿಕ ಆಹಾರ ಪೊಟ್ಟಣ, ವಿಟಮಿನ್ ಮಾತ್ರೆಗಳ ದಾಸ್ತಾನು ರಿಜಿಸ್ಟರ್, ಗುಣಮಟ್ಟ ನಿರ್ವಹಣೆ ರಿಜಿಸ್ಟರ್, 6 ತಿಂಗಳುಗಳಿಂದ 3 ವರ್ಷಗಳವರೆಗಿನ ಮತ್ತು 3ರಿಂದ 6 ವರ್ಷಗಳವರೆಗಿನ ಮಕ್ಕಳ, ಕಿಶೋರಿ ಬಾಲಕಿಯರ, ಗರ್ಭಿಣಿ ಮಹಿಳೆಯರ ಮತ್ತು ಹಾಲುಣಿಸುವ ತಾಯಂದಿರ ದಾಖಲಾತಿ ರಿಜಿಸ್ಟರ್, ಹಾಜರಾತಿ ರಿಜಿಸ್ಟರ್, ಸಂದರ್ಶಕರ ದಾಖಲೆ, ರುಚಿಗೆ ಸಂಬಂಧಿಸಿದ ರಿಜಿಸ್ಟರ್, ನಗದು ಪುಸ್ತಕ).
- ತರಗತಿ ಕೊಠಡಿ, ಅಡುಗೆ ಕೋಣೆ ಮತ್ತು ದಾಸ್ತಾನು ಕೊಠಡಿ ಸೌಲಭ್ಯಗಳು, ಅಡುಗೆ ತಯಾರಿಸುವ ಪಾತ್ರೆಗಳು, ಕುಡಿಯುವ ನೀರು, ಸ್ವಚ್ಛತೆ, ಬಳಸಲು ಯೋಗ್ಯವಾದ ಶೌಚಾಲಯಗಳು, ಮುಂತಾದವು.
- ಅಂಗನವಾಡಿ ಕೇಂದ್ರದಲ್ಲಿನ ಮಾಹಿತಿ ಮತ್ತು ಆಹಾರ ಖಾದ್ಯಪಟ್ಟಿ (ಮೆನು) ಪ್ರದರ್ಶನ.
- ತಾಯಿ–ಮಗುವಿನ ಸಂರಕ್ಷಣೆ ಕಾರ್ಡ್‌ಗಳು, ಪ್ರಸೂತಿಗೆ ಸಂಬಂಧಿಸಿದ ದಸ್ತಾವೇಜುಗಳು ಮತ್ತು ನೋಂದಾಯಿತ ಗರ್ಭಿಣಿ ಮಹಿಳೆಯರು ಮತ್ತು ಹಾಲುಣಿಸುವ ತಾಯಂದಿರ ಎಮ್‌ಬಿಎಸ್‌ಗೆ ಸಂಬಂಧಿಸಿದ ದಸ್ತಾವೇಜುಗಳು.

- ➢ ಪೌಷ್ಟಿಕತೆ ಮತ್ತು ಆರೋಗ್ಯ ಶಿಬಿರಗಳ ಮತ್ತು **ಪೋಷಣ್** ಅಭಿಯಾನದ ದಾಖಲೆಗಳು.
- ➢ 6 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಬೆಳವಣಿಗೆ ಕುರಿತ ಮೇಲ್ವಿಚಾರಣೆ ಚಾರ್ಟ್ ಮತ್ತು ಮಕ್ಕಳ ತೂಕದ ಯಂತ್ರಗಳು ಹಾಗೂ ಇತರ ಅಳತೆ ಉಪಕರಣಗಳು.
- ➢ ಹಕ್ಕುದಾರರಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಪರಿಶೀಲನೆ ಮಾಡುವುದು (ಮಕ್ಕಳ ಪಾಲಕರು ಮತ್ತು ಫಲಾನುಭವಿಗಳು).

### iv. ಸಾಮಾಜಿಕ ಪರಿಶೋಧನೆ ಮತ್ತು ಜಿಪಿಡಿಪಿ

ಸಾಮಾಜಿಕ ಪರಿಶೋಧನಾ ಪ್ರಕ್ರಿಯೆಯು, ಪರಿಶೋಧನಾ ಕಾರ್ಯವಿಧಾನದ ಅಗತ್ಯತೆಗಳೊಂದಿಗೆ ಜನರ ಪಾಲ್ಗೊಳ್ಳುವಿಕೆ ಮತ್ತು ಮೇಲ್ವಿಚಾರಣೆಯನ್ನು ಸಂಯೋಜಿಸುತ್ತದೆ. ಯೋಜನೆಯನ್ನು ಅನುಷ್ಠಾನಗೊಳಿಸುವ ಏಜನ್ಸಿಯು, ಸ್ವತಃ ಪರಿಶೋಧನೆ ಮಾಡಿಕೊಳ್ಳಲಾಗುವುದಿಲ್ಲವಾದ್ದರಿಂದ, ಈ ಪ್ರಕ್ರಿಯೆಗೆ ಸೌಲಭ್ಯ ಕಲ್ಪಿಸುವಂಥ ಪ್ರತ್ಯೇಕ ಸಾಮಾಜಿಕ ಪರಿಶೋಧನಾ ಸಂಸ್ಥೆ ಮತ್ತು ನಾಗರಿಕ ಸಮಾಜ ಗುಂಪುಗಳು ನೀಡುವ ಬೆಂಬಲದೊಂದಿಗೆ, ಪರಿಶೋಧನೆಯಲ್ಲಿ ಜನರ ಪಾಲ್ಗೊಳ್ಳುವಿಕೆಗೆ ಉತ್ತೇಜನ ನೀಡುವುದು ಅವಶ್ಯಕವಾಗಿದೆ. ಸಾಮಾಜಿಕ ಪರಿಶೋಧನಾ ಪ್ರಕ್ರಿಯೆಯು, ಸತ್ಯವನ್ನು ಕಂಡುಹಿಡಿಯುವ ಪ್ರಕ್ರಿಯೆಯೇ ಹೊರತು, ತಪ್ಪು ಕಂಡುಹಿಡಿಯುವ ಪ್ರಕ್ರಿಯೆಯಲ್ಲ. ಸಾಮಾಜಿಕ ಪರಿಶೋಧನಾ ಪ್ರಕ್ರಿಯೆಯು, ಈ ಮುಂದಿನ ಕ್ರಮಗಳನ್ನು ಒಳಗೊಂಡಿರಬಹುದಾಗಿದೆ:

- ➢ ಸಾಮಾಜಿಕ ಕಾರ್ಯಕ್ರಮ ಆಯ್ಕೆಯ ಪ್ರಸ್ತುತ ಸ್ಥಿತಿಯನ್ನು ಗುರುತಿಸುವುದು ಮತ್ತು ಅರಿತುಕೊಳ್ಳುವುದು.
- ➢ ಕಾರ್ಯಾಚರಣೆ ಮಾರ್ಗಸೂಚಿಗಳಲ್ಲಿ ನಿಗದಿತ ಮಾನದಂಡಗಳನುಸಾರ ಕಂಡುಬಂದ ಅಂಶಗಳನ್ನು ಹೋಲಿಸಿ ನೋಡುವುದು.
- ➢ ಸಾರ್ವಜನಿಕ ವಿಚಾರಣೆ ಮೂಲಕ ಸ್ಥಳೀಯ ಸಮುದಾಯದ ಅಭಿಪ್ರಾಯಗಳ ಪರಿಶೀಲನೆ.
- ➢ ಪ್ರತ್ಯೇಕವಾಗಿ ತಜ್ಞರ ಅಭಿಪ್ರಾಯಗಳ ಪರಿಶೀಲನೆ.
- ➢ ಅಭಿಪ್ರಾಯಗಳನ್ನಾಧರಿಸಿ ಸಾಮಾಜಿಕ ಪರಿಶೋಧನಾ ವರದಿ ಸಿದ್ಧಪಡಿಸುವುದು.
- ➢ **ಗ್ರಾಮ ಸಭೆ**ಯಲ್ಲಿ ಸಾಮಾಜಿಕ ಪರಿಶೋಧನಾ ವರದಿಯನ್ನು ಕಡ್ಡಾಯ ಸ್ಥಿರೀಕರಿಸುವುದು.
- ➢ ಸಾರ್ವಜನಿಕ ವಿಚಾರಣೆಯ ನಿರ್ಣಯಗಳ ಆಧಾರದ ಮೇಲೆ ಕ್ರಮ ಕೈಗೊಳ್ಳುವ ವರದಿಯಲ್ಲಿ ಸಾರ್ವಜನಿಕ ವಿಚಾರಣೆಗಳು.
- ➢ ಎಮ್ಐಎಸ್ ಮತ್ತು ಗ್ರಾಮ ಪಂಚಾಯಿತಿ ಕಚೇರಿಯಲ್ಲಿ, ಕ್ರಮ ತೆಗೆದುಕೊಂಡ ವರದಿಯ ಸಾರ್ವಜನಿಕ ಪ್ರದರ್ಶನ.

**ಜಿಪಿಡಿಪಿಯಲ್ಲಿ ಸಾಮಾಜಿಕ ಪರಿಶೋಧನೆಯನ್ನು ಸೇರಿಸುವುದು**

- ❖ ಸಾಮಾಜಿಕ ಪರಿಶೋಧನೆ ಕುರಿತು ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯಕರ್ತರಿಗೆ ಮತ್ತು ಚುನಾಯಿತಿ ಪ್ರತಿನಿಧಿಗಳಿಗೆ ಕಡ್ಡಾಯ ತರಬೇತಿ.
- ❖ ಜಿಪಿಡಿಪಿ ಮುಖಾಂತರ ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳ/ ಯೋಜನೆಗಳ ಸಾಮಾಜಿಕ ಪರಿಶೋಧನೆ ನಡೆಸುವುದನ್ನು ಗ್ರಾಮ ಪಂಚಾಯಿತಿಗಳು ಖಚಿತಪಡಿಸಿಕೊಳ್ಳಬೇಕು.
- ❖ ಜಿಪಿಡಿಪಿ ಮೇಲ್ವಿಚಾರಣೆ ಮತ್ತು ಅನುಷ್ಠಾನ ಪ್ರಕ್ರಿಯೆಗಾಗಿ ಸಾಮಾಜಿಕ ಪರಿಶೋಧನೆಯನ್ನು ನಡೆಸಬೇಕು.
- ❖ ಗ್ರಾಮ ಮಟ್ಟದ ಮೇಲ್ವಿಚಾರಣಾ ಸಮಿತಿ, ಸ್ವ–ಸಹಾಯ ಗುಂಪುಗಳು, ಮಹಿಳಾ ಸಭೆ, ಜನರು ನಡೆಸುವ ಸಂಸ್ಥೆಗಳು, ನಾಗರಿಕ ಸಮಾಜ ಮತ್ತು ಮಹಿಳಾ ಗುಂಪುಗಳು, ಸಾಮಾಜಿಕ ಪರಿಶೋಧನೆ ನಡೆಸುವಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಬೇಕು.
- ❖ ಸಾಮಾಜಿಕ ಪರಿಶೋಧನೆಯ ಸಾರ್ವಜನಿಕ ವಿಚಾರಣೆಯ ವಿಡಿಯೋ ಮಾಡಿ ದಾಖಲಿಸುವುದನ್ನು, ಸಾಮಾಜಿಕ ಪರಿಶೋಧನಾ ವ್ಯವಹರಣೆಗಳನ್ನು ಮತ್ತು ವರದಿಗಳನ್ನು ಹಾಗೂ ಸಾರ್ವಜನಿಕ ಕ್ಷೇತ್ರದಲ್ಲಿ ಲಭ್ಯವಿರಬಹುದಾದ ಕ್ರಮ ತೆಗೆದುಕೊಂಡ ವರದಿಗಳನ್ನು ಖಚಿತಪಡಿಸಿಕೊಳ್ಳಬೇಕು.

| |
|---|
| ಎಲ್ಲಾ ಸಾಮಾಜಿಕ ಪರಿಶೋಧನೆಯ ನಿರ್ಣಯಗಳನ್ನು ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಜಾಗೃತ ಸಮಿತಿಗಳೊಂದಿಗೆ, ಸಂಬಂಧಪಟ್ಟ ವಾರ್ಡ್/ಗ್ರಾಮ ಸಭೆಯಲ್ಲಿ ಮಂಡಿಸಿ, ಚರ್ಚಿಸಬೇಕು; ಡಿಜಿಆರ್ಒ, ಎಸ್ಎಫ್ಸಿ ಮತ್ತು ಸಂಬಂಧಪಟ್ಟ ಇಲಾಖೆಗಳು ತಳಮಟ್ಟದಿಂದ ಸಮಸ್ಯೆಗಳನ್ನು ಬಗೆಹರಿಸಬೇಕು. |

**ಮೇಲ್ವಿಚಾರಣೆಗಾಗಿ ಜಾಗೃತ ಸಮಿತಿಗಳು – ಗ್ರಾಮ ಪಂಚಾಯಿತಿಯ ಪಾತ್ರಗಳು**

ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳ ಮತ್ತು ಯೋಜನೆಗಳ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಹಾಗೂ ಪ್ರತಿಯೊಬ್ಬ ಮತ್ತು ಎಲ್ಲಾ ಹಕ್ಕುದಾರರು, ಯಾವುವೇ ಅಡ್ಡಿ–ಅಡಚಣೆಗಳಿಲ್ಲದೆ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕೆ ವಿವಿಧ ಮಟ್ಟಗಳಲ್ಲಿನ ಮೇಲ್ವಿಚಾರಣಾ ಕಾರ್ಯವ್ಯವಸ್ಥೆಗಳು ನಿರ್ಣಾಯಕವಾಗಿವೆ.

**ಟಿಪಿಡಿಎಸ್‌ಗೆ ಎಫ್‌ಪಿಎಸ್ ಮಟ್ಟದಲ್ಲಿ ಜಾಗೃತ ಸಮಿತಿಗಳು**

29ನೇ ಪ್ರಕರಣವು, ವಿವಿಧ ಮಟ್ಟಗಳಲ್ಲಿ ಸ್ಥಳೀಯ ಪ್ರಾಧಿಕಾರಗಳು, ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಮಹಿಳೆಯರು ಮತ್ತು ನಿರ್ಗತಿಕ ವ್ಯಕ್ತಿಗಳು ಅಥವಾ ವಿಶೇಷ ಚೇತನ ವ್ಯಕ್ತಿಗಳ ಯುಕ್ತ ಪ್ರಾತಿನಿಧ್ಯದೊಂದಿಗೆ ಜಾಗೃತ ಸಮಿತಿಗಳನ್ನು ರಚಿಸಬೇಕೆಂಬ ನಿಯಮ ವಿಧಿಸುತ್ತದೆ.

ಮೇಲ್ವಿಚಾರಣಾ ಕಾರ್ಯವ್ಯವಸ್ಥೆಯಾಗಿ, ಕರ್ನಾಟಕ ಸರ್ಕಾರವು ತನ್ನ ವಿಶೇಷ ರಾಜ್ಯಪತ್ರದಲ್ಲಿನ ಅಧಿಸೂಚನೆ ಮೂಲಕ (ಸಂಖ್ಯೆ: ಎಫ್‌ಸಿಎಸ್ 144 ಡಿಆರ್‌ಎ 2013, ದಿನಾಂಕ: 07.05.2016) ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಎಫ್‌ಪಿಎಸ್ ಮಟ್ಟದಲ್ಲಿ ಹೀಗೆ ನಾಲ್ಕು ಹಂತಗಳಲ್ಲಿ ಜಾಗೃತ ಸಮಿತಿಗಳನ್ನು ಸ್ಥಾಪಿಸಿದೆ: ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಹಂತಗಳಲ್ಲಿನ ಜಾಗೃತ ಸಮಿತಿಗಳ ಅವಧಿಯು ಎರಡು ವರ್ಷಗಳಾಗಿದೆ. ಎಫ್‌ಪಿಎಸ್ ಹಂತದಲ್ಲಿ, ಜಾಗೃತ ಸಮಿತಿಯು, ಪ್ರತಿ ಆರು ತಿಂಗಳುಗಳಿಗೆ ಅದರ 1/3ರಷ್ಟು ಸದಸ್ಯರನ್ನು ಬದಲಾಯಿಸುವುದರೊಂದಿಗೆ ಖಾಯಂ ಸಮಿತಿಯಾಗಿ ಕಾರ್ಯನಿರ್ವಹಿಸುತ್ತದೆ.

ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದ ಸಮಿತಿಗಳ ಸಭೆಗಳನ್ನು ಪ್ರತಿ ಮೂರು ತಿಂಗಳುಗಳಿಗೊಮ್ಮೆ ನಡೆಸಿದರೆ, ಎಫ್‌ಪಿಎಸ್ ಹಂತದಲ್ಲಿನ ಜಾಗೃತ ಸಮಿತಿ ಸಭೆಯನ್ನು ಪ್ರತಿ ತಿಂಗಳ 7ನೇ ತಾರೀಖಿನಂದು (7ನೇ ತಾರೀಖು ಸಾರ್ವಜನಿಕ ರಜಾ ದಿನವಾಗಿದ್ದ ಸಂದರ್ಭದಲ್ಲಿ, ಸಭೆಯನ್ನು ಮುಂದಿನ ಕೆಲಸದ ದಿನದಂದು ನಡೆಸಬೇಕು) ಎಂದರೆ, **ಆಧಾರ್ ಅದಾಲತ್** ದಿನದಂದು ನಡೆಸಬೇಕು.

*ಪ್ರತಿಯೊಂದು ಎಫ್‌ಪಿಎಸ್ ಮಟ್ಟದಲ್ಲಿನ ಜಾಗೃತ ಸಮಿತಿಯು ಈ ಮುಂದಿನವರನ್ನು ಒಳಗೊಂಡಿರುತ್ತದೆ:*

- ❖ ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಅಥವಾ ನಿರ್ಗತಿಕರು ಅಥವಾ ವಿಶೇಷ ಚೇತನ ವ್ಯಕ್ತಿಗಳನ್ನು ಪ್ರತಿನಿಧಿಸುವ ಮೂವರು ಮಹಿಳಾ ಸದಸ್ಯೆಯರನ್ನು, ನ್ಯಾಯ ಬೆಲೆ ಅಂಗಡಿಗೆ ಸೇರಿದ ಪಡಿತರ ಚೀಟಿದಾರರನ್ನು ಕಂಪ್ಯೂಟರ್ ದತ್ತಾಂಶದ ಮುಖಾಂತರ ಯಾದೃಚ್ಛಿಕವಾಗಿ ಆಯ್ಕೆ ಮಾಡಲಾಗುತ್ತದೆ.
- ❖ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯನ್ನು ಅಥವಾ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ)ಯನ್ನು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಪಂಚಾಯಿತಿ ಅಧಿನಿಯಮಗಳ ಪ್ರಕಾರ ನಾಮನಿರ್ದೇಶಿಸಬೇಕು.

ಯಾದೃಚ್ಛಿಕ ಆಯ್ಕೆ ಸಮಯದಲ್ಲಿ, ಕುಟುಂಬದಲ್ಲಿ 18 ವರ್ಷ ವಯಸ್ಸಿಗಿಂತ ಮೇಲ್ಪಟ್ಟ ಮಹಿಳಾ ಸದಸ್ಯೆ ಇರದಿದ್ದ ಸಂದರ್ಭದಲ್ಲಿ, ಆ ಕುಟುಂಬವನ್ನು ಜಾಗೃತ ಸಮಿತಿಗೆ ಆಯ್ಕೆ ಮಾಡುವಂತಿಲ್ಲ. ಆ ಮೂಲಕ, ಸಮಿತಿ ಸದಸ್ಯರಾಗಿ ಕುಟುಂಬದ ಮಹಿಳಾ ಮುಖ್ಯಸ್ಥೆ ಮಾತ್ರವೇ ಆಯ್ಕೆಯಾಗುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದು.

ಜಾಗೃತ ಸಮಿತಿಯಲ್ಲಿ ಸದಸ್ಯ–ಕಾರ್ಯದರ್ಶಿಯಾಗಿ ನೇಮಿಸಲಾಗಿರುವ ಗ್ರಾಮ ಪಂಚಾಯಿತಿ ನೌಕರನು, ಗ್ರಾಮ ಪಂಚಾಯಿತಿ ನೌಕರರ ಮತ್ತು ಅದರ ಚುನಾಯಿತ ಸದಸ್ಯರು, ಎಫ್‌ಪಿಎಸ್ ಹಂತದಲ್ಲಿ ಜಾಗೃತ ಸಮಿತಿಯ ವಾಸ್ತವಿಕ ರಚನಾತ್ಮಕ ಮತ್ತು ಪರಿಣಾಮಕಾರಿ ಕಾರ್ಯನಿರ್ವಹಣೆಯಲ್ಲಿ ಮುಖ್ಯ ಪಾತ್ರ ವಹಿಸಬೇಕೆಂದು ನಿರೀಕ್ಷಿಸಲಾಗಿದೆ. ಹಲವು ಸಲ ಪಡಿತರ ಚೀಟಿದಾರರು, ಜಾಗೃತ ಸಮಿತಿಯ ಕಂಪ್ಯೂಟರ್ ಆಧಾರಿತ ಯಾದೃಚ್ಛಿಕ ಆಯ್ಕೆಯಂತೆ ಅದರ ಸದಸ್ಯರಾಗಿ ಅವರ ಆಯ್ಕೆಯಾಗುವ ಕುರಿತು ತಿಳಿದಿರುವುದಿಲ್ಲ ಮತ್ತು ಅವರು ತಮ್ಮ ಕಾರ್ಯನಿರ್ವಹಣೆ ಬಗ್ಗೆ ತಿಳಿದಿರುವುದಿಲ್ಲ.

**ಆದ್ದರಿಂದ,**
ಮೊದಲ ಸಲ ಆಯ್ಕೆಯಾದ ಸದಸ್ಯರಿಗೆ, ಆ ಬಗ್ಗೆ ಅವರಿಗೆ ತಿಳಿಸಬೇಕು ಮತ್ತು ಆ ಸದಸ್ಯರ ಪಾತ್ರಗಳ ಮತ್ತು ಹೊಣೆಗಾರಿಕೆಗಳ ಬಗ್ಗೆ ಅವರಿಗೆ ನಿಯತಕಾಲಿಕವಾಗಿ ತರಬೇತಿಗಳನ್ನು ನಡೆಸಲಾಗುತ್ತಿದೆ ಎಂಬುದನ್ನು ಖಚಿತಪಡಿಕೊಳ್ಳುವುದು.

**ಮೇಲ್ವಿಚಾರಣೆ:**

- ➢ ಎಫ್‌ಪಿಎಸ್‌ನಲ್ಲಿ ವಿತರಣೆಗಾಗಿ ಆಹಾರ ಧಾನ್ಯಗಳನ್ನು ಪಡೆದುಕೊಳ್ಳುವುದರಿಂದ ಪ್ರಾರಂಭಿಸಿ, ಪಡಿತರ ಚೀಟಿದಾರರಿಗೆ ಸಂಬಂಧಿಸಿದ ಪರಿಶೀಲನೆ ನಡೆಸುವವರೆಗಿನ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಎಫ್‌ಪಿಎಸ್ ಇದು, ಟಿಪಿಡಿಎಸ್ ಅನುಷ್ಠಾನದ ನಿಯತ ಮೇಲ್ವಿಚಾರಣೆ ನಡೆಸುವುದು.
- ➢ ಕೆಲಸದ ಸಮಯದಲ್ಲಿ ಎಫ್‌ಪಿಎಸ್ ತೆರೆದಿರುವುದು.
- ➢ ಸ್ವೀಕರಿಸಿದ ಮತ್ತು ವಿತರಿಸಿದ ಮಾಸಿಕ ದಾಸ್ತಾನಿನ ಮಾಹಿತಿ ಮತ್ತು ಜಾಗೃತ ಸಮಿತಿಯ ಸದಸ್ಯರ ಹೆಸರುಗಳನ್ನು ಪ್ರದರ್ಶಿಸುವುದು.
- ➢ ಆಹಾರ ಧಾನ್ಯಗಳ ಮತ್ತು ಯಾವುವೇ ಇತರ ಆಹಾರ ಪದಾರ್ಥಗಳ ಗುಣಮಟ್ಟ.
- ➢ ಪ್ರತಿ ಹಕ್ಕು ಹೊಂದಿರುವ ಪ್ರಮಾಣಕ್ಕನುಸಾರವಾಗಿ ವಿತರಿಸಿದ ಆಹಾರ ಧಾನ್ಯಗಳ ಪ್ರಮಾಣ (ಪಿಹೆಚ್‌ಹೆಚ್ ಮತ್ತು ಎಎವೈ ಚೀಟಿದಾರರು).
- ➢ ಗುಣಮಟ್ಟದ ತೂಕ ಮಾನಕ (ತೂಕ) ಸಾಧನಗಳು.
- ➢ ಬಯೋಮೆಟ್ರಿಕ್ ಸಾಧನದ ಕಾರ್ಯನಿರ್ವಹಣೆ.
- ➢ ಸಾಕಷ್ಟು ಪ್ರಮಾಣದಲ್ಲಿ ಗುಣಮಟ್ಟದ ಆಹಾರ ಧಾನ್ಯಗಳನ್ನು ಸ್ವೀಕರಿಸಿದ ಎಲ್ಲಾ ಪಡಿತರ ಚೀಟಿದಾರರು, ಮುಖ್ಯವಾಗಿ ಅತ್ಯಂತ ಬಡವರು, ಹಿರಿಯ ನಾಗರಿಕರು, ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ದುರ್ಬಲ ವ್ಯಕ್ತಿಗಳು/ಕುಟುಂಬಗಳು.
- ➢ ಕಾಲ ಕಾಲಕ್ಕೆ ಪಡಿತರ ಚೀಟಿಗಳಿಗೆ ಸೇರಿಸಿದ ಕುಟುಂಬಗಳ ಎಲ್ಲಾ ಸದಸ್ಯರ ಹೆಸರುಗಳು.
- ➢ ಜಾಗೃತ ಸಮಿತಿ ವರದಿಗಳ ನಿರ್ವಹಣೆ.

- ಅಂಗಡಿಯಲ್ಲಿ ಸ್ವಚ್ಛ ಪರಿಸರದಲ್ಲಿ ಆಹಾರ ಧಾನ್ಯಗಳ ದಾಸ್ತಾನು.
- ಪಡಿತರ ಚೀಟಿಗಳನ್ನು ಪಡೆದುಕೊಂಡಿರುವವರಿಗೆ ಅಥವಾ ಪಡೆದುಕೊಂಡಿರದವರಿಗೆ ವಿಪತ್ತಿನ (ಪ್ರವಾಹ, ಬರ, ಸಾಂಕ್ರಾಮಿಕ ರೋಗ, ಇತ್ಯಾದಿ) ಸಂದರ್ಭದಲ್ಲಿ ಅಗತ್ಯವಿರುವ ಎಲ್ಲಾ ಲಭ್ಯ ಆಹಾರ ಧಾನ್ಯಗಳು.
- ದೂರುಗಳನ್ನು ಬರೆಯಲು ಪಡಿತರ ಚೀಟಿದಾರರನ್ನು ಅಥವಾ ಯಾರೇ ಸಂಬಂಧಪಟ್ಟ ವ್ಯಕ್ತಿಗಳನ್ನು ಪ್ರೋತ್ಸಾಹಿಸುವುದು.
- ಮೌಖಿಕ ದೂರುಗಳನ್ನು ಸ್ವೀಕರಿಸುವುದು.

**ಈ ಮುಂದಿನ ಅಂಶಗಳನ್ನು ಗಮನಿಸುವುದು:**

- ನಕಲಿ ಕಾರ್ಡುಗಳು ಇರುವುದು
- ಹೆಚ್ಚಿನ ಬೆಲೆ ವಿಧಿಸುವುದು
- ಆಹಾರ ಧಾನ್ಯಗಳನ್ನು ಬೇರೆ ಉದ್ದೇಶಕ್ಕಾಗಿ ಸಾಗಿಸುವುದು (ಆಹಾರ ಧಾನ್ಯಗಳನ್ನು ಖಾಸಗಿಯಾಗಿ ಮಾರಾಟ ಮಾಡುವುದು)
- ಸೇವೆಗಳಿಗೆ ಹೆಚ್ಚಿನ ಸಂದಾಯದ ಬೇಡಿಕೆ ಇಡುವುದು.

ಇದಲ್ಲದೆ, ಜಾಗೃತ ಸಮಿತಿಯ ಭಾಗವಾಗಿ, ಗ್ರಾಮ ಪಂಚಾಯಿತಿಯು:

- ಎನ್‌ಎಫ್‌ಎಸ್‌ಎ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು, ಜಾಗೃತ ಸಮಿತಿಯು, ಲಿಖಿತದಲ್ಲಿ ನೋಡಲ್ ಅಧಿಕಾರಿಗೆ, ಡಿಜಿಆರ್‌ಒಗೆ ಅಥವಾ ಎಸ್‌ಎಫ್‌ಸಿಗೆ ತಿಳಿಸುವುದನ್ನು ಖಚಿತಪಡಿಸಿಕೊಳ್ಳಬೇಕು.
- ಅಧಿನಿಯಮದ 29ನೇ ಪ್ರಕರಣದಲ್ಲಿ ಉಲ್ಲೇಖಿಸಿದಂತೆ, ಜಾಗೃತ ಸಮಿತಿಗೆ ಕಂಡುಬಂದ ಯಾವುದೇ ಅಕ್ರಮ ಅಥವಾ ನಿಧಿಗಳ ದುರುಪಯೋಗದ ಬಗ್ಗೆ ಲಿಖಿತದಲ್ಲಿ ನೋಡಲ್ ಅಧಿಕಾರಿಗೆ, ಡಿಜಿಆರ್‌ಒಗೆ ತಿಳಿಸಬೇಕು.

**ಗ್ರಾಮ ಮಟ್ಟದಲ್ಲಿ ಇತರ ಸಮಿತಿಗಳ ಮತ್ತು ಗ್ರಾಮ ಪಂಚಾಯಿತಿಯ ಪಾತ್ರ:**

ಗ್ರಾಮೀಣ ಜನರು, ಸರ್ಕಾರದ ಎಲ್ಲಾ ಕ್ಷೇಮಾಭಿವೃದ್ಧಿ ಯೋಜನೆಗಳಿಂದ ಮತ್ತು ಕಾರ್ಯಕ್ರಮಗಳಿಂದ ಪ್ರಯೋಜನ ಪಡೆಯುತ್ತಿರುವುದನ್ನು ಮತ್ತು ಸುಸ್ಥಿರ ಅಭಿವೃದ್ಧಿಯೆಡೆಗೆ ಸಾಗುತ್ತಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಲು, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹಲವಾರು ಸಾಂಸ್ಥಿಕ ಮೇಲ್ವಿಚಾರಣೆ ಕಾರ್ಯವ್ಯವಸ್ಥೆಗಳಿವೆ. ಗ್ರಾಮ ಪಂಚಾಯಿತಿಯು, ಆರೋಗ್ಯ, ಆಹಾರ ಮತ್ತು ಪೌಷ್ಟಿಕ ಆಹಾರ ಸುರಕ್ಷತೆ ಕುರಿತು ತಮಗೆ ಸಂಬಂಧಪಟ್ಟ ಯೋಜನೆಗಳನ್ನು ಮೇಲ್ವಿಚಾರಣೆ ಮಾಡುವಲ್ಲಿ, ಈ ಸಮಿತಿಗಳಿಗೆ ಸೌಲಭ್ಯ ಕಲ್ಪಿಸುವುದು ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದು ಗ್ರಾಮ ಪಂಚಾಯಿತಿಯ ಹೊಣೆಗಾರಿಕೆಯಾಗಿದೆ.

ಜಾಗೃತ ಸಮಿತಿಗಳು ಮತ್ತು ಸಿಬಿಒಗಳು/ ಸಮುದಾಯಗಳು ಮೌಖಿಕ ಅಥವಾ ಲಿಖಿತ ದೂರುಗಳ ಮೂಲಕ ಮುಂದಿಟ್ಟ ಸಮಸ್ಯೆಗಳನ್ನು ಮತ್ತು ಬೇಡಿಕೆಗಳನ್ನು ಸ್ವೀಕರಿಸಿ, ಠರಾವುಗಳನ್ನು ಅಂಗೀಕರಿಸಿ, ಗ್ರಾಮ ಪಂಚಾಯಿತಿ ಸಭೆಗಳಲ್ಲಿ ಮತ್ತು ಗ್ರಾಮ ಸಭೆಗಳಲ್ಲಿ ಚರ್ಚಿಸಬೇಕು. ಪಂಚಾಯಿತಿಗಳು ತಮ್ಮ ಅಧಿಕಾರ ವ್ಯಾಪ್ತಿಯ ಸಾಮರ್ಥ್ಯದಲ್ಲಿ, ಸಮಸ್ಯೆಗಳನ್ನು ಪರಿಹರಿಸುವುದನ್ನು ಖಚಿತಪಡಿಸುವುದು ಮತ್ತು ಅದು ಅವರ ಅಧಿಕಾರ ಸಾಮರ್ಥ್ಯ ಮೀರಿದ್ದಾಗಿದ್ದರೆ, ಅದರ ಪರಿಹಾರಕ್ಕಾಗಿ ತಾಲ್ಲೂಕು, ಜಿಲ್ಲಾ ಅಧಿಕಾರಿಗಳನ್ನು ಸಂಪರ್ಕಿಸಬೇಕು.

### i. ಬಾಲ ವಿಕಾಸ ಸಮಿತಿ ಮತ್ತು ಗ್ರಾಮ ಪಂಚಾಯಿತಿ

2006ರಲ್ಲಿ, ಕರ್ನಾಟಕದ ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವುದಕ್ಕಾಗಿ ಹಾಗೂ ಸಮುದಾಯ ಮತ್ತು ಐಸಿಡಿಎಸ್ ಕಾರ್ಯನಿರ್ವಾಹಕರ ನಡುವೆ ಸಂವಹನವನ್ನು ಪ್ರೋತ್ಸಾಹಿಸಲು, ಬಾಲ ವಿಕಾಸ ಸಮಿತಿಯನ್ನು ಸ್ಥಾಪಿಸಲಾಯಿತು. ಅಂಗನವಾಡಿ ಕೇಂದ್ರದ ಮಕ್ಕಳ ತಾಯಂದಿರ, ಕಿಶೋರಿ ಬಾಲಕಿಯರ ಮತ್ತು ಅಂಗನವಾಡಿ ಕಾರ್ಯಕರ್ತೆಯರ, ನಿರ್ದಿಷ್ಟ ಅಂಗನವಾಡಿ ಕೇಂದ್ರದ ಬಾಲ ವಿಕಾಸ ಸಮಿತಿಯಲ್ಲಿನ ಆಶಾ ಕಾರ್ಯಕರ್ತೆಯರ ಪ್ರತಿನಿಧಿ ಸಹಿತ ಗ್ರಾಮದ ಪಂಚಾಯತ್ ಸದಸ್ಯರು, ಅಂಗನವಾಡಿ ಹಂತದಲ್ಲಿ ಬಾಲ ವಿಕಾಸ ಸಮಿತಿಯ ಭಾಗವಾಗುತ್ತಾರೆ. ಬಾಲ ವಿಕಾಸ ಸಮಿತಿಯು, ವರ್ಷದಲ್ಲಿ ಕನಿಷ್ಠಪಕ್ಷ ಮೂರು ಸಲ ಸಭೆಗಳನ್ನು ನಡೆಸುವುದು ಕಡ್ಡಾಯವಾಗಿದೆ. ಅಂಗನವಾಡಿ ಕೇಂದ್ರದ ಕಾರ್ಯಕ್ಷಮತೆ, ಪೂರಕ ಆಹಾರ ಕಾರ್ಯಕ್ರಮಗಳ ನಿರ್ವಹಣೆ, ಪ್ರಭಾವ ಮತ್ತು ಗುಣಮಟ್ಟ, ಗುಣಮಟ್ಟ ಪರಿಶೀಲನೆ ಮತ್ತು ಆಹಾರ ಪದಾರ್ಥಗಳ ಪೂರೈಕೆ ಸಂಬಂಧದಲ್ಲಿ ಗುಣಮಟ್ಟದ ಮೇಲ್ವಿಚಾರಣೆಗೆ ಬಾಲ ವಿಕಾಸ ಸಮಿತಿಯು ಜವಾಬ್ದಾರವಾಗಿರುತ್ತದೆ.

ಇದರೊಂದಿಗೆ, ಬಾಲ ವಿಕಾಸ ಸಮಿತಿ ಮತ್ತು ಅಂಗನವಾಡಿ ಕೇಂದ್ರಗಳ ಮುಖಾಂತರ ಗ್ರಾಮ ಪಂಚಾಯಿತಿಯು, ಈ ಮುಂದಿನ ಅಂಶಗಳನ್ನು ಖಚಿತಪಡಿಸಿಕೊಳ್ಳಬಹುದು ಮತ್ತು ಮೇಲ್ವಿಚಾರಣೆ ಮಾಡಬಹುದು:

ಗೈರು ಹಾಜರಾದ ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕೇಂದ್ರಗಳಲ್ಲಿನ ಬಾಲಕಿಯರನ್ನು ಒಳಗೊಂಡು ಕಾಣೆಯಾದ ಮಕ್ಕಳು.

- ಟಿಹೆಚ್‌ಆರ್, ಮೊಟ್ಟೆಗಳು, ಹಾಲಿನ ಪುಡಿ, ಪೌಷ್ಟಿಕ ಆಹಾರ ಪ್ಯಾಕೇಜ್‌ನಂಥ ಹೆಚ್ಚುವರಿ ಪೌಷ್ಟಿಕ ಆಹಾರ.

- ಮೂಲಸೌಕರ್ಯ, ಸ್ವಚ್ಛತೆ, ನೈರ್ಮಲ್ಯ ಮತ್ತು ಬಳಸಲು ಯೋಗ್ಯವಾದ ಮಕ್ಕಳ–ಸ್ನೇಹಿ ಶೌಚಾಲಯಗಳು.
- ನಿಧಿಗಳು – ಬಿಲ್ಲುಗಳು ಮತ್ತು ವೆಚ್ಚ.
- ಮಾಸಿಕ ಆರೋಗ್ಯ ಮತ್ತು ಪೌಷ್ಟಿಕ ಶಿಬಿರಗಳ ಮತ್ತು **ಪೋಷಣ್** ಆಂದೋಲನಗಳು.
- ಪ್ರಸೂತಿ ರಕ್ಷಣೆಯ ಹಕ್ಕುಳ್ಳವರ ಸಂಖ್ಯೆಗೆ ಅನುಸಾರ ನಗದು ವರ್ಗಾವಣೆ.
- ಅಂಗನವಾಡಿ ಕೇಂದ್ರದಲ್ಲಿನ ಹಲವು ರೀತಿಯಲ್ಲಿ ಅಪೌಷ್ಟಿಕತೆಗೊಳಗಾದ, ಮಧ್ಯಮ ಪ್ರಮಾಣದಲ್ಲಿ ಅಪೌಷ್ಟಿಕತೆಗೊಳಗಾದ ಮಕ್ಕಳನ್ನು ಗುರುತಿಸಿ, ತದನುಸಾರವಾಗಿ ಅವರಿಗೆ ಚಿಕಿತ್ಸೆ ನೀಡುವುದು.
- ಪ್ರಸೂತಿ ಕಾಲ ರಕ್ಷಣೆ ಮತ್ತು ಸುರಕ್ಷಿತವಾಗಿ ಆರೋಗ್ಯ ಸಂಸ್ಥೆಗಳಲ್ಲಿ ಹೆರಿಗೆ, ಆರೋಗ್ಯ, ಪೌಷ್ಟಿಕ ಆಹಾರ ಮತ್ತು ಗರ್ಭಧಾರಣೆಯ ಅವಧಿಯಲ್ಲಿ ರಕ್ಷಣೆ.
- ಜನನ ಸಮಯದಲ್ಲಿ ಕಡಿಮೆ ತೂಕ ಇರುವ ಶಿಶುಗಳ ಪಾಲನೆಯೂ ಒಳಗೊಂಡಂತೆ, ನವಜಾತ ಶಿಶುವಿನ ರಕ್ಷಣೆ.
- ಶಿಶುಗಳಿಗೆ ಪ್ರಾರಂಭಿಕ ಹಂತದಲ್ಲಿ ಹಾಲುಣಿಸುವುದು ಮತ್ತು ತಾಯಿಯ ಹಾಲನ್ನೇ ಉಣಿಸುವುದು.
- ಅಂಗನವಾಡಿ ಕೇಂದ್ರದ ಸೌಲಭ್ಯಗಳು ಮಕ್ಕಳ–ಸ್ನೇಹಿಯಾಗಿರಬೇಕು.
- ಸಕಾಲಿಕ ಮತ್ತು ಪೂರ್ತಿ/ಸಂಪೂರ್ಣ ರೋಗಪ್ರತಿರಕ್ಷಣೆ.
- ಸೂಕ್ಷ್ಮ ಪೋಷಕಾಂಶಗಳ (ಮೈಕ್ರೋನ್ಯೂಟ್ರಿಯಂಟ್ಸ್) ಕೊರತೆಗಳ ನಿಯಂತ್ರಣಕ್ಕೆ ಕಾರ್ಯಕ್ರಮಗಳು– ವಿಟಾಮಿನ್ ಎ, ರಕ್ತಹೀನತೆ ಮತ್ತು ಅಯೋಡಿನ್ ಕೊರತೆ, ಅಸ್ವಸ್ಥತೆಗಳು ಮತ್ತು ಸೂಕ್ಷ್ಮ ಪೋಷಕಾಂಶ ಪೂರಕ ಆಹಾರ ಹಾಗೂ ಜಂತುಹುಳು–ಮುಕ್ತಗೊಳಿಸುವುದು.
- ಸಮುದಾಯದಲ್ಲಿ ಮತ್ತು ಸೌಲಭ್ಯ ಹಂತಗಳಲ್ಲಿ ನವಜಾತ ಶಿಶು, ಶಿಶುಗಳ ಮತ್ತು ಬಾಲ್ಯಾವಸ್ಥೆಯಲ್ಲಿ ಕಂಡುಬರುವ ಅನಾರೋಗ್ಯ ಪ್ರಕರಣಗಳ ನಿರ್ವಹಣೆ.
- ಪ್ರೌಢ ವಯಸ್ಕರ ಆರೋಗ್ಯ ಮತ್ತು ಪೌಷ್ಟಿಕತೆ – ಆರೋಗ್ಯ ತಪಾಸಣೆ, ಐಎಫ್ಎ ಪೂರೈಕೆ, ಜಂತುಹುಳು ಮುಕ್ತಗೊಳಿಸುವುದರೊಂದಿಗೆ, ಶಾಲೆಯಲ್ಲಿ ಮತ್ತು ಹೊರಗೆ ಬಾಲಕಿಯರಿಗೆ ಇವು ದೊರಕುವಂತೆ ಮಾಡುವುದು

### ii. ವಿಹೆಚ್ಎಸ್ಎನ್‌ಸಿ ಮತ್ತು ಗ್ರಾಮ ಪಂಚಾಯಿತಿ[11]

ವಿಹೆಚ್ಎಸ್ಎನ್‌ಸಿ ಇದು, ಎನ್‌ಆರ್‌ಹೆಚ್ಎಮ್ ಪರಿಚಯಿಸಿದ ಬಹು ಮುಖ್ಯ ಉಪಕ್ರಮವಾಗಿದ್ದು, ಎಲ್ಲಾ ಹಂತಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸುವ ಒಂದು ಪ್ರಮುಖ ಕಾರ್ಯವ್ಯವಸ್ಥೆಯಾಗಿದೆ, ಇದು ಆರೋಗ್ಯ ಕಾರ್ಯಚಟುವಟಿಕೆಗಳನ್ನು ಬೆಂಬಲಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ, ಆರೋಗ್ಯ ಕಾರ್ಯಕ್ರಮಗಳಿಗೆ ಯೋಜನಾಧಾರಿತ ಕ್ರಮದ ಮೇಲ್ವಿಚಾರಣೆ ಮತ್ತು ಯೋಜನೆ ಸಿದ್ಧಪಡಿಸುವಲ್ಲಿ ಸಹ ಫಲಾನುಭವಿಗಳ ಪಾಲ್ಗೊಳ್ಳುವಿಕೆಯನ್ನು ಒಳಗೊಂಡಿರುತ್ತದೆ.

ವಿಹೆಚ್ಎಸ್ಎನ್‌ಸಿಯನ್ನು, ಕಂದಾಯ ಗ್ರಾಮದ ಹಂತದಲ್ಲಿ ರೂಪಿಸಬೇಕು. ವಿಹೆಚ್ಎಸ್ಎನ್‌ಸಿ ಪ್ರಕಾರ್ಯಗಳು ಪಂಚಾಯತ್ ರಾಜ್ ಸಂಸ್ಥೆಗಳ ಪರಿಧಿಯಡಿ ಬರುತ್ತವೆ.

**ವಿಹೆಚ್ಎಸ್ಎನ್‌ಸಿಯ ಸಂಯೋಜನೆ:**

ಗ್ರಾಮ ಪಂಚಾಯಿತಿಯ ಉಪ–ಸಮಿತಿಯಾಗಿ, ವಿಹೆಚ್ಎಸ್ಎನ್‌ಸಿ ಕನಿಷ್ಠ 15 ಸದಸ್ಯರನ್ನು ಒಳಗೊಂಡಿರುತ್ತದೆ. ಅದು ಹೆಚ್ಚು ಸದಸ್ಯರನ್ನು ಒಳಗೊಳ್ಳಬಹುದಾಗಿದೆ. ಕನಿಷ್ಠ ಪಕ್ಷ ಶೇಕಡ 50ರಷ್ಟು ಮಹಿಳೆಯರು, ಅನುಸೂಚಿತ ಜಾತಿ, ಅನುಸೂಚಿತ ಪಂಗಡದವರು ಮತ್ತು ಅಲ್ಪಸಂಖ್ಯಾತರು ಗ್ರಾಮದಲ್ಲಿ ಅವರ ಜನಸಂಖ್ಯೆಗನುಗುಣವಾಗಿ ಗಣನೀಯ ಪ್ರಾತಿನಿಧ್ಯ ಹೊಂದಿರಬೇಕು.

**ವಿಹೆಚ್ಎಸ್ಎನ್‌ಸಿಯ ರಚನೆ**

ಚುನಾಯಿತ ಗ್ರಾಮ ಪಂಚಾಯಿತಿ ಸದಸ್ಯರ ಸಂಖ್ಯೆಯಲ್ಲಿ, ಮಹಿಳೆಯರಿಗೆ ಆದ್ಯತೆ ನೀಡುವುದಕ್ಕಾಗಿ ಸದಸ್ಯರ ಸಂಖ್ಯೆಯು, ಒಟ್ಟು ಸದಸ್ಯರ ಸಂಖ್ಯೆಯ ಮೂರನೇ ಒಂದರಷ್ಟಕ್ಕೆ ಸೀಮಿತವಾಗಿರತಕ್ಕದ್ದು. ಗ್ರಾಮದ ಎಲ್ಲಾ ಆಶಾ ಕಾರ್ಯಕರ್ತೆಯರು ಸಮಿತಿಯಲ್ಲಿರಬೇಕು. ಎಎನ್ಎಮ್, ಎಡಬ್ಲ್ಯುಡಬ್ಲ್ಯು ಮತ್ತು ಶಾಲಾ ಶಿಕ್ಷಕರನ್ನು, ಅವರು ಆ ನಿರ್ದಿಷ್ಟ ಗ್ರಾಮದ ನಿವಾಸಿಗಳಾಗಿದ್ದರೆ ಮಾತ್ರ ನಿಯತ ಸದಸ್ಯರನ್ನಾಗಿ ಸೇರಿಸಿಕೊಳ್ಳಬೇಕು. ಇಲ್ಲದಿದ್ದರೆ, ಅವರು ವಿಶೇಷ ಆಹ್ವಾನಿತರಾಗಲು ಅರ್ಹರಾಗಿರಬೇಕು. ಸ್ವಯಂಸೇವಕರು/ಸಾರ್ವಜನಿಕ ಆರೋಗ್ಯ ಮತ್ತು ಇಂಜಿನಿಯರಿಂಗ್ ಇಲಾಖೆಯ (ಪಿಹೆಚ್ಇಡಿ) ಹ್ಯಾಂಡ್ ಪಂಪ್ ಮೆಕ್ಯಾನಿಕ್‌ರಂಥ ಇತರ ಸರ್ಕಾರಿ ಇಲಾಖೆಗಳ ಗ್ರಾಮ ಮಟ್ಟದ ಕೆಲಸಗಾರರು ಅಥವಾ ಎಮ್‌ಜಿಎನ್‌ಆರ್‌ಇಜಿಎ ಕ್ಷೇತ್ರ ಸಮನ್ವಯಕಾರರು ಗ್ರಾಮದ ನಿವಾಸಿಗಳಾಗಿದ್ದರೆ, ಅವರನ್ನು ಸಹ ಪರಿಗಣಿಸಬೇಕು.

ಸ್ವ–ಸಹಾಯ ಗುಂಪುಗಳು, ಅರಣ್ಯ ನಿರ್ವಹಣೆ ಸಮಿತಿಗಳು, ಯುವ ಸಮಿತಿಗಳು, ಇತ್ಯಾದಿಯಂಥ ಅಸ್ತಿತ್ವದಲ್ಲಿರುವ ಸಮುದಾಯ ಆಧಾರಿತ ಸಂಘಟನೆಗಳ ಪ್ರತಿನಿಧಿಗಳನ್ನು, ವಿಹೆಚ್ಎಸ್ಎನ್‌ಸಿಯಲ್ಲಿ ಸೇರಿಸಿಕೊಳ್ಳಬೇಕು. ಶಾಲಾ ಶಿಕ್ಷಣ, ನೀರು ಮತ್ತು ನೈರ್ಮಲ್ಯ ಅಥವಾ ಪೌಷ್ಟಿಕ ಆಹಾರಕ್ಕೆ ಸಂಬಂಧಿ ಪ್ರತ್ಯೇಕ ಸಮಿತಿಗಳಿದ್ದರೆ, ಈ ಸಮಿತಿಗಳ ಮತ್ತು ವಿಹೆಚ್ಎಸ್ಎನ್‌ಸಿ ನಡುವೆ ಸಮನ್ವಯ ಸಾಧಿಸುವುದು

[11] ಭಾರತ ಸರ್ಕಾರದ ರಾಷ್ಟ್ರೀಯ ಆರೋಗ್ಯ ಅಭಿಯಾನವು ಗ್ರಾಮ ಆರೋಗ್ಯ ನೈರ್ಮಲ್ಯ ಮತ್ತು ಪೌಷ್ಟಿಕ ಆಹಾರ ಸಮಿತಿಯ ಸದಸ್ಯರ ಕೈಪಿಡಿ.

ಮೊದಲ ಪ್ರಯತ್ನವಾಗಿರಬೇಕು. ಸಾರ್ವಜನಿಕ ಸೇವೆಗಳನ್ನು ಬಳಸಿಕೊಳ್ಳುತ್ತಿರುವ ಗರ್ಭಿಣಿ ಮಹಿಳೆಯರು, ಹಾಲುಣಿಸುವ ತಾಯಂದಿರು, 3 ವರ್ಷ ವಯಸ್ಸಿನವರೆಗಿನ ಮಕ್ಕಳ ತಾಯಂದಿರು ಮತ್ತು ದೀರ್ಘ ಕಾಲಿಕ ಖಾಯಿಲೆಗಳಿಂದ ಬಳಲುತ್ತಿರುವ ರೋಗಿಗಳು ಸಹ ವಿಹೆಚ್‌ಎಸ್‌ಎನ್‌ಸಿಯಲ್ಲಿರಬೇಕು.

**ವಿಹೆಚ್‌ಎಸ್‌ಎನ್‌ಸಿಯ ಅಧ್ಯಕ್ಷರು, ಗ್ರಾಮದ ನಿವಾಸಿಯಾಗಿರುವ, ಆದ್ಯತೆ ಪ್ರಕಾರ, ಎಸ್‌ಸಿ/ಎಸ್‌ಟಿ ಸಮುದಾಯದಿಂದ ಆಯ್ಕೆಯಾಗಿರುವ ಗ್ರಾಮ ಪಂಚಾಯಿತಿಯ (ಸರ್‌ಪಂಚ್) ಚುನಾಯಿತ ಮಹಿಳಾ ಸದಸ್ಯೆಯಾಗಿರಬೇಕು. ಆಶಾ ಕಾರ್ಯಕರ್ತೆಯು ವಿಹೆಚ್‌ಎಸ್‌ಎನ್‌ಸಿಯ ಸದಸ್ಯ–ಕಾರ್ಯದರ್ಶಿ ಮತ್ತು ಸಂಚಾಲಕಿಯಾಗಿರುತ್ತಾಳೆ. ವಿಹೆಚ್‌ಎಸ್‌ಎನ್‌ಸಿಯ ಕಾರ್ಯಚಟುವಟಿಕೆಗಳು:**

ವಿಹೆಚ್‌ಎಸ್‌ಎನ್‌ಸಿಯನ್ನು, ಪಂಚಾಯಿತಿಯ ಉಪ–ಸಮಿತಿ ಎಂಬುದಾಗಿ ಗುರುತಿಸಲಾಗಿದ್ದು, ಅದು, ನ್ಯೂನ ಪೌಷ್ಟಿಕತೆಗೆ ಕಾರಣವಾದ ನಿರ್ಣಾಯಕ ಅಡ್ಡಿಗಳನ್ನು ಪರಿಹರಿಸಲು ಇರುವ ರಾಷ್ಟ್ರೀಯ ಆರೋಗ್ಯ ಅಭಿಯಾನ, ಐಸಿಡಿಎಸ್ ಮತ್ತು ಸ್ವಚ್ಛ ಭಾರತ್ ನಡುವೆ ಕ್ಷೇತ್ರ ಮಟ್ಟದಲ್ಲಿ ಸಮನ್ವಯ ವೇದಿಕೆಯನ್ನು ಒದಗಿಸುತ್ತದೆ. ವಿಹೆಚ್‌ಎಸ್‌ಎನ್‌ಸಿ ಇದು ಪೌಷ್ಟಿಕ ಆಹಾರಕ್ಕೆ ಸಂಬಂಧಿಸಿದಂತೆ ಸಮನ್ವಯ ಸಾಧಿಸುವುದಕ್ಕೆ ಜವಾಬ್ದಾರಿಯಾಗಿರುತ್ತದೆ.

**ವಿಹೆಚ್‌ಎಸ್‌ಎನ್‌ಸಿ ಒಳಗೊಳ್ಳುವ ವಿಷಯಗಳು:–** ಆರೋಗ್ಯ, ನೈರ್ಮಲ್ಯ, ಕುಡಿಯುವ ನೀರು ಮತ್ತು ಪೌಷ್ಟಿಕ ಆಹಾರ ಹಾಗೂ ಶಿಕ್ಷಣ ಇವುಗಳು ನಿರ್ದಿಷ್ಟವಾಗಿ ಎಮ್‌ಡಿಎಮ್‌ಎಸ್, ಐಸಿಡಿಎಸ್‌ನಂಥ ಕಾರ್ಯಕ್ರಮಗಳ ಮತ್ತು ಸಂಬಂಧಪಟ್ಟ ಇಲಾಖೆಗಳು ಅನುಷ್ಠಾನಗೊಳಿಸುವಂಥ ಇತರ ಕಾರ್ಯಕ್ರಮಗಳ ವ್ಯಾಪ್ತಿಗೆ ಬರುತ್ತವೆ.

ತದನುಸಾರವಾಗಿ, ವಿಹೆಚ್‌ಎಸ್‌ಎನ್‌ಸಿ ಇದು, ಕುಡಿಯುವ ನೀರು, ನೈರ್ಮಲ್ಯ, ಮಹಿಳಾ ಸಾಕ್ಷರತೆ, ಪೌಷ್ಟಿಕ ಆಹಾರ ಹಾಗೂ ಮಹಿಳಾ ಮತ್ತು ಮಕ್ಕಳ ಆರೋಗ್ಯದಂಥ ಆರೋಗ್ಯ ಸಂಬಂಧಿತ ಸಾಕಷ್ಟು ನಿರ್ಣಾಯಕ ಅಂಶಗಳನ್ನು ಕುರಿತು ಸಂಯೋಜಿತ ಕ್ರಮವನ್ನು ಸುನಿಶ್ಚಿತಗೊಳಿಸಲು ಅವರ ಸೇವೆಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಸೇವೆಯನ್ನು ಒದಗಿಸುವ ಪಾತ್ರವನ್ನು ವಹಿಸುತ್ತದೆ.

ವಿಹೆಚ್‌ಎಸ್‌ಎನ್‌ಸಿಗೆ, ಎನ್‌ಹೆಚ್‌ಎಮ್ ಮತ್ತು ಐಸಿಡಿಎಸ್/ಎನ್‌ಎನ್‌ಎಮ್ ಅಡಿಯಲ್ಲಿ ಒದಗಿಸಲಾಗುವ, ಹೊಂದಾಣಿಕೆ ಮಾಡಿಕೊಳ್ಳಬಹುದಾದ ನಿಧಿಯನ್ನು ಸ್ಥಳೀಯ ನಾವಿನ್ಯತೆಗೆ ಮತ್ತು ನ್ಯೂನ ಪೌಷ್ಟಿಕತೆಯಿಂದ ಬಳಲುವ ಮಕ್ಕಳ ನೈಜ ಹಾಗೂ ಸಕಾಲಿಕ ಪತ್ತೆ ಕಾರ್ಯ, ಸಮಾಲೋಚನೆ ಮತ್ತು ಸಮುದಾಯಾಧಾರಿತ ಮೇಲ್ವಿಚಾರಣೆಗೆ ಸಂಬಂಧಿಸಿದ ಕೊರತೆಗಳನ್ನು ತುಂಬುವ ಕಾರ್ಯಗಳಿಗೆ ಬಳಸಬಹುದಾಗಿದೆ.

ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಎದುರಿಸಲಾಗುವ ಸವಾಲುಗಳನ್ನು ಕುರಿತು ಮೇಲ್ವಿಚಾರಣೆ ಮಾಡಲು ಮತ್ತು ಕ್ರಮ ತೆಗೆದುಕೊಳ್ಳಲು, ವಿಹೆಚ್‌ಎಸ್‌ಎನ್‌ಸಿಗೆ ಸಾಧ್ಯವಾಗುವಂತೆ ಮಾಡಲು, ವಿವಿಧ ಅಭಿವೃದ್ಧಿ ಕಾರ್ಯಗಳ ಬಗ್ಗೆ ವಿಹೆಚ್‌ಎಸ್‌ಎನ್‌ಸಿ ಪ್ರತಿನಿಧಿಗಳು ಮಾಹಿತಿ ನೀಡುತ್ತಾರೆ. ಇದು ಆರೋಗ್ಯ ಸಂಬಂಧಿತ ಸಾಮಾಜಿಕ ನಿರ್ಣಾಯಕ ಅಂಶಗಳನ್ನು ಸುಧಾರಿಸುವ ಕ್ರಮವನ್ನು ಖಾತರಿಪಡಿಸುತ್ತದೆ. ಅಲ್ಲದೆ ಇದು, ಸಾಮಾಜಿಕ ವಲಯದ ಕಾರ್ಯಕ್ರಮಗಳನ್ನು ನೀಡುವಲ್ಲಿ ಸ್ಥಳೀಯ ಮಟ್ಟದಲ್ಲಿ ಉತ್ತರದಾಯಿತ್ವವನ್ನು ಸಹ ಖಾತರಿಪಡಿಸಲು ವಿಹೆಚ್‌ಎಸ್‌ಎನ್‌ಸಿಗೆ ಅವಕಾಶ ಮಾಡಿಕೊಡುತ್ತದೆ.

ವಿಹೆಚ್‌ಎಸ್‌ಎನ್‌ಸಿ ಕಾರ್ಯನಿರ್ವಹಣೆಯಲ್ಲಿ ಸೇರಿರುವ ಅತ್ಯಾವಶ್ಯಕ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಕೆಲವು ಕಾರ್ಯಚಟುವಟಿಕೆಗಳು ಈ ಮುಂದಿನಂತಿವೆ:–

- ✧ **ಮಾಸಿಕ ಸಭೆಗಳು:** ವಿಹೆಚ್‌ಎಸ್‌ಎನ್‌ಸಿ ತನ್ನ ಸಭೆಗಳ ಮೂಲಕ ಕಾರ್ಯನಿರ್ವಹಿಸುತ್ತದೆ. ಆರೋಗ್ಯ ಸಂಬಂಧಿ ವಿಹೆಚ್‌ಎಸ್‌ಎನ್‌ಸಿ ಯೋಜನೆಗಳ ಬಗ್ಗೆ ತನ್ನ ಸಭೆಗಳಲ್ಲಿ ಪರಿಶೀಲಿಸಿ ಸಿದ್ಧಪಡಿಸುತ್ತದೆ. ಸಮಸ್ಯೆಗಳನ್ನು ಗುರುತಿಸಿ, ಚರ್ಚಿಸಲು ಮತ್ತು ಅವುಗಳನ್ನು ಶಮನ ಮಾಡುವ ಮಾರ್ಗೋಪಾಯಗಳಿಗಾಗಿ ಯೋಜನೆಗಳನ್ನು ಸಿದ್ಧಪಡಿಸುವ ಪ್ರಾರಂಭಿಕ ಕ್ರಮಕ್ಕೆ ಇದು ವೇದಿಕೆಯಾಗಿದೆ.
- ✧ **ಬಿಡುಗಡೆಯಾದ ಗ್ರಾಮ ಆರೋಗ್ಯ ನಿಧಿ ನಿರ್ವಹಣೆ:** ವಾರ್ಷಿಕವಾಗಿ ಬಿಡುಗಡೆ ಮಾಡಿದ 10,000/–ಗಳ ನಿಧಿಯನ್ನು ವಿಹೆಚ್‌ಎಸ್‌ಎನ್‌ಸಿಗೆ ನೀಡಲಾಗುತ್ತದೆ. ಈ ನಿಧಿಯ ನಿರ್ವಹಣೆಯು, ಸಂಪೂರ್ಣವಾಗಿ ವಿಹೆಚ್‌ಎಸ್‌ಎನ್‌ಸಿ ಕೈಯಲ್ಲಿರುತ್ತದೆ. ಈ ನಿಧಿಗಳನ್ನು ಅದು, ಗ್ರಾಮದ ಆರೋಗ್ಯ ಸುಧಾರಣೆಯ ಗುರಿ ಹೊಂದಿರುವ ಯಾವುದೇ ಉದ್ದೇಶಕ್ಕಾಗಿ ಬಳಸಿಕೊಳ್ಳಬಹುದಾಗಿದೆ. ಪೌಷ್ಟಿಕ ಆಹಾರ, ಶಿಕ್ಷಣ, ನೈರ್ಮಲ್ಯ, ಪರಿಸರ ಸಂರಕ್ಷಣೆ ಮತ್ತು ಸಾರ್ವಜನಿಕ ಆರೋಗ್ಯ ಕ್ರಮಗಳು ಈ ನಿಧಿಯನ್ನು ಬಳಸಬಹುದಾದ ಪ್ರಮುಖ ಕ್ಷೇತ್ರಗಳಾಗಿವೆ. ನಿಧಿಗಳ ಬಳಕೆ ಕುರಿತ ನಿರ್ಣಯಗಳನ್ನು ವಿಹೆಚ್‌ಎಸ್‌ಎನ್‌ಸಿಯ ಸಭೆಗಳಲ್ಲಿ ತೆಗೆದುಕೊಳ್ಳಬೇಕು.
- ✧ **ಬಿಡುಗಡೆಯಾದ ಗ್ರಾಮ ನಿಧಿಯ ಲೆಕ್ಕಪತ್ರ ಇಡುವುದು:** *ಗ್ರಾಮ ಸಭೆಯ* ದ್ವೈವಾರ್ಷಿಕ ಸಭೆಯಲ್ಲಿ ಮತ್ತು *ಗ್ರಾಮ ಪಂಚಾಯಿತಿಯ* ಯೋಜನೆ ಮತ್ತು ಬಜೆಟ್ ಕುರಿತು ಚರ್ಚಿಸುವ *ಗ್ರಾಮ ಪಂಚಾಯಿತಿಯ* ತ್ರೈಮಾಸಿಕ ಸಭೆಯಲ್ಲಿ, ತನ್ನ ಕಾರ್ಯಚಟುವಟಿಕೆಗಳ ಮತ್ತು ವೆಚ್ಚಗಳ ಲೆಕ್ಕಪತ್ರವನ್ನು ವಿಹೆಚ್‌ಎಸ್‌ಎನ್‌ಸಿ ಮಂಡಿಸಬೇಕು. ವಿಹೆಚ್‌ಎಸ್‌ಎನ್‌ಸಿ ಸಿದ್ಧಪಡಿಸಿದ ವಾರ್ಷಿಕ ವೆಚ್ಚ ವಿವರಪಟ್ಟಿಯನ್ನು, ಎನ್‌ಆರ್‌ಹೆಚ್‌ಎಮ್‌ನ ಬ್ಲಾಕ್ ಮಟ್ಟದ ಕಾರ್ಯಕರ್ತರಿಗೆ ಗ್ರಾಮ ಪಂಚಾಯಿತಿಯು ಕಳುಹಿಸುವುದು.

**ದಾಖಲೆಗಳ ನಿರ್ವಹಣೆ:**

ದಾಖಲೆಗಳ ನಿರ್ವಹಣೆಯು, ವಿಹೆಚ್‌ಎಸ್‌ಎನ್‌ಸಿಯನ್ನು ಹೆಚ್ಚು ಸುಸಂಘಟಿತವಾಗಿ ಮತ್ತು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಲು ಶಕ್ತವನ್ನಾಗಿಸುತ್ತದೆ. ಹಾಜರಾತಿ ಸಹಿಗಳೊಂದಿಗೆ ಸಭೆಗಳ ದಾಖಲೆ

ನಗದು ಪುಸ್ತಕ, ಬ್ಯಾಂಕ್ ಪಾಸ್ ಬುಕ್, ವಿಹೆಚ್ಎಸ್ಎನ್‌ಸಿ ವೆಚ್ಚದ ವಿವರಪಟ್ಟಿ ಮತ್ತು ಇತರ ರಿಜಿಸ್ಟರ್‌ಗಳನ್ನು ವಿಹೆಚ್ಎಸ್ಎನ್‌ಸಿ ನಿರ್ವಹಿಸಬೇಕಾಗುತ್ತದೆ.

**ಅತ್ಯಾವಶ್ಯಕ ಸಾರ್ವಜನಿಕ ಸೇವೆಗಳನ್ನು ಪಡೆಯುವುದರ ಮೇಲ್ವಿಚಾರಣೆ ಮಾಡುವುದು ಮತ್ತು ಸೌಲಭ್ಯ ಕಲ್ಪಿಸುವುದು:**

- ✓ ಆರೋಗ್ಯ ರಿಜಿಸ್ಟರನ್ನು ಬಳಸಿ, ವಿವಿಧ ಸೇವೆಗಳನ್ನು ಪಡೆಯುವುದರಿಂದ ಹೊರಗುಳಿದವರನ್ನು, ವಿಹೆಚ್ಎಸ್ಎನ್‌ಸಿ ಸುಲಭವಾಗಿ ಗುರುತಿಸಬಹುದು.
- ✓ ಗ್ರಾಮದಲ್ಲಿ, ಸಾರ್ವಜನಿಕ ಸೇವೆಯ ಸ್ಥಿತಿಯನ್ನು ವಿಶ್ಲೇಷಿಸಲು, ಸಾರ್ವಜನಿಕ ಸೇವೆಯ ಮೇಲ್ವಿಚಾರಣೆ ಸಾಧನವನ್ನು ಬಳಸಿಕೊಂಡು, ಹಿಂದಿನ ತಿಂಗಳಲ್ಲಿ ಮುಖ್ಯ ಸೇವೆಗಳು ಲಭ್ಯವಾಗಿದ್ದವೇ ಮತ್ತು ಗ್ರಾಮದ ಕ್ಷೇಮಾಭಿವೃದ್ಧಿಗೆ ಕೆಲವು ನಿರ್ಣಾಯಕ ಸಂಗತಿಗಳ ಸ್ಥಿತಿಗತಿ ಹೇಗಿವೆ ಮತ್ತು ಸೂಕ್ತ ಕ್ರಮಕ್ಕಾಗಿ ಯೋಜನೆ ಇರುವುದೇ ಎಂಬುದನ್ನು ವಿಶ್ಲೇಷಿಸಲು ಸಹಾಯಕವಾಗುತ್ತದೆ.

**ಆರೋಗ್ಯ ವೃದ್ಧಿಗಾಗಿ ಸ್ಥಳೀಯ ಸಾಮೂಹಿಕ ಕ್ರಮವನ್ನು ವ್ಯವಸ್ಥೆಗೊಳಿಸುವುದು:**

- ✓ ವಿಹೆಚ್ಎಸ್ಎನ್‌ಸಿ, ಪ್ರೇರಣಾದಾಯಕ ಗ್ರಾಮ ಸಂಘಟನೆಯಾಗಿ ಸೇವೆ ಸಲ್ಲಿಸುತ್ತದೆ ಮತ್ತು ಆರೋಗ್ಯ ಸಂಬಂಧಿತ ಸಾಮೂಹಿಕ ಕ್ರಮಕ್ಕಾಗಿ ಸಮುದಾಯವನ್ನು ಒಟ್ಟುಗೂಡಿಸುತ್ತದೆ.
- ✓ ಸಮುದಾಯವನ್ನು ಸಜ್ಜುಗೊಳಿಸುವುದಕ್ಕಾಗಿ, ಸ್ವಯಂಸೇವೆಯನ್ನು ಪ್ರೇರೇಪಿಸಲು ಮತ್ತು ಸ್ವಚ್ಛತಾ ಕಾರ್ಯಗಳನ್ನು ಆಯೋಜಿಸಲು, ಗ್ರಾಮ ನೈರ್ಮಲ್ಯ ಸುಧಾರಿಸಲು ಅಥವಾ ರೋಗವಾಹಕಗಳ (ವೆಕ್ಟರ್) ನಿಯಂತ್ರಣಕ್ಕಾಗಿ ಮಾಡುವ ಸಂಯೋಜಿತ ಪ್ರಯತ್ನಗಳಲ್ಲಿ ಅವರ ಸೇವೆಯನ್ನು ಬಳಸಿಕೊಂಡು ಇದನ್ನು ಸಾಧಿಸಬಹುದು.

**ಗ್ರಾಮದಲ್ಲಿ ಸೇವೆ ಒದಗಿಸುವುದಕ್ಕಾಗಿ ಸೌಲಭ್ಯ ಕಲ್ಪಿಸುವುದು:**

- ✓ ವಿಹೆಚ್ಎನ್‌ಡಿ ಆಯೋಜಿಸುವುದು ಮತ್ತು ರೋಗ ಪ್ರತಿರಕ್ಷಣೆ ಉಪವೇಶನಗಳನ್ನು ಆಯೋಜಿಸಲು ಬೆಂಬಲ ನೀಡುವುದು.
- ✓ ವಿಹೆಚ್ಎಸ್ಎನ್‌ಸಿ ಸದಸ್ಯರು, ಗರ್ಭಿಣಿ ಮಹಿಳೆಯರ ಮತ್ತು ಮಕ್ಕಳ, ನಿರ್ದಿಷ್ಟವಾಗಿ ದುರ್ಬಲ ವರ್ಗಗಳ ಕುಟುಂಬಗಳನ್ನು ಪ್ರೋತ್ಸಾಹಿಸಲು ಸೌಲಭ್ಯ ಕಲ್ಪಿಸಬೇಕು, ವಿಹೆಚ್ಎನ್‌ಡಿ ಆಯೋಜಿಸುವಲ್ಲಿ ಎಎನ್ಎಮ್, ಎಡಬ್ಲ್ಯುಡಬ್ಲ್ಯು ಮತ್ತು ಆಶಾ ಸಂಘಟನೆ ಬೆಂಬಲಕ್ಕೆ ಸೌಲಭ್ಯ ಕಲ್ಪಿಸಬೇಕು.
- ✓ ಸೇವಾ ಕಾರ್ಯದಲ್ಲಿ ನಿರತರಾದ ಕಾರ್ಯಕರ್ತರಿಗೆ ಮತ್ತು ಸಮುದಾಯ ಸೇವೆಯನ್ನು ಒದಗಿಸುವವರಿಗೆ ಅವರ ಸಮಸ್ಯೆಗಳನ್ನು ಕುರಿತು ಕ್ರಮಬದ್ಧವಾಗಿ ಯೋಜಿಸಲು ಮತ್ತು ಅವರ ಸಮಸ್ಯೆಗಳಿಂದ ಹೊರಬರಲು ನೆರವು ನೀಡಲು ವಿಹೆಚ್ಎಸ್ಎನ್‌ಸಿ ಒಂದು ಮಾಧ್ಯಮವಾಗಿ ಕಾರ್ಯನಿರ್ವಹಿಸಬೇಕು.
- ✓ ಅಂಗನವಾಡಿ ಕೇಂದ್ರದಲ್ಲಿ ಅಥವಾ ಉಪ–ಕೇಂದ್ರದಲ್ಲಿ ಅಥವಾ ಶಾಲೆಯಲ್ಲಿ ಇಲ್ಲದಿರುವ ಪ್ರಮುಖ ಸೌಕರ್ಯಗಳನ್ನು ಒದಗಿಸುವಲ್ಲಿ ನೆರವು ನೀಡುವುದು. ಇದನ್ನು ಬಳಕೆದಾರ ಮತ್ತು ಸೇವೆಯನ್ನು ಒದಗಿಸುವವರಿಬ್ಬರಿಗೆ ಹೆಚ್ಚು ಅನುಕೂಲಕರ ಮತ್ತು ಆರೋಗ್ಯಕರವನ್ನಾಗಿಸಲು, ಈ ಸೌಕರ್ಯಗಳನ್ನು ಒದಗಿಸಲು ವಿಹೆಚ್ಎಸ್ಎನ್‌ಸಿ ನೆರವು ನೀಡಬಹುದು.
- ✓ ಸಮುದಾಯದಿಂದ ಪಡೆದ ಮಾಹಿತಿಯಿಂದ ಸೇವೆಗಳಲ್ಲಿನ ಕೊರತೆಗಳ ಬಗ್ಗೆ ಮತ್ತು ಸೇವೆಯನ್ನು ಒದಗಿಸುವವರಿಂದ ಪಡೆದ ಮಾಹಿತಿಯಿಂದ ಕಾರ್ಯಸಾಧ್ಯವಾದ ಕೊರತೆಗಳನ್ನು ತಿಳಿದುಕೊಂಡು, ಮಾತುಕತೆ ಹಾಗೂ ಕ್ರಮಕ್ಕಾಗಿ ವೇದಿಕೆಯಾಗಿ ಕಾರ್ಯನಿರ್ವಹಿಸುವುದು.
- ✓ ಮರಣದ ಕಾರಣ ಮತ್ತು ಅಂಥ ಕಾರಣಗಳ ಬಗ್ಗೆ ನೀಡುವ ಸೂಕ್ತ ಗುಣಮಟ್ಟದ ವರದಿಯು, ಗ್ರಾಮ ಯೋಜನೆಗೆ ಆಧಾರವನ್ನು ರೂಪಿಸುವ ಸಂಭವವಿರುವುದರಿಂದ, ಈ ಕುರಿತು ವಿಹೆಚ್ಎಸ್ಎನ್‌ಸಿ ಗಮನ ಹರಿಸಬೇಕು.

**ಆರೋಗ್ಯ ರಕ್ಷಣೆಗಾಗಿ ಸಮುದಾಯದಿಂದ ಮೇಲ್ವಿಚಾರಣೆಗೆ ಸೌಲಭ್ಯ ಕಲ್ಪಿಸುವುದು:**

- ✓ ಪ್ರಾಥಮಿಕ ಮತ್ತು ದ್ವಿತೀಯ ಹಂತದ ಆರೋಗ್ಯ ಪಾಲನೆ ಸೌಲಭ್ಯಗಳಲ್ಲಿ ಆರೋಗ್ಯ ಪಾಲನೆ ಸೇವೆಗಳ ಮೇಲ್ವಿಚಾರಣೆ.
- ✓ ಸಮುದಾಯ ಮತ್ತು ಪ್ರಾಧಿಕಾರಗಳ ನಡುವೆ ಮಾತುಕತೆಗೆ ವೇದಿಕೆಯಾಗಿರುವ ಹಾಗೂ ಕುಂದುಕೊರತೆ ಪರಿಹಾರದ ಕಾರ್ಯಕ್ಕೆ ಸಹ ವೇದಿಕೆಯಾಗಿರುವ **ಜನ ಸಂವಾದಗಳನ್ನು** (ಸಾರ್ವಜನಿಕ ವಿಚಾರಣೆಗಳನ್ನು) ಆಯೋಜಿಸುವುದು.
- ✓ **ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ**ಯಂಥ ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ಖಾಸಗಿ ವಲಯದ ಸಹಭಾಗಿತ್ವ ಹಾಗೂ ಅವರ ಸಮಸ್ಯೆಗಳ ಕಡೆಗೆ ಗಮನ ಸೆಳೆಯುವುದು.

**ಗ್ರಾಮ ಆರೋಗ್ಯ ಯೋಜನೆ:**

- ✓ ಗ್ರಾಮ ಆರೋಗ್ಯ ಕ್ರಿಯಾ ಯೋಜನೆಯು ನಿರಂತರ ಪ್ರಕ್ರಿಯೆಯಾಗಿದ್ದು, ಅದನ್ನು ಪ್ರತಿ ಮಾಸಿಕವಾಗಿ ವಿಹೆಚ್ಎಸ್ಎನ್‌ಸಿ ಸಭೆಗಳಲ್ಲಿ ಪರಿಶೀಲಿಸಬೇಕು. ಈ ಪ್ರಕ್ರಿಯೆಯು ಕೊರತೆಗಳ ಬಗ್ಗೆ ಚರ್ಚೆ ನಡೆಸಿ, ನಿರ್ಣಯ ಕೈಗೊಳ್ಳುವುದನ್ನು, ಸಾಮೂಹಿಕ ಕ್ರಮಗಳನ್ನು ಮತ್ತು ಹೊಣೆಗಾರರಾದ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ.

- ✓ ಗ್ರಾಮ ಯೋಜನೆಯನ್ನು ಅಭಿವೃದ್ಧಿಪಡಿಸಲು ಇರುವ ಎರಡನೇ ಕಾರ್ಯತಂತ್ರವೆಂದರೆ – ಆರೋಗ್ಯ ಪಾಲನೆ ಆದ್ಯತೆಗಳನ್ನು ಗುರುತಿಸುವುದು ಮತ್ತು ವಿವಿಧ ಹಂತಗಳಲ್ಲಿ, ಎಂದರೆ: ಸಮುದಾಯ ಹಂತದಲ್ಲಿ ಆರೋಗ್ಯ ಶಿಕ್ಷಣ ಕ್ರಮ ಮತ್ತು ಆರೋಗ್ಯ ವ್ಯವಸ್ಥೆಗಳ ಹಂತದಲ್ಲಿ, ಸರ್ಕಾರದಿಂದ ಕ್ರಮ ಕೈಗೊಳ್ಳುವುದಕ್ಕಾಗಿ ಅಥವಾ ಸೇವೆಗಳಿಗಾಗಿ ಕೋರುವುದು.

## iii. ಎಸ್‌ಡಿಎಮ್‌ಸಿ ಮತ್ತು ಗ್ರಾಮ ಪಂಚಾಯಿತಿ

ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಅಧಿನಿಯಮ, 2009ರ (ಆರ್‌ಟಿಇ ಅಧಿನಿಯಮ) 21ನೇ ಪ್ರಕರಣವು, ಕನಿಷ್ಠಪಕ್ಷ ನಾಲ್ಕನೇ ಮೂರರಷ್ಟು ಪ್ರಜಾಸತ್ತಾತ್ಮಕವಾಗಿ ಮತ್ತು ಅನುಪಾತಕ್ಕನುಸಾರವಾಗಿ ಚುನಾಯಿತರಾಗುವ ಮಕ್ಕಳ ಪೋಷಕನು/ಪಾಲಕನು, ಪಂಚಾಯತ್/ವಾರ್ಡ್‌ಗಳ ಸದಸ್ಯರನ್ನು ಮತ್ತು ಶಾಲಾ ಶಿಕ್ಷಕರನ್ನು ಒಳಗೊಂಡ ಎಸ್‌ಡಿಎಂಸಿಯ ರಚನೆಗೆ ಅವಕಾಶ ಕಲ್ಪಿಸುತ್ತದೆ. ಸದಸ್ಯತ್ವಕ್ಕಾಗಿ ಆದ್ಯತೆಯನ್ನು, ದುರ್ಬಲ ವರ್ಗಗಳ ಪೋಷಕರಿಗೆ/ ಪಾಲಕರಿಗೆ/ ಸಮಾಜದ ದುರ್ಬಲ ವರ್ಗಗಳಿಗೆ ನೀಡಬೇಕು. ಎಸ್‌ಡಿಎಂಸಿಯಲ್ಲಿ ಶೇಕಡ 50ರಷ್ಟು ಮಹಿಳೆಯರು ಇರಬೇಕು.

ಎನ್‌ಹೆಚ್‌ಎಮ್ ಮತ್ತು ಎನ್‌ಎಫ್‌ಎಸ್, 2013ದಿಂದ, ಎಮ್‌ಡಿಎಮ್‌ಎಸ್‌ನಂಥ ಯೋಜನೆಗಳನ್ನು ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತದೆ. ಶಾಲೆಗಳಲ್ಲಿ ಎಮ್‌ಡಿಎಮ್‌ಎಸ್ ಅಡಿಯಲ್ಲಿ ಒದಗಿಸಿದ ಪೌಷ್ಟಿಕ ಆಹಾರವು, ವಿದ್ಯಾರ್ಥಿಗಳ ಆರೋಗ್ಯ ಸುಧಾರಣೆಗೆ ಮಾತ್ರವಲ್ಲದೆ, ಅವರ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ಸಹ ನೆರವಾಗುತ್ತದೆ. ಮಗುವಿನ ಸಮಗ್ರ ಅಭಿವೃದ್ಧಿಯಲ್ಲಿ ಪೌಷ್ಟಿಕ ಆಹಾರದ ನೆರವಾಗುತ್ತದೆ.

ಎಮ್‌ಡಿಎಮ್‌ಎಸ್‌ನ ಮುಖ್ಯ ಉದ್ದೇಶ, ಶಾಲೆಯಲ್ಲಿ ವಿದ್ಯಾರ್ಥಿಗಳ ದಾಖಲಾತಿಯನ್ನು, ಹಾಜರಾತಿಯನ್ನು ಹೆಚ್ಚಿಸುವುದು ಮತ್ತು ಮಕ್ಕಳು ಶಾಲೆ ಬಿಟ್ಟು ಹೋಗುವುದನ್ನು ಕಡಿಮೆಗೊಳಿಸುವುದಾಗಿದೆ. ಇದು, ಪ್ರತಿಯೊಂದು ಮಗುವು ಹಸಿವು ಮುಕ್ತವಾಗಿ, ಶಾಲೆಗೆ ಹೋಗುವ ಅವಕಾಶ ನೀಡುವುದನ್ನು ಹಾಗೂ ಎಲ್ಲಾ ಅವಶ್ಯಕತೆಗಳ ಈಡೇರಿಕೆಯನ್ನು ಸಹ ಖಾತರಿಪಡಿಸುತ್ತದೆ.

**ಎಸ್‌ಡಿಎಂಸಿ ಮುಖಾಂತರ ಮಕ್ಕಳಿಗೆ ಪೌಷ್ಟಿಕ ಆಹಾರದ ಲಭ್ಯತೆಯನ್ನು ಸುನಿಶ್ಚಿತಗೊಳಿಸುವಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ.**

- ➢ ಎಸ್‌ಡಿಎಂಸಿಯ ಭಾಗವಾಗಿ ಗ್ರಾಮ ಪಂಚಾಯಿತಿಯ ಸದಸ್ಯರು, ಅರಿವು ಮೂಡಿಸುವ ಮತ್ತು ಕಲಿಕಾ ಫಲಿತಾಂಶಗಳ ಮೇಲ್ವಿಚಾರಣೆ ಮಾಡುವ ಹಾಗೂ ಎಮ್‌ಡಿಎಮ್‌ಎಸ್ ಸ್ವತಃ ಮಾಲಿಕತ್ವ ಹೊಂದಿರುವುದರಿಂದ, ಸಮುದಾಯದ ಮೂಲಕ ಶಾಲೆಯಲ್ಲಿ ಮಕ್ಕಳ ಪೌಷ್ಟಿಕತೆಯನ್ನು ಸುರಕ್ಷತೆಗೊಳಿಸುವ ಮುಖ್ಯವಾದ ಪಾತ್ರ ವಹಿಸುತ್ತಾರೆ.
- ➢ ಶಿಕ್ಷಣ ಹಕ್ಕು ಅಧಿನಿಯಮ, 2009ರ 22ನೇ ಪ್ರಕರಣವು, ಎಸ್‌ಡಿಎಮ್‌ಸಿಯು ಸಿದ್ಧಪಡಿಸಬೇಕಾಗಿರುವ ಶಾಲಾ ಅಭಿವೃದ್ಧಿ ಯೋಜನೆ (ಎಸ್‌ಡಿಪಿ) ಬಗ್ಗೆ ತಿಳಿಸುತ್ತದೆ ಮತ್ತು ಈ ಯೋಜನೆಯನ್ನು ಆಧರಿಸಿ, ನಿಧಿಗಳಿಗಾಗಿ ಮನವಿ ಮಾಡಿಕೊಳ್ಳಬೇಕಾಗುತ್ತದೆ. ಎಸ್‌ಡಿಎಮ್‌ಸಿಯು, ಮಾಸಿಕ ಸಭೆಗಳಲ್ಲಿ ಮಧ್ಯಾಹ್ನದ ಬಿಸಿ ಊಟದ ವೆಚ್ಚ, ಗುಣಮಟ್ಟ ಮತ್ತು ಸ್ವಚ್ಛತೆ ಕುರಿತು ಮೇಲ್ವಿಚಾರಣೆ ಮಾಡಬೇಕು ಮತ್ತು ಚರ್ಚಿಸಬೇಕು ಹಾಗೂ ಸವಿವರವಾದ ಮಾಹಿತಿಯನ್ನು ಸೂಚನಾ ಫಲಕದ ಮೇಲೆ ಪ್ರದರ್ಶಿಸಬೇಕು.
- ➢ ಎಮ್‌ಡಿಎಮ್‌ಎಸ್ ಮಾರ್ಗಸೂಚಿ–2006ರ ಪ್ರಕಾರ, ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ಸ್ವೀಕರಿಸಿದ ಆಹಾರ ಧಾನ್ಯಗಳ ಪ್ರಮಾಣ, ಸ್ವೀಕರಿಸಿದ ದಿನಾಂಕ, ಬಳಸಿದ ಆಹಾರ ಧಾನ್ಯಗಳ ಪ್ರಮಾಣ, ಖರೀದಿಸಿದ ಮತ್ತು ಬಳಸಿದ ಇತರ ಪದಾರ್ಥಗಳು, ಮಧ್ಯಾಹ್ನದ ಬಿಸಿ ಊಟ ನೀಡಲಾದ ಮಕ್ಕಳ ಸಂಖ್ಯೆ, ದೈನಂದಿನ ಖಾದ್ಯ ಪಟ್ಟಿ (ಮೆನು) ಮತ್ತು ಕಾರ್ಯಕ್ರಮದಲ್ಲಿ ತೊಡಗಿಕೊಂಡಿರುವ ಸಮುದಾಯ ಸದಸ್ಯರ ಸರದಿ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರದರ್ಶಿಸಬೇಕು.
- ➢ ಅಡುಗೆ ಕೋಣೆ, ಉಗ್ರಾಣ ಮತ್ತು ಭೋಜನ ನೀಡುವ ಸ್ಥಳಗಳಲ್ಲಿ ಸ್ವಚ್ಛತೆ, ಕುಡಿಯುವ ನೀರು, ಆಹಾರ ಧಾನ್ಯಗಳ ಹಾಗೂ ಊಟ ತಯಾರಿಸಲು ಬಳಸಿದ ಇತರ ಪದಾರ್ಥಗಳ ಗುಣಮಟ್ಟ ಮತ್ತು ಪ್ರಮಾಣದ ಮೇಲ್ವಿಚಾರಣೆ ಮಾಡಬೇಕು.
- ➢ ಮಕ್ಕಳಿಗೆ ಸಮರ್ಪಕ ಉತ್ತಮ ಗುಣಮಟ್ಟದ ಮತ್ತು ರುಚಿಕರ ಆಹಾರವನ್ನು ನೀಡಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಮಧ್ಯಾಹ್ನದ ಬಿಸಿ ಊಟದ ಜೊತೆಯಲ್ಲಿ ಮೊಳಕೆ ಬರಿಸಿದ ಧಾನ್ಯಗಳನ್ನು ನೀಡಬೇಕು.
- ➢ ಬಾಲಕಿಯರಿಗೆ ಮತ್ತು ಬಾಲಕರಿಗೆ ಪ್ರತ್ಯೇಕ ಶೌಚಾಲಯಗಳ ನಿರ್ಮಾಣಕ್ಕೆ ಮತ್ತು ಸುಸ್ಥಿತಿಯಲ್ಲಿ ನಿರ್ವಹಿಸುವುದಕ್ಕೆ ನೆರವು ನೀಡುವುದು.
- ➢ ನಿಧಿಗಳ ಮತ್ತು ವೆಚ್ಚದ ಮೇಲೆ ನಿಗಾ ಇರಿಸುವುದು.
- ➢ ಬಹಳಷ್ಟು ಅಂಗನವಾಡಿ ಕೇಂದ್ರಗಳು ಶಾಲಾ ಆವರಣದಲ್ಲೇ ಇರುವುದರಿಂದ, ಎಸ್‌ಡಿಎಮ್‌ಸಿ ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮಾಡಬೇಕು ಮತ್ತು ಪರಿಶೀಲಿಸಬೇಕು.
- ➢ ಶಾಲೆಗಳಲ್ಲಿ ಎಮ್‌ಡಿಎಮ್‌ಎಸ್ ಮೇಲ್ವಿಚಾರಣೆ ಕುರಿತು ಮಾತ್ರವೇ ಎಸ್‌ಡಿಎಮ್‌ಸಿ ತಮ್ಮ ಕಾರ್ಯನಿರ್ವಹಣೆಯನ್ನು ಸೀಮಿತಗೊಳಿಸಬಾರದು;

ಟಿಪಿಡಿಸ್, ಐಸಿಡಿಎಸ್ ಮತ್ತು ಎಮ್‌ಬಿಎಸ್ ಇವು, ಮಕ್ಕಳ ಅಭಿವೃದ್ಧಿಗೆ ಅತ್ಯಂತ ಅವಶ್ಯಕವಾಗಿರುವುದರಿಂದ, ಅವುಗಳಿಗೆ ಸರ್ಕಾರವು ಒದಗಿಸಿದ ಇತರ ಯೋಜನೆಗಳ ಕಡೆ ಗಮನ ಹರಿಸಲು ಪೂರ್ವಭಾವಿ ಕ್ರಮಗಳನ್ನು ಸಹ ಕೈಗೊಳ್ಳಬೇಕು ಮತ್ತು ಸರಿಯಾದ ವಯಸ್ಸಿನಲ್ಲಿ ಸರಿಯಾದ ಪೌಷ್ಟಿಕ ಆಹಾರವನ್ನು ಮಕ್ಕಳು ಪಡೆಯುತ್ತಿರುವುದನ್ನು ಖಚಿತಪಡಿಸುವುದು.

**ಪರಿಣಾಮಕಾರಿಯಾಗಿ ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆಯನ್ನು ಸುನಿಶ್ಚಿತಗೊಳಿಸುವಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ**

ಎನ್‌ಎಫ್‌ಎಸ್‌ಎಯ ಪ್ರಮುಖ ಘಟಕವಾಗಿ ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆಯಲ್ಲಿ, ಉತ್ತಮವಾಗಿ ಕಾರ್ಯನಿರ್ವಹಿಸುವ ಮತ್ತು ಸುಲಭವಾಗಿ ಲಭ್ಯವಿರುವ ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆಯನ್ನು ಹಕ್ಕುದಾರರಿಗೆ ಒದಗಿಸುವ ಅವಶ್ಯಕತೆ ಕುರಿತು ಸ್ಪಷ್ಟವಾಗಿ ಗಮನ ಕೇಂದ್ರೀಕರಿಸುತ್ತದೆ. ರಾಷ್ಟ್ರೀಯ ಆಹಾರ ಸುರಕ್ಷತೆ ಅಧಿನಿಯಮದ 14ನೇ ಪ್ರಕರಣವು ಅಗತ್ಯಪಡಿಸಿದಂತೆ, ಕರ್ನಾಟಕ ಸರ್ಕಾರವು ಬಹು–ಹಂತದ ಆಂತರಿಕ ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆಯನ್ನು ಸ್ಥಾಪಿಸುತ್ತದೆ.

**i. ಗ್ರಾಮ ಮಟ್ಟದಲ್ಲಿ ಆಂತರಿಕ ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆ**

ಗ್ರಾಮಗಳಲ್ಲಿನ ಬಾಧಿತ ಹಕ್ಕುದಾರರು, ದೂರುಗಳನ್ನು ದಾಖಲಿಸಲು ಸಾಧ್ಯವಾಗುವಂತೆ, ಸಂಬಂಧಪಟ್ಟ ಇಲಾಖೆಗಳು ಉಚಿತ ಸಹಾಯವಾಣಿ, ಕರೆ ಕೇಂದ್ರಗಳು ಮತ್ತು ನೋಡಲ್ ಅಧಿಕಾರಿಗಳ ಏರ್ಪಾಡು ಮಾಡುತ್ತದೆ.

***ದೂರವಾಣಿ ಮೂಲಕ ಕುಂದುಕೊರತೆ ಪರಿಹಾರ ವ್ಯವಸ್ಥೆ***

ಕರ್ನಾಟಕ ಸರ್ಕಾರದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯು, ಸಾರ್ವಜನಿಕ ವಿತರಣೆ ವ್ಯವಸ್ಥೆಗಾಗಿ, ಆನ್‌ಲೈನ್ ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆಯ ಏರ್ಪಾಡು ಮಾಡಿದೆ. ಇದು ಒಬ್ಬರಿಗೆ ದೂರುಗಳನ್ನು ದಾಖಲಿಸಲು ಮತ್ತು ಜಾಲತಾಣದ ಮುಖಾಂತರ ಈಗಾಗಲೇ ದಾಖಲಿಸಿದ ದೂರುಗಳ ಬಗ್ಗೆ ಅನುಸರಣಾ ಕ್ರಮ ಕೈಗೊಳ್ಳಲು ಅನುಕೂಲ ಕಲ್ಪಿಸುತ್ತದೆ. ಇದಕ್ಕೆಲ್ಲಾ ಅಗತ್ಯವಿರುವುದು ಆಧಾರ್ ಕಾರ್ಡ್ ಸಂಖ್ಯೆ ಅಥವಾ ಪಡಿತರ ಚೀಟಿ ಸಂಖ್ಯೆ. ದೂರುಗಳನ್ನು ಜಾಲತಾಣದಲ್ಲಿನ 'ಮಾಹಿತಿ ನಮೂದು' ವ್ಯವಸ್ಥೆಯಡಿ ದಾಖಲಿಸಬೇಕು.

ಗ್ರಾಮ ಪಂಚಾಯಿತಿಯು ಈ ಮುಂದಿನವುಗಳನ್ನು ಸುನಿಶ್ಚಿತಗೊಳಿಸುತ್ತದೆ:

- ಆಂತರಿಕ ಕುಂದುಕೊರತೆ ನಿವಾರಣೆ ಕಾರ್ಯವ್ಯವಸ್ಥೆ (ಪಿಜಿಆರ್‌ಎಮ್) ಕುರಿತು ಸಮುದಾಯಗಳಲ್ಲಿ, ಮುಖ್ಯವಾಗಿ ಹಕ್ಕುದಾರರಲ್ಲಿ ಅರಿವು ಮೂಡಿಸುತ್ತದೆ. ಸಾಮಾನ್ಯವಾಗಿ ದೂರುಗಳನ್ನು ಹೇಗೆ ಬರೆಯಬೇಕು, ಎಲ್ಲಿಗೆ ಹೋಗಬೇಕು, ಯಾರನ್ನು ಸಂಪರ್ಕಿಸಬೇಕು ಎಂಬ ಔಪಚಾರಿಕತೆಗಳ ಬಗ್ಗೆ ಬಾಧಿತರಿಗೆ ಅರಿವು ಇರುವುದಿಲ್ಲ;
- ಸುಂಕ ಮುಕ್ತ (ಟೋಲ್ ಫ್ರೀ) ಸಂಖ್ಯೆಗಳ, ಸಹಾಯವಾಣಿಗಳ ಮತ್ತು ಲಿಖಿತ ದೂರುಗಳು ಲಭ್ಯವಿದ್ದರೆ, ಅವುಗಳ ಬಳಕೆ ಬಗ್ಗೆ ತರಬೇತಿ ನೀಡುವುದು. ಈ ಸೇವೆಗಳು ಲಭ್ಯವಿಲ್ಲದಿದ್ದರೆ, ಸಿಬಿಎಮ್ ಸಮಿತಿಗಳ, ಗ್ರಾಮ ಸಮಿತಿಗಳ, ಸ್ವ–ಸಹಾಯ ಗುಂಪುಗಳ ಮತ್ತು ಸ್ಥಳೀಯ ಪ್ರಾಧಿಕಾರಗಳ ಬೆಂಬಲದೊಂದಿಗೆ ಗೊತ್ತುಪಡಿಸಿದ ನೋಡಲ್ ಅಧಿಕಾರಿಯು ಗ್ರಾಮ ಮಟ್ಟದಲ್ಲಿ ಆಂತರಿಕ ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆಯ ಏರ್ಪಾಡು ಮಾಡುವುದಕ್ಕೆ ಮಾತುಕತೆ ನಡೆಸಬೇಕು.
- ಟಿಪಿಡಿಎಸ್ ಮತ್ತು ಎಮ್‌ಡಿಎಮ್‌ಎಸ್‌ಗೆ ಸಂಬಂಧಿಸಿದ ಸಾರ್ವಜನಿಕ ಕುಂದುಕೊರತೆಯ ಪರಿಹಾರಕ್ಕಾಗಿ ಸುಂಕ ಮುಕ್ತ ಸಂಖ್ಯೆಗಳು ಮತ್ತು ಕರೆ ಕೇಂದ್ರಗಳಂಥ ದೂರವಾಣಿ ಮುಖಾಂತರ ಕುಂದುಕೊರತೆ ಪರಿಹಾರ ವ್ಯವಸ್ಥೆಯನ್ನು ಪಡೆಯುವುದು ಹಾಗೂ ಬಿಲ್ ಬೋರ್ಡ್‌ಗಳು, ಸೂಚನಾ ಫಲಕಗಳು, ಸಾರ್ವಜನಿಕ ಸ್ಥಳ, ಎಫ್‌ಪಿಎಸ್, ಅಂಗನವಾಡಿ ಕೇಂದ್ರಗಳು, ಶಾಲೆ, ಮುಂತಾದ ಸ್ಥಳಗಳಲ್ಲಿ ಬ್ಯಾನರ್‌ಗಳ ಮೂಲಕ ನೋಡಲ್ ಅಧಿಕಾರಿಗಳು, ಡಿಜಿಆರ್‌ಒ/ ಜಿಲ್ಲಾಧಿಕಾರಿಗಳ ಸಂಪರ್ಕ ಸಂಖ್ಯೆಗಳನ್ನು ಪ್ರದರ್ಶಿಸುವುದು.

**ಕೋಷ್ಟಕ–5:** ಎನ್‌ಎಫ್‌ಎಸ್‌ಎ, 2013ರ ಅಡಿಯಲ್ಲಿನ ಯೋಜನೆಗಳಿಗೆ ಸಂಬಂಧಿಸಿದ ಸಹಾಯವಾಣಿಗಳು ಮತ್ತು ಕರೆ ಕೇಂದ್ರ ಸಂಖ್ಯೆಗಳು

| ಯೋಜನೆ | ಸುಂಕ ಮುಕ್ತ (ಟೋಲ್ ಫ್ರೀ) ಸಹಾಯವಾಣಿ ಸಂಖ್ಯೆ | ಕರೆ ಕೇಂದ್ರ |
|---|---|---|
| ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆ (ಟಿಪಿಡಿಎಸ್) | 1967 | 1800–425–9339 |
| ಮಧ್ಯಾಹ್ನದ ಬಿಸಿ ಊಟ ಯೋಜನೆ (ಎಮ್‌ಡಿಎಮ್‌ಎಸ್) | ಲಭ್ಯವಿಲ್ಲ | 1800–425–20007 |
| ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳು (ಐಸಿಡಿಎಸ್) | ಲಭ್ಯವಿಲ್ಲ | ಲಭ್ಯವಿಲ್ಲ |

➢ ಬರೆಯಲು ಸಮರ್ಥರಲ್ಲದವರು ಯಾರಾದರೂ ಇದ್ದರೆ, ಲಿಖಿತ ದೂರುಗಳನ್ನು ಬರೆಯುವಲ್ಲಿ ಅಂಥ ಜನರಿಗೆ ನೆರವು ನೀಡುವುದು.

***ಆನ್‌ಲೈನ್ ಕುಂದುಕೊರತೆ ಪರಿಹಾರ ವ್ಯವಸ್ಥೆ***

➢ ಅಂತರ್ಜಾಲ ಸೇವೆಗಳನ್ನು ಪಡೆಯುವುದನ್ನು ಮತ್ತು ಇಲಾಖೆಗಳ ಅಥವಾ ಕಚೇರಿಗಳ ನಿರ್ದಿಷ್ಟ ಜಾಲತಾಣದಲ್ಲಿ ಅವರ ಕುಂದುಕೊರತೆಗಳನ್ನು ಕಳುಹಿಸುವಲ್ಲಿ ದೂರುದಾರರಿಗೆ ನೆರವು ನೀಡುವುದನ್ನು ಗ್ರಾಮ ಪಂಚಾಯಿತಿಯು ಖಚಿತಪಡಿಸಿಕೊಳ್ಳಬೇಕು.

## ii. ತಾಲ್ಲೂಕು ಮಟ್ಟದಲ್ಲಿ ನೋಡಲ್ ಅಧಿಕಾರಿಗಳು

ಸಾರ್ವಜನಿಕರು ಮತ್ತು ಡಿಜಿಆರ್‌ಒ ನಡುವೆ ನೋಡಲ್ ಅಧಿಕಾರಿಯು ಸಂಪರ್ಕ ಸೇತುವಾಗಿ ಕಾರ್ಯನಿರ್ವಹಿಸುತ್ತಾನೆ. ದರ್ಜೆ–II ಅಧಿಕಾರಿಯ ನೆರವಿನೊಂದಿಗೆ, ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯು ತಾಲ್ಲೂಕು ಮಟ್ಟದಲ್ಲಿ ಎಮ್‌ಡಿಎಮ್‌ಎಸ್ ಮುಖ್ಯಸ್ಥನಾಗಿರುತ್ತಾನೆ. ಆಹಾರ ನಿರೀಕ್ಷಕರೊಂದಿಗೆ **ತಹಸೀಲ್ದಾರರು** ಮತ್ತು ಆಹಾರ **ಶಿರಸ್ತೇದಾರರು** ಟಿಪಿಡಿಎಸ್ ಮೇಲೆ ನಿಗಾ ವಹಿಸುತ್ತಾರೆ.

➢ ಗ್ರಾಮ ಪಂಚಾಯಿತಿಯು, ಇಲಾಖೆಗಳಿಗೆ/ ಕಚೇರಿಗಳಿಗೆ ಸಂಬಂಧಿಸಿದ ದೂರುಗಳ ಬಗ್ಗೆ ಅನುಸರಣಾ ಕ್ರಮಗಳನ್ನು ಕೈಗೊಳ್ಳಬೇಕು.

➢ ಗ್ರಾಮ ಪಂಚಾಯಿತಿಯು, ನೋಡಲ್ ಅಧಿಕಾರಿಯೊಂದಿಗೆ ಸೌಹಾರ್ದ ಸಂಬಂಧ ಕಾಪಾಡಿಕೊಳ್ಳಬೇಕು ಮತ್ತು ಅಗತ್ಯವಿದ್ದರೆ, ದೂರುಗಳ ಪರಿಹಾರಕ್ಕಾಗಿ ನೋಡಲ್ ಅಧಿಕಾರಿಯನ್ನು ಪಂಚಾಯಿತಿಗೆ ಆಹ್ವಾನಿಸಬೇಕು.

➢ ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿಯು (ಸಿಡಿಪಿಒ), ತಾಲ್ಲೂಕು ಮಟ್ಟದಲ್ಲಿ ಐಸಿಡಿಎಸ್ ಪ್ರಭಾರಿ ಅಧಿಕಾರಿಯಾಗಿರುತ್ತಾನೆ. ಐಸಿಡಿಎಸ್ ಅಡಿಯಲ್ಲಿನ ದೂರುಗಳಿಗೆ ಸಂಬಂಧಿಸಿದಂತೆ ಜಿಆರ್‌ಎಮ್ ಮಾತ್ರವೇ ಖುದ್ದಾಗಿ ಅಥವಾ ಲಿಖಿತ ದೂರುಗಳ ಮೂಲಕ ಪ್ರಾಧಿಕಾರಿಗಳನ್ನು ಸಂಪರ್ಕಿಸುವುದು.

## iii. ಜಿಲ್ಲಾ ಕುಂದಕೊರತೆ ಪರಿಹಾರ ಅಧಿಕಾರಿ

ಕರ್ನಾಟಕದಲ್ಲಿ, ಜಿಲ್ಲಾಧಿಕಾರಿಯವರು, ಜಿಲ್ಲಾ ಕುಂದುಕೊರತೆ ಪರಿಹಾರ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ. 2016ರ ರಾಜ್ಯ ಆದೇಶವು, ಲಿಖಿತ ಅಥವಾ ವಿದ್ಯುನ್ಮಾನ (ಎಲೆಕ್ಟ್ರಾನಿಕ್) ರೂಪದಲ್ಲಿ, ಜಿಲ್ಲಾ ಕುಂದುಕೊರತೆ ಪರಿಹಾರ ಅಧಿಕಾರಿಯ ಮುಂದೆ ದೂರುಗಳನ್ನು ಸಲ್ಲಿಸಲು ಯಾರೇ ವ್ಯಕ್ತಿಗೆ ಅಥವಾ ಆತನ ಪ್ರತಿನಿಧಿಗೆ ಅವಕಾಶ ನೀಡುತ್ತದೆ. ವ್ಯವಹರಣೆಗಳು ಸಂಕ್ಷಿಪ್ತ ಸ್ವರೂಪದಲ್ಲಿರಬೇಕು ಮತ್ತು ದೂರುಗಳನ್ನು ಸ್ವೀಕರಿಸಿದ 30 ದಿನಗಳ ಒಳಗಾಗಿ ಅವುಗಳನ್ನು ವಿಲೆ ಮಾಡಬೇಕು, ಜಿಲ್ಲಾ ಕುಂದುಕೊರತೆ ಪರಿಹಾರ ಅಧಿಕಾರಿಯ ಆದೇಶದ ಮೇಲಿನ ಅಪೀಲನ್ನು ರಾಜ್ಯ ಆಹಾರ ಆಯೋಗದ ಮುಂದೆ ಸಲ್ಲಿಸಬೇಕು ಎಂದು ತಿಳಿಸುತ್ತದೆ.

ದೂರುಗಳನ್ನು ಕುರಿತು ಜಿಲ್ಲಾ ಕುಂದುಕೊರತೆ ಪರಿಹಾರ ಅಧಿಕಾರಿಯ ಗಮನಕ್ಕೆ ತರುವುದು ಅಗತ್ಯವಿದ್ದರೆ, ಜಿಲ್ಲಾ ಮಟ್ಟದಲ್ಲಿನ ಅಧಿಕಾರಿಯು ಪಿಡಿಎಸ್, ಎಂಡಿಎಂಎಸ್‌ಗಳಿಗೆ ಮತ್ತು ಸಂಬಂಧಪಟ್ಟ ವಿಷಯಗಳಿಗೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸುವುದನ್ನು ಹಾಗೂ ಅಂಥ ದೂರುಗಳ ಪರಿಹಾರಕ್ಕಾಗಿ ಅವಶ್ಯಕ ಕ್ರಮ ತೆಗೆದುಕೊಳ್ಳುವುದನ್ನು ಗ್ರಾಮ ಪಂಚಾಯಿತಿಯು ಖಚಿತಪಡಿಸಿಕೊಳ್ಳಬೇಕು.

## iv. ರಾಜ್ಯ ಆಹಾರ ಆಯೋಗ

ಎನ್‌ಎಫ್‌ಎಸ್‌ಎ ಇದರ 16ನೇ ಪ್ರಕರಣದ ಮೇರೆಗೆ, ರಾಜ್ಯದಲ್ಲಿನ ಆಹಾರ ಸುರಕ್ಷತೆಯನ್ನು ಸುನಿಶ್ಚಿತಗೊಳಿಸುವ ಎಲ್ಲಾ ಯೋಜನೆಗಳಿಗೆ ರಾಜ್ಯ ಆಹಾರ ಆಯೋಗವು ಮೇಲ್ವಿಚಾರಣಾ ಸಂಸ್ಥೆಯಾಗಿರುತ್ತದೆ. ಉಲ್ಲಂಘನೆಗಳಿಗೆ ಸಂಬಂಧಪಟ್ಟಂತೆ ವಿಚಾರಣೆ ನಡೆಸಲು ಅದು ಸ್ವಯಂಪ್ರೇರಿತವಾಗಿ ಪರಿಶೀಲಿಸಬಹುದಾಗಿದೆ ಮತ್ತು ದೂರುಗಳನ್ನು ಸ್ವೀಕರಿಸಬಹುದಾಗಿದೆ. ರಾಜ್ಯದಲ್ಲಿ ಎನ್‌ಎಫ್‌ಎಸ್‌ಎ ಅನುಷ್ಠಾನದಲ್ಲಿ ಸರ್ಕಾರಕ್ಕೆ ಮತ್ತು ಅದರ ಪೂರಕ ಏಜನ್ಸಿಗಳಿಗೆ ಸಲಹೆ ನೀಡುವ ಮುಖ್ಯ ಸ್ಥಾನಮಾನವನ್ನು ಹೊಂದಿದೆ. ಆಹಾರ ಸುರಕ್ಷತೆಯ ಕಾನೂನುಬದ್ಧ ಕಾರ್ಯಚೌಕಟ್ಟಿನಲ್ಲಿ ಸಮಗ್ರವಾಗಿ ಪ್ರಾಮುಖ್ಯತೆ ಹೊಂದಿರುವ ಸಂಸ್ಥೆಯಾಗಿ, ರಾಜ್ಯ ಆಹಾರ ಆಯೋಗದ ಸೂಕ್ತ ಕಾರ್ಯನಿರ್ವಹಣೆಯನ್ನು ಸುನಿಶ್ಚಿತಗೊಳಿಸಲು, ಎನ್‌ಎಫ್‌ಎಸ್‌ಎ ನಿರ್ದಿಷ್ಟವಾಗಿ ಹಲವಾರು ನಿಬಂಧನೆಗಳನ್ನು ವಿಧಿಸಿದೆ. ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅದು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಬಹುದಾಗಿದೆ.

ರಾಜ್ಯ ಆಹಾರ ಆಯೋಗದ ಸದಸ್ಯರಿಗೆ ಅವಶ್ಯಕ ಮಾಹಿತಿ ಒದಗಿಸುವ ಮೂಲಕ ಸೌಲಭ್ಯ ಕಲ್ಪಿಸುವಲ್ಲಿ ಮತ್ತು ಸಹಕರಿಸುವಲ್ಲಿ ಗ್ರಾಮ ಪಂಚಾಯಿತಿಯ ಪಾತ್ರವು ಬಹು ಮುಖ್ಯವಾದುದಾಗಿದೆ:

➢ ಕ್ಷೇಮಾಭಿವೃದ್ಧಿ/ ಪರಿಹಾರ ಕ್ರಮಗಳು ಮತು ಸುಧಾರಣೆಗಳ ಪರಿಣಾಮಕಾರಿ ಅನುಷ್ಠಾನಗೊಳಿಸುತ್ತಿರುವಂಥ ತಳಮಟ್ಟದ ವಾಸ್ತವಿಕ ಸಂಗತಿಗಳನ್ನು ಅರಿಯುವಲ್ಲಿ ಗ್ರಾಮಗಳ ಜನರು ಮತ್ತು ರಾಜ್ಯ ಆಹಾರ ಆಯೋಗದ ನಡುವೆ ಮಾತುಕತೆಗೆ ಸೌಲಭ್ಯ ಕಲ್ಪಿಸುವುದು.

➢ ಮುಖ್ಯ ಕಾಳಜಿಯ ವಿಷಯಗಳು, ಆನ್‌ಲೈನ್ ಅಥವಾ ಲಿಖಿತ ಮಾಧ್ಯಮದ ಮೂಲಕ ಸಂಬಂಧಪಟ್ಟ ಜಿಲ್ಲಾ ಕುಂದುಕೊರತೆ ಪರಿಹಾರ ಅಧಿಕಾರಿಗೆ ಅಥವಾ ರಾಜ್ಯ ಆಹಾರ ಆಯೋಗಕ್ಕೆ ತಲುಪುವುದನ್ನು ಖಚಿತಪಡಿಸಿಕೊಳ್ಳುವುದು.

➢ ಹಸಿವು ಮತ್ತು ಅಪೌಷ್ಟಿಕ ಆಹಾರ ಸ್ಥಿತಿಗತಿ ಕುರಿತು ನಿಕಟವಾಗಿ ಪರಿಶೀಲನೆ ನಡೆಸುತ್ತಿರುವುದು ಮತ್ತು ಅಂಥ ಸಂದರ್ಭಗಳು ಉದ್ಭವಿಸಿದಾಗ,

ಪ್ರಾಧಿಕಾರಿಗಳ ಮತ್ತು ರಾಜ್ಯ ಆಹಾರ ಆಯೋಗದ ಗಮನಕ್ಕೆ ತರುವುದು.

➢ ಸೇವೆ ನೀಡುವ ಕೇಂದ್ರಗಳ ಮೇಲ್ವಿಚಾರಣೆಗೆ ರಾಜ್ಯ ಆಹಾರ ಆಯೋಗದ ಸದಸ್ಯರು ಕ್ಷೇತ್ರ ಸಂದರ್ಶನಕ್ಕೆ ಆಗಮಿಸಿದಾಗ, ಅವರಿಗೆ ಸಹಕಾರ ನೀಡುವುದು; ಹಕ್ಕುದಾರೊಂದಿಗೆ, ವಿಶೇಷವಾಗಿ ಮಕ್ಕಳು ಮತ್ತು ಮಹಿಳೆಯರು, ಅಂಗನವಾಡಿ ಕೇಂದ್ರಗಳು, ಪಿಡಿಎಸ್, ಗ್ರಾಮ ಸಮಿತಿಗಳು, ಸಿಬಿಒಗಳು, ಸಿಎಸ್‌ಒಗಳು ಮತ್ತು ಸಮುದಾಯದೊಂದಿಗೆ ನೇರ ಚರ್ಚೆಗೆ ಅನುಕೂಲ ಕಲ್ಪಿಸಿಕೊಡುವುದು.

**ಆಹಾರ ಸುರಕ್ಷತೆಯನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ:**

ಹಕ್ಕುಗಳ ವಿಷಯಗಳಲ್ಲದೆ, ಎನ್‌ಎಫ್‌ಎಸ್‌ಎ, 2013ರ IIIನೇ ಅನುಸೂಚಿಯು, ಎಲ್ಲಾ ಸಮಯದಲ್ಲಿ ಎಲ್ಲರಿಗೂ ಸುಸ್ಥಿರ ಆಹಾರ ಮತ್ತು ಪೌಷ್ಟಿಕ ಆಹಾರದ ಸುರಕ್ಷತೆಯನ್ನು ಖಾತರಿಪಡಿಸಲು ಪ್ರಗತಿಪರವಾಗಿ ಮುಂದುವರಿಯಬೇಕಾದ ಅಗತ್ಯವಿರುವ ಆಹಾರ ಸುರಕ್ಷತೆಯ ಕೆಲವು ಕ್ಷೇತ್ರಗಳನ್ನು ಗುರುತಿಸಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳು, ದೂರದ ಮತ್ತು ಪ್ರವೇಶಿಸಲು ಕಷ್ಟಕರವಾದ ಪ್ರದೇಶಗಳ, ಗುಡ್ಡಗಾಡು ಮತ್ತು ಬುಡಕಟ್ಟು ಪ್ರದೇಶಗಳ ದುರ್ಬಲ ವರ್ಗಗಳ ಜನರ ಆಹಾರ ಸುರಕ್ಷತೆಯನ್ನು ಸುನಿಶ್ಚಿತಗೊಳಿಸಲು ಮತ್ತು IIIನೇ ಅನುಸೂಚಿಯಲ್ಲಿ ಹೇಳಿದ ಉದ್ದೇಶಗಳನ್ನು ಪ್ರಗತಿಪರವಾಗಿ ಸಾಧಿಸುವುದಕ್ಕೆ ಪ್ರಯತ್ನಿಸಲು ಅವರು ಹೊಂದಿರುವ ಹಕ್ಕುಗಳ ಮೇಲೆ ವಿಶೇಷ ಗಮನ ನೀಡಬಹುದೆಂದು ಅಧಿನಿಯಮದ 30ನೇ ಮತ್ತು 31ನೇ ಪ್ರಕರಣಗಳು ಉಪಬಂಧಿಸುತ್ತವೆ.

***ಅನುಸೂಚಿ IIIರ ಉದ್ದೇಶಗಳು:***

ಆಹಾರ ಸುರಕ್ಷತೆಯ ಮುಂದುವರಿಕೆಯ ಉದ್ದೇಶಗಳು:

***1) ಕೃಷಿಯ ಪುನಶ್ಚೇತನ***

(ಎ) ಸಣ್ಣ ಮತ್ತು ಅತಿ ಸಣ್ಣ ರೈತರ ಹಿತಾಸಕ್ತಿಗಳನ್ನು ಕಾಪಾಡುವ ಕ್ರಮಗಳ ಮೂಲಕ ಕೃಷಿ ಸಂಬಂಧಿ ಸುಧಾರಣೆಗಳನ್ನು ತರುವುದು;

(ಬಿ) ಸಂಶೋಧನೆ ಮತ್ತು ಅಭಿವೃದ್ಧಿ, ವಿಸ್ತರಣಾ ಸೇವೆಗಳು, ಉತ್ಪಾದಕತೆಯನ್ನು ಮತ್ತು ಉತ್ಪಾದನೆಯನ್ನು ಹೆಚ್ಚಿಸಲು ಕಿರು ಮತ್ತು ಸಣ್ಣ ನೀರಾವರಿ ಹಾಗೂ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒಳಗೊಂಡು, ಕೃಷಿಯಲ್ಲಿ ಹೂಡಿಕೆಗಳನ್ನು ಹೆಚ್ಚಿಸುವುದು;

(ಸಿ) ಲಾಭದಾಯಕ ದರಗಳು, ಹೂಡುವಳಿ, ಸಾಲ, ನೀರಾವರಿ, ವಿದ್ಯುಚ್ಛಕ್ತಿ, ಬೆಳೆ ವಿಮೆ, ಇತ್ಯಾದಿಗಳಿಗೆ ಅವಕಾಶ ನೀಡಿ ರೈತರಿಗೆ, ಅವರ ಜೀವನೋಪಾಯದ ಸುರಕ್ಷತೆಯನ್ನು ಖಾತರಿಪಡಿಸುವುದು;

(ಡಿ) ಆಹಾರ ಉತ್ಪಾದನೆಯಿಂದ ಭೂಮಿ ಮತ್ತು ನೀರಿನ ಅನಪೇಕ್ಷಿತ ಬದಲಾವಣೆಯನ್ನು ನಿಷೇಧಿಸುವುದು.

***2) ಸಂಗ್ರಹಣೆ, ದಾಸ್ತಾನು ಮತ್ತು ಸ್ಥಳಾಂತರ ಸಂಬಂಧಿ ಮಧ್ಯಸ್ಥಿಕೆಗಳು***

(ಎ) ಉರುಟು ಧಾನ್ಯಗಳ ಸಂಗ್ರಹಣೆಯು ಸೇರಿದಂತೆ ಪ್ರೋತ್ಸಾಹದಾಯಕ ವಿಕೇಂದ್ರೀಕೃತ ಸಂಗ್ರಹಣೆ;

(ಬಿ) ಸಂಗ್ರಹಣಾ ಕಾರ್ಯಚಟುವಟಿಕೆಗಳನ್ನು ಭೌಗೋಳಿಕವಾಗಿ ಬೇರೆ ಬೇರೆಯಾಗಿ ವಿಂಗಡಿಸುವುದು;

(ಸಿ) ಸಮರ್ಪಕ ವಿಕೇಂದ್ರೀಕೃತ ಆಧುನಿಕ ಮತ್ತು ವೈಜ್ಞಾನಿಕ ಸಂಗ್ರಹಣೆಯನ್ನು ಹೆಚ್ಚಿಸುವುದು;

(ಡಿ) ಆಹಾರ ಧಾನ್ಯಗಳು ಹೆಚ್ಚಾಗಿರುವ ಸ್ಥಳದಿಂದ ಬಳಕೆ ಪ್ರದೇಶಗಳಿಗೆ ಸಾಗಿಸಲು ಸೌಲಭ್ಯ ಕಲ್ಪಿಸುವ ಸಲುವಾಗಿ ರೈಲ್ವೆ ಮಾರ್ಗ ಸಾಮರ್ಥ್ಯವನ್ನು ವಿಸ್ತರಿಸುವುದೂ ಒಳಗೊಂಡಂತೆ, ಆಹಾರ ಧಾನ್ಯಗಳ ಸ್ಥಳಾಂತರಕ್ಕೆ ಹೆಚ್ಚಿನ ಆದ್ಯತೆ ನೀಡುವುದು ಮತ್ತು ಈ ಉದ್ದೇಶಕ್ಕಾಗಿ ಸಾಕಷ್ಟು ಸಂಖ್ಯೆಯ ಹಲುಬೆ (ರೇಕ್ಸ್)ಗಳನ್ನು ಒದಗಿಸುವುದು.

***3) ಇತರೆ: ಈ ಮುಂದಿನವುಗಳಿಗೆ ಅವಕಾಶ ಕಲ್ಪಿಸುವುದು,–***

(ಎ) ಸುರಕ್ಷಿತ ಮತ್ತು ಸಮರ್ಪಕ ಕುಡಿಯುವ ನೀರು ಮತ್ತು ನೈರ್ಮಲ್ಯ;

(ಬಿ) ಆರೋಗ್ಯ ರಕ್ಷಣೆ;

(ಸಿ) ಕಿಶೋರಿ ಬಾಲಕಿಯರಿಗೆ ಪೌಷ್ಟಿಕ ಆಹಾರ, ಆರೋಗ್ಯ ಮತ್ತು ಶಿಕ್ಷಣ ನೆರವು ಒದಗಿಸುವುದು;

(ಡಿ) ಹಿರಿಯ ನಾಗರಿಕರಿಗೆ, ವಿಶೇಷ ಚೇತನ ವ್ಯಕ್ತಿಗಳಿಗೆ ಮತ್ತು ಮಹಿಳೆಯರಿಗೆ ಸಮರ್ಪಕ ಪಿಂಚಣಿ ಒದಗಿಸುವುದು;

ಅಧಿನಿಯಮದ ಅನುಸೂಚಿ IIIರಲ್ಲಿ ಹೇಳಿರುವ ಉದ್ದೇಶಗಳು, ಕಾನೂನುಬದ್ಧವಾದ ಹಕ್ಕುಗಳಿಗಿಂತ ವಿಭಿನ್ನವಾಗಿರುತ್ತವೆ. ಉದ್ದೇಶಗಳ ಸಾಧನೆಗೆ ಅವುಗಳಿಗಾಗಿ ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿರುವುದಿಲ್ಲ ಅಥವಾ ನ್ಯಾಯ ತೀರ್ಮಾನಕ್ಕೆ ಒಳಪಡುವುದಿಲ್ಲ, ಆದರೆ ರಾಜ್ಯವು ಇದನ್ನು ಪ್ರಗತಿಪರವಾಗಿ ಮಾತ್ರ ಸಾಧಿಸಬಹುದಾಗಿದೆ.

ಅನುಸೂಚಿ III ಇದು, ಮೂಲ ಆಹಾರ ಉತ್ಪಾದಕರ (ಸಣ್ಣ ರೈತರ) ಮತ್ತು ಕೃಷಿ ಸಂಬಂಧಿ ಸುಧಾರಣೆಗಳ ಪ್ರಾಮುಖ್ಯತೆಯನ್ನು ಎತ್ತಿಹಿಡಿದಿದೆ. ಇದು ಆಹಾರಧಾನ್ಯಗಳ ವಿತರಣೆಗೆ ಹಾಗೂ ಅದಕ್ಕೆ ಸಂಬಂಧಪಟ್ಟಂತೆ, ಹಾಗೆಯೇ ಎಲ್ಲಾ ಸಮಯದಲ್ಲೂ ಎಲ್ಲರಿಗೂ ಸಮರ್ಪಕ ಆಹಾರ ಮತ್ತು ಪೌಷ್ಟಿಕ ಸುರಕ್ಷತೆಯನ್ನು ಖಾತರಿಪಡಿಸಲು, ರಾಜ್ಯದ ದೀರ್ಘಾವಧಿ ಬಾಧ್ಯತೆಯಾಗಿ ದುರ್ಬಲ ವರ್ಗದವರಿಗೆ ಪರಿಸರ ಸಂಬಂಧಿ ಮತ್ತು ಸಾಮಾಜಿಕ ಸುರಕ್ಷತಾ ಕಾರ್ಯಜಾಲಗಳ ಸಾಧ್ಯತೆಗೆ ಸೌಲಭ್ಯ ಕಲ್ಪಿಸಿದೆ.

ಮುಖ್ಯವಾಗಿ ಮಕ್ಕಳು ಮತ್ತು ಕಿಶೋರಿ ಬಾಲಕಿಯರಲ್ಲಿ

ಅಪೌಷ್ಟಿಕತೆಯನ್ನು ನಿವಾರಿಸುವುದು; ತಕ್ಷಣದ ಗಮನ ನೀಡುವ ಮತ್ತು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಪೌಷ್ಟಿಕ ಆಹಾರದ ಸವಾಲುಗಳ ಸಂಪರ್ಕಸೇತುವಾಗಿ ಕ್ರಮ ಕೈಗೊಳ್ಳುವ ಅಗತ್ಯವಿರುವ ದುರ್ಬಲ ವರ್ಗಗಳಿಗೆ ಸಂಬಂಧಿಸಿದ ಸಾಮಾಜಿಕ ಮತ್ತು ಆರ್ಥಿಕ ಸುರಕ್ಷತಾ ಕಾರ್ಯಜಾಲವನ್ನೇರ್ಪಡಿಸುವುದು.

ಗ್ರಾಮಗಳು ವಿವಿಧ ಉಪಕ್ರಮಗಳ ಮೂಲಕ ಹಸಿವು ಮತ್ತು ಅಪೌಷ್ಟಿಕತೆ ಮುಕ್ತವಾಗಿರುವಂತಾಗಲು, ಎಲ್ಲರಿಗೂ ಸಮಗ್ರ ಸುಸ್ಥಿರ ಆಹಾರ ಮತ್ತು ಪೌಷ್ಟಿಕತೆಯ ಸುರಕ್ಷತೆಯನ್ನು ಖಾತರಿಪಡಿಸುವಲ್ಲಿ ಗ್ರಾಮ ಪಂಚಾಯಿತಿಯ ಪಾತ್ರವು ಅತ್ಯಂತ ಮುಖ್ಯವಾಗಿದೆ.

### i. ಆಹಾರ ಮತ್ತು ಪೌಷ್ಟಿಕತೆಯ ಸುರಕ್ಷತೆಗಾಗಿ ಸುಸ್ಥಿರ ಕೃಷಿಯಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ:

ಗ್ರಾಮ ಪಂಚಾಯಿತಿಯು, ಈ ಮುಂದಿನ ವಿಷಯಗಳ ಯೋಜನೆಗೆ ಮತ್ತು ಅನುಷ್ಠಾನಕ್ಕೆ ಆದ್ಯತೆ ನೀಡಬೇಕು:

- ❖ ಎಲ್ಲಾ ರಾಷ್ಟ್ರೀಯ ಯೋಜನೆಗಳ ಸಂಯೋಜನೆ ಮೂಲಕ ಮತ್ತು ಸಮುದಾಯ ಸಬಲೀಕರಣದೊಂದಿಗೆ ಎಲ್ಲಾ ಪ್ರಯತ್ನಗಳನ್ನು ಒಟ್ಟುಗೂಡಿಸುವ ಮೂಲಕ ಆಹಾರ ಉತ್ಪಾದನೆ, ಆಹಾರ ಪೂರೈಕೆ, ಆಹಾರ ಲಭ್ಯತೆ, ಪೌಷ್ಟಿಕತೆ ಮತ್ತು ಬಳಕೆಯನ್ನು ಒಟ್ಟಾಗಿ ಪರಿಹರಿಸುವ ಕಡೆಯಲ್ಲಿ, ಗ್ರಾಮ ಪಂಚಾಯಿತಿಯು ಆಹಾರ ವ್ಯವಸ್ಥೆಗಳ ಮಾರ್ಗವನ್ನು ಅನುಸರಿಸಬೇಕು.
- ❖ ಸರ್ಕಾರದ ಯೋಜನೆಗಳಿಗೆ ಸಂಬಂಧಪಟ್ಟ ಮಾಹಿತಿಯ ಪ್ರಸಾರಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ರೈತರು ಸಂಪರ್ಕಿಸಲು ಸಾಧ್ಯವಾಗುವಂತೆ, ಕೃಷಿ ಮತ್ತು ಪೂರಕ ವಲಯಗಳ ವಿವಿಧ ಯೋಜನೆಗಳ ಅನುಷ್ಠಾನ ಕಾರ್ಯದಲ್ಲಿ ತೊಡಗಿರುವ ಅಧಿಕಾರಿಗಳ/ಅಧಿಕಾರೇತರ ಕೆಲಸಗಾರರ (ಸ್ವಯಂಸೇವಕರು, ನಿಯತ ಕರಾರಿನ ಮೇಲೆ ನೇಮಕಗೊಂಡ ಕೆಲಸಗಾರರು) ಇವರು ಬಳಸುತ್ತಿರುವ ದೂರವಾಣಿ ಸಂಖ್ಯೆಗಳ ಡೈರೆಕ್ಟರಿಯನ್ನು ಪಂಚಾಯತ್ ಮಟ್ಟದಲ್ಲಿ ನಿರ್ವಹಿಸಬೇಕು.
- ❖ ತರಬೇತಿ ಪಡೆದ ಸಿಬ್ಬಂದಿ ಸಹಿತ, ಅದಕ್ಕಾಗಿಯೇ ಇಟ್ಟಿರುವ ಕಾರ್ಯನಿರ್ವಹಣೆಗೆ ಯೋಗ್ಯವಾದ ಕಂಪ್ಯೂಟರ್ ಕೇಂದ್ರವು ಸ್ಥಳದಲ್ಲಿರುವುದನ್ನು ಖಚಿತಪಡಿಸಿಕೊಳ್ಳಬೇಕು.
- ❖ ಆನ್‌ಲೈನ್ ಮತ್ತು ಮುದ್ರಣ ಎರಡರಲ್ಲೂ ಎಲ್ಲಾ ಭೂ ದಾಖಲೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಬೇಕು.
- ❖ ಸ್ಥಳೀಯ ಪ್ರದೇಶದಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ಕುರಿತು, ಉದಾಹರಣೆಗೆ: ಸ್ಥಳ ನಕ್ಷೆ, ಭೂಮಿ, ಅರಣ್ಯ, ಜಲಾಶಯ, ಕೃಷಿ ಕ್ಷೇತ್ರಗಳು, ಸಸ್ಯ ಸಂಪನ್ಮೂಲ ಮುಂತಾದವುಗಳ ಕಡೆಗೆ ಗಮನ ಕೇಂದ್ರೀಕರಿಸುವಂಥ ನೈಸರ್ಗಿಕ ಸಂಪನ್ಮೂಲದ ಯೋಜನೆ ಸಿದ್ಧಪಡಿಸಲು ಏರ್ಪಾಡು ಮಾಡುವುದು/ ಸೌಲಭ್ಯ ಕಲ್ಪಿಸುವುದು. ಸಹಭಾಗಿ ಗ್ರಾಮೀಣ ಮೌಲ್ಯನಿರ್ಣಯದ ಮೂಲಕ ಸ್ಥಳೀಯ ಜನರು ಸಂಪನ್ಮೂಲ ನಕ್ಷೆಯನ್ನು ಸಿದ್ಧಪಡಿಸುವುದು.
- ❖ **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಆರ್‌ಕೆವಿವೈ),** ಸಮಗ್ರ ತೋಟಗಾರಿಕೆ ಅಭಿವೃದ್ಧಿ ಅಭಿಯಾನ (ಎಂಐಡಿಹೆಚ್), **ಪರಂಪರಾನುಗತ ಕೃಷಿ ವಿಕಾಸ ಯೋಜನೆ (ಪಿಕೆವಿವೈ),** ಮುಂತಾದವುಗಳ ಮೂಲಕ, ಸುಗ್ಗಿ ನಂತರದಲ್ಲಿ ಹೆಚ್ಚಿನ ಬೆಲೆ ದೊರೆಯುವಂತೆ ಶ್ರೇಣೀಕೃತ ವ್ಯವಸ್ಥೆ ಮಾಡಿ, ಮೂಲಸೌಕರ್ಯ ಅಭಿವೃದ್ಧಿಗೆ ಸೌಲಭ್ಯ ಕಲ್ಪಿಸುವುದು.
- ❖ ಅಸ್ತಿತ್ವದಲ್ಲಿರುವ ಗ್ರಾಮೀಣ ಸಂತೆಗಳನ್ನು ಮೇಲ್ದರ್ಜೆಗೇರಿಸುವುದನ್ನು ಸಹ ಗಣನೆಗೆ ತೆಗೆದುಕೊಳ್ಳಬೇಕು.
- ❖ ಮಾದರಿ ಬೀಜ ಗ್ರಾಮಗಳು, ಸಾಂಪ್ರದಾಯಿಕ ಬಾಡಿಗೆ ಕೇಂದ್ರಗಳು, ಇತ್ಯಾದಿಗಳ ಸ್ಥಾಪನೆಗೆ ಪ್ರೋತ್ಸಾಹ ನೀಡುವುದು.
- ❖ ಆಹಾರ ಮತ್ತು ಜೀವನೋಪಾಯ ಸುರಕ್ಷತೆ, ಸಮಗ್ರ ಸಾವಯವ ಕೃಷಿ ಪದ್ಧತಿಗೆ ಅನುಗುಣವಾದ ಹವಾಮಾನ ಬದಲಾವಣೆ ತಂತ್ರಜ್ಞಾನಗಳ ಅಳವಡಿಕೆ, ನೈಸರ್ಗಿಕ ಕೃಷಿ, ಎರೆಹುಳು ಗೊಬ್ಬರ ತಯಾರಿಕೆ, ಜೈವಿಕ ವೈವಿಧ್ಯತೆ, ಜಲ ಸಂರಕ್ಷಣೆ, ಪರ್ಯಾಯ ಇಂಧನ ಇತ್ಯಾದಿಗಳ ಮೂಲಕ ಸ್ಥಳೀಯ ಪ್ರದೇಶಗಳಲ್ಲಿ ಸುಸ್ಥಿರ ಪರಿಸರ ಸಂಬಂಧಿ ಕೃಷಿ ಪದ್ಧತಿಗಳಿಗೆ ಮತ್ತು ವ್ಯವಸ್ಥೆಗಳಿಗೆ ಪ್ರೋತ್ಸಾಹ ನೀಡುವುದು.
- ❖ ಕೃಷಿಯನ್ನಾಧರಿಸಿ ಜೀವನೋಪಾಯ ನಡೆಸುತ್ತಿರುವ ಕುಟುಂಬಗಳಿಗೆ ಪೌಷ್ಟಿಕ ಆಹಾರದ ಸುರಕ್ಷತೆಯನ್ನು ಹೆಚ್ಚಿಸಲು ವೈವಿಧ್ಯಮಯ ಬೆಳೆಗಳು, ಆಹಾರ ಮತ್ತು ಆದಾಯ ಮೂಲಗಳ ಹೆಚ್ಚಳಕ್ಕೆ ಒತ್ತು ನೀಡುವುದು.
- ❖ ಎಲ್ಲಾ ರೈತರು, ಮಣ್ಣು ಆರೋಗ್ಯ (ಸಾಯಿಲ್ ಹೆಲ್ತ್) ಕಾರ್ಡುಗಳನ್ನು (ಎಸ್‌ಹೆಚ್‌ಸಿಗಳು) ಹೊಂದುವುದನ್ನು ಖಚಿತಪಡಿಸಿಕೊಳ್ಳುವುದು.
- ❖ ಕಿರು ಆಣೆಕಟ್ಟುಗಳ (ಚೆಕ್–ಡ್ಯಾಮ್) ಮತ್ತು ಕೃಷಿ ಹೊಂಡಗಳ ಮೂಲಕ ಜಲ ಸಂರಕ್ಷಣೆಗೆ ಉತ್ತೇಜನ ನೀಡುವುದು.
- ❖ ಪ್ರಪಂಚದಲ್ಲಿ ಹವಾಮಾನ–ವೈಪರೀತ್ಯದಂಥ ಅಡೆತಡೆಗಳು ಇದ್ದರೂ, ಭಾರತದಲ್ಲಿ ಕಡಿಮೆ ವೆಚ್ಚದ, ರಾಸಾಯನಿಕ ಮುಕ್ತ ಪೌಷ್ಟಿಕ ಆಹಾರ ಸುರಕ್ಷತೆಯನ್ನು ಖಾತರಿಪಡಿಸಲು, ಸುಸ್ಥಿರ ಪರಿಸರ ಆಧಾರಿತ ಕೃಷಿ ಕುರಿತು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಮಹಿಳೆಯರಿಗೆ ಮತ್ತು ಯುವಕರಿಗೆ ಅರಿವು ಮೂಡಿಸುವುದು ಮತ್ತು ಕಾಲ ಕಾಲಕ್ಕೆ ತರಬೇತಿ ನೀಡುವುದು.
- ❖ ಮಹಿಳೆಯರ ಹಕ್ಕಾಗಿ ಅವರು ಸಮೂಹ

ಬೇಸಾಯ ಮಾಡುವುದಕ್ಕೆ ಪ್ರೋತ್ಸಾಹ ನೀಡುವುದು ಮತ್ತು ಉತ್ತೇಜಿಸುವುದು. ಗೇಣಿ ಜಮೀನನ್ನು ಸಾಮೂಹಿಕವಾಗಿ ಬೇಸಾಯ ಮಾಡುವುದಕ್ಕೆ ಮಹಿಳೆಯರಿಗೆ ಪ್ರೋತ್ಸಾಹ ನೀಡಬಹುದು ಮತ್ತು ತಮ್ಮದೇ ಆದ ಹಕ್ಕಿನ ಸಾಮರ್ಥ್ಯದಿಂದ ಕೃಷಿ ನಿರ್ವಾಹಕರಾಗುವುದು. ಸಮೂಹ ಬೇಸಾಯ ಮಾಡುವುದು, ಮಹಿಳೆಯರನ್ನು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಸಬಲೀಕರಿಸುವುದು.

- ❖ ಪುರುಷ ರೈತರಂತೆ, ಮಹಿಳಾ ರೈತರಿಗೂ ತಮ್ಮ ತಮ್ಮ ಹಕ್ಕುಗಳನ್ನು ಪಡೆಯಲು ಅವರನ್ನು ಸಶಕ್ತಗೊಳಿಸುವಂತೆ ಕೃಷಿಯಲ್ಲಿ ಮಹಿಳೆಯರನ್ನು ಗುರುತಿಸುವ ಕಾನೂನುಬದ್ಧ ಹಕ್ಕುಗಳಿಗೆ ಮಾತುಕತೆ ಮೂಲಕ ನೆರವು ನೀಡುವುದು.
- ❖ ಮಹಿಳೆಯರು, ಪುರುಷರು ಮತ್ತು ಮಕ್ಕಳ ನಿರ್ದಿಷ್ಟ ಆಹಾರ ಮತ್ತು ಪೌಷ್ಟಿಕತೆ ಅವಶ್ಯಕತೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುವಾಗ, ಸಮಾನತೆಗೆ ಉತ್ತೇಜನ ನೀಡಲು ಕೃಷಿ ಕಾರ್ಯಕ್ರಮ ಸಿದ್ಧಪಡಿಸುವಲ್ಲಿ ಸಣ್ಣ ಹಿಡುವಳಿದಾರ ಮಹಿಳಾ ರೈತರಿಗೆ ಮತ್ತು ಅತಿ ಸಣ್ಣ ರೈತರಿಗೆ ಆದ್ಯತೆ ನೀಡುವುದು.
- ❖ ಮಹಿಳೆಯರ (ತಾಯಂದಿರು, ಕಿಶೋರಿ ಬಾಲಕಿಯರು ಮತ್ತು ಸ್ವ–ಸಹಾಯ ಗುಂಪುಗಳು) ಸಹಭಾಗಿತ್ವಕ್ಕೆ ಉತ್ತೇಜನ ನೀಡುವ ಮೂಲಕ ಶಾಲೆಗಳಲ್ಲಿ, ಅಂಗನವಾಡಿ ಕೇಂದ್ರಗಳಲ್ಲಿ ಮತ್ತು ಎಲ್ಲರಿಗೂ ಸೇರಿದ ಪ್ರದೇಶದಲ್ಲಿ ಸಾವಯವ ಪೌಷ್ಟಿಕ ಆಹಾರದ ಉದ್ಯಾನಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡುವುದು.
- ❖ ಸ್ಥಳೀಯ ಆಹಾರ ಧಾನ್ಯಗಳು, ತರಕಾರಿಗಳು ಮತ್ತು ಹಣ್ಣುಗಳ ಸಂರಕ್ಷಣೆಗೆ ಸಮುದಾಯ ಹಂತದಲ್ಲಿ ಸೌರ ವಿದ್ಯುಚ್ಛಕ್ತಿ ಆಧಾರಿತ ಆಹಾರ ಸಂಸ್ಕರಣೆ ಯಂತ್ರಗಳಂಥ ಪರ್ಯಾಯ ಇಂಧನ ಬಳಸುವ ಪರಿಸರ–ಸ್ನೇಹಿ ಆಹಾರ ಸಂಸ್ಕರಣಾ ಘಟಕಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡುವುದು ಹಾಗೂ ಅತಿ ಸಣ್ಣ ಮಹಿಳಾ ರೈತರಿಗೆ ಹಾಗೂ ಭೂರಹಿತ ಮಹಿಳೆಯರಿಗೆ ಪೂರಕ ಆದಾಯ ಸೃಜಿಸುವುದು.
- ❖ ತರಕಾರಿಗಳು ಮತ್ತು ಆಹಾರ ಧಾನ್ಯಗಳ ಸಂರಕ್ಷಣೆಗೆ ಸೌರ ವಿದ್ಯುತ್ ಒದಗಿಸಿದ ಸಮುದಾಯ ಆಧಾರಿತ ಕಡಿಮೆ ವೆಚ್ಚದ ವೈಜ್ಞಾನಿಕ ಸಂಗ್ರಹಾಗಾರಗಳನ್ನು ಸ್ಥಾಪಿಸುವುದು.
- ❖ ರೈತರ ಗ್ರಾಮ ಮಟ್ಟದ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು (ಪಿಎಸಿಎಸ್), ಗ್ರಾಮೀಣ ಮಾರುಕಟ್ಟೆ ಸಂಘಗಳು, ಗ್ರಾಮೀಣ ಸಹಕಾರಿ ಡೈರಿಗಳ ಸಂಘಗಳು, ಗ್ರಾಮೀಣ ಮಹಿಳಾ ಸಹಕಾರ ಸಂಘಗಳು ಮತ್ತು ರೈತ ಉತ್ಪಾದಕರ ಕಂಪನಿಗಳಿಗೆ ಪ್ರೋತ್ಸಾಹ ನೀಡುವುದು ಮತ್ತು ಅವುಗಳನ್ನು ಬಲಪಡಿಸುವುದು.
- ❖ ರೈತರು ಮತ್ತು ಕೃಷಿ ವಿಸ್ತರಣಾ ಕಾರ್ಮಿಕರಲ್ಲಿ ಜ್ಞಾನ ವಿನಿಮಯ ಮತ್ತು ಸಾಮರ್ಥ್ಯ ನಿರ್ಮಾಣ ತರಬೇತಿ ನೀಡುವ ಕುರಿತು ಗಮನ ಕೇಂದ್ರೀಕರಿಸುವುದು.
- ❖ ಕೃಷಿ ಪರಿಸರ ವ್ಯವಸ್ಥೆಯಾದ್ಯಂತ ಹಿತಾಸಕ್ತಿದಾರರ ಗಮನವನ್ನು ವಿಸ್ತರಿಸಲು ಕ್ರಮ ಕೈಗೊಳ್ಳುವದು ಮತ್ತು ಅವರನ್ನು ಅರಿವು ಮೂಡಿಸುವ ಆಂದೋಲನಗಳ ಮೂಲಕ ಪರ್ಯಾಯ ಕೃಷಿ ಪದ್ಧತಿಗಳನ್ನು ಒಪ್ಪಿಕೊಳ್ಳುವಂತೆ ಮಾಡುವುದು.
- ❖ ಚಾಲ್ತಿಯಲ್ಲಿರುವ ರಾಷ್ಟ್ರ ಮತ್ತು ರಾಜ್ಯಮಟ್ಟದ ಕೃಷಿ ದತ್ತಾಂಶ ವ್ಯವಸ್ಥೆಗಳಲ್ಲಿ, ಪರಿಸರ ಸಂಬಂಧಿ ಕೃಷಿ ಪದ್ಧತಿಗಳನ್ನು ಮತ್ತು ವ್ಯವಸ್ಥೆಗಳನ್ನು ಕುರಿತ ದತ್ತಾಂಶ ಮತ್ತು ಮಾಹಿತಿ ಸಂಗ್ರಹಣೆಯನ್ನು ಕ್ರೋಢೀಕರಿಸುವ ಮೂಲಕ ಸುಸ್ಥಿರ ಕೃಷಿಯನ್ನು ಸಾಕಾರಗೊಳಿಸುವುದು.
- ❖ ಗ್ರಾಮಸ್ಥರ ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು ಆದಾಯ ಹೆಚ್ಚಳಕ್ಕೆ ಜಿಪಿಡಿಪಿಯೊಂದಿಗೆ ಸಂಯೋಜಿಸಬೇಕಾದ ಆರ್‌ಕೆವಿವೈ, ಪಿಕೆವಿವೈ, ಎಮ್‌ಐಡಿಹೆಚ್, ಎನ್‌ಎಫ್‌ಎಸ್‌ಎಮ್, **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ** (ಪಿಎಮ್‌ಕೆಎಸ್‌ವೈ), ಸುಧಾರಣೆಗಳಿಗೆ ರಾಜ್ಯ ವಿಸ್ತರಣಾ ಕಾರ್ಯಕ್ರಮಗಳಿಗೆ ಬೆಂಬಲ ನೀಡುವಂಥ ಚಾಲ್ತಿ ಯೋಜನೆಗಳನ್ನು ಪರಿಗಣಿಸುವುದು.
- ❖ ವಿವಿಧ ಸಂಘಟನೆಗಳಿಂದ ಉದಾಹರಣೆಗೆ: ರಾಜ್ಯ ಕೃಷಿ ಇಲಾಖೆಗಳು, ಭಾರತ ಕೃಷಿ ಸಂಶೋಧನಾ ಪರಿಷತ್ತು (ಐಸಿಎಆರ್), ಕೃಷಿ ವಿಶ್ವವಿದ್ಯಾನಿಲಯಗಳು, **ಕೃಷಿ ವಿಜ್ಞಾನ ಕೇಂದ್ರಗಳು** (ಕೆವಿಕೆ), ಇತ್ಯಾದಿಗಳಿಂದ ಲಭ್ಯವಿರುವ ಕೃಷಿ ವಿಸ್ತರಣಾ ಸೇವೆಗಳನ್ನು ಗ್ರಾಮ ಪಂಚಾಯಿತಿಯು ಪಡೆದುಕೊಳ್ಳಬೇಕು.

### ii. ಜಲ ಸಂರಕ್ಷಣೆಯಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ:

ಸ್ಥಳೀಯ ಸರ್ಕಾರವಾಗಿ ಗ್ರಾಮ ಪಂಚಾಯಿತಿಯು, ಜಲ ಸಂಕ್ಷಣೆಯನ್ನು ಸುಸ್ಥಿರಗೊಳಿಸುವಂಥ ತನ್ನ ಜಲ ಸಂಪನ್ಮೂಲಗಳ ಅಭಿವೃದ್ಧಿ ಕಾರ್ಯದಲ್ಲಿ, ಅವುಗಳ ರಕ್ಷಣೆಯಲ್ಲಿ ಮತ್ತು ಅವುಗಳ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ಉದ್ದೇಶ ಸಾಧನೆಯ ಪಾತ್ರವನ್ನು ವಹಿಸಬೇಕು. ಅದು ಕೃಷಿ ಮತ್ತು ಸ್ಥಳೀಯ ಆರ್ಥಿಕತೆಗೆ ಪ್ರಮುಖವಾಗಿದ್ದು, ಅದು ಆಹಾರ ಮತ್ತು ಪೌಷ್ಟಿಕತೆಯ ಸುರಕ್ಷತೆಯನ್ನು ಹೆಚ್ಚಿಸುತ್ತದೆ.

- ❖ ಜಲ ಸಂರಕ್ಷಣೆಗೆ ಸೂಕ್ತ ನೀರು–ಬಳಕೆ ತಂತ್ರಜ್ಞಾನಗಳನ್ನು ಖಚಿತಪಡಿಸುವುದು.
- ❖ ಸೂಕ್ತ ಬೆಳೆ ಮಾದರಿಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ನೀರು–ಬಳಕೆಯಲ್ಲಿ ಮಿತವ್ಯಯ ಸಾಧಿಸಲು ಪ್ರೋತ್ಸಾಹ ನೀಡುವುದು.
- ❖ ಜಲಾಶಯಗಳ ಮೇಲೆ ನಿಗಾ ಇಡುವ ವ್ಯವಸ್ಥೆಯನ್ನು

ಅನುಷ್ಠಾನಗೊಳಿಸುವುದು.

- ❖ ಜಲಾಶಯಗಳ ಸುರಕ್ಷತಾ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವುದು.
- ❖ ಸ್ಥಳೀಯ ಪರಿಸರ ಸಂಬಂಧಿ ಸುರಕ್ಷತಾ ಕ್ರಮಗಳನ್ನು ಅನುಷ್ಠಾನಗೊಳಿಸುವುದು.
- ❖ ಪರಿಸರ ಸಂಬಂಧಿತ ನಿರ್ವಹಣಾ ರೂಪುರೇಷೆಯನ್ನು ಯೋಜಿಸುವುದು ಮತ್ತು ಅನುಷ್ಠಾನಗೊಳಿಸುವುದು.
- ❖ ಸೂಕ್ತ ನೀರಾವರಿ ವಿಧಾನಗಳಿಗೆ ಸೌಲಭ್ಯ ಕಲ್ಪಿಸುವುದು.
- ❖ ಬೇಡಿಕೆ–ಉತ್ಪತ್ತಿಯನ್ನು ಸರಿದೂಗಿಸುವದನ್ನು ಅಧರಿಸಿ, ನೀರು ಪಡೆಯುವ ಬಗ್ಗೆ ನಿಯಂತ್ರಣ ವ್ಯವಸ್ಥೆಯನ್ನು ಖಚಿತಪಡಿಸುವುದು.
- ❖ ವರ್ಷವಿಡೀ ನೀರಿನ ಲಭ್ಯತೆಯನ್ನು ಸುನಿಶ್ಚಿತಗೊಳಿಸಲು, ಗ್ರಾಮ ಪಂಚಾಯಿತಿಯು ಕೈಗೊಳ್ಳಬಹುದಾದಂಥ ಕ್ರಮಗಳಾಗಿ, ಮಳೆ ನೀರು ಸಂರಕ್ಷಣೆ ಮಾಡುವುದು ಮತ್ತು ಅಂತರ್ಜಲದ ಬಳಕೆಯನ್ನು ನಿಯಂತ್ರಿಸುವುದು.
- ❖ ಶಾಲೆಗಳು, ಅಂಗನವಾಡಿ ಕೇಂದ್ರಗಳು, ಗ್ರಾಮ ಪಂಚಾಯಿತಿ ಕಚೇರಿಗಳು ಮತ್ತು ಇತರ ಸಾರ್ವಜನಿಕ ಕಟ್ಟಡಗಳಲ್ಲಿ, ಎಮ್‌ಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ಮಳೆ ನೀರು ಕೊಯ್ಲು ರಚನೆಗಳನ್ನು ನಿರ್ಮಿಸುವುದು.
- ❖ ಎಮ್‌ಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ಜಲಾನಯನ ಪ್ರದೇಶ ರಚನೆಗಳಿಗೆ ಮತ್ತು ಸೂಕ್ತ ನೀರಾವರಿ ಕಾಲುವೆಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡುವುದು.
- ❖ ಜಲ ಸಂಪನ್ಮೂಲಗಳ ಕಾಪಾಡುವಿಕೆ, ಸಂರಕ್ಷಣೆ, ದಕ್ಷ ಮತ್ತು ನಿಷ್ಪಕ್ಷಪಾತ ಬಳಕೆಗೆ ಸಂಬಂಧಿಸಿದ ವಿಷಯಗಳನ್ನು ಕುರಿತು ಕಾರ್ಯನಿರ್ವಹಿಸಿ, ನೀರಿನ ಸಾಮೂಹಿಕ ನ್ಯಾಯಯುತ ಬಳಕೆಯನ್ನು ಖಾತರಿಪಡಿಸುವುದು.
- ❖ ಜಲ ನಿರ್ವಹಣೆ ತಂತ್ರಜ್ಞಾನಗಳು ಮತ್ತು ಉಪಗ್ರಹದಿಂದ ಒದಗಿಸಿದ ಮತ್ತು ನಕ್ಷೆಗಳ ನೆರವಿನಿಂದ ಯೋಜಿತ ಬಳಕೆ ಕುರಿತು ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ ಆಯೋಜಿಸುವುದು.
- ❖ ಗ್ರಾಮದಲ್ಲಿ ಸರಿಯಾದ ಸ್ಥಳಗಳಲ್ಲಿ ಜಲ ಸಂಗ್ರಹಣಾಗಾರಗಳ ನಿರ್ಮಾಣಕ್ಕಾಗಿ ಸೂಕ್ತ ಮಾದರಿಯನ್ನು ಸೃಜಿಸುವ ಜ್ಞಾನವನ್ನು ನೀಡಿ, ಗ್ರಾಮ ಮಟ್ಟದಲ್ಲಿ ಜಲ ನಿರ್ವಹಣೆಗಾಗಿ ಯೋಜನೆ ರೂಪಿಸಲು ಚುನಾಯಿತ ಪ್ರತಿನಿಧಿಗಳ ಕೌಶಲ್ಯ ಹೆಚ್ಚಿಸುವುದು.
- ❖ ಜಲ ಸಂರಕ್ಷಣೆ ಕುರಿತು ಸಮಗ್ರ ರೀತಿಯಲ್ಲಿ ಕಾರ್ಯನಿರ್ವಹಿಸುವುದು ಪಿಆರ್‌ಐಗಳ ಎಲ್ಲಾ ಮೂರು ಹಂತಗಳಲ್ಲಿ ಅಗತ್ಯವಾಗಿದೆ. ಜಲ ನಿರ್ವಹಣೆ ಕುರಿತು ಸಮಗ್ರ ಕಾರ್ಯನಿರ್ವಹಣೆಗಾಗಿ ಗ್ರಾಮ ಪಂಚಾಯಿತಿಗಳೊಂದಿಗೆ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳೂ ತೊಡಗಿಕೊಳ್ಳುವುದನ್ನು ಅವಶ್ಯಕಗೊಳಿಸುವ ತಾಂತ್ರಿಕ ಮತ್ತು ಹಣಕಾಸು ಸಂಪನ್ಮೂಲಗಳನ್ನು ಬ್ಲಾಕ್‌ಗಳಲ್ಲಿ ಮತ್ತು ಜಿಲ್ಲೆಗಳಲ್ಲಿ ಇರುವಂತೆ ಮಾಡುವುದು.
- ❖ ಐಇಸಿ ಸಾಮಗ್ರಿಗಳು, ಚಲನಚಿತ್ರಗಳು, ಸ್ಥಳೀಯ ಸಾಂಸ್ಕೃತಿಕ ಪ್ರದರ್ಶನಗಳ ಮೂಲಕ ಪರಿಸರ ಸಂಬಂಧಿ ಶಿಕ್ಷಣ ನೀಡಲು ಹಾಗೂ ಗ್ರಾಮಗಳಲ್ಲಿ ಮಳೆ ನೀರಿನ ಮತ್ತು ಅಂತರ್ಜಲದ ಸಂರಕ್ಷಣೆಗೆ ಪ್ರೋತ್ಸಾಹ ನೀಡುವುದು.

### ii. ಪೌಷ್ಟಿಕ ಆಹಾರ ಸುರಕ್ಷತೆಗಾಗಿ ಸುರಕ್ಷಿತ ಕುಡಿಯುವ ನೀರು ಮತ್ತು ನೈರ್ಮಲ್ಯ ವ್ಯವಸ್ಥೆಯನ್ನು ಸುನಿಶ್ಚಿತಗೊಳಿಸುವಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ:

ಸಾರ್ವತ್ರಿಕವಾಗಿ ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯದ ವ್ಯಾಪ್ತಿಯನ್ನು ಸಾಧಿಸುವ ಪ್ರಯತ್ನಗಳನ್ನು ಹೆಚ್ಚಿಸಲು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಕುಟುಂಬ ಮಟ್ಟದಲ್ಲಿ ಸ್ವಚ್ಛ ಕುಡಿಯುವ ನೀರಿನ ಲಭ್ಯತೆಯನ್ನು ಸುನಿಶ್ಚಿತಗೊಳಿಸಲು, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಪ್ರಾರಂಭಿಸಿವೆ; ಬಯಲು ಶೌಚ ಪದ್ಧತಿಯನ್ನು ಕೊನೆಗಾಣಿಸಲು ಶೌಚಾಲಯಗಳನ್ನು ನಿರ್ಮಿಸುವುದು ಹಾಗೂ ಜನರ ಜೀವನ ಮಟ್ಟ ಮತ್ತು ಆರೋಗ್ಯ ಸುಧಾರಣೆಗಾಗಿ ದ್ರವ ಮತ್ತು ಘನ ತ್ಯಾಜ್ಯವನ್ನು ಸೂಕ್ತವಾಗಿ ನಿರ್ವಹಣೆ ಮಾಡುವುದು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು (ಆರ್‌ಡಿಡಬ್ಲ್ಯುಎಸ್‌ಡಿ), ನೈರ್ಮಲ್ಯ ವ್ಯವಸ್ಥೆಯನ್ನು ಸುನಿಶ್ಚಿತಗೊಳಿಸುವ ಮತ್ತು ಕರ್ನಾಟಕದ ಗ್ರಾಮೀಣ ಪ್ರದೇಶಗಳಿಗೆ ಸ್ವಚ್ಛ ಕುಡಿಯುವ ನೀರನ್ನು ಒದಗಿಸುವ ದಿಶೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಅದು, **ಗ್ರಾಮೀಣ ಸ್ವಚ್ಛ ಭಾರತ ಅಭಿಯಾನ** (ಎಸ್‌ಬಿಎಮ್‌ಜಿ) ಕರ್ನಾಟಕ ಮತ್ತು **ಜಲ ಜೀವನ ಅಭಿಯಾನ (ಜೆಜೆಎಮ್)** ಕರ್ನಾಟಕ **(ಮನೆ ಮನೆಗೆ ಗಂಗೆ** ಎಂದು ಸಹ ಪ್ರಸಿದ್ಧವಾಗಿದೆ) ಘಟಕಗಳನ್ನು ನಿರ್ವಹಿಸುತ್ತಿದೆ. ಎಸ್‌ಬಿಎಮ್‌ಜಿಯ IIನೇ ಹಂತದ ಅಡಿಯಲ್ಲಿ ಬಯಲು ಶೌಚ ಮುಕ್ತ (ಒಡಿಎಫ್) ವಿಶೇಷ (ಪ್ಲಸ್) ಕಾರ್ಯಚಟುವಟಿಕೆಗಳನ್ನು ಬಲಪಡಿಸುವುದು ಹಾಗೂ ಗ್ರಾಮಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯದ ಸುರಕ್ಷಿತ ನಿರ್ವಹಣೆಗಾಗಿ ಮಧ್ಯಸ್ಥಿಕೆ ಸೇವೆಗಳನ್ನು ಒದಗಿಸುವ ಕುರಿತು ಗಮನ ಕೇಂದ್ರೀಕರಿಸುವುದು.

ಗ್ರಾಮ ಪಂಚಾಯಿತಿಯು, ಭಾರತ ಸಂವಿಧಾನದ 11ನೇ ಅನುಸೂಚಿಯಲ್ಲಿ ಉಲ್ಲೇಖಿಸಿದಂತೆ ತನ್ನ ಜನರ ಆರೋಗ್ಯ, ಆಹಾರ ಮತ್ತು ಪೌಷ್ಟಿಕತೆ ಸುರಕ್ಷತೆಯನ್ನು ಸುನಿಶ್ಚಿತಗೊಳಿಸುವಂಥ ಕಾರ್ಯ ಕ್ರಮಗಳನ್ನು ಅನುಷ್ಠಾನಗೊಳಿಸುವುದನ್ನು ಕಡ್ಡಾಯಗೊಳಿಸಿದೆ.

- ❖ ಜೆ.ಪಿ.ಡಿ.ಪಿ.ಯಲ್ಲಿ ನೀರು ಮತ್ತು ನೈರ್ಮಲ್ಯ

ವಿಷಯದ ಸೇರ್ಪಡೆ.

❖ ಎಲ್ಲಾ ಜೆ.ಪಿ.ಡಿ.ಪಿ. ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪರಿಸರ ಸುರಕ್ಷತಾ ಕ್ರಮಗಳನ್ನು ಅನುಸರಿಸುವುದು.

❖ ***"ಎಲ್ಲಾ ಸಮಯದಲ್ಲೂ, ಪ್ರತಿಯೊಬ್ಬರಿಗೂ ಕುಡಿಯುವ ನೀರು ಮತ್ತು ಸಮಗ್ರ ನೈರ್ಮಲ್ಯ"*** *ಉದ್ದೇಶ ಸಾಧನೆಗಾಗಿ ಅಲ್ಪಾವಧಿ/ ದೀರ್ಘಾವಧಿ ಕಾರ್ಯಕ್ರಮಗಳನ್ನು ಸಿದ್ಧಪಡಿಸಬೇಕು.*

❖ ನೀರು ವಿತರಣೆಯೊಂದಿಗೆ, ಜಲ ಸಂರಕ್ಷಣೆಗೆ ಪ್ರಾಮುಖ್ಯತೆ ನೀಡುವುದು.

❖ ನೀರಿನ ಮೂಲವನ್ನು ಅನ್ವೇಷಿಸಿ, ಲಭ್ಯತೆಯನ್ನು ಖಚಿತಪಡಿಸಿಕೊಂಡ ನಂತರ ಮಾತ್ರವೇ ಕುಡಿಯುವ ನೀರಿನ ಯೋಜನೆಗಳನ್ನು ಸಿದ್ಧಪಡಿಸಬೇಕು. ಇದನ್ನು ಯೋಜನೆಯಲ್ಲಿ (ಪ್ರಾಜೆಕ್ಟ್‌ನಲ್ಲಿ) ಪ್ರಮಾಣೀಕರಿಸಬೇಕು.

❖ ನೀರು ಮತ್ತು ನೈರ್ಮಲ್ಯ ನಿರ್ವಹಣೆಯನ್ನು ಯೋಜಿಸುವಲ್ಲಿ ಮತ್ತು ಸುಧಾರಣೆಗೊಳಿಸುವಲ್ಲಿ ಎಮ್‌ಜಿಎನ್‌ಆರ್‌ಇಜಿಎಸ್, ಎಸ್‌ಹೆಚ್‌ಜಿಗಳು, ಸಿಬಿಒಗಳು ಗ್ರಾಮ ಸಮಿತಿಗಳು, ಮುಂಚೂಣಿ ಕಾರ್ಯಕರ್ತರು, ಶಿಕ್ಷಕಿಯರು, ನೋಂದಾಯಿತ ಎನ್‌ಜಿಒಗಳನ್ನು ಒಳಗೊಂಡಂತೆ, ಸ್ಥಳೀಯ ಸಮುದಾಯಗಳ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸುವುದು.

❖ ನೀರು ಕಲುಷಿತಗೊಳಿಸುವುದನ್ನು ತಪ್ಪಿಸಿ, ಸುರಕ್ಷಿತ ನೈರ್ಮಲ್ಯ ಕ್ರಮಗಳನ್ನು ಅಳವಡಿಸಿಕೊಳ್ಳುವ ಮತ್ತು ಕಲುಷಿತಗೊಂಡ ನೀರಿನ ಸಂಸ್ಕರಣೆ ಮೂಲಕ ನೀರನ್ನು ಸಂಸ್ಕರಿಸಿ, ಜಲ ಮೂಲಗಳ ಗುಣಮಟ್ಟವನ್ನು ಸುರಕ್ಷಿತಗೊಳಿಸುವುದು.

❖ ನೀರಿನ ಲಭ್ಯತೆಯನ್ನು ಖಾತರಿಪಡಿಸಿಕೊಂಡ ನಂತರ ಮಾತ್ರವೇ, ಅವಶ್ಯವಿರುವೆಡೆಯಲ್ಲಿ ಗೃಹ ಬಳಕೆಗೆ ನೀರಿನ ಸಂಪರ್ಕಗಳನ್ನು ಹಾಗೂ ಸಾರ್ವಜನಿಕ ಕುಡಿಯುವ ನೀರಿನ ನಲ್ಲಿಗಳನ್ನು ಸುನಿಶ್ಚಿತಗೊಳಿಸುವುದು.

❖ ಅತಿ ಸಣ್ಣ ಜನ ಸಮುದಾಯಗಳಿಗೆ ಗೃಹ ಬಳಕೆ ಸಂಪರ್ಕಗಳನ್ನು ನೀಡುವಾಗ ಆದ್ಯತೆ ನೀಡುವುದು.

❖ ವಾತಾವರಣ ಮತ್ತು ಹವಾಮಾನದಲ್ಲಿ ಏನೇ ಬದಲಾವಣೆಗಳಿದ್ದರೂ, ವರ್ಷವಿಡೀ ಎಲ್ಲಾ ಕುಟುಂಬಗಳಿಗೆ ಗೃಹ ಬಳಕೆಯ ಉದ್ದೇಶಗಳಿಗಾಗಿ ಸಮರ್ಪಕ ಪ್ರಮಾಣದಲ್ಲಿ ಉತ್ತಮ ಗುಣಮಟ್ಟದ ನೀರನ್ನು ಸುನಿಶ್ಚಿತಗೊಳಿಸುವುದು.

❖ ಸ್ವಚ್ಛ ಮತ್ತು ಸುರಕ್ಷಿತ ನೀರಿನ ಸಂಗ್ರಹ ಸಂಗ್ರಹಾಗಾರ (ಟ್ಯಾಂಕ್)ಗಳನ್ನು ಖಾತರಿಪಡಿಸುವುದು.

❖ ಸಾರ್ವಜನಿಕರಲ್ಲಿ ನೀರಿನ ಅತ್ಯುತ್ತಮ ಬಳಕೆಯನ್ನು ಖಾತರಿಪಡಿಸುವುದು.

❖ ಅಂಗನವಾಡಿ ಕೇಂದ್ರಗಳಿಗೆ ಮತ್ತು ಶಾಲೆಗಳಿಗೆ ಸುರಕ್ಷಿತ ಕುಡಿಯುವ ನೀರಿನ ಪೂರೈಕೆ ಮತ್ತು ಸಂಗ್ರಹವನ್ನು ಖಾತರಿಪಡಿಸುವುದು.

❖ ಸುಧಾರಣಾ ಕ್ರಮವಾಗಿ ಶೌಚಾಲಯಗಳಿಲ್ಲದ ಕುಟುಂಬಗಳನ್ನು ಗುರುತಿಸುವುದು.

❖ ಎಮ್‌ಜಿಎನ್‌ಆರ್‌ಇಜಿಎಸ್, ಎಸ್‌ಬಿಎಮ್ ಮತ್ತು ತತ್ಸಂಬಂಧಿ ಯೋಜನೆಗಳ ಅಡಿಯಲ್ಲಿ, ಬಾಲಕಿ–ಸ್ನೇಹಿ/ ಮಹಿಳಾ–ಸ್ನೇಹಿ ಅನುಕೂಲಗಳನ್ನು ಹೊಂದಿರುವಂತೆ ಶೌಚಾಲಯ ಕಟ್ಟಡಗಳ ನಿರ್ಮಾಣವನ್ನು ಸುನಿಶ್ಚಿತಗೊಳಿಸುವುದರೊಂದಿಗೆ ಎಲ್ಲಾ ಮನೆಗಳಲ್ಲಿ, ಅಂಗನವಾಡಿ ಕೇಂದ್ರಗಳಲ್ಲಿ, ಶಾಲೆಗಗಳಲ್ಲಿ, ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ, ಸಾರ್ವಜನಿಕ ಸಂಸ್ಥೆಗಳಲ್ಲಿ ಮತ್ತು ಸೂಕ್ತ ಸ್ಥಳಗಳಲ್ಲಿ ಸುರಕ್ಷಿತ ಮತ್ತು ಸುಸ್ಥಿತಿಯಲ್ಲಿರುವ ಶೌಚಾಲಯಗಳನ್ನು ನಿರ್ಮಿಸುವುದನ್ನು ಸುನಿಶ್ಚಿತಗೊಳಿಸುವುದು/ ನೈರ್ಮಲ್ಯ ಕಾಪಾಡುವುದು.

❖ ಐಇಸಿ ಕರಪತ್ರಗಳು, ಆಂದೋಲನಗಳು, **ಜಾಥಾಗಳು,** ಬೀದಿ ನಾಟಕಗಳು, ಚಲನಚಿತ್ರ ಪ್ರದರ್ಶನಗಳ ಮೂಲಕ ನೈರ್ಮಲ್ಯ, ನೀರಿನ ಸುರಕ್ಷಿತ ಬಳಕೆ, ನೀರು ಕಲುಷಿತಗೊಳ್ಳುವುದನ್ನು ತಡೆಯುವುದು, ಶೌಚಾಲಯಗಳ ಪ್ರಾಮುಖ್ಯತೆ ಮತ್ತು ಶೂನ್ಯ ತ್ಯಾಜ್ಯ ಮತ್ತು ನೈರ್ಮಲ್ಯ ಹವ್ಯಾಸಗಳ ಬಗ್ಗೆ ಸಮುದಾಯಗಳಿಗೆ ಶಿಕ್ಷಣ ನೀಡುವುದು.

**ದುರ್ಬಲ ವರ್ಗಗಳ ರಕ್ಷಣೆಗಾಗಿ ಸಾಮಾಜಿಕ ಸುರಕ್ಷತಾ ಕಾರ್ಯಜಾಲ:**

**ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮವು (ಎನ್‌ಎಸ್‌ಎಪಿ)** ಸಾಮಾಜಿಕ ಪಿಂಚಣಿಗಳ ರೂಪದಲ್ಲಿ, ವಯೋವೃದ್ಧರು, ವಿಧವೆಯರು ಮತ್ತು ವಿಶೇಷ ಚೇತನ ವ್ಯಕ್ತಿಗಳಿಗೆ ಹಣಕಾಸು ನೆರವು ಒದಗಿಸುವಂಥ ಭಾರತ ಸರ್ಕಾರದ ಕೇಂದ್ರೀಯ ಪ್ರಾಯೋಜಿತ ಯೋಜನೆಯಾಗಿದ್ದು, ಬಿಪಿಎಲ್ ಕುಟುಂಬದಲ್ಲಿ, ಪ್ರಮುಖವಾಗಿ ಸಂಪಾದಿಸುವ ವ್ಯಕ್ತಿಯ ಮರಣದ ಸಂದರ್ಭದಲ್ಲಿ, ಒಂದೇ ಸಲ ನೀಡುವ ನೆರವನ್ನು ಸಹ ಒಳಗೊಳ್ಳುತ್ತದೆ. ಪ್ರಸ್ತುತದಲ್ಲಿ ಎನ್‌ಎಸ್‌ಎಪಿ, ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆ (ಐಜಿಎನ್‌ಒಎಪಿಎಸ್), ಇಂದಿರಾ ಗಾಂಧಿ ರಾಷ್ಟ್ರೀಯ ವಿಧವಾ ವೇತನ ಯೋಜನೆ (ಐಜಿಎನ್‌ಡಬ್ಲ್ಯುಪಿಎಸ್), ಇಂದಿರಾ ಗಾಂಧಿ ರಾಷ್ಟ್ರೀಯ ವಿಶೇಷ ಚೇತನ ವ್ಯಕ್ತಿಗಳಿಗಾಗಿ ಪಿಂಚಣಿ ಯೋಜನೆ (ಐಜಿಎನ್‌ಡಿಪಿಎಸ್), ರಾಷ್ಟ್ರೀಯ ಕುಟುಂಬ ಪ್ರಯೋಜನ ಯೋಜನೆ (ಎನ್‌ಎಫ್‌ಬಿಎಸ್) ಮತ್ತು ಅನ್ನಪೂರ್ಣ ಯೋಜನೆಗಳನ್ನು ಒಳಗೊಂಡಿದೆ.

**ಎನ್‌ಎಸ್‌ಎಪಿಯ ಅನುಷ್ಠಾನದಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ:**

❖ ಗ್ರಾಮ ಪಂಚಾಯಿತಿಗಳು, ಎನ್‌ಎಸ್‌ಎಪಿಯ ಎಲ್ಲಾ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳನ್ನು ಗುರುತಿಸುವಲ್ಲಿ ಸಕ್ರಿಯ ಪಾತ್ರ ವಹಿಸಬೇಕು.

❖ ಗ್ರಾಮ ಪಂಚಾಯಿತಿಗಳು/ ಪೌರಸಭೆಗಳು ವಾರ್ಷಿಕ ಸಮೀಕ್ಷೆ ನಡೆಸಬೇಕು ಮತ್ತು ಅದನ್ನು

ಅನುಮೋದಿತ ಬಿಪಿಎಲ್ ಪಟ್ಟಿಯೊಂದಿಗೆ ಹೋಲಿಸಿ ನೋಡಬೇಕು. ಎಲ್ಲರ ಒಳಗೊಳ್ಳುವಿಕೆಯನ್ನು ಸಾಧಿಸಲು ಇದು, ಎನ್ಎಸ್ಎಪಿ ಯೋಜನೆಗಳ ಅಡಿಯಲ್ಲಿ ಎಲ್ಲ ಅರ್ಹ ವ್ಯಕ್ತಿಗಳ ಪಟ್ಟಿ ಮಾಡಲು ಸಹಾಯಕವಾಗುತ್ತದೆ.

- ❖ ಪರಿಶೀಲನಾ ಪ್ರಾಧಿಕಾರಿಯ ಶಿಫಾರಸ್ಸುಗಳೊಂದಿಗೆ ಅರ್ಜಿದಾರರ ಪಟ್ಟಿಯ ಬಗ್ಗೆ **ಗ್ರಾಮ ಸಭೆಯಲ್ಲಿ** ಮತ್ತು ಆ ತರುವಾಯ ಗ್ರಾಮ ಪಂಚಾಯಿತಿಯಲ್ಲಿ ಚರ್ಚಿಸಬೇಕು ಹಾಗೂ ಈ ವೇದಿಕೆಗಳ ಸಲಹೆಗಳನ್ನು ಪರಿಗಣಿಸಬೇಕು ಮತ್ತು ಪರಿಶೀಲನಾಧಿಕಾರಿಯ ವರದಿ ಮಾಡಬೇಕು.
- ❖ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಮಂಜೂರು ಮಾಡಲಾದ ಫಲಾನುಭವಿಗಳ ಪಟ್ಟಿಯನ್ನು ಪ್ರದರ್ಶಿಸಬೇಕು ಮತ್ತು ಪ್ರತಿ ಮೂರು ತಿಂಗಳಿಗೊಮ್ಮೆ ನವೀಕರಿಸಬೇಕು. ಎಲ್ಲಾ ಅರ್ಜಿಗಳ ಫೋಟೋ ಪ್ರತಿಗಳನ್ನು ಒಳಗೊಂಡ ಕಡತ, ಅರ್ಜಿಗಳ ಸ್ವೀಕೃತಿಯನ್ನು ದಾಖಲಿಸಿದ ರಿಜಿಸ್ಟರ್ ಮತ್ತು ಮಂಜೂರಾತಿ ಆದೇಶಗಳು ಹಾಗೂ ಅವುಗಳನ್ನು ತಿರಸ್ಕರಿಸಿದ ಬಗ್ಗೆ ವಿವರಗಳನ್ನು ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ತಪಾಸಣೆಗಾಗಿ ಮುಕ್ತವಾಗಿರಿಸಬೇಕು ಮತ್ತು ಅವು ಲಭ್ಯವಿರಬೇಕು.
- ❖ ಪ್ರಯೋಜನಗಳನ್ನು ಪಡೆಯುವುದಕ್ಕಾಗಿ ಅನುಸರಿಸಬೇಕಾದ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಎನ್ಎಸ್ಎಪಿ ಬಗ್ಗೆ ಮಾಹಿತಿ ಪ್ರಸಾರ ಮಾಡಬೇಕು. ಈ ಕಾರ್ಯದಲ್ಲಿ, ಗ್ರಾಮ ಪಂಚಾಯಿತಿಯು, ಸ್ವಯಂಸೇವಾ ಸಂಸ್ಥೆಗಳು, ಸ್ವ-ಸಹಾಯ ಗುಂಪುಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಮುಂತಾದವರು ತೊಡಗಿಕೊಳ್ಳಬೇಕು.
- ❖ **ಗ್ರಾಮ ಸಭೆ**/ ವಾರ್ಡ್ ಮಟ್ಟದ ಸಭೆಗಳಲ್ಲಿ ಕಾಲ ಕಾಲಕ್ಕೆ ಪರಿಶೀಲನೆ ಮತ್ತು ಚರ್ಚೆ ನಡೆಸಬೇಕು.
- ❖ ಎನ್ಆರ್ಎಲ್ಎಮ್‌ನ ಸ್ವ-ಸಹಾಯ ಗುಂಪುಗಳಿರುವಲ್ಲಿ, ಅವರು ಫಲಾನುಭವಿಗಳನ್ನು ಗುರುತಿಸುವಲ್ಲಿ ತೊಡಗಿಕೊಳ್ಳಬೇಕು.

***ಬೇಟಿ ಬಚಾವೋ ಬೇಟಿ ಪಡಾವೋ* (ಬಿಬಿಬಿಪಿ), 'ಹೆಣ್ಣು** ಮಗುವನ್ನು ಉಳಿಸಿ, ಹೆಣ್ಣು ಮಗುವಿಗೆ ಶಿಕ್ಷಣ ನೀಡಿ' ಇದು, ಭಾರತದಲ್ಲಿ ಬಾಲಕಿಯರಿಗಾಗಿ ಉದ್ದೇಶಿಸಿದ ಕ್ಷೇಮಾಭಿವೃದ್ಧಿ ಸೇವೆಗಳ ಬಗ್ಗೆ ಅರಿವು ಮೂಡಿಸುವ ಮತ್ತು ದಕ್ಷತೆಯನ್ನು ಹೆಚ್ಚಿಸುವ ಗುರಿಗಳನ್ನು ಹೊಂದಿರುವಂಥ ಭಾರತ ಸರ್ಕಾರದ ಆಂದೋಲನವಾಗಿದೆ. ಇದು, ಸಮಾಜದಲ್ಲಿ ಆಳವಾಗಿ ಬೇರೂರಿದ ಲಿಂಗ ತಾರತಮ್ಯದ ವಿರುದ್ಧ ಹೋರಾಡಲು ಮತ್ತು ಬಾಲಕಿಯರಿಗೆ ಸಾಮಾಜಿಕ ಸ್ಥಾನಮಾನ ನೀಡಲು, ಹೆಣ್ಣು ಮಗುವಿನ ಜನನಕ್ಕೆ ಸ್ವಾಗತ ಕೋರಿ ಸಂಭ್ರಮಿಸುತ್ತಲೇ, ಜೀವಿಸುವ, ಸುರಕ್ಷತೆಯ ಮತ್ತು ಶಿಕ್ಷಣದ ಲಭ್ಯತೆಯನ್ನು ಹೆಣ್ಣು ಮಕ್ಕಳಿಗೆ ನೀಡಲು ರೂಪಿಸಿದ ಒಂದು ಕಾರ್ಯಕ್ರಮವಾಗಿದೆ. ಹೆಣ್ಣು ಮಗುವನ್ನು ಉಳಿಸಿ, ಸಂರಕ್ಷಣೆ ಮಾಡಿ, ಮಹಿಳಾ ಸಬಲೀಕರಣವನ್ನು ಸುನಿಶ್ಚಿತಗೊಳಿಸಲು ಸಮನ್ವಯದ ಮತ್ತು ಸಂಯೋಜಿತ ಪ್ರಯತ್ನಗಳ ಅಗತ್ಯವಿದೆ.

**ಬೇಟಿ ಬಚಾವೋ ಬೇಟಿ ಪಡಾವೋ (ಬಿಬಿಬಿಪಿ) ಆಂದೋಲನ ಅನುಷ್ಠಾನದಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ**

**ಸ್ವಚ್ಛ ಭಾರತ, ಬಿಬಿಬಿಪಿಯಂಥ** ಆದೋಲನಗಳಲ್ಲಿ ಸಮಾಜದ ಮಾನದಂಡಗಳನ್ನು ಮತ್ತು ಆಳವಾಗಿ ಬೇರೂರಿದ ವರ್ತನೆಯ ರೀತಿಗಳನ್ನು ಬದಲಾಯಿಸುವಲ್ಲಿ ಹಾಗೂ ವಿವಿಧ ರಾಜ್ಯಗಳ ಉದಾಹರಣೆಗಳಿಗೆ ಸಂಬಂಧಿಸಿದಂತೆ, ಪಂಚಾಯಿತಿಗಳ ಸಕ್ರಿಯ ತೊಡಗುವಿಕೆಯನ್ನು ಮುಖ್ಯ ಅಂಶವನ್ನಾಗಿ ನೋಡಲಾಗುತ್ತದೆ. ಬಿಬಿಬಿಪಿ ಆಂದೋಲನಕ್ಕೆ ಪ್ರೋತ್ಸಾಹಿಸುವುದನ್ನು ಮತ್ತು ಅನುಷ್ಠಾನಗೊಳಿಸುವುದನ್ನು, ಗ್ರಾಮ ಪಂಚಾಯಿತಿಗಳ ಮಟ್ಟಗಳಲ್ಲಿ ವೆಚ್ಚ-ರಹಿತ/ ಕಡಿಮೆ ವೆಚ್ಚದ ಕಾರ್ಯಚಟುವಟಿಕೆಗಳನ್ನಾಗಿ ನಡೆಸಬಹುದಾಗಿದೆ.

ಗ್ರಾಮ ಪಂಚಾಯಿತಿಯ ಉಪ-ಸಮಿತಿಯಾದ ವಿಹೆಚ್ಎಸ್ಎನ್‌ಸಿ ಇದು, ಬಿಬಿಬಿಪಿ ಕ್ರಿಯಾ ಯೋಜನೆಯ ಸಮನ್ವಯ, ಅನುಷ್ಠಾನ ಮತ್ತು ಮೇಲ್ವಿಚಾರಣೆಗೆ ಜವಾಬ್ದಾರವಾಗಿದೆ.

- ❖ ಸ್ಥಳೀಯ ಸಮುದಾಯಗಳ/ ಮಹಿಳೆಯರ/ ಯುವಕರ ಸಹಭಾಗಿತ್ವದಲ್ಲಿ, ಸಾಮಾಜಿಕ ಬದಲಾವಣೆಗಾಗಿ ಪಂಚಾಯಿತಿ ಸದಸ್ಯರನ್ನು ಮತ್ತು ತಳಮಟ್ಟದ ಕಾರ್ಯಕರ್ತರನ್ನು ಸಜ್ಜುಗೊಳಿಸುವುದು ಮತ್ತು ತರಬೇತಿ ನೀಡುವುದು.
- ❖ **ಗ್ರಾಮ ಸಭೆ, ಮಹಿಳಾ ಸಭೆ ಮತ್ತು ವಿಹೆಚ್ಎನ್‌ಡಿ**ಗಳಂಥ ಪಂಚಾಯಿತಿಗಳ ಎಲ್ಲಾ ವೇದಿಕೆಗಳಲ್ಲಿ, ಲಿಂಗ ತಾರತಮ್ಯದ ರೂಢಿಗಳನ್ನು ಮತ್ತು ಸಾಮಾಜಿಕ ಮಾನದಂಡಗಳನ್ನು ಪ್ರಶ್ನಿಸುವ ಕಾರ್ಯದಲ್ಲಿ ಸಮುದಾಯಗಳೊಂದಿಗೆ ತೊಡಗಿಕೊಳ್ಳುವುದು.
- ❖ ಗ್ರಾಮ ಪಂಚಾಯಿತಿಯು, ವರ್ತನೆಗೆ ಸಂಬಂಧಿಸಿದಂತೆ ಬದಲಾವಣೆಗಾಗಿ ಮಾತುಕತೆ ನಡೆಸಲು ಮತ್ತು ಈ ಮುಂದಿನ ವಿಷಯಗಳನ್ನು ಕುರಿತು **ಗ್ರಾಮ ಸಭೆ**ಯಲ್ಲಿ ವಿಶೇಷವಾಗಿ ಚರ್ಚಿಸಲು ಅವಕಾಶ ಮಾಡಿಕೊಡುವ ಮೂಲಕ, ನಿರ್ಣಾಯಕ ಪಾತ್ರ ವಹಿಸಬಹುದಾಗಿದೆ: (ಎ) ಕಳೆದ ಕೆಲವು ವರ್ಷಗಳಲ್ಲಿ ಬಾಲಕರ ಮತ್ತು ಬಾಲಕಿಯರ ಜನನ ಪ್ರಮಾಣ; (ಬಿ) ಮಕ್ಕಳ ಲಿಂಗಾನುಪಾತದ ಪ್ರತಿಕೂಲ ಪರಿಣಾಮ; (ಸಿ) ಕಾನೂನುಬಾಹಿರ ಲಿಂಗ ನಿರ್ಧರಣೆ ಮತ್ತು ಹೆಣ್ಣು ಭ್ರೂಣ ಹತ್ಯೆ; (ಡಿ) ಮನವರಿಕೆ ಮಾಡಿಕೊಡುವ ಮೂಲಕ ಹೆಣ್ಣು ಮಗುವಿನ ಮೌಲ್ಯ ಹೆಚ್ಚಿಸುವುದು.
- ❖ ಪಂಚಾಯಿತಿಯು, ಎಲ್ಲಾ ಮಹಿಳಾ ಮತದಾರರನ್ನು ಒಳಗೊಂಡ **ಮಹಿಳಾ ಸಭೆಗಳನ್ನು** ಕರೆದು, ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಅವರಿಗೆ ವಿವರಿಸುವುದು.

❖ ಅಂಗನವಾಡಿ ಕೇಂದ್ರಗಳು, ಪ್ರತಿ ತಿಂಗಳು ಗರ್ಭಿಣಿ ತಾಯಂದಿರ, ಮಕ್ಕಳು ಮತ್ತು ರೋಗಪ್ರತಿರಕ್ಷಣೆಯ ಬಗ್ಗೆ ಗ್ರಾಮ ಪಂಚಾಯಿತಿಗೆ ವರದಿ ಮಾಡುವುದು.

❖ ಸೇವಾ ನೀಡಿಕೆ ಸ್ವರೂಪಗಳು/ ಯೋಜನೆಗಳು ಮತ್ತು ಕಾರ್ಯಕ್ರಮಗಳು, ಲಿಂಗ ಮತ್ತು ಮಕ್ಕಳ ಹಕ್ಕುಗಳ ವಿಷಯಗಳಿಗೆ ಸಾಕಷ್ಟು ಪ್ರತಿಕ್ರಿಯಾತ್ಮಕವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು.

❖ ಜಿಲ್ಲೆ/ ಬ್ಲಾಕ್/ ತಳ ಮಟ್ಟಗಳಲ್ಲಿ ಅಂತರ್–ವಲಯ ಮತ್ತು ಅಂತರ್–ಸಾಂಸ್ಥಿಕ ಸಂಯೋಜನೆ ಸಾಧ್ಯವಾಗುವಂತೆ ಮಾಡುವುದು.

**ರಾಷ್ಟ್ರೀಯ ಆಹಾರ ಸುರಕ್ಷತಾ ಅಧಿನಿಯಮದ ವ್ಯಾಪ್ತಿ ಮೀರಿ ಆಹಾರದ ಮತ್ತು ಪೌಷ್ಟಿಕತೆಯ ಸುರಕ್ಷತೆಯನ್ನು ಖಾತರಿಪಡಿಸುವುದು**

ರಾಷ್ಟ್ರೀಯ ಆಹಾರ ಸುರಕ್ಷತಾ ಅಧಿನಿಯಮ, 2013 ಇದು, ಉದ್ದೇಶಿತ ಹಕ್ಕುದಾರರಿಗೆ ಸಾಮಾಜಿಕ ಸಂರಕ್ಷಣೆಯಾಗಿ ವಸ್ತು ರೂಪದಲ್ಲಾಗಲಿ ಅಥವಾ ನಗದು ರೂಪದಲ್ಲಾಗಲಿ ಆಹಾರ ಸುರಕ್ಷತೆಯ ಏರ್ಪಾಡುಗಳನ್ನು ಖಾತರಿಪಡಿಸುವುದನ್ನು ರಾಜ್ಯಕ್ಕೆ ಕಡ್ಡಾಯಗೊಳಿಸುತ್ತದೆ. ಆದಾಗ್ಯೂ, ಎನ್‌ಎಫ್‌ಎಸ್‌ಎ, 2013 ಇದು, ಯಾವುದೇ ಕಾನೂನು ನಿರ್ಬಂಧವಿಲ್ಲದೆ ಎಲ್ಲರಿಗೂ ಆಹಾರ ಮತ್ತು ಪೌಷ್ಟಿಕತೆಯ ಗುರಿ ಸಾಧನೆಯನ್ನು ಪ್ರಗತಿಪರವಾಗಿ ಮುಂದುವರಿಸುವುದಕ್ಕೆ ಶ್ರಮಿಸಲು, ರಾಜ್ಯಕ್ಕೆ ಅವಕಾಶ ಕಲ್ಪಿಸುತ್ತದೆ. ಅಧಿನಿಯಮವು, ಆಹಾರ ಮತ್ತು ಪೌಷ್ಟಿಕ ಆಹಾರ ಸುರಕ್ಷತೆಯನ್ನು ಒದಗಿಸುವ ದಿಸೆಯಲ್ಲಿ, ರಾಜ್ಯದ ಕರ್ತವ್ಯಗಳನ್ನು ನಿರ್ಬಂಧಿಸಿದೆ ಎಂಬ ಸಂಗತಿಯನ್ನು ಅದು ಗುರುತಿಸಿದ್ದಾಗ್ಯೂ, ಕುಟುಂಬ ಮಟ್ಟದಲ್ಲಿ ಸಮರ್ಪಕ ಆಹಾರ ಪಡೆಯುವುದಕ್ಕಿಂತ ಹೆಚ್ಚಿನದನ್ನು ಅದು ಒಳಗೊಳ್ಳುತ್ತದೆ. ಸುಸ್ಥಿರ ಆಹಾರ ಮತ್ತು ಪೌಷ್ಟಿಕತೆಯ ಸುರಕ್ಷತೆ ಹಾಗೂ ಮಾನವ ಘನತೆಯನ್ನು ಖಾತರಿಪಡಿಸುವುದಕ್ಕಾಗಿ, ರಾಜ್ಯವು, ಸ್ವಚ್ಛ ನೀರು, ನೈರ್ಮಲ್ಯ, ಆರೋಗ್ಯ ರಕ್ಷಣೆ, ರೈತರ ಹಕ್ಕುಗಳು, ಜೀವನೋಪಾಯ ಮತ್ತು ಸಂವೇದನಾಶೀಲ ಆಡಳಿತದಂಥ ಇತರ ಪರಸ್ಪರ ಅವಲಂಬಿತ ಅವಶ್ಯಕತೆಗಳನ್ನು ಸಹ ಖಾತರಿಪಡಿಸಬೇಕು.

**ಸಂವಿಧಾನದ 11ನೇ ಅನುಸೂಚಿ ಮತ್ತು ಹಸಿವು ಮತ್ತು ಅಪೌಷ್ಟಿಕತೆ ವಿರುದ್ಧ ಗ್ರಾಮ ಪಂಚಾಯಿತಿಗಳ ಬಾಧ್ಯತೆಗಳು:**

ಅಧ್ಯಾಯ–1ರಲ್ಲಿ ಮತ್ತು ಭಾರತ ಸಂವಿಧಾನದ 243ಜಿ ಅನುಚ್ಛೇದದಲ್ಲಿ ಹೇಳಿರುವಂತೆ, ಗ್ರಾಮ ಪಂಚಾಯಿತಿಗಳು, ಸಂವಿಧಾನದ 11ನೇ ಅನುಸೂಚಿಯ 29 ವಿಷಯಗಳಿಗೆ ಸಂಬಂಧಿಸಿದಂತೆ ತಮಗೆ ಸಂಬಂಧಿಸಿದ ಪಂಚಾಯಿತಿಗಳಲ್ಲಿ ಸಮಗ್ರ ಅಭಿವೃದ್ಧಿ ಸಾಧಿಸುವ ಬಾಧ್ಯತೆಯನ್ನು ಹೊಂದಿವೆ. ಇದಲ್ಲದೆ, ಗ್ರಾಮ ಪಂಚಾಯಿತಿಗಳು, ಈ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಸಹ ಅಗತ್ಯವಾಗಿದೆ. ಗ್ರಾಮ ಪಂಚಾಯಿತಿಗಳು ಜಿಪಿಡಿಪಿ ಸಿದ್ಧಪಡಿಸಬೇಕು. ನಿರ್ದಿಷ್ಟವಾಗಿ, ಉತ್ತರದಾಯಿತ್ವ ಸಹಿತವಾಗಿ ಪಿಆರ್‌ಐಗಳ ಮತ್ತು ಗ್ರಾಮ ಪಂಚಾಯಿತಿಗಳ ಪಾಲ್ಗೊಳ್ಳುವಿಕೆಯು, ಈ ಯೋಜನೆಗಳನ್ನು ದಕ್ಷ ರೀತಿಯಲ್ಲಿ ತಲುಪಿಸುವುದಕ್ಕೆ ಮುಖ್ಯವಾದುದಾಗಿದೆ ಎಂದು ಯೋಜನೆಗಳಲ್ಲಿ ಗುರುತಿಸಲಾಗಿದೆ. ಆದುದರಿಂದ, ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಮತ್ತು ಈ ಯೋಜನೆಗಳ ಮೇಲ್ವಿಚಾರಣೆಗೆ ಸಂಬಂಧಿಸಿದ ತಮ್ಮ ತಮ್ಮ ಪಾತ್ರಗಳ ಮತ್ತು ಹೊಣೆಗಾರಿಕೆಗಳ ಬಗ್ಗೆ ಅರಿವು ಇರುವುದು ಗ್ರಾಮ ಪಂಚಾಯಿತಿಗಳಿಗೆ ಅತ್ಯಗತ್ಯವಾಗಿದೆ.[12]

11ನೇ ಅನುಸೂಚಿಯಲ್ಲಿ ಪಟ್ಟಿ ಮಾಡಿದ ವಿಷಯಗಳು, ತತ್‌ಕ್ಷಣದ ಮತ್ತು ಆಧಾರಭೂತವಾದ ಅಪೌಷ್ಟಿಕತೆ/ ನ್ಯೂನ ಪೌಷ್ಟಿಕತೆಯ ಮತ್ತು ಹಸಿವಿಗೆ ಸಂಬಂಧಿಸಿದ ನಿರ್ಣಾಯಕ ಅಂಶಗಳನ್ನು ನಿರ್ವಹಿಸುವಂಥ ವಿಷಯಗಳನ್ನು ಒಳಗೊಂಡಿವೆ, ಅವುಗಳೆಂದರೆ:

➢ ಆರೋಗ್ಯ ಮತ್ತು ನೈರ್ಮಲ್ಯ
➢ ಕುಟುಂಬ ಕ್ಷೇಮಾಭಿವೃದ್ಧಿ
➢ ಕುಡಿಯುವ ನೀರು
➢ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ
➢ ಸಾರ್ವಜನಿಕ ವಿತರಣಾ ವ್ಯವಸ್ಥೆ
➢ ಕೃಷಿ
➢ ಶಿಕ್ಷಣ
➢ ಬಡತನ ನಿರ್ಮೂಲನೆ
➢ ಸಾಮಾಜಿಕ ಕ್ಷೇಮಾಭಿವೃದ್ಧಿ

---

12 ಪಂಚಾಯತ್ ರಾಜ್ ಮಂತ್ರಾಲಯ, ಭಾರತ ಸರ್ಕಾರದಿಂದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಲು ಮಾರ್ಗಸೂಚಿಗಳು–2018

**ಕೋಷ್ಟಕ–6**: 11ನೇ ಅನುಸೂಚಿಯ ಅಡಿಯಲ್ಲಿ ಆಹಾರ ಮತ್ತು ಪೌಷ್ಟಿಕತೆಗೆ ಸಂಬಂಧಪಟ್ಟ ವಿಷಯಗಳು, ಮಂತ್ರಾಲಯಗಳು ಮತ್ತು ಯೋಜನೆಗಳು

| ವಿಷಯ | ವಲಯ | ಮಂತ್ರಾಲಯ/ ಇಲಾಖೆ | ಒದಗಿಸಲಾಗುವ ಸೇವೆಗಳು | ಯೋಜನೆ |
|---|---|---|---|---|
| 25 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ; ಪಂಚಾಯತ್ ರಾಜ್ ಮಂತ್ರಾಲಯ; ಗ್ರಾಮೀಣಾಭಿವೃದ್ಧಿ ಮಂತ್ರಾಲಯ | ಅಂಗನವಾಡಿ ಕೇಂದ್ರಗಳು, ಸಾಮಾಜಿಕ ಸುರಕ್ಷೆ, ಜೀವನೋಪಾಯ | ಪಿಎಮ್‌ಜೆಡಿವೈ, ಪಿಎಮ್‌ಕೆಕೆವೈ, ಉಜಾಲಾ, ಎನ್‌ಆರ್‌ಡಿಡಬ್ಲ್ಯುಪಿ, ಎನ್‌ಆರ್‌ಎಲ್‌ಎಮ್ |
| 28 | ಸಾರ್ವಜನಿಕ ವಿತರಣೆ ವ್ಯವಸ್ಥೆ | ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಮಂತ್ರಾಲಯ | ಪಿಡಿಎಸ್ ಮೂಲಕ ಆಹಾರ ಸುರಕ್ಷತೆ, ಸೌಲಭ್ಯ ವಂಚಿತ/ ಅವಶ್ಯಕತೆ ಇರುವ ಜನರಿಗೆ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳು | ಪಿಡಿಎಸ್ |
| 11 | ಕುಡಿಯುವ ನೀರು | ಜಲ ಶಕ್ತಿ ಮಂತ್ರಾಲಯ | ಎಲ್ಲಾ ಕುಟುಂಬಗಳಿಗೆ ಕೊಳವೆ ಮೂಲಕ ಕುಡಿಯುವ ನೀರು; ಎಲ್ಲಾ ಕುಟುಂಬಗಳಿಗೆ ಐಹೆಚ್‌ಹೆಚ್‌ಎಲ್‌ಗಳು; ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಒಳಗೊಂಡಂತೆ ನೈರ್ಮಲ್ಯ ವ್ಯವಸ್ಥೆ | ಎನ್‌ಆರ್‌ಡಿಡಬ್ಲ್ಯುಪಿ, **ಸ್ವಜಲ ಯೋಜನೆ** |
| 23 | ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಔಷಧಾಲಯಗಳು ಸೇರಿದಂತೆ ಆರೋಗ್ಯ ಮತ್ತು ನೈರ್ಮಲ್ಯ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ; ಜಲ ಶಕ್ತಿ ಮಂತ್ರಾಲಯ | ಸ್ವಾಸ್ಥ್ಯ ಕೇಂದ್ರವಾಗಿ ಆರೋಗ್ಯ ಉಪ–ಕೇಂದ್ರ; ಆರೋಗ್ಯ ಸಂರಕ್ಷಣಾ ಯೋಜನೆ ಅಡಿಯಲ್ಲಿ ಒಳಗೊಳ್ಳುವುದು; ತುರ್ತು ಅಂಬುಲೆನ್ಸ್ ಸೌಲಭ್ಯ; 100% ರೋಗಪ್ರತಿರಕ್ಷಣೆ, 100% ಆರೋಗ್ಯ ಸಂಸ್ಥೆಗಳಲ್ಲಿ ಹೆರಿಗೆ ಸೌಲಭ್ಯ; ಮಲೇರಿಯಾ, ಕ್ಷಯ (ಟ್ಯೂಬರ್‌ಕ್ಯುಲೋಸಿಸ್), ಫೈಲೇರಿಯ, ಕಾಲಾ ಜ್ವರಕ್ಕೆ 100% ಚಿಕಿತ್ಸೆ | ಎನ್‌ಆರ್‌ಹೆಚ್‌ಎಂ/ ಎನ್‌ಹೆಚ್‌ಎಮ್, ಎನ್‌ಆರ್‌ಡಿಡಬ್ಲ್ಯುಪಿ, ಐಸಿಡಿಎಸ್, ಎಸ್‌ಬಿಎಮ್ |
| 24 | ಕುಟುಂಬ ಕಲ್ಯಾಣ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ | ಸ್ವಾಸ್ಥ್ಯ ಕೇಂದ್ರವಾಗಿ ಆರೋಗ್ಯ ಉಪ–ಕೇಂದ್ರ; ಆರೋಗ್ಯ ಸಂರಕ್ಷಣಾ ಯೋಜನೆ ಅಡಿ ತರುವುದು | ಪಿಎಮ್‌ಯುವೈ |
| 26 | ಸಮಾಜ ಕಲ್ಯಾಣ, ವಿಶೇಷ ಚೇತನರ ಮತ್ತು ಬುದ್ಧಿಮಾಂದ್ಯರ ಕಲ್ಯಾಣ ಒಳಗೊಂಡು | ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ; ವಿಶೇಷ ಚೇತನ ವ್ಯಕ್ತಿಗಳ ಸಬಲೀಕರಣ ಇಲಾಖೆ | ಅನುಸೂಚಿತ ಜಾತಿಗಳು/ ಅನುಸೂಚಿತ ಪಂಗಡಗಳು/ ಹಿಂದುಳಿದ ವರ್ಗಗಳು/ ಅಲ್ಪಸಂಖ್ಯಾತರ ವಿದ್ಯಾರ್ಥಿವೇತನ; ಎಲ್ಲ ವಿಶೇಷ ಚೇತನ ವ್ಯಕ್ತಿಗಳಿಗೆ ಕೌಶಲ್ಯ ತರಬೇತಿ ಅಥವಾ ಸಾಮಾಜಿಕ ಭದ್ರತೆ | ಐಪಿಒಪಿ, ವಿದ್ಯಾರ್ಥಿ ವೇತನ ಕಾರ್ಯಕ್ರಮಗಳು, ಎಸ್‌ಆರ್‌ಎಮ್‌ಎಸ್ |

| | | | | |
|---|---|---|---|---|
| 1 | ಕೃಷಿ, ಕೃಷಿ ವಿಸ್ತರಣೆ ಒಳಗೊಂಡಂತೆ | ಕೃಷಿ ಮತ್ತು ರೈತ ಕಲ್ಯಾಣ ಮಂತ್ರಾಲಯ; ಗ್ರಾಮೀಣಾಭಿವೃದ್ಧಿ ಮಂತ್ರಾಲಯ | ನೀರಾವರಿ ಪ್ರದೇಶ ಹೆಚ್ಚಿಸುವುದು; ಎಲ್ಲರಿಗೆ ಎಸ್‌ಹೆಚ್‌ಸಿ ಮತ್ತು ರಸಗೊಬ್ಬರದ ಅತ್ಯುತ್ತಮ ಬಳಕೆ; ಸಕಾಲಿಕ ಮತ್ತು ಗುಣಮಟ್ಟದ ಹೂಡುವಳಿಗಳು – ಬೀಜಗಳು, ರಸಗೊಬ್ಬರಗಳು, ಕೀಟನಾಶಕಗಳು; ಸಾವಯವ ಕೃಷಿ; ತೋಟಗಾರಿಕೆ ಸಾಮರ್ಥ್ಯ ಬಳಕೆ; ಬೆಳೆ ವಿಮೆ ರಕ್ಷಣೆ; ಮೌಲ್ಯ ಸರಣಿ ಅಭಿವೃದ್ಧಿ; ಮಾರುಕಟ್ಟೆ ಬೆಂಬಲಕ್ಕೆ ಬಾಳಿಕೆ ಬರುವ ಸಮುದಾಯ ಸ್ವತ್ತುಗಳು; ಡೈರಿಯ ಸಂಪೂರ್ಣ ಸಮರ್ಥ ಬಳಕೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ; ಪಶು ಸಂಪನ್ಮೂಲಗಳಿಗೆ ಪ್ರತಿರಕ್ಷಣಾ ಮತ್ತು ಪಶುವೈದ್ಯ ಸೇವೆಗಳು; ತಳಿ ಸುಧಾರಣೆ. | ಆರ್‌ಕೆವಿವೈ, ಪಿಎಂಕೆಎಸ್‌ವೈ, ಪಿಎಂಎಫ್‌ಬಿವೈ, ಎಂಎಂಎಎಸ್, ಎನ್‌ಎಫ್‌ಎಸ್‌ಎಂ, ಎಂಐಡಿಹೆಚ್, ಎನ್‌ಎಂಎಇಟಿ, ಎನ್‌ಎಲ್‌ಎಂ, ಎನ್‌ಎಎಂ, ಎಸ್‌ಹೆಚ್‌ಸಿ, ಡಿಐಎಲ್‌ಆರ್‌ಎಂಪಿ |
| 2 | ಭೂ ಸುಧಾರಣೆ, ಭೂಮಿ ಸುಧಾರಣೆ ಅನುಷ್ಠಾನ ಮತ್ತು ಮಣ್ಣು ಸಂರಕ್ಷಣೆಯ ಭೂ ಸಂಯೋಜನೆ | | | |
| 3 | ಸಣ್ಣ ನೀರಾವರಿ, ಜಲ ನಿರ್ವಹಣೆ ಮತ್ತು ಜಲಾನಯನ ಪ್ರದೇಶ ಅಭಿವೃದ್ಧಿ | | | |
| 4 | ಪಶು ಸಂಗೋಪನೆ, ಡೈರಿ ನಿರ್ವಹಣೆ ಮತ್ತು ಕೋಳಿ ಸಾಕಾಣಿಕೆ | | | |
| 5 | ಮೀನುಗಾರಿಕೆ | | | |
| 16 | ಬಡತನ ನಿರ್ಮೂಲನಾ ಕಾರ್ಯಕ್ರಮ | ಗ್ರಾಮೀಣಾಭಿವೃದ್ಧಿ ಮಂತ್ರಾಲಯ; ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ಮಂತ್ರಾಲಯ | ಬ್ಯಾಂಕ್ ಸಂಪರ್ಕದೊಂದಿಗೆ ಎಸ್‌ಹೆಚ್‌ಜಿಗಳ ಸದಸ್ಯರಿಗಾಗಿ ಎಲ್ಲಾ ಸೌಲಭ್ಯ ವಂಚಿತರಾದ ಎಲ್ಲಾ ಕುಟುಂಬಗಳು; ಎಮ್‌ಜಿಎನ್‌ಆರ್‌ಇಜಿಎ ಅಡಿಯಲ್ಲಿ ಜಲ ಸಂರಕ್ಷಣಾ ಅಭಿಯಾನ; ವೃದ್ಧಾಪ್ಯ, ವಿಧವಾ ಮತ್ತು ಅಂಗವಿಕಲ ವೇತನ; ಎಲ್ಲ ಅರ್ಹ ಯುವಕರಿಗೆ ಸ್ಥಳನಿಯುಕ್ತಿ ಆಧಾರಿತ ಮತ್ತು ಸ್ವಯಂ ಉದ್ಯೋಗ ಕೌಶಲ್ಯ | ಎಮ್‌ಡಿಎಮ್‌ಎಸ್, ಎಂಜಿಎನ್‌ಆರ್‌ಇ ಜಿಎಸ್, ಡಿಎವೈ–ಎನ್‌ಆರ್‌ಎಲ್‌ಎಂ, ಎನ್‌ಎಸ್‌ಎಪಿ |
| 17 | ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳನ್ನು ಒಳಗೊಂಡ ಶಿಕ್ಷಣ | ಶಿಕ್ಷಣ ಮಂತ್ರಾಲಯ | 100% ವಿದ್ಯಾರ್ಥಿ ಹಾಜರಾತಿ ಮತ್ತು ಕಲಿಕಾ ಫಲಿತಾಂಶಗಳು; ಬಾಲಕಿಯರಿಗಾಗಿ ಪ್ರೌಢ ಶಿಕ್ಷಣ ಸೌಲಭ್ಯ | ಐಸಿಡಿಎಸ್, ಎಸ್‌ಎಸ್‌ಎಮ್, ಎಸ್‌ಎಸ್‌ಎ, ಎಸ್‌ಬಿಎಮ್, ಎಂಐಡಿಎಂಎಸ್ |

**ಗ್ರಾಮ ಪಂಚಾಯಿತಿಗೆ ಜನರ ಬೆಂಬಲ ನೀಡುವುದು**

ಆಶಾ ಕಾರ್ಯಕರ್ತೆಯರು, ಸ್ವ–ಸಹಾಯ ಗುಂಪುಗಳು, ಅಂಗನವಾಡಿ ಕಾರ್ಯಕರ್ತೆಯರು, ಸಾಕ್ಷರತಾ ಕಾರ್ಯಕರ್ತರು, ಶಿಕ್ಷಕಿಯರು, ಎನ್‌ಆರ್‌ಎಲ್‌ಎಮ್ ಸಿಆರ್‌ಪಿಗಳು, ಸಾಮಾಜಿಕ ಕಾರ್ಯಕರ್ತರು, ಪಿಟಿಎ/ ಎಸ್‌ಡಿಎಮ್‌ಸಿ, ಆರೋಗ್ಯ ಕಾರ್ಯಕರ್ತರು, ವೈದ್ಯರು, ಸ್ಥಳೀಯ ತಜ್ಞರು, ವಿವಿಧ ಕೃಷಿ ಸಂಬಂಧಿ ಇಲಾಖೆಗಳು ಮತ್ತು ಏಜನ್ಸಿಗಳು, ಕೃಷಿ ಮತ್ತು ತೋಟಗಾರಿಕೆ ಕಾರ್ಯನಿರ್ವಾಹಕ, ಜಲಾನಯನ ಪ್ರದೇಶ ಅಭಿವೃದ್ಧಿ ತಂಡ (ಪಿಎಮ್‌ಕೆಎಸ್‌ವೈ ಅಡಿಯಲ್ಲಿ ಜಲಾನಯನ ಪ್ರದೇಶ ಘಟಕಾಂಶ) ಡೈರಿ ಕಾರ್ಯನಿರ್ವಾಹಕ ಮತ್ತು ಪಶುವೈದ್ಯ ವೃತ್ತಿಪರರು.

**ಗಮನ ನೀಡಬೇಕಾದ ಹಣಕಾಸು ಸಂಪನ್ಮೂಲಗಳು:**

ಪಿಡಿಎಸ್, ಐಸಿಡಿಎಸ್, ಎನ್‌ಹೆಚ್‌ಎಮ್, ಮಣ್ಣು ಮತ್ತು ಕೃಷಿಗಾಗಿ ರಾಷ್ಟ್ರೀಯ ಅಭಿಯಾನ, ಆರ್‌ಕೆವಿವೈ, ಸಮಗ್ರ ಜಲಾನಯನ ಪ್ರದೇಶ ನಿರ್ವಹಣಾ ಕಾರ್ಯಕ್ರಮ, ಪಿಎಮ್‌ಕೆಎಸ್‌ವೈ, ವಿವಿಧ ರಾಜ್ಯ ಪ್ರಾಯೋಜಿತ ಯೋಜನೆಗಳು ಹಾಗೂ ಆರೋಗ್ಯ, ಪೌಷ್ಟಿಕ ಆಹಾರ, ಕೃಷಿ, ಪಶುಸಂಗೋಪನೆ, ತೋಟಗಾರಿಕೆ ಮತ್ತು ಜೀವನೋಪಾಯ ಸಂಬಂಧಿ ಕಾರ್ಯಕ್ರಮಗಳು.

**ನಿಧಿಗಳನ್ನು ಮತ್ತು ಸಂಪನ್ಮೂಲಗಳನ್ನು ಸಂಗ್ರಹಿಸುವುದು**

**ಗ್ರಾಮ ಪಂಚಾಯಿತಿಯು ಮೂರು ಮೂಲಗಳಿಂದ ನಿಧಿಗಳನ್ನು ಪಡೆಯುತ್ತದೆ**

- ✧ ಕೇಂದ್ರ ಹಣಕಾಸು ಆಯೋಗವು ಶಿಫಾರಸ್ಸು ಮಾಡಿದಂತೆ, ಸ್ಥಳೀಯ ಸಂಸ್ಥೆಗಳಿಂದ ಅನುದಾನಗಳು.
- ✧ ಕೇಂದ್ರ ಪ್ರಾಯೋಜಿತ ಯೋಜನೆಗಳ ಅನುಷ್ಠಾನಕ್ಕಾಗಿ ನಿಧಿ.

✧ ರಾಜ್ಯ ಹಣಕಾಸು ಆಯೋಗಗಳ ಶಿಫಾರಸ್ಸುಗಳನ್ನು ಆಧರಿಸಿ ರಾಜ್ಯ ಸರ್ಕಾರವು ಬಿಡುಗಡೆ ಮಾಡುವ ನಿಧಿಗಳು.

ಇದಲ್ಲದೆ, ಗ್ರಾಮ ಪಂಚಾಯಿತಿಯು ವಿಧಿಸುವ ಕಂದಾಯದ (ತೆರಿಗೆಗಳು, ಸುಂಕಗಳು ಮತ್ತು ಶುಲ್ಕ) ಸ್ವಂತ ಮೂಲಗಳ ಮೂಲಕ ಗ್ರಾಮ ಪಂಚಾಯಿತಿಗಳು ನಿಧಿಗಳನ್ನು ಸಂಗ್ರಹಿಸುತ್ತವೆ.

ಪಂಚಾಯಿತಿ ಪ್ರತಿನಿಧಿಗಳು, ವಾರ್ಷಿಕ ಆರೋಗ್ಯ ಮತ್ತು ಪೌಷ್ಠಿಕ ಯೋಜನೆಯಲ್ಲಿ ನಿರ್ಧರಿಸಿದ ಆದ್ಯತೆಗಳನ್ನು ಸ್ಥಳೀಯವಾಗಿ ಗುರುತಿಸುವುದರ ಆಧಾರದ ಮೇಲೆ ನಿಧಿಗಳ ಬಳಕೆಯನ್ನು ಖಚಿತಪಡಿಸಬೇಕು ಮತ್ತು ಸೂಕ್ತ ರೀತಿಯಲ್ಲಿ ಲೆಕ್ಕ ನಿರ್ವಹಿಸಬೇಕು. ಉತ್ತಮ ಪಾರದರ್ಶಕತೆಯನ್ನು ಖಾತರಿಪಡಿಸಲು, ಭರಿಸಿದ ವೆಚ್ಚಗಳ ವಿವರಗಳನ್ನು ಗ್ರಾಮ ಪಂಚಾಯಿತಿಯ ಮತ್ತು ಗ್ರಾಮ ಸಭೆಯ ಸಭೆಗಳಲ್ಲಿ ಹಂಚಿಕೊಳ್ಳಬೇಕು. ಇದಲ್ಲದೆ, ಪಂಚಾಯಿತಿಗಳು, ತಮ್ಮ ಸ್ವಂತ ಆದಾಯಗಳಿಂದ ಸಂಪನ್ಮೂಲಗಳನ್ನು ಸಂಗ್ರಹಿಸಬಹುದು ಅಥವಾ ಅದಕ್ಕೆ ಪ್ರಮುಖವೆಂದು ಕಂಡುಬರುವ ಯಾವುದೇ ಹೆಚ್ಚುವರಿ ಕಾರ್ಯಚಟುವಟಿಕೆಗಳಿಗೆ ಆರೋಗ್ಯ ಸಂವರ್ಧನೆಗಾಗಿ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸುವುದಕ್ಕಾಗಿ, ಜನ ಸಮುದಾಯಗಳು ನೀಡುವ ವಂತಿಗೆಗಳ ಮೂಲಕ ಸಂಪನ್ಮೂಲಗಳನ್ನು ಕ್ರೋಢೀಕರಿಸಬಹುದು.

ಸಾರ್ವಜನಿಕ ಶೌಚಾಲಯಗಳು, ಆರೋಗ್ಯ ಕೇಂದ್ರಗಳಿಗೆ ಸಂಪರ್ಕ ರಸ್ತೆಗಳ ನಿರ್ಮಾಣ, ಅಂಗನವಾಡಿ ಕೇಂದ್ರಗಳ ಮತ್ತು ಆರೋಗ್ಯ ಕೇಂದ್ರಗಳ ಸಣ್ಣಪುಟ್ಟ ದುರಸ್ತಿಗಳಂಥ ಕಾರ್ಯಚಟುವಟಿಕೆಗಳಿಗೆ ಎಸ್‌ಬಿಎಮ್, ಎಮ್‌ಜಿಎನ್‌ಆರ್‌ಇಜಿಎಗಳಂಥ ವಿವಿಧ ಯೋಜನೆಗಳ ಅಡಿಯಲ್ಲಿ ಲಭ್ಯವಿರುವ ನಿಧಿಗಳನ್ನು ಪಂಚಾಯಿತಿಗಳು ಬಳಸಿಕೊಳ್ಳಬಹುದು.

**ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ (ಜಿಪಿಡಿಪಿ)** ನಮ್ಮ *ಗ್ರಾಮ – ನಮ್ಮ ಯೋಜನೆ*

ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು, ಜಿಪಿಡಿಪಿಗಳ ಸಿದ್ಧತೆಗಾಗಿ 2015ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಿದೆ. ಮಾರ್ಗಸೂಚಿಗಳನ್ನು ಅನುಸರಿಸಿ, ರಾಜ್ಯಗಳು, ಗ್ರಾಮ ಪಂಚಾಯಿತಿಗಳ ಅವಶ್ಯಕತೆ ಈಡೇರಿಸಲು ಜಿಪಿಡಿಪಿಗಾಗಿ ತಮ್ಮ ನಿರ್ದಿಷ್ಟ ಮಾರ್ಗಸೂಚಿಗಳನ್ನು ಹೊರಡಿಸುತ್ತವೆ. ಜಿಪಿಡಿಪಿಯನ್ನು, ಸಣ್ಣ–ಯೋಜನೆಯನ್ನಾಗಿ ಮಾತ್ರ ಕಾಣಬಾರದು, ಬದಲಾಗಿ ಅದು, ಗ್ರಾಮ ಪಂಚಾಯಿತಿ ಪ್ರದೇಶದಲ್ಲಿ ಸಮಗ್ರ ಅಗತ್ಯ–ಆಧಾರಿತ ಬಹು–ಮುಖ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಇರುವ ಸಹಭಾಗಿತ್ವದ ವಿಕೇಂದ್ರೀಕೃತ ಅಭಿವೃದ್ಧಿ ಯೋಜನೆಯಾಗಿದೆ. ಎಲ್ಲ ಸಮಾನ ಪ್ರಾಮುಖ್ಯತೆಯ ಉದ್ದೇಶಗಳು ಮತ್ತು ಕ್ರಮಗಳ ನಡುವೆ, ಅಪೌಷ್ಟಿಕತೆ, ಹಸಿವು ಮತ್ತು ಆಹಾರ ಅಸುರಕ್ಷತೆಯನ್ನು ಹೋಗಲಾಡಿಸುವಲ್ಲಿ ಹಾಗೂ ಗ್ರಾಮಗಳನ್ನು ಅಪೌಷ್ಟಿಕತೆ ಮುಕ್ತ ಗ್ರಾಮ ಪಂಚಾಯಿತಿಯನ್ನಾಗಿ ಪರಿವರ್ತಿಸುವಲ್ಲಿ, ಗ್ರಾಮ ಪಂಚಾಯಿತಿ ಅಧಿಕಾರಿಗಳು ಮತ್ತು ಸದಸ್ಯರು ಮುಖ್ಯ ಪಾತ್ರ ವಹಿಸುವುದಕ್ಕೆ ಆದ್ಯತೆ ನೀಡಬೇಕು.

**ಅಪೌಷ್ಟಿಕತೆ ಮುಕ್ತ ಪಂಚಾಯಿತಿಗಳು** *(ಅಪೌಷ್ಟಿಕತೆ ಮುಕ್ತ ಪಂಚಾಯಿತಿ)*

ಪ್ರದೇಶದಿಂದ ಪ್ರದೇಶಕ್ಕೆ ಮತ್ತು ಜಿಲ್ಲೆಯಿಂದ ಜಿಲ್ಲೆಗೆ ಅಪೌಷ್ಟಿಕತೆಯ ತೀವ್ರತೆಯು ಬದಲಾಗುವುದರಿಂದ, ಈ ಪ್ರದೇಶಗಳ ವೈವಿಧ್ಯತೆಗಳಿಗೆ ಅನುಸಾರವಾಗಿ, ಸ್ವಚ್ಛತೆ, ನೈರ್ಮಲ್ಯ, ಕುಡಿಯುವ ನೀರು, ಅಂಗನವಾಡಿ ಪೋಷಣೆ, ಎಮ್‌ಡಿಎಮ್‌ಎಸ್ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಸಂಬಂಧಿಸಿದ ವಿಷಯಗಳ ಮೇಲಿನ ನಿರ್ವಹಣೆಯಲ್ಲಿ, ಮಾದರಿ ಬದಲಾವಣೆಯನ್ನು ಕುರಿತು ನಿರ್ಣಯಿಸಲಾಗುತ್ತದೆ. **ನಮ್ಮ ಗ್ರಾಮ ನಮ್ಮ ಯೋಜನೆ** ಅಡಿಯಲ್ಲಿ ಅಪೌಷ್ಟಿಕತೆ ನಿವಾರಣೆ, ಸ್ವಚ್ಛತೆ ಮತ್ತು ನೈರ್ಮಲ್ಯ ಸಂಬಂಧಿತ ಕಾರ್ಯಗಳನ್ನು ನಿರ್ವಹಿಸಲು ಗ್ರಾಮ ಪಂಚಾಯಿತಿಯು ಆದ್ಯತೆ ನೀಡಬೇಕು. ವ್ಯಾಪಕ ಪ್ರತಿಕ್ರಿಯೆಗಾಗಿ ಪ್ರದರ್ಶನ ನೀಡುವುದಕ್ಕೆ ಅಥವಾ ಉತ್ತಮ ಯಶಸ್ಸು ದೊರೆಯುವಂತೆ ಮಾಡುವುದಕ್ಕೆ ಉತ್ತೇಜನ ನೀಡುವ "ಅಪೌಷ್ಟಿಕತೆ ಮುಕ್ತ ಪಂಚಾಯಿತಿಗಳನ್ನು" ಪ್ರಗತಿಪರವಾಗಿ ಸೃಜಿಸಲು ಸಂಪನ್ಮೂಲಗಳನ್ನು ಆದ್ಯತೆಗೆ ಅನುಸಾರವಾಗಿ ಬಳಸಿಕೊಳ್ಳಬೇಕಾದ ಮತ್ತು ಸಂಗ್ರಹಿಸಬೇಕಾದ ಅಗತ್ಯವಿದೆ. ಎಸ್‌ಬಿಎಂ ಮತ್ತು ಬಿಬಿಬಿಪಿಯಂಥ ಆಂದೋಲನಗಳ ಮೂಲಕ ಮತ್ತು ವಿವಿಧ ರಾಜ್ಯಗಳ ಉದಾಹರಣೆಗಳನ್ನು ಗಮನಿಸಿ, ಸಾಮಾಜಿಕ ಮಾನದಂಡಗಳನ್ನು ಮತ್ತು ಸಮಾಜದಲ್ಲಿ ಬೇರೂರಿದ ವರ್ತನೆ ರೀತಿಗಳನ್ನು ಬದಲಾಯಿಸುವಲ್ಲಿ ಪಂಚಾಯಿತಿಗಳು ಸಕ್ರಿಯವಾಗಿ ತೊಡಗಿಕೊಳ್ಳುವುದನ್ನು ಮುಖ್ಯ ಅಂಶವನ್ನಾಗಿ ಕಾಣಲಾಗುತ್ತದೆ.

**ಮಕ್ಕಳ–ಸ್ನೇಹಿ ಗ್ರಾಮ ಪಂಚಾಯಿತಿ**

ಅವಶ್ಯಕತೆಗಳನ್ನು ಗುರುತಿಸುವ ಮತ್ತು ಮಕ್ಕಳ ಸಂರಕ್ಷಣೆ ಮತ್ತು ಮಕ್ಕಳ ಪೌಷ್ಟಿಕತೆಯನ್ನು ಜಿಪಿಡಿಪಿ ಅಡಿಯಲ್ಲಿ, ಆದ್ಯತೆ ನೀಡಿ, ಈ ವಿಷಯಗಳ ಕಡೆಗೆ ಯುಕ್ತ ಗಮನ ಹರಿಸಬೇಕಾದ ಅಗತ್ಯವಿದೆ.

❖ ಬಿವಿಎಸ್, ವಿಹೆಚ್‌ಎಸ್‌ಎನ್‌ಸಿ ಮತ್ತು ಎಸ್‌ಡಿಎಮ್‌ಸಿಯಂಥ ಸ್ಥಳೀಯ ಸಮಿತಿಗಳನ್ನು ಬಲಪಡಿಸಿ, ಅಂಗನವಾಡಿ ಕೇಂದ್ರಗಳಲ್ಲಿ ಮತ್ತು ಶಾಲೆಗಳ ಎಮ್‌ಡಿಎಮ್‌ಎಸ್‌ಗಳಲ್ಲಿ ಐಸಿಡಿಎಸ್ ಇದರ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ಗ್ರಾಮ ಪಂಚಾಯಿತಿಗಳು ಖಾತರಿಪಡಿಸಬೇಕು.

❖ ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ ಮತ್ತು ಮಕ್ಕಳ ದುರ್ಬಳಕೆಯಂಥ ಸಂದರ್ಭಗಳಿಂದ, ಹಿಂಸೆ ಮತ್ತು ಶೋಷಣೆಗಳಿಂದ ಮಕ್ಕಳ ಸಂರಕ್ಷಣೆ ಕುರಿತು ಪಂಚಾಯಿತಿಗಳು ಗಮನ ಹರಿಸಲು ಸಮರ್ಥವಾಗಿರಬೇಕು.

❖ ಮೇಲಿನ ತರಗತಿಗಳಿಗೆ ತೇರ್ಗಡೆಯಾಗಿ ಹೋಗುವುದನ್ನೂ ಒಳಗೊಂಡಂತೆ, ಮಕ್ಕಳಿಗೆ ಗುಣಮಟ್ಟದ ಪ್ರಾರಂಭಿಕ ಬಾಲ್ಯಾವಸ್ಥೆ ಶಿಕ್ಷಣ (ಇಸಿಇ) ಮತ್ತು ಕಲಿಕಾ ಫಲಿತಾಂಶಗಳನ್ನು ಒದಗಿಸುವ ದಿಸೆಯಲ್ಲಿ ಜಿಪಿಡಿಪಿ ಕಾರ್ಯನಿರ್ವಹಿಸಬೇಕು.

❖ ಜಿಪಿಡಿಪಿ ಮೂಲಕ, ಗ್ರಾಮ ಪಂಚಾಯಿತಿಗಳು, 0–18 ವರ್ಷಗಳ ಒಳಗಿನ ಮಕ್ಕಳ ಪೌಷ್ಟಿಕ ಆಹಾರದ ವಿಷಯಗಳನ್ನು ವಿಶ್ಲೇಷಿಸಬೇಕು ಮತ್ತು ನಿರ್ವಹಿಸಬೇಕು.

❖ ಆರೋಗ್ಯ ಕ್ಷೇತ್ರದಲ್ಲಿ, ಗ್ರಾಮ ಪಂಚಾಯಿತಿಗಳು, ಪ್ರತಿಶತ 100ರಷ್ಟು ರೋಗಪ್ರತಿರಕ್ಷಣೆ, ನವಜಾತ ಶಿಶುಗಳ ಮತ್ತು ಹೆರಿಗೆ ಕಾಲದಲ್ಲಿ ಸಂಭವಿಸುವ ಮರಣ ಪ್ರಮಾಣದ ಬಗ್ಗೆ ಸಾಮಾಜಿಕ ಪರಿಶೋಧನೆಗಳನ್ನು ನಡೆಸುವುದನ್ನು ಖಚಿತಪಡಿಸಬೇಕು.

❖ ಶಿಕ್ಷಣ, ಆರೋಗ್ಯ, ಪೌಷ್ಟಿಕತೆ, ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯಗಳು, ಶೈಶವಾವಸ್ಥೆಯ (0–6 ವರ್ಷಗಳು) ಮತ್ತು ಬಾಲ್ಯಾವಸ್ಥೆಯ (6–10 ವರ್ಷಗಳು) ಹಾಗೂ ಕಿಶೋರಾವಸ್ಥೆಯ (10–18 ವರ್ಷಗಳು) ಮಕ್ಕಳನ್ನು ಒಳಗೊಂಡಂತೆ, ಎಲ್ಲ ಮಕ್ಕಳ ಸಂರಕ್ಷಣೆ ಕುರಿತು ಗಮನ ಕೇಂದ್ರೀಕರಿಸಿ, ಮಕ್ಕಳ–ಕೇಂದ್ರಿತ ಆದ್ಯತೆಗಳಿಗೆ ಕಡ್ಡಾಯ ಆಯವ್ಯಯ ಹಂಚಿಕೆಗೆ ಕನಿಷ್ಠ ಶೇಕಡಾವರು ಮೊತ್ತವನ್ನು ರಾಜ್ಯವು ನಿಗದಿಪಡಿಸಬಹುದು.

❖ ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ಬಿಸಿಲಿನ ಝಳದಿಂದಾದ ಆಘಾತ, ಪ್ರವಾಹ, ಭೂಕಂಪ, ಆಲಿಕಲ್ಲು ಮಳೆ ಮತ್ತು ಭೂಕುಸಿತದಂಥ ಸಂಭಾವ್ಯ ವಿಪತ್ತುಗಳ ಸಮಯದಲ್ಲಿ ಜಿಪಿಡಿಪಿ ಇದು, ಮಕ್ಕಳ ಕ್ಷೇಮಕ್ಕಾಗಿ ಯೋಜನೆಗಳನ್ನು ರೂಪಿಸಬೇಕು.

❖ ಸಮಗ್ರ ಮಕ್ಕಳ ಸಂರಕ್ಷಣಾ ಸಂಘ (ಐಸಿಪಿಎಸ್) ಮಾರ್ಗಸೂಚಿಗಳ ಪ್ರಕಾರ, ಗ್ರಾಮ/ ವಾರ್ಡ್ ಮಟ್ಟದ ಮಕ್ಕಳ ಸಂರಕ್ಷಣಾ ಸಮಿತಿಗಳನ್ನು ರಚಿಸಿ, ಈ ಸಮಿತಿಗಳನ್ನು ಗ್ರಾಮ ಪಂಚಾಯಿತಿಗಳ ಸಂಬಂಧಪಟ್ಟ ಸ್ಥಾಯಿ/ ಉಪ–ಸಮಿತಿಗಳೊಂದಿಗೆ ಜೋಡಿಸಲಾಗುತ್ತದೆ.

❖ ಯೋಜನೆ ತಯಾರಿಸುವ ಮತ್ತು ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು, ಮಕ್ಕಳನ್ನು/ ಕಿಶೋರ ಮಕ್ಕಳನ್ನು ಸಬಲೀಕರಿಸಲು **ಬಾಲ ಸಭೆ**ಗಳನ್ನು ನಡೆಸುವುದು ಮತ್ತು ಅವರ ಸಮಸ್ಯೆಗಳನ್ನು ಕುರಿತು ಧ್ವನಿ ಎತ್ತಲು ಅವರಿಗೆ ಅವಕಾಶ ಒದಗಿಸಿ, ಅವುಗಳನ್ನು ಜಿಪಿಡಿಪಿಯಲ್ಲಿ ಅಳವಡಿಸಿಕೊಳ್ಳಬಹುದು.

❖ ನೈಸರ್ಗಿಕ ಸಂಪನ್ಮೂಲಗಳು, ಅವುಗಳ ಮೌಲ್ಯ ಮತ್ತು ಸ್ಥಳೀಯ ಅಭಿವೃದ್ಧಿಗೆ ಅವುಗಳನ್ನು ಬಳಸುವುದನ್ನು ಒಳಗೊಂಡಂತೆ, ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳ ಸಂಭಾವ್ಯ ಲಭ್ಯತೆಯನ್ನು ಅರಿತುಕೊಳ್ಳಲು ಮಕ್ಕಳಿಗೆ ತಿಳಿಸುವಂಥ ಮತ್ತು ತರಬೇತಿ ನೀಡುವಂಥ ಅಂಶಗಳನ್ನು ಶೈಕ್ಷಣಿಕ ಪಠ್ಯಕ್ರಮದಲ್ಲಿ ಸೇರಿಸಬೇಕು.

**ಮಹಿಳಾ ಸಂವೇದನಾಶೀಲ ಗ್ರಾಮ ಪಂಚಾಯಿತಿ**



ಗ್ರಾಮಗಳಲ್ಲಿ ಹಸಿವು ಮತ್ತು ಅಪೌಷ್ಟಿಕತೆಯನ್ನು ಹೋಗಲಾಡಿಸಲು, ಗ್ರಾಮ ಪಂಚಾಯಿತಿಯ ಯೋಜನಾ ಕಾರ್ಯಚಟುವಟಿಕೆಗಳಲ್ಲಿ, ಸಮಗ್ರ ಮಹಿಳಾ ಸಮಾನತೆ ಮತ್ತು ಮಹಿಳಾ ಸಬಲೀಕರಣ ಉಪಕ್ರಮಗಳು ನಿರ್ಣಾಯಕವಾಗಿವೆ. ಮಹಿಳಾ ಸಂವೇದನಾಶೀಲ ಗ್ರಾಮ ಪಂಚಾಯಿತಿಗಳು, ತನ್ನ ಕ್ರಿಯಾ ಯೋಜನೆಯಲ್ಲಿ, ಪುರುಷರು ಮತ್ತು ಮಹಿಳೆಯರು, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಭಿನ್ನತೆಗಳ ಕಾರಣದಿಂದಾಗಿ ವಿಭಿನ್ನವಾಗಿ ಸಂಪನ್ಮೂಲಗಳನ್ನು ಪಡೆಯುತ್ತಾರೆ ಹಾಗೂ ಮಹಿಳೆಯರ ಮತ್ತು ಪುರುಷರ ಅವಶ್ಯಕತೆಗಳು ಬೇರೆ ಬೇರೆಯಾಗಿರುತ್ತವೆ ಎಂಬುದನ್ನು ಪರಿಗಣಿಸುತ್ತದೆ.

ಸಮಗ್ರ ಕ್ರಿಯಾ ಯೋಜನೆಯು, ಈ ವಿಭಿನ್ನ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು, ಲಿಂಗ ವಿಶ್ಲೇಷಣೆ, ಮಹಿಳಾ–ಸಂವೇದಿ ಸಹಭಾಗಿತ್ವದ ಗ್ರಾಮೀಣ ಮೌಲ್ಯನಿರ್ಧರಣಾ (ಪಿಆರ್‌ಎ) ತಂತ್ರಗಳು ಮತ್ತು ಸಾಂದರ್ಭಿಕ ವಿಶ್ಲೇಷಣೆ, ಮಹಿಳಾಪರ ಆಯವ್ಯಯ ಮತ್ತು ಮಹಿಳಾ ಸಂವೇದಿ ಎಮ್‌ಐಎಸ್ ಮತ್ತು ಮೇಲ್ವಿಚಾರಣಾ ಸೂಚನಾ ಸಾಧನಗಳನ್ನು ಬಳಸುವುದು.

ಗ್ರಾಮೀಣ ಮಹಿಳೆಯರು ಏಕರೂಪದ ಪ್ರವರ್ಗದವರಲ್ಲವಾದ್ದರಿಂದ, ಬಹು–ಆಯಾಮದ ಬಡತನ, ಬಹಿಷ್ಕಾರದಂಥ ಸಮಸ್ಯೆಗಳನ್ನು ಮತ್ತು ದುರ್ಬಲ ಸಾಮಾಜಿಕ ವರ್ಗಗಳ (ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಒಂಟಿ ಮಹಿಳೆಯರು ಮುಖ್ಯಸ್ಥರಾಗಿರುವ ಕುಟುಂಬಗಳು, ಅಂಗವಿಕಲ ಮಹಿಳೆಯರು, ಅಲೆಮಾರಿ ಅಧಿಸೂಚಿತವಲ್ಲದ ಮತ್ತು ಪ್ರಾಚೀನ ಬುಡಕಟ್ಟುಗಳು ಮತ್ತು ಇತರರಂಥ) ಮಹಿಳೆಯರು ಎದುರಿಸುತ್ತಿರುವ ತೊಂದರೆಗಳನ್ನು ಗ್ರಾಮ ಪಂಚಾಯಿತಿಯು ಪರಿಹರಿಸಬೇಕು. ಜಿಪಿಡಿಪಿ, ಸರ್ಕಾರಿ ಯೋಜನೆಗಳು ಮತ್ತು ಪ್ರಮುಖ ಕಾರ್ಯಕ್ರಮಗಳು, ಪಂಚಾಯಿತಿಗಳ ವಿಲೇವಾರಿಯಲ್ಲಿ, ಸಂಪನ್ಮೂಲಗಳ ಮಿತಿ ಮತ್ತು ಉತ್ತರದಾಯಿತ್ವದ ಕ್ರಮಗಳನ್ನು ಕುರಿತು ಅರಿವು ಮೂಡಿಸುವ ಬಗ್ಗೆ ದುರ್ಬಲ ಸಮುದಾಯಗಳ ಮತ್ತು ಮಹಿಳೆಯರ ಕಡೆಗೆ

ಉದ್ದೇಶಿತ ಗಮನ ಹರಿಸಲಾಗಿರುವುದನ್ನು ಖಾತರಿಪಡಿಸುವುದು ಕಡ್ಡಾಯವಾಗಿದೆ.

ಜಿಪಿಡಿಪಿಯಲ್ಲಿ, ಮಹಿಳಾ–ಸಂವೇದನಾಶೀಲತೆ ಮತ್ತು ಮಹಿಳೆಯರನ್ನು ಮುಖ್ಯವಾಹಿನಿಗೆ ತರುವ ಕುರಿತು ತರಬೇತಿ ನೀಡುವುದನ್ನು, ಎಲ್ಲಾ ಗ್ರಾಮ ಪಂಚಾಯಿತಿಗಳ ಕಾರ್ಯನಿರ್ವಾಹಕರಿಗೆ ಮತ್ತು ಗ್ರಾಮ ಪಂಚಾಯಿತಿಯ ಚುನಾಯಿತ ಪ್ರತಿನಿಧಿಗಳಿಗೆ, ಸ್ವಸಹಾಯ ಗುಂಪು, ಒಕ್ಕೂಟಗಳು, ಮಹಿಳಾ ಗುಂಪುಗಳು, ಗ್ರಾಮ ಮಟ್ಟದಲ್ಲಿನ ವಿವಿಧ ಯೋಜನೆಗಳ ಮೇಲ್ವಿಚಾರಣಾ ಮತ್ತು ಜಾಗೃತ ಸಮಿತಿಗಳಿಗೆ ವಹಿಸಲಾಗಿದೆ.

- ❖ ಸಾಮಾಜಿಕ ಮತ್ತು ಮಹಿಳಾ ಅಭಿವೃದ್ಧಿ ಕಾರ್ಯಚಟುವಟಿಕೆಗಳಿಗೆ ಸಮರ್ಪಕ ಸಂಪನ್ಮೂಲಗಳ (ಆರ್ಥಿಕ, ಸಾಮಾಜಿಕ, ನೈಸರ್ಗಿಕ, ಮಾನವೀಯ ಮತ್ತು ಮೂಲಸೌಕರ್ಯ) ಹಂಚಿಕೆ.
- ❖ ಕಡ್ಡಾಯ ಮಹಿಳಾ ಪರ ಯೋಜನೆಯು ಜಿಪಿಡಿಪಿಯ ಉಪ–ಯೋಜನೆಯಾಗಿರಬೇಕು ಮತ್ತು ಕನಿಷ್ಠಪಕ್ಷ ಶೇಕಡ 30ರಷ್ಟು ಸಂಪನ್ಮೂಲಗಳನ್ನು ಈ ಉಪ–ಯೋಜನೆಗೆ ಹಂಚಿಕೆ ಮಾಡಬೇಕು.
- ❖ ಜಿಪಿಡಿಪಿ ಭಾಗವಾಗಿ ಮಹಿಳಾ ಕ್ರಿಯಾ ಯೋಜನೆ ಮತ್ತು ಸೂಕ್ತವಾಗಿ ಅರ್ಥ ವಿವರಿಸಿದ ಮಹಿಳಾ ಸಂವೇದಿ ಸೂಚನೆಗಳು ಮತ್ತು ಜಿಪಿಡಿಪಿಗೆ ಪರಿಶೀಲನಾ ಪಟ್ಟಿಯನ್ನು ಸಿದ್ಧಪಡಿಸಬೇಕು. ಮಹಿಳಾ–ಸಂವೇದಿ ಪರಿಶೀಲನಾ ಪಟ್ಟಿಯು ಈ ಮುಂದಿನವುಗಳನ್ನು ಒಳಗೊಳ್ಳಬಹುದಾಗಿದೆ:
    - ○ ಜಿಪಿಡಿಪಿ ಯೋಜನೆಯಲ್ಲಿ ಪಾಲ್ಗೊಂಡ ಪುರುಷರ ಮತ್ತು ಮಹಿಳೆಯರ ಸಂಖ್ಯೆ.
    - ○ ಪಂಚಾಯಿತಿಗಳಲ್ಲಿನ ಕಾರ್ಯಚಟುವಟಿಕೆಗಳಿಂದ ಮತ್ತು ಸಂಪನ್ಮೂಲ ಹಂಚಿಕೆಯಿಂದ ಪ್ರಯೋಜನ ಪಡೆಯುತ್ತಿರುವ ಎಲ್ಲಾ ಗುಂಪುಗಳು.
    - ○ ವಿಶೇಷವಾಗಿ ದುರ್ಬಲ ವರ್ಗದ ಬಾಲಕಿಯರು, ಮಹಿಳೆಯರು ಮತ್ತು ವೃದ್ಧರಿಗೆ ಲಭ್ಯವಿರುವ ಸಮರ್ಪಕ ಆಹಾರ ಮತ್ತು ಪೌಷ್ಟಿಕತೆ ಕುರಿತು ಗಮನ ಕೇಂದ್ರೀಕರಿಸುವುದು.
    - ○ ಆಹಾರ, ಪೌಷ್ಟಿಕತೆ, ಆರೋಗ್ಯ ಮತ್ತು ಹಣಕಾಸು ಸಂಬಂಧಿತ ಯೋಜನೆಗಳು ಮಹಿಳೆಯರನ್ನು ತಲುಪುತ್ತಿರುವುದನ್ನು ಖಾತರಿಪಡಿಸಿಕೊಳ್ಳುವುದು.
    - ○ ಹೆಣ್ಣು ಮಗುವಿನ ಮತ್ತು ಮಹಿಳೆಯರ ಮೇಲಿನ ಹಿಂಸೆಯ ಪ್ರಕರಣಗಳನ್ನು ನಿರ್ವಹಿಸುವುದು ಮತ್ತು ಒಂದು ವರ್ಷದೊಳಗೆ ಅವುಗಳನ್ನು ಪರಿಹರಿಸುವುದು.
    - ○ ಎಮ್‌ಜಿಎನ್‌ಆರ್‌ಇಜಿಎಸ್, ಎಮ್‌ಡಿಎಮ್‌ಎಸ್‌ನಂಥ ಮತ್ತು ಸರ್ಕಾರದ ಇತರ ಪ್ರಮುಖ ಕಾರ್ಯಕ್ರಮಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರ ಸಂಖ್ಯೆ ಹಾಗೂ ಪುರುಷರಿಗೆ ಹೋಲಿಸಿದಲ್ಲಿ, ಅವರು ಎಷ್ಟು ಮಜೂರಿಯನ್ನು ಗಳಿಸುತ್ತಿರುವರು ಎಂಬುದನ್ನು ತಿಳಿದುಕೊಳ್ಳುವುದು.
    - ○ ಆರೋಗ್ಯ, ಶಿಕ್ಷಣ, ನೀರು, ನೈರ್ಮಲ್ಯ, ವಸತಿ, ಕೌಶಲ್ಯ–ನಿರ್ಮಾಣ ಪ್ರಯತ್ನಗಳು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿನ ಇತರ ಕಾರ್ಯಚಟುವಟಿಕೆಗಳಲ್ಲಿ ಸೇರಿಸಲಾಗಿರುವ ಮತ್ತು ಪರಿಹರಿಸಲಾಗಿರುವ ಮಹಿಳಾ ಪರ ಕಾಳಜಿ ವಿಷಯಗಳು.
    - ○ ಜಿಪಿಡಿಪಿ ಆಯವ್ಯಯ ಸಿದ್ಧಪಡಿಸುವ, ಯೋಜನೆ ತಯಾರಿಸುವ, ಅನುಷ್ಠಾನಗೊಳಿಸುವ ಮತ್ತು ಮೇಲ್ವಿಚಾರಣೆ ನಡೆಸುವ ಪ್ರಕ್ರಿಯೆಯಲ್ಲಿ ಮಹಿಳೆಯರು, ಸ್ವಸಹಾಯ ಗುಂಪುಗಳ ಸದಸ್ಯರು ಮತ್ತು ಮಹಿಳಾ ಗುಂಪುಗಳು ಕ್ರಿಯಾತ್ಮಕವಾಗಿ ಮತ್ತು ಅರ್ಥಪೂರ್ಣವಾಗಿ ಪಾಲ್ಗೊಳ್ಳುವುದನ್ನು ಖಾತರಿಪಡಿಸುವುದು.
- ❖ ಆರೋಗ್ಯ, ಶಿಕ್ಷಣ, ಡಬ್ಲ್ಯುಎಎಸ್‌ಹೆಚ್, ಪೌಷ್ಟಿಕ ಆಹಾರ, ಉದ್ಯೋಗ ಮತ್ತು ದುಡಿಮೆ; ಬಾಲ್ಯ ವಿವಾಹ, ಲಿಂಗಾಧಾರಿತ ಹಿಂಸೆ, ಮಾಟಮಂತ್ರದಂಥ ಅಪಾಯಕಾರಿ ಪದ್ಧತಿಗಳು; ಬಡತನ, ಸಾಮಾಜಿಕ ರಕ್ಷಣೆ, ನೈಸರ್ಗಿಕ ಸಂಪನ್ಮೂಲ ನಿರ್ವಹಣೆ, ತುರ್ತು ಸನ್ನಿವೇಶಗಳು ಮತ್ತು ವಿಪತ್ತು ಅಪಾಯದ ಸಾಧ್ಯತೆಯನ್ನು ತಗ್ಗಿಸುವಂಥ ಮುಖ್ಯ ವಿಷಯಗಳನ್ನು/ ಸೂಚನೆಗಳನ್ನು ಕುರಿತು ಮಹಿಳಾ ಸಂಬಂಧಿ ಸನ್ನಿವೇಶದ ವಿಶ್ಲೇಷಣೆಗಾಗಿ, ಲಿಂಗ–ಅಸಮತೋಲನ ದತ್ತಾಂಶದ ಸಂಗ್ರಹ ಮತ್ತು ಬಳಕೆ ಅತ್ಯಗತ್ಯವಾಗಿದೆ.
- ❖ **ಎಲ್ಲಾ ಗ್ರಾಮ ಸಭೆ**ಗಳಲ್ಲಿ, ಶೇಕಡ 50ರಷ್ಟು ಮಹಿಳೆಯರ ಪಾಲ್ಗೊಳ್ಳುವಿಕೆ ಮತ್ತು ಸಮುದಾಯ ಮಟ್ಟದಲ್ಲಿನ ಎಲ್ಲ ಸ್ಥಾಯಿ/ ಉಪ–ಸಮಿತಿಗಳಲ್ಲಿ ಮತ್ತು ನಿರ್ಣಯ–ಕೈಗೊಳ್ಳುವ ಸಂಸ್ಥೆಗಳಲ್ಲಿ ಕನಿಷ್ಠಪಕ್ಷ ಮೂರನೇ ಒಂದರಷ್ಟು ಮಹಿಳಾ ಪ್ರಾತಿನಿಧ್ಯಕ್ಕಾಗಿ ಶ್ರಮಿಸುವುದು.
- ❖ ಮಹಿಳೆಯರಿಗಾಗಿ ನಿಯತವಾಗಿ ವಿಶೇಷ **ಗ್ರಾಮ ಸಭೆ**ಗಳನ್ನು ನಡೆಸುವುದನ್ನು ಹಾಗೂ ಅವುಗಳ ಠರಾವುಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವುದನ್ನು ಖಾತರಿಪಡಿಸುವುದು.
- ❖ ಮಹಿಳಾ ಸಬಲೀಕರಣ ಮತ್ತು ಮಹಿಳಾ–ಸಂವೇದಿ ಜಿಪಿಡಿಪಿ ಅನುಷ್ಠಾನ ಕುರಿತು ಉತ್ತಮವಾಗಿ ಕಾರ್ಯನಿರ್ವಹಿಸಿದ್ದಕ್ಕಾಗಿ ಬಹುಮಾನಗಳನ್ನು ನೀಡುವುದು ಮತ್ತು ಕಾರ್ಯನಿರ್ವಹಣೆ ಅನುದಾನಗಳ ಮೂಲಕ ಪಂಚಾಯಿತಿಗಳಿಗೆ ಉತ್ತೇಜನ ನೀಡುವುದು.

- ಜಿಪಿಡಿಪಿ ಭಾಗವಾಗಿ ಪಂಚಾಯಿತಿಗಳಿಗೆ ಸಂಬಂಧಿಸಿದ ಪ್ರಕ್ರಿಯೆಗಳ ಮತ್ತು ಕಾರ್ಯಚಟುವಟಿಕೆಗಳಲ್ಲಿ ಲಿಂಗ ಸಂಬಂಧಿತ ವಿಷಯಗಳ ಪರಿಶೋಧನೆ.
- ಮಹಿಳಾ–ಸಂವೇದಿ ಆಡಳಿತ ಕುರಿತ ಜ್ಞಾನ ಕೇಂದ್ರಗಳನ್ನಾಗಿ ಪಂಚಾಯಿತಿ ಸಂಪನ್ಮೂಲ ಕೇಂದ್ರವನ್ನು ಅಭಿವೃದ್ಧಿಪಡಿಸುವುದು.
- ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಮಹಿಳಾ–ಸಂವೇದಿ ಜಿಪಿಡಿಪಿಯ ಉತ್ತಮ ಪದ್ಧತಿಗಳ ಮತ್ತು ಮಾದರಿಗಳ ಬಗ್ಗೆ ಸಮಾಲೋಚನೆಗಳನ್ನು ಮತ್ತು ಕಾರ್ಯಾಗಾರಗಳನ್ನು ನಡೆಸುವ ಮೂಲಕ ಮಾಹಿತಿ ಕ್ರೋಢೀಕರಣ ಮತ್ತು ಹಂಚಿಕೊಳ್ಳುವುದು.

**ಜಿಪಿಡಿಪಿಯಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿಗಳನ್ನು) ಸ್ಥಳೀಕರಿಸುವುದು**







*ಮೂಲ:* https://sustainabledevelopment.un.org/sdgs

ಬಡತನ ಕೊನೆಗೊಳಿಸಲು, ಲಿಂಗ ಸಮಾನತೆ ತರಲು ಮತ್ತು ಎಲ್ಲರಿಗೂ ಸುಸ್ಥಿರ ಬಳಕೆ, ಆರೋಗ್ಯ ಮತ್ತು ನೆಮ್ಮದಿಯನ್ನು ಖಾತರಿಪಡಿಸುವ ಕ್ರಮಕ್ಕಾಗಿ, ವಿಶ್ವ ಸಂಸ್ಥೆಯ, **'ಯಾರೂ ಹಿಂದೆ ಉಳಿಯಬಾರದು'** ಎಂಬುದು ಸುಸ್ಥಿರ ಅಭಿವೃದ್ಧಿ ಗುರಿಗಳ ಸಾರ್ವತ್ರಿಕ ಕರೆಯಾಗಿದೆ. 169 ಗುರಿಗಳೊಂದಿಗೆ 17 ಎಸ್‌ಡಿಜಿಗಳಿದ್ದು, ಅವುಗಳನ್ನು 2030ರ ಒಳಗಾಗಿ ಸಾಕಾರಗೊಳಿಸುವ ಅಗತ್ಯವಿದೆ. ಭಾರತವು ಎಸ್‌ಡಿಜಿಗಳಿಗೆ ಸಹಿ ಮಾಡಿದ ರಾಷ್ಟ್ರವಾಗಿದ್ದು, 2030ರ ಒಳಗಾಗಿ ಎಸ್‌ಡಿಜಿ ಕಾರ್ಯಸೂಚಿಯನ್ನು ಸಾಧಿಸುವೆಡೆ ಕಾರ್ಯನಿರ್ವಹಿಸುತ್ತಿದೆ.

ನೀತಿ (ಎನ್‌ಐಟಿಐ) ಆಯೋಗವು, ನೋಡಲ್ ಏಜನ್ಸಿಯಾಗಿದ್ದು, ರಾಷ್ಟ್ರ ಮತ್ತು ಉಪ–ರಾಷ್ಟ್ರ ಅಭಿವೃದ್ಧಿ ಯೋಜನೆಗಳಲ್ಲಿ ಎಸ್‌ಡಿಜಿಗಳನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನಿಸುವ ಮೂಲಕ, ಎಸ್‌ಡಿಜಿಗಳನ್ನು ಸಾಧಿಸುವೆಡೆ ಭಾರತದ ಪ್ರಯತ್ನಗಳನ್ನು ಸಮನ್ವಯಗೊಳಿಸುವಲ್ಲಿ ಮುಂಚೂಣಿಯಲ್ಲಿದೆ. ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಮಂತ್ರಾಲಯವು, ತರ್ಕಬದ್ಧ ಸಮಾಲೋಚಕ ಪ್ರಕ್ರಿಯೆ ಮೂಲಕ ರಾಷ್ಟ್ರಮಟ್ಟದ ಸೂಚನೆಗಳ ಕರಡನ್ನು ಸಿದ್ಧಪಡಿಸಿದ್ದು, ಅವು ಎಸ್‌ಡಿಜಿ ಉದ್ದೇಶಗಳನ್ನು ಮತ್ತು ಗುರಿಗಳನ್ನು ಬಿಂಬಿಸುತ್ತವೆ. ರಾಜ್ಯ ಸರ್ಕಾರಗಳು ಸಹ ಎಸ್‌ಡಿಜಿ ಅನುಷ್ಠಾನ ಪ್ರಕ್ರಿಯೆಯಲ್ಲಿ ಪ್ರವೇಶಿಸಲು ಉದ್ಯುಕ್ತವಾಗಿದೆ. ಆದಾಗ್ಯೂ, 2030ರ ಕಾರ್ಯಸೂಚಿಯನ್ನು ಕಾರ್ಯಗತಗೊಳಿಸುವ ಪರಿಣಾಮಕಾರಿ ಪರಿವರ್ತನೆಗೆ ಸ್ಥಳೀಯ ಸರ್ಕಾರಗಳ ಸಹಭಾಗಿತ್ವವು ಸಹ ಅಗತ್ಯವಾಗಿದೆ.

ಗ್ರಾಮ ಪಂಚಾಯಿತಿಗಳು, ಎಸ್‌ಡಿಜಿಗಳನ್ನು ಸ್ಥಳೀಯವನ್ನಾಗಿಸಲು ಮತ್ತು ಸಾಧಿಸಲು ಪರಿಣಾಮಕಾರಿ ಸಂಸ್ಥೆಗಳಾಗಿವೆ. ಪೌಷ್ಟಿಕತೆಯು ಎಸ್‌ಡಿಜಿಗಳನ್ನು ಸಾಧಿಸಲು ಮುಖ್ಯವಾದುದಾಗಿದೆ ಮತ್ತು ಎಸ್‌ಡಿಜಿ2 **'ಶೂನ್ಯ ಹಸಿವು'** ನಿರ್ಣಾಯಕವಾದುದಾಗಿದ್ದು, ಅದು ಹಸಿವನ್ನು ಕೊನೆಗೊಳಿಸುವ ಆಹಾರ ಸುರಕ್ಷತೆ ಸಾಧಿಸುವ, ಪೌಷ್ಟಿಕತೆಯನ್ನು ಸುಧಾರಿಸುವ ಮತ್ತು ಸುಸ್ಥಿರ ಕೃಷಿ ಉತ್ತೇಜಿಸುವ ಗುರಿ ಹೊಂದಿದೆ.

ಗ್ರಾಮ ಪಂಚಾಯಿತಿಗಳು, ಜಿಪಿಡಿಪಿಗಳ ಮೂಲಕ ಹಲವು ಎಸ್‌ಡಿಜಿಗಳನ್ನು ಕುರಿತು ಉದ್ದೇಶಿಸಬಹುದೆಂಬುದು ಸುಲಭವಾಗಿ ಗೋಚರವಾಗುವುದು. ಪ್ರತಿಯೊಂದು ಗ್ರಾಮ ಪಂಚಾಯಿತಿಯು, ನಿರ್ದಿಷ್ಟ ಎಸ್‌ಡಿಜಿಗಳಿಗೆ ಸಂಬಂಧಿಸಿದ ಅದರ ಕ್ರಮಗಳನ್ನು ಆದ್ಯತೆಯ ಪ್ರಕಾರ ಕೈಗೊಳ್ಳಬಹುದಾಗಿದ್ದು, ಎಲ್ಲ ಎಸ್‌ಡಿಜಿಗಳನ್ನು ಪರಸ್ಪರ ಸಂಪರ್ಕಿಸುವಂಥ ತತ್ತ್ವವನ್ನು ಅರ್ಥ ಮಾಡಿಕೊಳ್ಳುವ ಮತ್ತು ಅನ್ವಯಿಸುವ ಅಗತ್ಯವಿದೆ ಹಾಗೂ ಬಡತನ ನಿರ್ಮೂಲನೆ, 'ಶೂನ್ಯ ಹಸಿವು', ಎಲ್ಲರಿಗೂ ಆರೋಗ್ಯ ಮತ್ತು ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಲಿಂಗ ಸಮಾನತೆ, ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ಹಾಗೂ ನೈಸರ್ಗಿಕ

ಸಂಪನ್ಮೂಲಗಳ ಸಂರಕ್ಷಣೆಯೊಂದಿಗೆ ಜಿಪಿಡಿಪಿಯಲ್ಲಿ ಕ್ರಮಗಳ ಅನುಷ್ಠಾನವನ್ನು ಕ್ರೋಢೀಕರಿಸಬೇಕು.

ಎಸ್‌ಡಿಜಿಗಳ ಮತ್ತು ಜಿಪಿಡಿಪಿಯ ಕ್ರಮಗಳು ಪರಸ್ಪರ ಒಂದರ ಮೇಲೆ ಒಂದರಂತೆ ಬರುವುದರಿಂದಾಗಿ, ಜಿಪಿಡಿಪಿಯಲ್ಲಿ ಎಸ್‌ಡಿಜಿಗಳ ಸಮನ್ವಯಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತವೆ. ಜಿಪಿಡಿಪಿಯೊಳಗಿನ ಎಸ್‌ಡಿಜಿಗಳ ಸಮನ್ವಯವು, ಗ್ರಾಮ ಪಂಚಾಯಿತಿಗಳ ಅಭಿವೃದ್ಧಿಗೆ, ಧ್ಯೇಯೋದ್ದೇಶಗಳನ್ನು ರೂಪಿಸಲು ಅವುಗಳಿಗೆ ಸಾಧ್ಯವಾಗುವಂತೆ ಮಾಡುತ್ತವೆ, ಅದು, ಭಾರತ ಸರ್ಕಾರದ ರಾಷ್ಟ್ರೀಯ ಮತ್ತು ಜಾಗತಿಕ ಆದ್ಯತೆಗಳು ಮತ್ತು ಬದ್ಧತೆಗಳೊಂದಿಗೆ ಸೇರಿಕೊಂಡಿದೆ. ಇದು ಎಸ್‌ಡಿಜಿಗಳನ್ನು ಸಾಧಿಸಲು ಪ್ರಚೋದನೆಯನ್ನು ಸಹ ನೀಡುವುದು. ಅತಿ ಮುಖ್ಯವಾಗಿ, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮತ್ತು ಮೇಲ್ವಿಚಾರಣೆ ಮಾಡಲು, ಗ್ರಾಮ ಪಂಚಾಯಿತಿ ಕಾರ್ಯನಿರ್ವಾಹಕರ, ಸ್ಥಳೀಯ ಚುನಾಯಿತ ಪ್ರತಿನಿಧಿಗಳ ಮತ್ತು ಗ್ರಾಮೀಣ ಸಮುದಾಯಗಳ ಹೆಚ್ಚಿಸಿದ ಸಾಮರ್ಥ್ಯವು, ಪಂಚಾಯತ್ ಮಟ್ಟದಲ್ಲಿ ಎಸ್‌ಡಿಜಿಗಳನ್ನು ಸಾಧಿಸಲು ನಿರ್ಣಾಯಕವಾಗಿದೆ.

***ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಗೆ ಗ್ರಾಮ ಪಂಚಾಯಿತಿಯ ಕ್ರಮಗಳು***

- ಗುರಿಗಳಿಗೆ ಮತ್ತು ಸೂಚನೆಗಳಿಗೆ ಅವಕಾಶ ನೀಡುವಂಥ ಗ್ರಾಮ ಪಂಚಾಯಿತಿ ಮಟ್ಟದ ಸ್ಥಳೀಯವಾಗಿ ಇರುವ ಎಸ್‌ಡಿಜಿ ಜಾಲವನ್ನು ಅಭಿವೃದ್ಧಿಪಡಿಸುವುದು ಗ್ರಾಮ ಪಂಚಾಯಿತಿಗೆ ಸುಸಂಗತವಾಗಿದೆ ಮತ್ತು ಗ್ರಾಮ ಪಂಚಾಯಿತಿಯು ಆದ್ಯತೆಗೆ ಅನುಸಾರವಾಗಿ ಸಾಧಿಸುತ್ತದೆ.
- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗುವ ಕಾರ್ಯಕ್ರಮಗಳಲ್ಲಿ ಮತ್ತು ಯೋಜನೆಗಳಲ್ಲಿ ಎಸ್‌ಡಿಜಿಗಳನ್ನು ಯೋಜಿಸುವುದು.
- ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ, ಯೋಜನೆಯಲ್ಲಿ, ಅನುಷ್ಠಾನದಲ್ಲಿ ಮತು ಪಂಚಾಯಿತಿಗಳ ಕಾರ್ಯಕ್ರಮಗಳ ಮತ್ತು ಅಭಿವೃದ್ಧಿ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆಯಲ್ಲಿ ಗ್ರಾಮೀಣ ಮಹಿಳೆಯರ ಮತ್ತು ದುರ್ಬಲ ವರ್ಗದ ಸಮುದಾಯಗಳ ಅರ್ಥಪೂರ್ಣ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು ಮತ್ತು ಯೋಜಿಸುವುದು.
- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಎಸ್‌ಡಿಜಿಗಳ ಅನುಷ್ಠಾನವನ್ನು ಅನುಸರಿಸಲು ಮತ್ತು ಮೇಲ್ವಿಚಾರಣೆ ಮಾಡಲು ನಿರಂತರವಾಗಿ ಮಾಹಿತಿ ಮತ್ತು ಲಿಂಗ-ಆಧಾರಿತ ವಿಂಗಡನೆ ದತ್ತಾಂಶ ಸಂಗ್ರಹಿಸುವುದು.
- *ನಿಯತ **ಗ್ರಾಮ ಸಭೆಗಳ** ಮೂಲಕ ಜನರ ಪಾಲ್ಗೊಳ್ಳುವಿಕೆಯನ್ನು ಬಲಪಡಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.*
- ಎಸ್‌ಡಿಜಿಗಳಿಗೆ ಸಂಬಂಧಿಸಿದಂತೆ, ಗ್ರಾಮ ಪಂಚಾಯಿತಿ ಕಾರ್ಯನಿರ್ವಾಹಕರು ಮತ್ತು ಚುನಾಯಿತ ಪ್ರತಿನಿಧಿಗಳು ಹೊಣೆಗಾರಿಕೆಗಳನ್ನು ನಿರ್ವಹಿಸುವಂತಾಗಲು ಅವರ ಸಾಮರ್ಥ್ಯ ನಿರ್ಮಾಣ ಮಾಡುವುದು.
- ಮಹಿಳಾ ಗುಂಪುಗಳು, ವಿಹೆಚ್‌ಎಸ್‌ಎನ್‌ಸಿಗಳು, ಎಸ್‌ಹೆಚ್‌ಜಿಗಳು, ಎಸ್‌ಡಿಎಮ್‌ಸಿಗಳು, ಪಂಚಾಯಿತಿ ಮಟ್ಟದಲ್ಲಿನ ತಳಮಟ್ಟದ ಸಂಘಟನೆಗಳು ಎಸ್‌ಡಿಜಿಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುವುದು.
- ಗ್ರಾಮ ಪಂಚಾಯಿತಿಗಳು ಸ್ಥಳೀಯ ಜೀವವೈವಿಧ್ಯತೆಗೆ ಸಂಬಂಧಿಸಿದ ರಿಜಿಸ್ಟರುಗಳನ್ನು ಸಿದ್ಧಪಡಿಸುವುದು ಮತ್ತು ನಿರ್ವಹಿಸುವುದು.
- ಕುಡಿಯುವ ನೀರು, ಸ್ವಚ್ಛ ಶೌಚಾಲಯಗಳು, ನೈರ್ಮಲ್ಯ ಮತು ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ನಡೆಸಬಹುದಾದ ಕಲಿಕಾ ಪರಿಸರ ಒಳಗೊಂಡಂತೆ ಶಾಲಾ ಮೂಲಸೌಕರ್ಯಗಳ ಅಭಿವೃದ್ಧಿ.
- ಆರೋಗ್ಯಕರವಾಗಿ ಜೀವಿಸುವುದನ್ನು ಖಾತರಿ ಪಡಿಸಲು ಮತ್ತು ಎಲ್ಲರಿಗೆ ಸ್ವಾಸ್ಥ್ಯವನ್ನು ಹೆಚ್ಚಿಸಲು, ವಿಹೆಚ್‌ಎಸ್‌ಎನ್‌ಸಿಗಳು, ಅಂಗನವಾಡಿ ಕೇಂದ್ರಗಳು, ಎಎನ್‌ಎಮ್‌ಗಳು ಮತ್ತು ಮುಂತಾದವುಗಳ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಗ್ರಾಮ ಪಂಚಾಯಿತಿಗಳು ಖಾತರಿಪಡಿಸಬೇಕು.
- ದೌರ್ಬಲ್ಯಗಳ ನಿರ್ಧರಣೆ ಮತ್ತು ಹವಾಮಾನ ಬದಲಾವಣೆ ಮತ್ತು ಅದರ ಪರಿಣಾಮಗಳ ವಿರುದ್ಧ ಹೋರಾಡಲು ತುರ್ತು ಕ್ರಮ ತೆಗೆದುಕೊಳ್ಳಲು, ಅರಿವು ಮೂಡಿಸುವ ಬಗ್ಗೆ ತರಬೇತಿಗೆ ಸೌಲಭ್ಯ ಕಲ್ಪಿಸುವುದು.
- ಬಡತನ-ಮುಕ್ತ, ಅಪೌಷ್ಟಿಕತೆ ಮತ್ತು ಹಸಿವು ಮುಕ್ತ ಪಂಚಾಯಿತಿಗಳನ್ನು ನಿರ್ಮಿಸುವ ಸಲುವಾಗಿ ಬಡವರ ಪರವಾಗಿ ಇರುವ ವಿಕೇಂದ್ರೀಕೃತ ಯೋಜನೆ ಸಿದ್ಧಪಡಿಸುವ ಕುರಿತು ಗಮನ ಕೇಂದ್ರೀಕರಿಸಲು ವಿವಿಧ ನಿಧಿಗಳ ಮತ್ತು ಕಾರ್ಯಕ್ರಮಗಳ ಸಂಯೋಜನೆ.
- ಆಹಾರ ಸುರಕ್ಷತೆ, ಪೌಷ್ಟಿಕತೆ, ಸುಸ್ಥಿರ ಇಂಧನ, ನ್ಯಾಯೋಚಿತ ಕೃಷಿ ಪದ್ಧತಿಗಳು, ಶಿಕ್ಷಣ, ಕೌಶಲ್ಯಾಭಿವೃದ್ಧಿ, ಎಲ್ಲರಿಗೂ ವಸತಿ ದೊರಕುವುದನ್ನು ಖಾತರಿಪಡಿಸುವುದು ಮತ್ತು ದುರ್ಬಲ ಗುಂಪುಗಳಿಗೆ ವಿಶೇಷ ಒತ್ತು ನೀಡಿ, ಜಿಪಿಡಿಪಿಯಲ್ಲಿ ಇವುಗಳನ್ನು ಸಮನ್ವಯಗೊಳಿಸುವುದು.
- ವಿವಿಧ ಆರ್ಥಿಕ ವೃದ್ಧಿ ಯೋಜನೆಗಳ ಅಡಿಯಲ್ಲಿನ ಆರ್ಥಿಕ ಕಾರ್ಯಚಟುವಟಿಕೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಸೌಲಭ್ಯ ಕಲ್ಪಿಸುವುದು, ಕೃಷಿ ಕಾರ್ಯಕ್ರಮ ಯೋಜನೆ, ಮಾರುಕಟ್ಟೆ ಸಾಲ ಮತ್ತು ಮಹಿಳಾ-ಸಂವೇದಿ ತಂತ್ರಜ್ಞಾನದಲ್ಲಿ ಮಹಿಳೆಯರು

ಮತ್ತು ಸಣ್ಣ ರೈತರು ಅವಕಾಶ ಪಡೆಯುವುದಕ್ಕೆ ಸಾಧ್ಯವಾಗುವಂತೆ ಮಾಡುವುದು.

**ಜೀವನೋಪಾಯವನ್ನು ಖಾತರಿಪಡಿಸುವುದು: ಬಡತನ ನಿವಾರಣೆ ಮತ್ತು ಕುಟುಂಬ ಆದಾಯ:**

**ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಎಮ್‌ಜಿಎನ್‌ಆರ್‌ಇಜಿಎಸ್)** ಇದು, ಗ್ರಾಮೀಣ ಬಡವರಿಗೆ ಉದ್ಯೋಗ ಅವಕಾಶಗಳನ್ನು ಖಾತರಿಪಡಿಸಲು ಕೆಲಸದ ಹಕ್ಕಿನ ಅಡಿಯಲ್ಲಿ ಪ್ರಮುಖ ಸಾಮಾಜಿಕ ಸುರಕ್ಷತಾ ಕಾರ್ಯಜಾಲ ಯೋಜನೆಯಾಗಿದೆ ಮತ್ತು ಗ್ರಾಮಗಳಲ್ಲಿ ಸ್ಥಿರ ಸ್ವತ್ತುಗಳನ್ನು ಸೃಜಿಸಲು ಸಹ ನೆರವಾಗುತ್ತದೆ. ಜನರು ಕೌಶಲ್ಯವನ್ನು ಪಡೆದುಕೊಂಡಿರದಿದ್ದರೂ ಮತ್ತು ಕೈಕೆಲಸ ಮಾಡುವವರಾಗಿದ್ದರೂ, ಕೆಲಸಗಳನ್ನು ಪಡೆದುಕೊಳ್ಳಲು, ಈ ಕಾರ್ಯಕ್ರಮವು ಪರಿಣಾಮಕಾರಿಯಾಗಿದ್ದು ಬಡತನವನ್ನು ನಿವಾರಿಸುತ್ತದೆ, ಇದು ದಿನಗೂಲಿಯಲ್ಲಿ ಮಾತ್ರವೇ ಹಣವನ್ನು ನೀಡುತ್ತದೆ ಮತ್ತು ತಮ್ಮ ಕುಟುಂಬಗಳಿಗೆ ಆಹಾರ ಖರೀದಿಸುವ ಸಾಮರ್ಥ್ಯವನ್ನು ಅವರಿಗೆ ಒದಗಿಸುತ್ತದೆ.

ಈ ಕಾರ್ಯಕ್ರಮವು, ಹೊಂಡಗಳನ್ನು ತೋಡುವುದು, ಚೆಕ್–ಡ್ಯಾಮ್‌ಗಳ ನಿರ್ಮಾಣ, ಗ್ರಾಮದ ಕೆರೆಗಳನ್ನು (ಕೃಷಿ ಭೂಮಿಯ ಸಂರಕ್ಷಣೆ ಮತ್ತು ನೀರಾವರಿಗಾಗಿ ನೀರು ಕೊಯ್ಲು ಮಾಡಲು ಕಟ್ಟಡಗಳು) ದುರಸ್ತಿಗೊಳಿಸುವಂಥ ಕೆಲಸದ ಮೂಲಕ ಹಲವಾರು ಅಮೂಲ್ಯ ನೈಸರ್ಗಿಕ ಸಂಪನ್ಮೂಲಗಳನ್ನು ಸಹ ಸೃಜಿಸುತ್ತದೆ; ಎರೆಹುಳು ಗೊಬ್ಬರ ತಯಾರಿಸುವುದು, ಗಿಡ ನೆಡುವುದು, ಬೇಲಿ ನಿರ್ಮಾಣ, ಶೌಚಾಲಯ ನಿರ್ಮಾಣ, ರಸ್ತೆಗಳ ದುರಸ್ತಿ ಮತ್ತು ಈ ರೀತಿಯ ಕಾರ್ಯಚಟುವಟಿಕೆಗಳಿಗೆ ಇಂಥ ಕಾಮಗಾರಿಯನ್ನು ವಿಸ್ತರಿಸಲಾಗುತ್ತದೆ. ಈ ಕಾರ್ಯಕ್ರಮವು, ಎಲ್ಲಾ ಸಮಯದಲ್ಲೂ ಬಡವರಿಗೆ ಸುರಕ್ಷತಾ ಜಾಲವನ್ನು ಒದಗಿಸುತ್ತದೆ. ಇದು ಹವಾಮಾನ ವೈಪರೀತ್ಯಗಳ ಶಮನಗೊಳಿಸುವುದನ್ನು ಕುರಿತು ಸಹ ತಿಳಿಸಿಕೊಡುತ್ತದೆ.

***ಎಮ್‌ಜಿಎನ್‌ಆರ್‌ಇಜಿಎಸ್ ರಚನೆ, ಅನುಷ್ಠಾನ ಮತ್ತು ಮೇಲ್ವಿಚಾರಣೆಯಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ:***

- ❖ ಅರ್ಹ ಕುಟುಂಬಗಳನ್ನು, ವಿಶೇಷವಾಗಿ ದುರ್ಬಲ ಗುಂಪುಗಳ ಕುಟುಂಬಗಳನ್ನು ಗುರುತಿಸುವುದು ಮತ್ತು ತತ್ಸಂಬಂಧಿ ದತ್ತಾಂಶ ನಿರ್ವಹಿಸುವುದು.
- ❖ ನೈಸರ್ಗಿಕ ಸಂಪನ್ಮೂಲಗಳ ಮತ್ತು ಹೊಂಡ ತೋಡುವುದು, ಚೆಕ್–ಡ್ಯಾಂ ನಿರ್ಮಾಣ, ಗ್ರಾಮದ ಕೆರೆಗಳ (ಕೃಷಿ ಭೂಮಿಯ ಸಂರಕ್ಷಣೆ ಮತ್ತು ನೀರಾವರಿಗಾಗಿ ನೀರು ಕೊಯ್ಲು ಮಾಡಲು ಕಟ್ಟಡ ನಿರ್ಮಾಣಗಳು) ದುರಸ್ತಿಯಂಥ ಎಮ್‌ಜಿಎನ್‌ಆರ್‌ಇಜಿಎಸ್ ಅಡಿಯಲ್ಲಿ ಹಂಚಿಕೆ ಮಾಡಬೇಕಾದ ಕಾಮಗಾರಿಗಳ ಸಮೀಕ್ಷೆ ನಡೆಸುವುದು.
- ❖ ಸುಸ್ಥಿರ ಕೆಲಸ ಸೃಜಿಸಲು ಮತ್ತು ಹವಾಮಾನ ವೈಪರೀತ್ಯಗಳನ್ನು ಶಮನ ಮಾಡಲು, ಎರೆಹುಳು ಗೊಬ್ಬರ ತಯಾರಿಸುವುದು, ಗಿಡಗಳನ್ನು ನೆಡುವುದು, ಬೇಲಿ ನಿರ್ಮಾಣ, ಶೌಚಾಲಯ ನಿರ್ಮಾಣ, ಶಾಲೆಗಳ ಮತ್ತು ಅಂಗನವಾಡಿ ಕೇಂದ್ರಗಳ ನಿರ್ಮಾಣ, ರಸ್ತೆಗಳನ್ನು ದುರಸ್ತಿಗೊಳಿಸುವುದು, ಇತ್ಯಾದಿ ಕಾರ್ಯಚಟುವಟಿಕೆಗಳಿಗೆ ಕಾಮಗಾರಿಯನ್ನು ವಿಸ್ತರಿಸಬಹುದು.
- ❖ ಕಾಮಗಾರಿಯಲ್ಲಿ ಬಾಲ ಕಾರ್ಮಿಕರನ್ನು ನಿರ್ಬಂಧಿಸುವುದು.
- ❖ ನೋಂದಣಿಗಾಗಿ ಅರ್ಜಿಗಳನ್ನು ಸ್ವೀಕರಿಸುವದು.
- ❖ ನೋಂದಣಿ ಅರ್ಜಿಗಳನ್ನು ಪರಿಶೀಲಿಸುವುದು.
- ❖ ಕುಟುಂಬಗಳನ್ನು ನೋಂದಣಿ ಮಾಡುವುದು.
- ❖ ಜಾಬ್ ಕಾರ್ಡ್‌ಗಳನ್ನು (ಜೆಸಿಗಳನ್ನು) ನೀಡುವುದು.
- ❖ ಕಾಮಗಾರಿಗಾಗಿ ಅರ್ಜಿಗಳನ್ನು ಸ್ವೀಕರಿಸುವುದು.
- ❖ ಕಾಮಗಾರಿಗೆ ಸಂಬಂಧಿಸಿ ಅರ್ಜಿಗಳಿಗೆ ದಿನಾಂಕ ನಮೂದಿತ ಸ್ವೀಕೃತಿಗಳನ್ನು ನೀಡುವುದು.
- ❖ ಅನುಷ್ಠಾನ ಏಜನ್ಸಿ ಯಾವುದೇ ಆಗಿರಲಿ, ಅರ್ಜಿಯನ್ನು ಸಲ್ಲಿಸಿದ ಹದಿನೈದು ದಿನಗಳ ಒಳಗಾಗಿ ಅಥವಾ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಕೆಲಸಕ್ಕಾಗಿ ಕೋರಿದ ದಿನಾಂಕದಿಂದ ಕೆಲಸದ ಹಂಚಿಕೆ ಮಾಡುವುದು.
- ❖ ಕೆಲಸಕ್ಕಾಗಿ ಇರುವ ಬೇಡಿಕೆ ಮತ್ತು ಕೆಲಸದ ಪ್ರಮಾಣವನ್ನು ಮೌಲ್ಯಮಾಪನ ಮಾಡಲು ಕಾಲಕಾಲಕ್ಕೆ ಸಮೀಕ್ಷೆಗಳನ್ನು ನಡೆಸುವುದು.
- ❖ ಕೆಲಸಗಳನ್ನು ಗುರುತಿಸುವುದು ಮತ್ತು ಯೋಜಿಸುವುದು, ಸ್ವಾವಲಂಬಿತ ಪ್ರಾಜೆಕ್ಟ್‌ಗಳನ್ನು ಅಭಿವೃದ್ಧಿಪಡಿಸುವುದು, **ಗ್ರಾಮ ಸಭೆಯು** ನಿರ್ಧರಿಸಿದಂತೆ ಪ್ರಾಜೆಕ್ಟ್‌ಗಳನ್ನು ಸರಿಪಡಿಸುವುದು ಮತ್ತು ಆದ್ಯತೆಯನ್ನು ನಿಗದಿಪಡಿಸುವುದು.
- ❖ ಅಗತ್ಯ ತಾಂತ್ರಿಕ ಮಾನದಂಡಗಳನ್ನು ಮತ್ತು ಪ್ರಮಾಣಗಳನ್ನು ಈಡೇರಿಸತಕ್ಕಂಥ ಕಾಮಗಾರಿಗಳನ್ನು ಜಾರಿಗೊಳಿಸುವುದು.
- ❖ ನಿರ್ದಿಷ್ಟಪಡಿಸಿದಂತೆ ದಾಖಲೆಗಳನ್ನು ನಿರ್ವಹಿಸುವುದು.
- ❖ ಲೆಕ್ಕ ನಿರ್ವಹಿಸುವುದು ಮತ್ತು ಕೇಂದ್ರ ಸರ್ಕಾರವು/ರಾಜ್ಯ ಸರ್ಕಾರವು ನಿಯಮಿಸಿದ ನಮೂನೆಗಳಲ್ಲಿ ಬಳಕೆ ಪ್ರಮಾಣಪತ್ರಗಳನ್ನು ನೀಡುವುದು.
- ❖ ವಾಸ್ತವ ಸಂಗತಿಗಳು, ಅಂಕಿ–ಅಂಶಗಳು ಮತ್ತು ಸಾಧನೆಗಳನ್ನು ಒಳಗೊಂಡ ವಾರ್ಷಿಕ ವರದಿ ಸಿದ್ಧಪಡಿಸುವುದು.
- ❖ ಅರಿವು ಮೂಡಿಸುವುದು ಮತ್ತು ಸಾಮಾಜಿಕ ಬದಲಾವಣೆ
- ❖ ಯೋಜನೆ ಸಿದ್ಧಪಡಿಸುವುದಕ್ಕೆ ಮತ್ತು ಸಾಮಾಜಿಕ

ಪರಿಶೋಧನೆಗೆ ಗ್ರಾಮ ಸಭೆಯನ್ನು ಸೇರಿಸುವುದು.

- ❖ ಸಾಮಾಜಿಕ ಪರಿಶೋಧನೆ ನಡೆಸಲು ಕಾರ್ಮಿಕರ ಪಟ್ಟಿ, ಬಿಲ್ಲುಗಳು, ವೋಚರುಗಳು, ಪರಿಮಾಣ ಪುಸ್ತಕಗಳು, ಮಂಜೂರಾತಿ ಆದೇಶಗಳ ಪ್ರತಿಗಳು ಮತ್ತು ಲೆಕ್ಕಗಳ ಇತರ ತತ್ಸಂಬಂಧಿ ಪುಸ್ತಕಗಳು ಮತ್ತು **ಗ್ರಾಮ ಸಭೆಗೆ** ಸಂಬಂಧಿಸಿದ ಕಾಗದ–ಪತ್ರಗಳನ್ನು ಒಳಗೊಂಡು ಎಲ್ಲಾ ಲಭ್ಯ ಸಂಬಂಧಪಟ್ಟ ದಸ್ತಾವೇಜುಗಳನ್ನು ಸಿದ್ಧಪಡಿಸುವುದು.
- ❖ ಗ್ರಾಮ ಮಟ್ಟದಲ್ಲಿ ಮೇಲ್ವಿಚಾರಣಾ ಅನುಷ್ಠಾನ.
- ❖ ಕಾಮಗಾರಿ ಸ್ಥಳಗಳಲ್ಲಿ ಪೂರ್ಣಗೊಳಿಸಿದ ಮತ್ತು ಚಾಲ್ತಿಯಲ್ಲಿರುವ ಎರಡೂ ಕಾಮಗಾರಿಗಳ ವಿವರಗಳನ್ನು (ಸಂದಾಯ ಮಾಡಿದ ಮಜೂರಿ ಮತ್ತು ಸಾಮಗ್ರಿ ಅಂಶಗಳನ್ನು ಒಳಗೊಂಡು) ಮತ್ತು ಕೆಲಸ ಮಾಡಿದ ವ್ಯಕ್ತಿಗಳ (ಜಾಬ್ ಕಾರ್ಡ್ ಸಂಖ್ಯೆ ಸಹಿತ) ಹೆಸರುಗಳನ್ನು ಮತ್ತು ಕೆಲಸ ನಿರ್ವಹಿಸಿದ ದಿನಗಳು ಮತ್ತು ಅವರಿಗೆ ಸಂದಾಯ ಮಾಡಿದ ವೇತನ, ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಮತ್ತು ಇತರ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ, ಸಾಮಗ್ರಿಯನ್ನು ಪೂರೈಸಿದ ಏಜನ್ಸಿಯ ಹೆಸರು ಸಹಿತ ಪ್ರತಿಯೊಂದು ಪ್ರಾಜೆಕ್ಟ್‌ಗಾಗಿ ಖರೀದಿಸಿದ ಸಾಮಗ್ರಿಗಳ ಪ್ರಮಾಣವನ್ನು ಮತ್ತು ದರವನ್ನು ಪೂರ್ವಭಾವಿಯಾಗಿ ಬಹಿರಂಗಪಡಿಸುವುದು.
- ❖ ಕನಿಷ್ಠಪಕ್ಷ ತಿಂಗಳಿಗೊಮ್ಮೆ **ರೋಜ್ಗಾರ್ ದಿವಸವನ್ನು** ಆಯೋಜಿಸುವುದು.
- ❖ ಕಾರ್ಮಿಕ ಗುಂಪುಗಳ ರಚನೆಯಲ್ಲಿ ಬೆಂಬಲ ನೀಡುವುದು.
- ❖ ಕಾರ್ಯಕ್ರಮ ಅಧಿಕಾರಿಯು ಸ್ವೀಕರಿಸಿದ ಮತ್ತು ವಿಲೇ ಮಾಡಿದ ದೂರುಗಳನ್ನು ಕುರಿತು ಮಾಸಿಕ ವರದಿಗಳನ್ನು ಕಳುಹಿಸುವುದು.

### ಹಕ್ಕುದಾರರು ಮತ್ತು ಸಮುದಾಯಗಳೊಂದಿಗೆ ತೊಡಗಿರುವ ಗ್ರಾಮ ಪಂಚಾಯಿತಿಗಳು

ಯಾವುದೇ ಕ್ಷೇಮಾಭಿವೃದ್ಧಿ ಕಾರ್ಯಕ್ರಮದ ಉದ್ದೇಶಗಳನ್ನು, ಅಂಥ ಪ್ರಕ್ರಿಯೆಯಲ್ಲಿ ಜನರ, ವಿಶೇಷವಾಗಿ ಹಕ್ಕುದಾರರ ಅರ್ಥಪೂರ್ಣ ಪಾಲ್ಗೊಳ್ಳುವಿಕೆ ಇಲ್ಲದೆ ಸಾಧಿಸಲಾಗುವುದಿಲ್ಲ. ಗ್ರಾಮ ಪಂಚಾಯಿತಿಯ ಸಕ್ರಿಯ ನಾಯಕತ್ವವು, ಪೌಷ್ಟಿಕತೆಗಾಗಿ ಸಮುದಾಯ ಪರಿಣಾಮಕಾರಿ ಸಂಗ್ರಹಣೆಗಾಗಿ ಕಾರ್ಯಾಚರಣೆಗೆ ನಿರ್ಣಾಯಕವಾದುದಾಗಿದೆ. ಬೃಹತ್ ಸಮುದಾಯ ಮಾಲೀಕತ್ವವು,–

(i) ಪೌಷ್ಟಿಕತೆ ಮತ್ತು ಆರೋಗ್ಯದ ಅರಿವನ್ನು ಹೆಚ್ಚಿಸುವುದು;

(ii) ಕುಟುಂಬ ರಕ್ಷಣೆ ವರ್ತನೆಗಳಲ್ಲಿ ಸುಧಾರಣೆ ತರಲು ಸಹಾಯಕವಾಗುವುದು;

(iii) ಅತ್ಯಂತ ದುರ್ಬಲರು ಸಮುದಾಯದ ವ್ಯಾಪ್ತಿಯಲ್ಲಿ ತೊಡಗಿಕೊಳ್ಳುವುದನ್ನು ಹೆಚ್ಚಿಸುವುದು;

(iv) ತಳಮಟ್ಟದಲ್ಲಿ ಪರಿಣಾಮಕಾರಿ ಕಾರ್ಯಕ್ರಮ ಅನುಷ್ಠಾನವನ್ನು ಸಾಧ್ಯಗೊಳಿಸುವುದು;

(v) ಸಮುದಾಯ ಆಧಾರಿತ ಮೇಲ್ವಿಚಾರಣೆಯನ್ನು ಬಲಪಡಿಸುವುದು.

ಸಮುದಾಯಗಳೊಂದಿಗೆ, ಕಾರ್ಯಪ್ರವೃತ್ತವಾಗುವಲ್ಲಿ ಚುನಾಯಿತ ಮಹಿಳಾ ಗ್ರಾಮ ಪಂಚಾಯಿತಿ ಪ್ರತಿನಿಧಿಗಳ ಪಾತ್ರವು ನಿರ್ಣಾಯಕವಾದುದಾಗಿದೆ. ಆರೋಗ್ಯ, ಸ್ವಚ್ಛತೆ ಮತ್ತು ಪೌಷ್ಟಿಕತೆ ಹಾಗೂ ವಿವಿಧ ಸರ್ಕಾರಿ ಕಾರ್ಯಕ್ರಮಗಳ ಪ್ರಯೋಜನಗಳ ಬಗ್ಗೆ ಅರಿವು ಮೂಡಿಸುವ ಬಗ್ಗೆ ಗಮನ ಕೇಂದ್ರೀಕರಿಸುವುದರೊಂದಿಗೆ, ಹಾಗೂ ಇತರರಲ್ಲಿ ಸಮರ್ಥ ಸಮುದಾಯ ಕಾರ್ಯಾಚರಣೆ ಮೂಲಕ ದುರ್ಬಲ ಜನರೊಂದಿಗೆ ಸಂಪರ್ಕ ಹೊಂದುವ ಸಾಮರ್ಥ್ಯವು, ಅವರನ್ನು ಪರಿಣಾಮಕಾರಿ ನಾಯಕರನ್ನಾಗಿಸುತ್ತದೆ. ಆದುದರಿಂದ, ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ತರಬೇತಿ ಮತ್ತು ಸಾಮರ್ಥ್ಯ ಅಭಿವೃದ್ಧಿಗೆ ಒತ್ತು ನೀಡಬೇಕಾದ ಅಗತ್ಯವಿದೆ. ವ್ಯಾಪಕ ಪ್ರತಿಕ್ರಿಯೆಗಾಗಿ ಪ್ರದರ್ಶನ ನಡೆಸುವುದು ಅಥವಾ ಪ್ರೋತ್ಸಾಹ ನೀಡಿ, "ಅಪೌಷ್ಟಿಕತೆ ಮುಕ್ತ ಪಂಚಾಯಿತಿಗಳನ್ನು" ಪ್ರಗತಿಪರವಾಗಿ ಸೃಜಿಸುವುದಕ್ಕಾಗಿ, ಸಂಪನ್ಮೂಲಗಳ ಸಂಗ್ರಹಣೆಗೆ ಸಹ ಆದ್ಯತೆ ನೀಡಬೇಕಾದ ಮತ್ತು ಸಜ್ಜುಗೊಳಿಸಬೇಕಾದ ಅಗತ್ಯವಿದೆ.

**ಈ ಮುಂದಿನವುಗಳೊಂದಿಗೆ ಗ್ರಾಮ ಪಂಚಾಯಿತಿಯು ತೊಡಗುವುದು:**

ಸಮುದಾಯಗಳ ಸಮಗ್ರ ಅಭಿವೃದ್ಧಿಗಾಗಿ **ಮಹಿಳಾ ಸ್ವಸಹಾಯ ಗುಂಪುಗಳು (ಎಸ್‌ಹೆಚ್‌ಜಿಗಳು) ಮತ್ತು ಸಮುದಾಯ ಆಧಾರಿತ ಸಂಘಟನೆಗಳು (ಸಿಬಿಓಗಳು),** ಮೂಲಾಧಾರವಾಗಿರುವ ಅಪೌಷ್ಟಿಕತೆ ಸಂಬಂಧಿ ವಿಷಯಗಳಿಗಾಗಿ ಸಾಮೂಹಿಕ ಕ್ರಮಗಳನ್ನು ಪ್ರಾರಂಭಿಸಲು ನೆರವಾಗುತ್ತವೆ. ತರಬೇತಿ ಪಡೆದ ಪಂಚಾಯಿತಿಯ ಸದಸ್ಯರು (ಮುಖ್ಯವಾಗಿ ಮಹಿಳೆಯರು) ಮತ್ತು ಎನ್‌ಆರ್‌ಎಲ್‌ಎಮ್ ಅಡಿ ಸಜ್ಜುಗೊಂಡ ಮಹಿಳಾ ಸ್ವಸಹಾಯ ಗುಂಪುಗಳು, ಈ ಗುರಿ ಸಾಧನೆಯ ವೇಗವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಗ್ರಾಮ ಪಂಚಾಯಿತಿ ಯೋಜನೆಯು, ಅಪೌಷ್ಟಿಕತೆ ಮುಕ್ತ ಪಂಚಾಯಿತಿಗಳನ್ನು ಸಾಧಿಸಲು, ಅನುಸರಿಸಲು, ಗುರುತಿಸಲು ಮತ್ತು ಉತ್ತೇಜಿಸಲು ಸಹ ಸೂಚನೆಗಳನ್ನು ಒಳಗೊಳ್ಳಬಹುದಾಗಿದೆ. ಇವುಗಳನ್ನು ಸಮುದಾಯ ಮಟ್ಟದಲ್ಲಿ – ಅಂಗನವಾಡಿ ಕೇಂದ್ರಗಳಲ್ಲಿ, ಆರೋಗ್ಯ ಕೇಂದ್ರಗಳಲ್ಲಿ, ಶಾಲೆಗಳಲ್ಲಿ ಮತ್ತು ಪಂಚಾಯಿತಿಗಳಲ್ಲಿ ಪ್ರದರ್ಶಿಸಬಹುದು; ಪರಿಣಾಮಕಾರಿ ಮಧ್ಯಸ್ಥಿಕೆ ಕ್ರಮಗಳು, "ಮಾತೃ ಸಂಬಂಧಿತ ಹೊಣೆಗಾರಿಕೆಗಳಿಗೆ" ಮೀರಿ ಗಮನ ಹರಿಸುವುದನ್ನು ಸಾಧ್ಯಗೊಳಿಸುತ್ತದೆ ಹಾಗೂ ಮಹಿಳೆಯರು ಮತ್ತು ಮಕ್ಕಳಂಥ ದುರ್ಬಲ ಗುಂಪುಗಳಿಗೆ ಅತ್ಯಾವಶ್ಯಕ ಪೌಷ್ಟಿಕ ಆಹಾರ ಮತ್ತು ಉತ್ತಮ ಆರೋಗ್ಯವನ್ನು ಖಾತರಿಪಡಿಸುವ ಸಲುವಾಗಿ, ಹಕ್ಕು ಪಡೆದುಕೊಳ್ಳುವಲ್ಲಿಯ ಅನಿಶ್ಚಿತತೆಗಳನ್ನು ಮತ್ತು ಲಿಂಗ ಅಸಮಾನತೆ ಕುರಿತು ವ್ಯವಹರಿಸುವುದು.

ಒಳಗೊಳ್ಳಲಾದ ಕೆಲವು ಕ್ರಮಗಳು:

- ಹಸಿವು ಮತ್ತು ಅಪೌಷ್ಟಿಕತೆ ಪ್ರವೃತ್ತಿಗಳನ್ನು ಪತ್ತೆ ಮಾಡುವುದು ಮತ್ತು ಜಾಡು ಹಿಡಿಯುವುದು;
- ಸಂತಾನೋತ್ಪತ್ತಿ ಸಂಬಂಧಿತ ಆರೋಗ್ಯ, ಹೆರಿಗೆ ಸಮಯದಲ್ಲಿ, ನವಜಾತ ಶಿಶುವಿನ ಮತ್ತು ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕ ಆಹಾರ, ನ್ಯೂನ ಪೌಷ್ಟಿಕತೆಯಂಥ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಮುಂದುವರಿಯುತ್ತಿರುವ ಸಂದರ್ಭದಲ್ಲಿ ಮತ್ತು ರಕ್ತಹೀನತೆ, ಮುಂತಾದಂಥ ಕಾಯಿಲೆಗಳ ಸಂಬಂಧದಲ್ಲಿ ನೇರವಾಗಿ ಮತ್ತು ಪರೋಕ್ಷವಾಗಿ ಕ್ರಮ ಕೈಗೊಳ್ಳುವುದು.
- ಮಹಿಳೆಯರಿಗೆ ಪೂರಕ ಆದಾಯ ಸೃಜಿಸಬಹುದಾದಂಥ, ಹಗಲು ಶಿಶು ಪಾಲನಾ/ ಶಿಶು ಆರೈಕೆ ಕೇಂದ್ರಗಳನ್ನು ಸ್ಥಾಪಿಸಲು ಮಹಿಳಾ ಸ್ವಸಹಾಯ ಗುಂಪುಗಳು ಜವಾಬ್ದಾರಿ ವಹಿಸಿಕೊಳ್ಳುವುದು.
- ಆಹಾರ ಗುಂಪಿನಲ್ಲಿ (ಫುಡ್ ಬಾಸ್ಕೆಟ್‌ನಲ್ಲಿ) ಆದಾಯ ಸೃಜಿಸುವ ಪೌಷ್ಟಿಕ ಆಹಾರಗಳು ಮತ್ತು ಗಿಡಮೂಲಿಕೆಗಳು, ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆದ ಸ್ಥಳೀಯ ಸಿರಿ ಧಾನ್ಯಗಳಿಗೆ, ತರಕಾರಿಗಳಿಗೆ ಪ್ರೋತ್ಸಾಹ ನೀಡುವುದು.
- ಮುಂಜಾಗ್ರತಾ ಆರೋಗ್ಯ ರಕ್ಷಣೆ, ಜಲ ಮತ್ತು ವಾಯು ಮೂಲದ ರೋಗಗಳು, ಪೌಷ್ಟಿಕ ಆಹಾರ ಮತ್ತು ನೈಸರ್ಗಿಕ ಕೃಷಿ, ಜಲ ಸಂರಕ್ಷಣೆ, ಆಹಾರ ಸುರಕ್ಷತೆ ಮೇಲೆ ಹವಾಮಾನ ವೈಪರೀತ್ಯಗಳ ಪ್ರಭಾವ, ಮುಂತಾದಂಥ ಪರಿಸರ ಸಂಬಂಧಿ ವಿಷಯಗಳನ್ನು ಕುರಿತು ಅರಿವು ಮೂಡಿಸಲು ಆಂದೋನಗಳನ್ನು, ರ್‍ಯಾಲಿಗಳನ್ನು ಮತ್ತು ಜಾಥಾಗಳನ್ನು ನಡೆಸುವುದು.
- ಹೆಣ್ಣು ಮಗು, ಬಾಲ್ಯ ವಿವಾಹಗಳು, ಸಾಮಾಜಿಕ ರೂಢಿಗಳು, ಲಿಂಗ, ಜಾತಿ ಅಸಮಾನತೆಗಳನ್ನು ಕುರಿತು ಸಾಮಾಜಿಕ ಆಂದೋಲನ.
- ಯೋಜನೆಗಳ ಸಮುದಾಯಾಧಾರಿತ ಮೇಲ್ವಿಚಾರಣೆ.
- ಅತ್ಯುತ್ತಮ ಪೋಷಣೆ ಮತ್ತು ಪಾಲನಾ ಪದ್ಧತಿಗಳು, ಆಹಾರ ಕ್ರಮದಲ್ಲಿ ವೈವಿಧ್ಯ ಪೌಷ್ಟಿಕ ಆಹಾರಗಳನ್ನು ಖಾತರಿಪಡಿಸುವುದು; ನೈರ್ಮಲ್ಯ ಮತ್ತು ಸ್ವಚ್ಛತೆ ಹಾಗೂ ಆರೋಗ್ಯಕರ ಜೀವನ ಶೈಲಿಗಳನ್ನು, ನ್ಯೂನ ಪೌಷ್ಟಿಕತೆ ಮತ್ತು ಅಪೌಷ್ಟಿಕತೆ ಈ ಎರಡು ಸಮಸ್ಯೆಗಳನ್ನು ನಿವಾರಿಸಲು ಸಹ ಪೌಷ್ಟಿಕ ಆಹಾರ ಕುರಿತ ಶಿಕ್ಷಣ ಅಗತ್ಯವಿದೆ.
- "ಅಪೌಷ್ಟಿಕತೆ ಮುಕ್ತ, ಎಸ್‌ಹೆಚ್‌ಜಿಗಳು/ ಬಯಲು ಶೌಚ ಮುಕ್ತ ಎಸ್‌ಹೆಚ್‌ಜಿಗಳನ್ನು" ಕುರಿತು ಪರ್ಯಾಲೋಚಿಸುವ ಮೂಲಕ ಸಮುದಾಯಗಳಲ್ಲಿ ವರ್ತನೆ ಪದ್ಧತಿ ಬದಲಾವಣೆಗೆ ಪರಿಸರವನ್ನು ಶಕ್ತಗೊಳಿಸುವುದು.

### *ಗ್ರಾಮ ಸಭೆ*

***ಗ್ರಾಮ ಸಭೆಯು***, ಗ್ರಾಮ ಮಟ್ಟದಲ್ಲಿ ಕಾರ್ಯನಿರ್ವಹಿಸುವಂಥ ಸಂವಿಧಾನದ 73ನೇ ತಿದ್ದುಪಡಿ ಅಡಿಯಲ್ಲಿ ಬರುವ ಶಾಸನಾತ್ಮಕ ಸಂಸ್ಥೆಯಾಗಿದೆ. ಇದು ಶಾಶ್ವತ ಸಂಸ್ಥೆಯಾಗಿದ್ದು, ಸಂಬಂಧಪಟ್ಟ ಗ್ರಾಮದ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿತವಾಗಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

- ಸಂವೇದನಾಶೀಲ **ಗ್ರಾಮ ಸಭೆಯು**, ಪ್ರಜಾಪ್ರಭುತ್ವದ ಬುನಾದಿ ಹಾಕಲು ಹಾಗೂ ಯೋಜನೆಗಳನ್ನು ಸಿದ್ಧಪಡಿಸುವಲ್ಲಿ ಮತ್ತು ಯೋಜನೆಗಳ ಅನುಷ್ಠಾನದಲ್ಲಿ ಹಾಗೂ ಫಲಾನುಭವಿಗಳ ಆಯ್ಕೆಯಲ್ಲಿ ಸಾರ್ವಜನಿಕ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ಮೂಲಕ ಗ್ರಾಮ ಪಂಚಾಯಿತಿಗಳ ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಮತ್ತು ಮತದಾರರಿಗೆ ಪಂಚಾಯಿತಿಯ ಪಾರದರ್ಶಕತೆಯನ್ನು ಮತ್ತು ಉತ್ತರದಾಯಿತ್ವವನ್ನು ಸುನಿಶ್ಚಿತಗೊಳಿಸಲು ಹಾಗೂ ಆಡಳಿತ ನಿರ್ವಹಣೆಯ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಖಾತರಿಪಡಿಸುವ ಸಾಮಾಜಿಕ ಪರಿಶೋಧನೆಗೆ ಮಾರ್ಗವನ್ನು ಸಿದ್ಧಪಡಿಸಲು ಅತ್ಯಗತ್ಯವಾಗಿದೆ.
- **ಗ್ರಾಮ ಸಭೆಯ** ಪ್ರಾಮುಖ್ಯತೆ ಬಗ್ಗೆ ಗ್ರಾಮ ಪಂಚಾಯಿತಿ ಕಾರ್ಯನಿರ್ವಾಹಕರಿಗೆ ಮತ್ತು ಸದಸ್ಯರಿಗೆ, ಗ್ರಾಮ ಸಮಿತಿಗಳಿಗೆ ತರಬೇತಿ ಆಯೋಜಿಸುವುದು, ಗ್ರಾಮ ಸಭೆಯ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಪೂರ್ವಭಾವಿ ಅಗತ್ಯವಾಗಿದೆ.
- ಜನರು ಸಮಸ್ಯೆಗಳನ್ನು ಗುರುತಿಸಲು, ಆದ್ಯತೆ ನೀಡಲು, ಸ್ಪಷ್ಟಗೊಳಿಸಲು ಮತ್ತು **ಗ್ರಾಮ ಸಭೆಯಲ್ಲಿ** ಲಿಖಿತದಲ್ಲಿ ಬೇಡಿಕೆಗಳನ್ನು ಮಂಡಿಸಲು ಸಾಧ್ಯವಾಗುವಂತೆ ಆಹಾರ, ಪೌಷ್ಟಿಕತೆ, ಆರೋಗ್ಯ, ನೀರು, ನೈರ್ಮಲ್ಯ, ಶಿಕ್ಷಣ, ಜೀವನೋಪಾಯ ಮತ್ತು ತತ್ಸಂಬಂಧಿ ಅವಶ್ಯಕತೆಗಳ ವಿಷಯ ಕುರಿತು ಗ್ರಾಮದಲ್ಲಿನ ಮಕ್ಕಳ, ಮಹಿಳೆಯರ ಮತ್ತು ಯುವಕರ ನಡುವೆ ಚರ್ಚೆಗಳಿಗೆ ಅನುಕೂಲ ಕಲ್ಪಿಸುವುದು.
- ಗ್ರಾಮ ಪಂಚಾಯಿತಿಯ ಸದಸ್ಯರು, ಸಮಾಜದ ಎಲ್ಲಾ ವರ್ಗಗಳ, ಮುಖ್ಯವಾಗಿ, ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಮಹಿಳೆಯರು ಮತ್ತು ಇತರ ದುರ್ಬಲ ಸಮುದಾಯಗಳ ಜನರ ಪಾಲ್ಗೊಳ್ಳುವಿಕೆಯನ್ನು ಸುನಿಶ್ಚಿತಗೊಳಿಸಲು, ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಗ್ರಾಮ ಪಂಚಾಯಿತಿಯು, ಮುಂದಿನ ತನ್ನ ಸಭೆಯಲ್ಲಿ ವಿವರವಾಗಿ ಚರ್ಚಿಸುವ ವಿಷಯಗಳನ್ನು ಕುರಿತು **ಗ್ರಾಮ ಸಭೆಯಲ್ಲಿ** ತಮ್ಮ ಕುಂದುಕೊರತೆಗಳನ್ನು ವ್ಯಕ್ತಪಡಿಸಲು ಮತ್ತು ಸಲಹೆಗಳನ್ನು ಮುಂದಿಡಲು ಜನರಿಗೆ ಉತ್ತೇಜನ ನೀಡಬೇಕು.

- ಗ್ರಾಮ ಪಂಚಾಯಿತಿಯು ಉತ್ತಮ ಗುಣಮಟ್ಟದ ಯೋಜನೆಯನ್ನು ಸಿದ್ಧಪಡಿಸುವಲ್ಲಿ ಮತ್ತು ಪಾಲ್ಗೊಳ್ಳುವಿಕೆಯ ಗುಣಮಟ್ಟವನ್ನು ವಿಸ್ತರಿಸಬೇಕಾಗಿದ್ದು, ಅಭಿವೃದ್ಧಿ ವಿಷಯಗಳನ್ನು ಗುರುತಿಸುವ ಮತ್ತು ಆದ್ಯತೆ ನೀಡುವ ಮತ್ತು ಅತ್ಯುತ್ತಮ ಪರಿಹಾರಗಳನ್ನು ಕುರಿತು ಸಲಹೆ ನೀಡುವ ದಿಸೆಯಲ್ಲಿ ನಡೆಯುವ ಚರ್ಚೆಗಳನ್ನು ಕುರಿತು ಸಕ್ರಿಯ ಕೊಡುಗೆ ನೀಡಿ, ಸಮಾಜದ ಪ್ರತಿಯೊಂದು ವರ್ಗವು **ಗ್ರಾಮ ಸಭೆಯಲ್ಲಿ** ಪಾಲ್ಗೊಳ್ಳುವುದನ್ನು ಖಾತರಿಪಡಿಸಲು ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ.
- ಟಿಪಿಡಿಎಸ್ [ಟಿಪಿಡಿಎಸ್ (ನಿಯಂತ್ರಣ) ಆದೇಶ, 2015ರ 3(10)ನೇ ಖಂಡ) ಮತ್ತು ಗ್ರಾಮ ಪಂಚಾಯಿತಿಯ ಇತರ ಕ್ಷೇಮಾಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆ ಅರ್ಹ ಕುಟುಂಬಗಳನ್ನು ಗುರುತಿಸುವುದಕ್ಕಾಗಿ, ಜನತೆಯ ಆಶಯವನ್ನು ಮತ್ತು ಆಯ್ಕೆಯಲ್ಲಿ ಪಾರದರ್ಶಕತೆಯನ್ನು ಸುನಿಶ್ಚಿತಗೊಳಿಸುವಂಥ **ಗ್ರಾಮ** ಸಭೆಗಳಲ್ಲಿ ಅರ್ಹ ಕುಟುಂಬಗಳ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಅಂತಿಮಗೊಳಿಸುವುದು ಅಗತ್ಯವಾಗಿದೆ.
- ಈ ಸಂಬಂಧದಲ್ಲಿ, **ಗ್ರಾಮ ಸಭೆಯಲ್ಲಿ** ಒಮ್ಮತದಿಂದ ಅಥವಾ ಬಹುಮತದ ಮೂಲಕ ತೆಗೆದುಕೊಂಡ ನಿರ್ಣಯಗಳನ್ನು ಗೌರವಿಸಬೇಕೆಂಬ ಕಡ್ಡಾಯ ನಿರ್ಬಂಧದೊಂದಿಗೆ, ಆಹಾರ ಸುರಕ್ಷತೆಗೆ ಸಂಬಂಧಿಸಿದ ವಿಷಯಗಳನ್ನು ಕುರಿತು ಚರ್ಚೆ ನಡೆಸುವುದನ್ನು ಖಚಿತಪಡಿಸುವುದು. ಅದು ದಕ್ಷ, ಜನರಿಂದ ನಡೆಯುವ, ಜನ ಕೇಂದ್ರಿತ ಆಹಾರ ಸುರಕ್ಷತಾ ವ್ಯವಸ್ಥೆಗೆ ಮುನ್ನಡೆಯಾಗಿದೆ.
- **ಗ್ರಾಮ ಸಭೆಯಲ್ಲಿ** ಅಂಗೀಕರಿಸಿದ ಠರಾವುಗಳನ್ನು ಖಚಿತಪಡಿಸುವುದು ಮತ್ತು ತಮ್ಮ ಹುದ್ದೆಯ ಸಾಮರ್ಥ್ಯದಲ್ಲಿ ಮತ್ತು ಅದನ್ನು ಮೀರಿದ್ದರೆ, ಪಂಚಾಯಿತಿಯು ಅನುಸರಿಸಬೇಕಾದ ಕ್ರಮಗಳನ್ನು ಕುರಿತು, ಪರಿಹಾರಕ್ಕಾಗಿ ಗ್ರಾಮ ಪಂಚಾಯಿತಿಯು ತಾಲ್ಲೂಕು ಮತ್ತು ಜಿಲ್ಲೆಯ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಬೇಕು.

***ವಿಶೇಷ ಗ್ರಾಮ ಸಭೆಗಳು:***

***ಮಕ್ಕಳ ವಿಶೇಷ ಗ್ರಾಮ ಸಭೆ:***

ಸಾಮಾನ್ಯ **ಗ್ರಾಮ ಸಭೆಗೆ** ಹೆಚ್ಚುವರಿಯಾಗಿ, ಮಕ್ಕಳಿಗಾಗಿ ಮತ್ತು ಮಹಿಳೆಯರಿಗಾಗಿ ವಿಶೇಷ **ಗ್ರಾಮ ಸಭೆಗಳನ್ನು,** ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಕನಿಷ್ಠಪಕ್ಷ ವರ್ಷಕ್ಕೊಮ್ಮೆ ಪ್ರತ್ಯೇಕವಾಗಿ ನಡೆಸಬೇಕು. ಮಕ್ಕಳಿಗಾಗಿ ವಿಶೇಷ **ಗ್ರಾಮ ಸಭೆಗಳನ್ನು,** ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಆರ್‌ಡಿಪಿಆರ್) ಇಲಾಖೆಯ ನಿರ್ದೇಶನಗಳ ಅಡಿಯಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ನವೆಂಬರ್ ತಿಂಗಳಲ್ಲಿ ನಡೆಸುವುದನ್ನು 2006ರಲ್ಲಿ ಕಡ್ಡಾಯಗೊಳಿಸಲಾಗಿದೆ.

ಮಕ್ಕಳ ವಿಶೇಷ **ಗ್ರಾಮ ಸಭೆಯು,** ಮಕ್ಕಳು ನೇರವಾಗಿ ಪಾಲ್ಗೊಂಡು, ತಮ್ಮ ಕುಂದುಕೊರತೆಗಳು ಮತ್ತು ಅವಶ್ಯಕತೆಗಳ ಬಗ್ಗೆ ಧ್ವನಿ ಎತ್ತಲು ಅವರಿಗೆ ಒಂದು ವೇದಿಕೆಯಾಗಿದೆ. ಇತರ ವಿಷಯಗಳೊಂದಿಗೆ ಮಕ್ಕಳ ಆರೋಗ್ಯ, ಪೌಷ್ಟಿಕತೆ, ಬಾಲ ಕಾರ್ಮಿಕ ಪದ್ಧತಿ, ಮಕ್ಕಳ ಹಕ್ಕುಗಳು, ಮಕ್ಕಳ ಸಂರಕ್ಷಣೆ ಮತ್ತು ಮಕ್ಕಳ ಕಳ್ಳಸಾಗಾಣಿಕೆಯಂಥ ಮಕ್ಕಳ ವಿಷಯಗಳಿಗೆ ಸಂಬಂಧಿಸಿದ ಪರಿಹಾರಗಳನ್ನು ಮತ್ತು ಕ್ರಮಗಳನ್ನು ಕಂಡುಕೊಳ್ಳಲು ಇದು ಒಂದು ಮಾರ್ಗವಾಗಿದೆ.

- ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದಕ್ಕಾಗಿ ಮತ್ತು ಕ್ರಮ ಕೈಗೊಳ್ಳುವಲ್ಲಿ, ಮಕ್ಕಳು ಮತ್ತು ಅವರ ಕುಟುಂಬಗಳು ಹಾಗೂ ಶಿಕ್ಷಕರು, ಮುಂಚೂಣಿ ಕಾರ್ಯಕರ್ತರಂಥ ಮಧ್ಯಸ್ಥದಾರರು, ಇವರೊಂದಿಗೆ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಅಧಿಕಾರಿ/ಸಿಬ್ಬಂದಿಗಳು ಉತ್ತೇಜನ ನೀಡಬೇಕು ಹಾಗೂ ತೊಡಗಿಕೊಳ್ಳಬೇಕು.
- ಶಾಲೆಗಳಲ್ಲಿ ಮಕ್ಕಳು ಎದುರಿಸುವ ಕಿರುಕುಳವನ್ನು ಒಳಗೊಂಡಂತೆ ತಮಗಾಗುವ ತೊಂದರೆಗಳ ಬಗ್ಗೆ ತಿಳಿಸುವುದನ್ನು ಹಾಗೂ ಶೌಚಾಲಯಗಳಿಗೆ, ನೀರಿನ ಸೌಲಭ್ಯಗಳಿಗೆ ಮತ್ತು ಗ್ರಂಥಾಲಯಗಳಿಗೆ ಬೇಡಿಕೆ ಇಡುವುದನ್ನು ಸುನಿಶ್ಚಿತಪಡಿಸಿಕೊಳ್ಳಬೇಕು.
- **ಗ್ರಾಮ ಸಭೆಯಲ್ಲಿ** ಗೊತ್ತುವಳಿಗಳನ್ನು ಅಂಗೀಕರಿಸುವುದನ್ನು ಮತ್ತು ತಮ್ಮ ಹುದ್ದೆಯ ಸಾಮರ್ಥ್ಯದಲ್ಲಿ ಪಂಚಾಯಿತಿಗಳು ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಹಾಗೂ ಅವರ ಹುದ್ದೆಯ ಸಾಮರ್ಥ್ಯವನ್ನು ಮೀರಿದ್ದರೆ, ಗ್ರಾಮ ಪಂಚಾಯಿತಿಗಳು ಪರಿಹಾರ ಕ್ರಮಗಳಿಗಾಗಿ ತಾಲ್ಲೂಕು ಮತ್ತು ಜಿಲ್ಲಾ ಅಧಿಕಾರಿಗಳನ್ನು ಸಂಪರ್ಕಿಸಬೇಕು.
- ಜಿಲ್ಲಾ, ತಾಲ್ಲೂಕು ಮತ್ತು ಪಂಚಾಯತ್ ಮಟ್ಟಗಳ ಅಧಿಕಾರಿಗಳ ತೊಡಗುವಿಕೆಯು, ಈ ಉದ್ದೇಶದ ಗಂಭೀರತೆಯನ್ನು ತೋರಿಸುತ್ತದೆ ಹಾಗೂ ಸಮುದಾಯದ ಜನರು ನೇರವಾಗಿ ಅಧಿಕಾರಿಗಳೊಂದಿಗೆ ತಮ್ಮ ವಿಷಯಗಳನ್ನು ಕುರಿತು ಚರ್ಚಿಸಲು ಮತ್ತು ಅವುಗಳನ್ನು ಪರಿಹರಿಸುವ ಬಗ್ಗೆ ಮಾರ್ಗದರ್ಶನವನ್ನು ಕೋರಲು ಅವಕಾಶ ಒದಗಿಸಿಕೊಡುತ್ತದೆ.
- ಪೌಷ್ಟಿಕತೆ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಅಂಗನವಾಡಿ ಕೇಂದ್ರಗಳಲ್ಲಿನ ಮಕ್ಕಳನ್ನು, ಶಾಲೆಗಳಲ್ಲಿನ ಮಕ್ಕಳನ್ನು ಹೊರಗಿಡುವ ಸಂಬಂಧದಲ್ಲಿ ಯಾವುವೇ ವಿವಾದಗಳಿದ್ದರೆ, ಅವುಗಳನ್ನು ಪರಿಹರಿಸಬೇಕು.
- ಮಕ್ಕಳ ಪೌಷ್ಟಿಕತೆ, ಬಿಬಿಬಿಪಿ ಮತ್ತು ಮಕ್ಕಳ ಹಕ್ಕುಗಳನ್ನು ಕುರಿತು, ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು

ರ್‍ಯಾಲಿ ಏರ್ಪಡಿಸುವುದು, ಜನತೆ ಸಾಮಾಜಿಕ ಮಾನದಂಡಗಳ ಪುನಃ ಆಲೋಚಿಸುವಂತೆ ಮರುಚಿಂತಿಸುವಂತೆ ಮಾಡುತ್ತವೆ ಹಾಗೂ ಆರೋಗ್ಯ, ಪೌಷ್ಟಿಕತೆ ಮತ್ತು ಗ್ರಾಮಗಳಲ್ಲಿನ ಹೆಣ್ಣು ಮಕ್ಕಳ ಹಾಗೂ ಮಹಿಳೆಯರ ಸಂರಕ್ಷಣೆಯ ಪ್ರಾಮುಖ್ಯತೆಯನ್ನು ಪ್ರೋತ್ಸಾಹಿಸುತ್ತವೆ.

***ಮಹಿಳಾ ವಿಶೇಷ ಗ್ರಾಮ ಸಭೆ***

ಮಹಿಳೆಯರಿಗಾಗಿಯೇ ವಿಶೇಷ **ಗ್ರಾಮ** ಸಭೆಗಳನ್ನು ನಡೆಸುವುದು, ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಬೇರೆ ರೀತಿಯದ್ದಾಗಿದೆ. ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳು, ನಿಯತ **ಗ್ರಾಮ** ಸಭೆಗಳನ್ನು ನಡೆಸುವ ಮೊದಲು **ಮಹಿಳಾ ಗ್ರಾಮ ಸಭೆಗಳನ್ನು** ನಡೆಸುವುದನ್ನು ಕಡ್ಡಾಯಗೊಳಿಸಿವೆ.

ಪುರುಷ ಪ್ರಾಬಲ್ಯದ **ಗ್ರಾಮ ಸಭೆಗಳಲ್ಲಿ,** ಸಾಮಾನ್ಯವಾಗಿ ನಿರ್ಲಕ್ಷಿಸಲಾಗುವ ಬಾಧಿತ ಮಹಿಳೆಯರಂಥ ಮುಖ್ಯ ವಿಷಯಗಳನ್ನು ಚರ್ಚೆಗೆ ತರುವುದು, ಈ ಸಭೆಗಳನ್ನು ನಡೆಸುವುದರ ಹಿಂದಿನ ಮುಖ್ಯ ಉದ್ದೇಶವಾಗಿದೆ. ಆದ್ದರಿಂದ, ಸರ್ಕಾರವು ನಿಯಮಿಸಿದಂತೆ ಕಾಲ ಕಾಲಕ್ಕೆ ಮಹಿಳೆಯರಿಗಾಗಿ ವಿಶೇಷ **ಗ್ರಾಮ ಸಭೆಗಳನ್ನು** ಆಯೋಜಿಸಲು ಗ್ರಾಮ ಪಂಚಾಯಿತಿಯು ಸಾಧಕವಾಗಿದೆ. ಮಹಿಳಾ **ಗ್ರಾಮ ಸಭೆಗಳಲ್ಲಿ** ಮಹಿಳೆಯರ, ವಿಶೇಷವಾಗಿ ದುರ್ಬಲ ಗುಂಪುಗಳ ಸಕ್ರಿಯ ಪಾಲ್ಗೊಳ್ಳುವಿಕೆಗೆ ಸ್ವಸಹಾಯ ಗುಂಪುಗಳೊಂದಿಗೆ ಮತ್ತು ಇತರ ಅಂತಹುವೇ ಸಿಬಿಒಗಳೊಂದಿಗೆ ಕಾರ್ಯನಿರ್ವಹಿಸುವುದು ಅತ್ಯಗತ್ಯವಾಗಿದೆ.

ಈ **ಮಹಿಳಾ ಗ್ರಾಮ ಸಭೆಗಳಲ್ಲಿ** ಆರೋಗ್ಯ, ಆಹಾರ ಮತ್ತು ಪೌಷ್ಟಿಕತೆ, ಶಿಕ್ಷಣ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಆಯ್ಕೆಗಳು, ಸಾಮಾಜಿಕ ಸುರಕ್ಷತೆ ಕಾರ್ಯಜಾಲಗಳನ್ನು ಸುನಿಶ್ಚಿತಗೊಳಿಸಿ ಯೋಜನೆಗಳ ಅನುಷ್ಠಾನವನ್ನು ಪರಿಶೀಲಿಸುವ ಹಕ್ಕನ್ನು ಮಹಿಳೆಯರು ಹೊಂದಿದ್ದಾರೆ. **ಗ್ರಾಮ ಪಂಚಾಯಿತಿಯು** ಮತ್ತು ಪ್ರಭಾರಿ ಅಧಿಕಾರಿಗಳು, ತಮ್ಮ ಅಧಿಕಾರ ವ್ಯಾಪ್ತಿಯೊಳಗಿನ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪ್ರತಿಕ್ರಿಯಿಸುವ ಮತ್ತು ಪರಿಹರಿಸುವ ಹೊಣೆಗಾರಿಕೆಯನ್ನು ಹೊಂದಿದ್ದಾರೆ. ಈ ವಿಶೇಷ **ಗ್ರಾಮ ಸಭೆಗಳಲ್ಲಿ** ಮಧ್ಯಸ್ಥಗಾರರ ಸಹಭಾಗಿತ್ವದೊಂದಿಗೆ ಎಲ್ಲಾ ವಯೋಮಾನದವರಿಗಾಗಿ ಆಹಾರ, ಪೌಷ್ಟಿಕ ಆಹಾರ ಮತ್ತು ಸಾಮಾಜಿಕ ರಕ್ಷಣೆಗಳನ್ನು ಯೋಜಿಸಬೇಕು.

**ಆರೋಗ್ಯ, ಆಹಾರ ಮತ್ತು ಪೌಷ್ಟಿಕತೆ ಸುರಕ್ಷತೆಗಾಗಿ ಸಮುದಾಯ ಆಧಾರಿತ ಮೇಲ್ವಿಚಾರಣೆ ಮತ್ತು ಯೋಜನೆ (ಸಿಬಿಎಮ್‌ಪಿ):**

ಯೋಜನೆ ಮತ್ತು ಮೇಲ್ವಿಚಾರಣೆಯ ಕಾರ್ಯತಂತ್ರವಾಗಿ, ಸಮುದಾಯ ಆಧಾರಿತ ಮೇಲ್ವಿಚಾರಣೆ ಮತ್ತು ಯೋಜನಾ (ಸಿಬಿಎಮ್‌ಪಿ) ಪ್ರಕ್ರಿಯೆಯು, ಪ್ರಸೂತಿ, ಕಿಶೋರರ ಮತ್ತು ಮಕ್ಕಳ ಆರೋಗ್ಯ ಹಾಗೂ ಪೌಷ್ಟಿಕತೆ ಸೇವೆ ಇವುಗಳನ್ನು ಒದಗಿಸುವ ವ್ಯವಸ್ಥೆಗೆ ಅತ್ಯಾವಶ್ಯಕವಾಗಿವೆ. ಎನ್‌ಆರ್‌ಹೆಚ್‌ಎಮ್ ಬೆಂಬಲಿತ ಈ ಕಾರ್ಯತಂತ್ರವು, ಹಕ್ಕುದಾರರು ಸಕಾರಾತ್ಮಕ ಬದಲಾವಣೆಗೆ ಸಾರ್ವಜನಿಕ ಒತ್ತಡ ತರುತ್ತಾರೆ. ಸಾರ್ವಜನಿಕ ಆರೋಗ್ಯ ಮತ್ತು ಪೌಷ್ಟಿಕತೆ ಸೇವೆಗಳನ್ನು ಸುಧಾರಣೆಗೊಳಿಸುವಲ್ಲಿ ಮತ್ತು ಆರೋಗ್ಯ ವ್ಯವಸ್ಥೆಯ ಉತ್ತರದಾಯಿತ್ವವನ್ನು ಖಾತರಿಪಡಿಸುವಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಕುರಿತು ಯೋಜಿಸುತ್ತದೆ. ಇದು ಜನರ ಅವಶ್ಯಕತೆಗಳು ಮತ್ತು ಸಮುದಾಯವನ್ನು ಸಜ್ಜುಗೊಳಿಸುವ ಮೂಲಕ, ಸೂಕ್ತ ಅವಶ್ಯಕ ವಿಶ್ಲೇಷಣೆ ಮುಖಾಂತರ, ವಾಸ್ತವಿಕ ಬಜೆಟ್ ಯೋಜನೆಗಳ ನಡುವಿನ ಅಂತರಗಳನ್ನು ಕಡಿಮೆಗೊಳಿಸುವ ಕುರಿತು ಸಹ ಯೋಜಿಸುತ್ತದೆ. ಸಮುದಾಯ ಸದಸ್ಯರು ಮುಖ್ಯವಾಗಿ ಹಕ್ಕುದಾರರು, ಸುವ್ಯವಸ್ಥಿತ ರೀತಿಯಲ್ಲಿ ಸ್ಥಳೀಯ ಸೇವೆ ಒದಗಿಸುವವರೊಂದಿಗೆ ಮಾತುಕತೆಯನ್ನು ಪ್ರಾರಂಭಿಸುತ್ತಾರೆ; ಈ ವ್ಯವಸ್ಥೆಯು, ಜನರ ಅವಶ್ಯಕತೆಗಳ ಸಂಬಂಧದಲ್ಲಿ ಸಂಬಂಧಪಟ್ಟವರನ್ನು ಹೆಚ್ಚು ಉತ್ತರದಾಯಿಗಳನ್ನಾಗಿಸುತ್ತದೆ ಮತ್ತು ಜವಾಬ್ದಾರರನ್ನಾಗಿಸುತ್ತದೆ.

- ❖ ಪಂಚಾಯಿತಿ ಸದಸ್ಯರು, ಸಿಬಿಎಮ್‌ಪಿ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಬೇಕಾಗಿರುವ ಮತ್ತು ಕಾರ್ಯಕರ್ತರ ಪಾತ್ರವನ್ನು ವಹಿಸುವ ಮಧ್ಯಸ್ಥಗಾರರು ಮುಖ್ಯವಾಗಿ ಅವಶ್ಯಕರಾಗಿರುತ್ತಾರೆ.
- ❖ ಬಹು–ಮಧ್ಯಸ್ಥಗಾರ ಸಮುದಾಯ–ಆಧಾರಿತ ಮೇಲ್ವಿಚಾರಣೆ ಮತ್ತು ಯೋಜನಾ ಸಮಿತಿಗಳ (ಸಿಬಿಎಮ್‌ಪಿಸಿ), ಅಂಗನವಾಡಿಗಳ ಮತ್ತು ಶಾಲೆಗಳ ಹಕ್ಕುದಾರರು, ಸಿಎಸ್‌ಒ ಪ್ರತಿನಿಧಿಗಳು, ಮುಂಚೂಣಿ/ ಉನ್ನತ ಮಟ್ಟದ ಸೇವೆ ಒದಗಿಸುವವರಿಂದ ಹಾಗೂ ವಿಹೆಚ್‌ಎಸ್‌ಎನ್‌ಸಿ, ಬಿವಿಎಸ್, ಎಸ್‌ಡಿಎಮ್‌ಸಿ, ಟಿಪಿಡಿಎಸ್‌ಗೆ ಸಂಬಂಧಿಸಿದ ವಿಸಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಪಡೆದುಕೊಂಡ, ಜಿಲ್ಲೆ/ ರಾಜ್ಯ ಮಟ್ಟಗಳಿಗೆ ಗ್ರಾಮ ಮಟ್ಟದಿಂದ ಪಡೆದುಕೊಂಡ ಪ್ರತಿನಿಧಿಗಳಿಂದ ಸಿಬಿಎಮ್‌ಪಿ ಕಾರ್ಯಚಟುವಟಿಕೆಗಳನ್ನು ನಡೆಸಲು ಸಕ್ರಿಯಗೊಳಿಸಬೇಕಾದ ಮತ್ತು ತರಬೇತಿ ನೀಡಬೇಕಾದ ಅಗತ್ಯವಿದೆ.
- ❖ ಗ್ರಾಮ ಪಂಚಾಯಿತಿಯು, ವಿಕೇಂದ್ರಿಕೃತ ಯೋಜನಾ ಪ್ರಕ್ರಿಯೆಯಲ್ಲಿ ಸೌಲಭ್ಯ ವಂಚಿತ ದುರ್ಬಲ ಗುಂಪುಗಳ, ಜನರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಉತ್ತೇಜನ ನೀಡಬೇಕು. ಕಾರ್ಯಕ್ರಮ ನಿಧಿ ವೆಚ್ಚ, ಲಭ್ಯ ಸಮುದಾಯ ಸಾಕ್ಷ್ಯವನ್ನು ಆಧರಿಸಿದ ಬ್ಲಾಕ್ ಮತ್ತು ಜಿಲ್ಲಾ ಮಟ್ಟದ ಯೋಜನೆಗಳಲ್ಲಿ ಸೇರಲು ಪ್ರಸ್ತಾವನೆಗಳನ್ನು ರೂಪಿಸುವಲ್ಲಿ ಅವರು ಸಕ್ರಿಯವಾಗಿ ಮಧ್ಯಪ್ರವೇಶಿಸಲು ಮತ್ತು ಪಾಲ್ಗೊಳ್ಳಲು ಅವಕಾಶಗಳನ್ನು ಖಚಿತಪಡಿಸಲು ಸಕ್ರಿಯ ಪ್ರಯತ್ನಗಳು, ಸಮುದಾಯಾಧಾರಿತ ಯೋಜನೆಯನ್ನು ಖಚಿತಪಡಿಸುತ್ತವೆ.
- ❖ ಯೋಜನೆ ಮತ್ತು ಮೇಲ್ವಿಚಾರಣೆ ಇವೆರಡರಲ್ಲಿ ತೊಡಗಿಕೊಳ್ಳುವುದು, ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಆರೋಗ್ಯ, ಸ್ವಚ್ಛತೆ, ಕಾಳಜಿ ಮತ್ತು ಪೌಷ್ಟಿಕತೆಯನ್ನು ಸುರಕ್ಷಿತಗೊಳಿಸುವ ಪರಿಸರವನ್ನು ಖಾತರಿಪಡಿಸಲು, ವಿಶೇಷವಾಗಿ, ಪೌಷ್ಟಿಕತೆಯ

ದೃಷ್ಟಿಯಿಂದ ಅತ್ಯಂತ ದುರ್ಬಲ ವರ್ಗಗಳಾದ ಅನುಸೂಚಿತ ಜಾತಿ, ಅನುಸೂಚಿತ ಪಂಗಡದ ಜನರನ್ನು, ಅಲ್ಪಸಂಖ್ಯಾತರನ್ನು, ತಲುಪಲು ಸ್ಥಳೀಯ ರಾಜಕೀಯ ಇಚ್ಛಾಶಕ್ತಿಯನ್ನು ಸೃಜಿಸಲು ದಾರಿ ಮಾಡಿಕೊಡುತ್ತದೆ.

❖ ಸಿಬಿಎಮ್‌ಪಿ ಭಾಗವಾಗಿ ಪಂಚಾಯಿತಿ ಸದಸ್ಯರು, **ಆಹಾರ ಅದಾಲತ್** (ಆಹಾರ ನ್ಯಾಯಾಲಯಗಳು), ಸಾರ್ವಜನಿಕ ವಿಚಾರಣೆಗಳು ಮತ್ತು ಆಂತರಿಕ ಲೆಕ್ಕಪರಿಶೋಧನೆಯನ್ನು ಆಯೋಜಿಸುವಲ್ಲಿ ಸೌಲಭ್ಯ ಕಲ್ಪಿಸಬೇಕು.

**ಅಪೌಷ್ಟಿಕತೆಯನ್ನು ತಡೆಗಟ್ಟಲು ಬಹು–ವಲಯ ಮಧ್ಯಸ್ಥಿಕೆಗಳನ್ನು ಒಟ್ಟುಗೂಡಿಸುವುದು: ಗ್ರಾಮ ಪಂಚಾಯಿತಿಯ ನಿರ್ಣಾಯಕ ಪಾತ್ರ:**

ಅಪೌಷ್ಟಿಕತೆಯು, ಸುಪ್ತ ಸ್ಥಿತಿಯಲ್ಲಿ ಮುಂದುವರೆದಿರುವುದರಿಂದ ಮತ್ತು ಅಪೌಷ್ಟಿಕತೆಯಿಂದ ಬಳಲುವ ವ್ಯಕ್ತಿಗಳು ತಾವು ಅದರಿಂದ ಬಳಲುತ್ತಿರುವ ಬಗ್ಗೆ ಸ್ವತಃ ಅರಿವಿಲ್ಲದವರಾಗಿರುವುದರಿಂದ, ಅಪೌಷ್ಟಿಕತೆಯನ್ನು ತಡೆಗಟ್ಟುವುದು ಎಲ್ಲಕ್ಕಿಂತ ಹೆಚ್ಚು ಮುಖ್ಯವಾದ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ, ಸರ್ಕಾರಿ ಇಲಾಖೆಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿವೆ ಅಥವಾ ಇಲಾಖೆಗಳ ನಡುವೆ ಸಮನ್ವಯವಿಲ್ಲದೆ, ಅಪೌಷ್ಟಿಕತೆ ತಡೆಗಟ್ಟಲು ಒಂದೇ ರೀತಿಯ ಪ್ರಯತ್ನಗಳನ್ನು ಬೇರೆ ಬೇರೆ ಇಲಾಖೆಗಳು ಮಾಡುತ್ತಿವೆ. ಮಕ್ಕಳ ಮತ್ತು ಮಹಿಳೆಯರ ಪೌಷ್ಟಿಕ ಆಹಾರದ ಸಮಸ್ಯೆಗಳನ್ನು ನೇರವಾಗಿ ಮತ್ತು ಪರೋಕ್ಷವಾಗಿ ಪರಿಹರಿಸುವಂಥ ಯೋಜನೆಗಳ ಕೊರತೆ ಇಲ್ಲ. ಆದರೆ, ಅಪೌಷ್ಟಿಕತೆಯನ್ನು ನೀಗುವ ಈ ಸಾಮಾನ್ಯ ಗುರಿಯನ್ನು ಸಾಧಿಸಲು, ಪರಸ್ಪರ ಜೊತೆಗೂಡಿ ಸಮಷ್ಟಿ ಪರಿಣಾಮಗಳಿಗೆ ಅವಕಾಶ ಮಾಡುವ ಮತ್ತು ಯೋಜನೆಗಳನ್ನು ಪರಸ್ಪರ ಸಂಪರ್ಕಿಸುವ ವಿಷಯದಲ್ಲಿ ದೋಷವಿದೆ. ವಿವಿಧ ಸಮಾನ ಉದ್ದೇಶದಿಂದ ಕಾರ್ಯನಿರ್ವಹಿಸುವ ಇಲಾಖೆಗಳ ಎಲ್ಲಾ ಯೋಜನೆಗಳನ್ನು ಮತ್ತು ಸ್ಕೀಮುಗಳನ್ನು ಜಿಪಿಡಿಪಿ ಮೂಲಕ ಜೋಡಿಸುವುದು, ಸಮಾನ ಉದ್ದೇಶಿತ ಎರಡು ಯೋಜನೆಗಳನ್ನು ತಪ್ಪಿಸಿ, ಹಣಕಾಸು ಹೊರೆಯನ್ನು ತಗ್ಗಿಸುತ್ತದೆ ಮತ್ತು ಅಪೇಕ್ಷಿತ ಫಲಿತಾಂಶಗಳ ಸಾಧನೆಯನ್ನು ತೀವ್ರಗೊಳಿಸುತ್ತದೆ.

**ಗ್ರಾಮ ಸಭೆಗಳು** ಮತ್ತು ಜಿಪಿಡಿಪಿ ಮುಖಾಂತರ ಪಂಚಾಯಿತಿಗಳ ತೊಡಗುವಿಕೆಯು, ಮೊದಲು ಪಂಚಾಯಿತಿ ಸದಸ್ಯರಿಗೆ ಮತ್ತು ಅವರ ಮೂಲಕ ಸಮುದಾಯಕ್ಕೆ, ಅಪೌಷ್ಟಿಕತೆ ಬಗ್ಗೆ ಅರಿವು ಮೂಡಿಸುವ ಬಗ್ಗೆ ಹಾಗೂ ಪೀಳಿಗೆಯಿಂದ ಪೀಳಿಗೆಗೆ ಅಪೌಷ್ಟಿಕತೆಯು ಮುಂದುವರಿಯುವುದರಿಂದ, ಜನರ ಜೀವನ ಮತ್ತು ಕ್ಷೇಮಾಭಿವೃದ್ಧಿಯ ಮೇಲೆ ಅದರಿಂದ ಉಂಟಾಗುವ ಹಾನಿ ಮತ್ತು ದುಷ್ಪರಿಣಾಮಗಳು ಮುಂತಾದವುಗಳ ಬಗ್ಗೆ ಮಾಹಿತಿ ನೀಡುವಲ್ಲಿ ಅತ್ಯಂತ ಉಪಯುಕ್ತವಾಗುವುದು.

ಐಸಿಡಿಎಸ್, ಎಂಬಿಎಸ್, ಟಿಪಿಡಿಎಸ್, ಎಂಡಿಎಂಎಸ್, ಪೋಷಣ ಅಭಿಯಾನ, ಪಂಚಿಣಿ ಯೋಜನೆಗಳು, ಡಿಎವೈ–ಎನ್‌ಆರ್‌ಎಲ್‌ಎಂ, ಎನ್‌ಎಸ್‌ಎಪಿ, ಎಂಜಿಎನ್‌ಆರ್‌ಇಜಿಎ, ಪಿಎಂಎವೈ, ಮುಂತಾದಂಥ ಮಹಿಳೆಯರ, ಪುರುಷರ, ಬಾಲಕಿಯರ ಮತ್ತು ಬಾಲಕರ ವೈವಿಧ್ಯಮಯ ಆಹಾರ ಸುರಕ್ಷತೆ ಮತ್ತು ಪೌಷ್ಟಿಕಾಂಶಗಳ ಅಗತ್ಯಗಳನ್ನು ಈಡೇರಿಸಲು, ಪ್ರಮುಖ ಕಾರ್ಯಕ್ರಮಗಳನ್ನು ಮತ್ತು ಸಹಭಾಗಿತ್ವದ ಸ್ಥಳೀಯ ಯೋಜನೆಯನ್ನು ಒಟ್ಟುಗೂಡಿಸಲು ಮತ್ತು ಸಂಯೋಜಿಸಲು ಬಡತನ ನಿರ್ಮೂಲನಾ ಕ್ರಮಗಳೊಂದಿಗೆ, ಪೌಷ್ಟಿಕ ಆಹಾರ ಸಂಬಂಧಿತ ಕ್ರಮಗಳನ್ನು ಒಂದುಗೂಡಿಸುವುದು ಅತ್ಯಗತ್ಯವಾಗಿದೆ.

ಐಸಿಡಿಎಸ್ ಯೋಜನೆಯ ಆಶ್ರಯದಲ್ಲಿ ಬರುವ ಅಂಗನವಾಡಿ ಸೇವೆಗಳ ವ್ಯಾಪ್ತಿಯಲ್ಲಿ, ವಿಹೆಚ್‌ಎನ್‌ಡಿ ಇದು, ಯೋಜನೆಗಳನ್ನು ಒಟ್ಟುಗೂಡಿಸಲು, ಅತ್ಯಂತ ಪ್ರಮುಖ ಸಾಧನವಾಗಿದೆ. ವಿಹೆಚ್‌ಎನ್‌ಡಿಯನ್ನು ರೂಪಿಸುವಾಗ, ಗ್ರಾಮ ಪಂಚಾಯಿತಿಯು, ಕೈಗೊಳ್ಳಬೇಕಾದ ಅಂಥ ದೈನಂದಿನ ಕಾರ್ಯಚಟುವಟಿಕೆಗಳನ್ನು ನಡೆಸಲು, ಮೇಲ್ವಿಚಾರಣೆ ಮಾಡಲು ಹಾಗೂ ಅಂಥ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಲು ಹಲವಾರು ವಿಹೆಚ್‌ಎನ್‌ಡಿಗಳನ್ನು ಸೇರಿಸಿಕೊಳ್ಳಬೇಕು.

ಟಿಪಿಡಿಎಸ್, ಎಂಡಿಎಂಎಸ್ ಮತ್ತು ಐಸಿಡಿಎಸ್‌ಗಳನ್ನು ಒಳಗೊಂಡಂತೆ, ಆಹಾರ ಆಧಾರಿತ ಸಾಮಾಜಿಕ ಸುರಕ್ಷತೆಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮತ್ತು ಮೇಲ್ವಿಚಾರಣೆ ಮಾಡುವ ಕುರಿತು ಗ್ರಾಮ ಪಂಚಾಯಿತಿಗಳು ಗಮನ ಕೇಂದ್ರೀಕರಿಸಬೇಕು. ಪೌಷ್ಟಿಕತೆ, ಆಹಾರ ಸುರಕ್ಷತೆ ಮತ್ತು ಪೋಷಣ ಅಭಿಯಾನ ಕುರಿತ ಸಂಪನ್ಮೂಲ ವಿಷಯಗಳನ್ನು ಸ್ಥಳೀಯ ಭಾಷೆಗಳಲ್ಲಿ ಸಿದ್ಧಪಡಿಸಬೇಕು ಹಾಗೂ ಸಮುದಾಯ ಸದಸ್ಯರಿಗೆ ಮತ್ತು/ಅಥವಾ ಐಸಿಡಿಎಸ್, ಆಶಾ, ಅಂಗನವಾಡಿ ಕಾರ್ಯಕರ್ತೆಯರನ್ನು ಮತ್ತು ಇತರರನ್ನು ಒಳಗೊಂಡಂತೆ ಮುಂಚೂಣಿ ಸಮುದಾಯ ಕಾರ್ಯಕರ್ತರಿಗೆ ಪಂಚಾಯಿತಿಯ ಸಂಪನ್ಮೂಲ ಕೇಂದ್ರಗಳಲ್ಲಿ ಲಭ್ಯಗೊಳಿಸುವಂತೆ ಮಾಡಬೇಕು. ಇದರ ಜೊತೆಗೆ, ಗ್ರಾಮ ಪಂಚಾಯಿತಿ ಕಾರ್ಯನಿರ್ವಾಹಕರಿಗೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಪೌಷ್ಟಿಕ ಆಹಾರ ಮತ್ತು ಆಹಾರ ಸುರಕ್ಷತೆ ಕುರಿತು ತರಬೇತಿ ನೀಡಬೇಕು.

ತರಬೇತಿ ಪಡೆದ ಪಂಚಾಯಿತಿ ಸದಸ್ಯರು (ಮುಖ್ಯವಾಗಿ ಮಹಿಳೆಯರು) ಮತ್ತು ಎನ್‌ಆರ್‌ಎಲ್‌ಎಮ್ ಅಡಿಯಲ್ಲಿ, ಸಿದ್ಧತೆ ಮಾಡಿಕೊಂಡ ಮಹಿಳಾ ಸ್ವ–ಸಹಾಯ ಗುಂಪುಗಳು, ಈ ಗುರಿಯ ವೇಗವನ್ನು ಹೆಚ್ಚಿಸುವಲ್ಲಿ ಮುಖ್ಯ ಪಾತ್ರ ವಹಿಸುವರು. ಗ್ರಾಮ ಪಂಚಾಯಿತಿ ಯೋಜನೆಯು, ಪಂಚಾಯಿತಿಗಳು ಅಪೌಷ್ಟಿಕ ಮುಕ್ತ ಪಂಚಾಯಿತಿಗಳಾಗಲು ಸಾಧ್ಯವಾಗುವಂತೆ ಮಾಡಲು, ಪತ್ತೆ ಹಚ್ಚಲು, ಗುರುತಿಸಲು ಮತ್ತು ಉತ್ತೇಜಿಸಲು ಕೆಲವು ಸರಳ ಸೂಚನೆಗಳನ್ನು ಸೇರಿಸಿಕೊಳ್ಳಬಹುದಾಗಿದೆ. (ಇವುಗಳನ್ನು ಸಮುದಾಯ ಮಟ್ಟದಲ್ಲಿ; ಅಂಗನವಾಡಿ ಕೇಂದ್ರಗಳಲ್ಲಿ, ಆರೋಗ್ಯ ಕೇಂದ್ರಗಳಲ್ಲಿ, ಶಾಲೆಗಳಲ್ಲಿ ಮತ್ತು ಪಂಚಾಯಿತಿಗಳಲ್ಲಿ ಪ್ರದರ್ಶಿಸಬಹುದು).

ಪಂಚಾಯಿತಿಯು, ಮಕ್ಕಳ, ಮಹಿಳೆಯರ (ಗರ್ಭಿಣಿ ಮಹಿಳೆಯರು ಮತ್ತು ಹಾಲುಣಿಸುವ ತಾಯಂದಿರೂ ಒಳಗೊಂಡಂತೆ), ನಿರಾಶ್ರಿತರ, ನಿರ್ಗತಿಕರ, ವೃದ್ಧರ, ಕಿಶೋರಿ ಬಾಲಕಿಯರ ಮತ್ತು

ಬಾಲಕರ, ವಿಶೇಷ ಚೇತನ ವ್ಯಕ್ತಿಗಳ, ಅಲೆಮಾರಿಗಳೆಂದು ಅಧಿಸೂಚಿಸಿಲ್ಲದ ಬುಡಕಟ್ಟುಗಳ, ಅನುಸೂಚಿತ ಪಂಗಡಗಳ, ಅನುಸೂಚಿತ ಜಾತಿಗಳ, ಪ್ರಾಚೀನ ದುರ್ಬಲ ಬುಡಕಟ್ಟು ಜನರ ಮತ್ತು ಸೌಲಭ್ಯವಂಚಿತ ಇತರ ಗುಂಪುಗಳ ಪೌಷ್ಟಿಕತೆಯ ಸ್ಥಿತಿಗತಿಯನ್ನು ನಿರೂಪಿಸುವ ಕ್ರಮಗಳನ್ನು ಕೈಗೊಳ್ಳಬೇಕು.

ಕಾರ್ಯಕ್ರಮಗಳ ನಡುವಿನ ಅಂತರಗಳನ್ನು ಸಮಗ್ರವಾಗಿ ಸರಿದೂಗಿಸಬೇಕಾದ ಅಗತ್ಯವಿರುವುದರಿಂದ ಮತ್ತು ಅವು ನೇರವಾಗಿ ಕುಟುಂಬಗಳನ್ನು ಹಾಗೂ ಸಮುದಾಯಗಳನ್ನು ತಲುಪುವುದರಿಂದ, ಈ ಅಂತರಗಳನ್ನು ಸರಿದೂಗಿಸುವ ಕಾರ್ಯದಲ್ಲಿ ಪಂಚಾಯಿತಿಗಳ ತೊಡಗಿಕೊಳ್ಳುವಿಕೆಯು, ಸೂಕ್ತ ಪೌಷ್ಟಿಕ ಆಹಾರ ಪದ್ಧತಿಗಳ ಹಾಗೂ ಮಗುವಿನ, ಬಾಣಂತಿಯ ಮತ್ತು ಕಿಶೋರ ಮಕ್ಕಳ ಸೂಕ್ತ ಪಾಲನೆಗೆ ಸಂಬಂಧಿಸಿದಂತೆ ಮಾಹಿತಿ ಒದಗಿಸುವ ಮತ್ತು ಅರಿವು ಮೂಡಿಸುವ ಮೂಲಕ ಅಪೌಷ್ಟಿಕತೆಯನ್ನು ಹೋಗಲಾಡಿಸುವಲ್ಲಿ ಮತ್ತು ತಡೆಗಟ್ಟುವಲ್ಲಿ ಅತ್ಯಂತ ಪರಿಣಾಮಕಾರಿಯಾಗಿರುವುದು ಮತ್ತು ಉಪಯುಕ್ತವಾಗುವುದು. ಅಂಥ ಸಂಪೂರ್ಣ ಮತ್ತು ಸಮಗ್ರ ಯೋಜನೆಯು, ವಿವಿಧ ವಲಯಗಳಿಂದ ಹಾಗೂ ಹೆಚ್ಚಿನ ಸ್ಥಳೀಯ ಸಂಪನ್ಮೂಲವನ್ನು ಚಲಾವಣೆಗೆ ತರಲು, ಆ ಮೂಲಕ ಸೇವೆ ಒದಗಿಸುವ ಸುಧಾರಣೆಗೆ ಸೌಲಭ್ಯ ಕಲ್ಪಿಸುವ ಮೂಲಕ ಹೆಚ್ಚು ನಿಧಿಗಳನ್ನು ಸಂಗ್ರಹಿಸಲು ನೆರವಾಗುವುದು.

**ಕೋಷ್ಟಕ 7**: ಪ್ರಮುಖ ಕಾರ್ಯಕ್ರಮಗಳು ಮತ್ತು ತತ್ಸಂಬಂಧಿ ಇಲಾಖೆಗಳು

| ಕ್ರಮ ಸಂಖ್ಯೆ | ಪೌಷ್ಟಿಕತೆ ನಿರ್ಣಯಿಸುವ ಅಂಶಗಳು | ಮಂತ್ರಾಲಯ/ಇಲಾಖೆ | ಪ್ರಮುಖ ಕಾರ್ಯಕ್ರಮಗಳು |
|---|---|---|---|
| 1 | ಬಾಣಂತಿ ಮತ್ತು ಮಗುವಿನ ರಕ್ಷಣೆಗೆ ಅವಕಾಶ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ (ಎಂಡಬ್ಲ್ಯುಸಿಡಿ) | ಐಸಿಡಿಎಸ್; ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ; ಶಿಶುಪಾಲನ ಗೃಹಗಳು; ರಾಜೀವ್ ಗಾಂಧಿ ಕಿಶೋರಿ ಬಾಲಕಿಯರ ಸಬಲೀಕರಣ ಯೋಜನೆ (ಎಸ್‌ಎಬಿಎಲ್‌ಎ) |
| 2 | ಆರೋಗ್ಯ ಪಾಲನೆಗೆ ಅವಕಾಶ | ಎಂಹೆಚ್‌ಎಫ್‌ಡಬ್ಲ್ಯು | ರಾಷ್ಟ್ರೀಯ ಆರೋಗ್ಯ ಅಭಿಯಾನವು ಆರ್‌ಎಮ್‌ಎನ್‌ಸಿಹೆಚ್+ಎ ಯನ್ನು ಒಳಗೊಳ್ಳುತ್ತದೆ. |
| 3 | ಕುಡಿಯುವ ನೀರಿಗೆ ಅವಕಾಶ | ಎಮ್‌ಡಬ್ಲ್ಯುಡಿಎಸ್ | ಎಸ್‌ಬಿಎಮ್, ಎನ್‌ಆರ್‌ಡಿಡಬ್ಲ್ಯುಪಿ |
| 4 | ಕುಟುಂಬ ಆಹಾರ ಸುರಕ್ಷತೆಗೆ ಅವಕಾಶ (ಮತ್ತು ಆಹಾರ ಪೂರೈಕೆ) | ಎಮ್‌ಸಿಎಎಫ್‌ಪಿಡಿ; ಎಮ್‌ಎಎಮ್‌ಹೆಚ್‌ಆರ್‌ಡಿ | ಟಿಪಿಡಿಎಸ್, ಎನ್‌ಎಫ್‌ಎಸ್‌ಎಮ್, ಕೃಷಿ, ಎಮ್‌ಡಿಎಮ್‌ಎಸ್ (ಆಹಾರ ಪೂರೈಕೆ) |
| 5 | ಜೀವನೋಪಾಯಗಳ ಭದ್ರತೆ ಮತ್ತು ಬಡತನ ನಿರ್ಮೂಲನೆಯ ಅವಕಾಶ | ಎಮ್‌ಎಸ್‌ಡಿ ಎಮ್‌ಆರ್‌ಡಿ | ಕೌಶಲ್ಯ ಅಭಿವೃದ್ಧಿ; ಎನ್‌ಆರ್‌ಎಲ್‌ಎಮ್ ಮತ್ತು ಎಮ್‌ಜಿಎನ್‌ಆರ್‌ಇಜಿಎ |
| 6 | ಬಾಲಕಿಯರ ಶಿಕ್ಷಣ, ಸಾಕ್ಷರತೆ ಮತ್ತು ಸಬಲೀಕರಣ | ಎಮ್‌ಹೆಚ್‌ಆರ್‌ಡಿ; ಎಮ್‌ಡಬ್ಲ್ಯುಸಿಡಿ | *ಸರ್ವ ಶಿಕ್ಷಾ ಅಭಿಯಾನ; ಸಾಕ್ಷರ ಭಾರತ; ಬಿಬಿಬಿಪಿ* |
| 7 | ಮಾಹಿತಿ, ಸಂಪರ್ಕ ಸಾಧನ ಮತ್ತು ಸಾಮಾಜಿಕವಾಗಿ ಒಗ್ಗೂಡಿಸುವುದು | ಎಂಐ ಮತು ಬಿ; ಎಮ್‌ಪಿಆರ್; ಎಮ್‌ಯುಡಿ; ಎಮ್‌ವೈಎಎಸ್ | ಮಾಹಿತಿ ಆಂದೋಲನ; ಪಿಆರ್‌ಐಗಳ ತರಬೇತಿ; ನಗರ ಸ್ಥಳೀಯ ಸಂಸ್ಥೆಗಳ ತರಬೇತಿ; ಯುವ ಉಪಕ್ರಮಗಳು |
| 8 | ದುರ್ಬಲ ಸಮುದಾಯ ಗುಂಪುಗಳಿಗೆ ಮಧ್ಯಸ್ಥಿಕೆ ಕ್ರಮಗಳು | ಎಮ್‌ಟಿಎ; ಎಮ್‌ಎಸ್‌ಜೆಇ; ಎಮ್‌ಎಮ್‌ಎ | ದುರ್ಬಲ ಸಮುದಾಯ ಗುಂಪುಗಳಿಗೆ (ಅನುಸೂಚಿತ ಜಾತಿ, ಅನುಸೂಚಿತ ಪಂಗಡ) ಕೇಂದ್ರೀಕೃತ ಮಧ್ಯಸ್ಥಿಕ ಉಪಕ್ರಮಗಳು; ಬಹು–ವಲಯ ಅಭಿವೃದ್ಧಿ ಕಾರ್ಯಕ್ರಮ (ಅಲ್ಪಸಂಖ್ಯಾತರು) |
| 9 | ಮುಖ್ಯ ನಿರ್ಧರಣೆ ಅಂಶಗಳು | ಎಮ್‌ಡಬ್ಲ್ಯುಸಿಡಿ | ಎನ್‌ಎನ್‌ಎಮ್/ ಹೆಚ್ಚಿನ ಹೊರೆ ಇರುವ ಜಿಲ್ಲೆಗಳಲ್ಲಿ ಪೌಷ್ಟಿಕತೆ ಸಂಬಂಧಿ ಕಾರ್ಯಕ್ರಮಗಳು |

**ಮೂಲ: ರಾಷ್ಟ್ರೀಯ ಪೌಷ್ಟಿಕ ಆಹಾರ ಕಾರ್ಯತಂತ್ರ – ನೀತಿ ಆಯೋಗ**

**ಅನುಬಂಧ 1: ಕರ್ನಾಟಕದಲ್ಲಿ ಮತ್ತು ಭಾರತದಲ್ಲಿ ಕ್ರಿಯಾಶೀಲ ಗ್ರಾಮ ಪಂಚಾಯಿತಿಗಳ ಯಶಸ್ವಿ ಕಥೆಗಳು**

**ಕಥೆ 1:**

***ನಮ್ಮ ಗ್ರಾಮ – ನಮ್ಮ ಯೋಜನೆ (ಜಿಪಿಡಿಪಿ): ಮಾಲಂಗಿ ಗ್ರಾಮ ಪಂಚಾಯಿತಿ, ಕರ್ನಾಟಕ ಇದರ ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ***

ಮಾಲಂಗಿ ಗ್ರಾಮ ಪಂಚಾಯಿತಿಯು, ಕರ್ನಾಟಕದ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿದ್ದು, ಇಲ್ಲಿ 1350 ಕುಟುಂಬಗಳಿವೆ ಮತ್ತು 6069 ಜನಸಂಖ್ಯೆಯನ್ನು ಹೊಂದಿದ್ದು, ಇದರಲ್ಲಿ 3044 ಪುರುಷರು ಮತ್ತು 3025 ಮಹಿಳೆಯರು ಇರುವರು (994ರ ಲಿಂಗಾನುಪಾತದೊಂದಿಗೆ). ಈ ಗ್ರಾಮ ಪಂಚಾಯಿತಿಯು, ಮೀಸಲು ಅರಣ್ಯ ಪ್ರದೇಶದ ಬಳಿ ಇದ್ದು, ಇಲ್ಲಿ ವಿಶಿಷ್ಟ ಅರಣ್ಯ ವಾಸಿ ಪಂಗಡಗಳಿವೆ **(ಜೇನು ಕುರುಬರು)**

ಮಾಲಂಗಿ ಗ್ರಾಮ ಪಂಚಾಯಿತಿಯು, ರಾಜ್ಯ ಸರ್ಕಾರವು ಸಿದ್ಧಪಡಿಸಿದ ಮತ್ತು ಅನುಮೋದಿಸಿದ ಸಾಧನೋಪಾಯಕ್ಕನುಸಾರವಾಗಿ (ಟೂಲ್‌ಕಿಟ್), ಜಿಪಿಡಿಪಿಯನ್ನು ಸಿದ್ಧಪಡಿಸಲು ಪ್ರಾರಂಭಿಸಿತು. ಇತರ ಮಧ್ಯಸ್ಥಿಕೆದಾರರೊಂದಿಗೆ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಮೂಲಕ ತರಬೇತಿ ಪಡೆದಿರುವರು. ಗ್ರಾಮ ಪಂಚಾಯಿತಿಯು, ಅಳವಡಿಸಿಕೊಂಡ ಪ್ರಕ್ರಿಯೆಯು, ಸಂಪೂರ್ಣವಾಗಿ ರಾಜ್ಯದಲ್ಲಿ ಅಳವಡಿಸಿಕೊಂಡ ಯೋಜನಾ ಪ್ರಕ್ರಿಯೆಗೆ ಅನುಗುಣವಾಗಿದೆ ಮತ್ತು ಸಮುದಾಯದ ಕಟ್ಟುನಿಟ್ಟಿನ ಮೇಲ್ವಿಚಾರಣೆ ಮತ್ತು ಸಕ್ರಿಯ ಸಹಕಾರದ ಮೂಲಕ ಈ ಮುಂದಿನಂತೆ ಸಾಧನೆಗಳನ್ನು ಮಾಡಿದೆ. ಜಿಪಿಡಿಪಿ ಅಡಿಯಲ್ಲಿ ಕಾರ್ಯಚಟುವಟಿಕೆಗಳ ಮುಖ್ಯಾಂಶಗಳು ಈ ಮುಂದಿನಂತಿವೆ:

- ಜಿಪಿಡಿಪಿಯ ಸಿದ್ಧತೆಯಲ್ಲಿ ನೆರವು ನೀಡಲು ಸ್ವಸಹಾಯ ಗುಂಪುಗಳ 20 ಸದಸ್ಯರ ಮತ್ತು 5 ಸಮುದಾಯ ಸ್ವಯಂಸೇವಕರ ತಂಡವನ್ನು ಗುರುತಿಸಲಾಗಿತ್ತು.
- ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಷಯಗಳನ್ನಷ್ಟೇ ಅಲ್ಲದೆ, ಕೃಷಿ, ಆರೋಗ್ಯ, ಶಿಕ್ಷಣ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ಕುರಿತು ತಿಳಿಸುವಂಥ ವಸ್ತುಸ್ಥಿತಿ ವಿಶ್ಲೇಷಣೆ ವರದಿಯನ್ನು ಸಿದ್ಧಪಡಿಸಿತು.

ಮಾಲಂಗಿ ಗ್ರಾಮ ಪಂಚಾಯಿತಿಯು, ಯುಕ್ತ ಶ್ರದ್ಧೆಯಿಂದ ಕೂಡಿದ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಪ್ರಾರಂಭಿಸಿತು ಮತ್ತು ಗ್ರಾಮ ಪಂಚಾಯಿತಿಯು ತೆಗೆದುಕೊಂಡಂಥ ಎಲ್ಲಾ ಕಾರ್ಯಕರ್ತರು ಯೋಜನೆಗೆ ಸಂಬಂಧಪಡುವವರಾಗಿರ ಬೇಕೆಂಬುದನ್ನು ಕಡ್ಡಾಯಪಡಿಸಲಾಗಿತ್ತು. ಆದ್ದರಿಂದ, ಗ್ರಾಮ ಪಂಚಾಯಿತಿಯು ಯೋಜನೆಗೆ ಸಂಬಂಧಪಟ್ಟಂತೆ ಆ ವರ್ಷಕ್ಕಾಗಿ ಉದ್ದೇಶಿಸಿದ ಸುಮಾರು ಶೇಕಡ 80ರಷ್ಟು ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಯಿತು. ಇದಲ್ಲದೆ, ಗ್ರಾಮ ಪಂಚಾಯಿತಿಯು ಸಹ, ಎಲ್ಲಾ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಂವಹನ ನಡೆಸಿ, ನಿಜವಾದ ಅರ್ಥದಲ್ಲಿ ಒಂದು ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದಕ್ಕೆ ಒತ್ತು ನೀಡಿದ್ದು, ಅಂಥ ಕೆಲವು ಕಾರ್ಯಚಟುವಟಿಕೆಗಳು ಈ ಮುಂದಿನಂತಿವೆ:

- ಕಡಿಮೆ ವೆಚ್ಚ ಅಥವಾ ಆರೋಗ್ಯ, ಶಿಕ್ಷಣ, ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ, ನೀರು ಮತ್ತು ನೈರ್ಮಲ್ಯ, ಇತ್ಯಾದಿಗಳಿಗೆ ಸಂಬಂಧಿಸಿದ ವೆಚ್ಚ ರಹಿತ ಅಭಿವೃದ್ಧಿ ಕಾರ್ಯಚಟುವಟಿಕೆಗಳನ್ನು ಗುರುತಿಸುವುದು.
- ಆರೋಗ್ಯ, ಶಿಕ್ಷಣ, ನೀರು, ನೈರ್ಮಲ್ಯ, ಬುಡಕಟ್ಟು ಅಭಿವೃದ್ಧಿ ಮತ್ತು ಗ್ರಾಮೀಣ ಅಭಿವೃದ್ಧಿ ಸಹಿತ ಗ್ರಾಮ ಪಂಚಾಯಿತಿ ಕಾರ್ಯಚಟುವಟಿಕೆಗಳ ವಲಯ ಸಂಯೋಜನೆ.
- ರಾಜ್ಯ ಸರ್ಕಾರದ ಇತರ ಯೋಜನೆಗಳು, ಸ್ವಂತ ಸಂಪನ್ಮೂಲಗಳು, ಎನ್‌ಜಿಒಗಳ ನಿಧಿಗಳು ಮತ್ತು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಗಳೊಂದಿಗೆ ಆರ್‌ಡಿಪಿಆರ್ ಕಾರ್ಯಕ್ರಮಗಳ ಸಂಯೋಜನೆ.
- ದುರ್ಬಲ ವರ್ಗಗಳ, ಮುಖ್ಯವಾಗಿ ಬುಡಕಟ್ಟು ಜನರ, ಮಹಿಳೆಯರ ಮತ್ತು ಮಕ್ಕಳ ಸಮಸ್ಯೆಗಳನ್ನು ಪರಿಹರಿಸುವ ಕುರಿತು ಗಮನ ಕೇಂದ್ರೀಕರಿಸುವುದು.
- ಮಧ್ಯವರ್ತಿ ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳು ಅನುಷ್ಠಾನಗೊಳಿಸಿದ ಯೋಜನೆಗಳೊಂದಿಗೆ ಗ್ರಾಮ ಪಂಚಾಯಿತಿ ಕಾರ್ಯಚಟುವಟಿಕೆಗಳ ಸಂಯೋಜನೆ.

***ಮೂಲ: ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆಗಳ ಸಿದ್ಧತೆಗೆ, ಪಂಚಾಯತ್ ರಾಜ್ ಮಂತ್ರಾಲಯ, ಭಾರತ ಸರ್ಕಾರದ ಮಾರ್ಗಸೂಚಿಗಳು, 2018***

**ಕಥೆ 2**

**ಕರ್ನಾಟಕದ ಎರಡು ಗ್ರಾಮ ಪರಿಷತ್‌ಗಳು ಭಾರತಕ್ಕೆ ಕಲಿಸಿದ ಪಾಠಗಳು**

ಎರಡು ಗ್ರಾಮ ಪಂಚಾಯಿತಿಗಳು ಅಳವಡಿಸಿಕೊಂಡ ನಾವಿನ್ಯತಾ ರೂಪುರೇಷೆಯು, ಇತರ ವಿಷಯಗಳೊಂದಿಗೆ ಸುಸ್ಥಿತಿಯಲ್ಲಿರುವ ಬೀದಿ ದೀಪ ವ್ಯವಸ್ಥೆ, ಅತ್ಯಂತ ದಕ್ಷ ಪಿಡಿಎಸ್ ವ್ಯವಸ್ಥೆ ಮಾಡಿದೆ ಮತ್ತು ಹೆಚ್ಚು ಸಂಖ್ಯೆಯಲ್ಲಿ ಶೌಚಾಲಯಗಳನ್ನು ಒದಗಿಸಿದೆ.

ಕಳೆದ ನಾಲ್ಕು ವರ್ಷಗಳಲ್ಲಿ, ಕರ್ನಾಟಕದ ಕೋಲಾರ ಜಿಲ್ಲೆಯ ಊರಕುಂಟೆ ಮಿತ್ತೂರು, ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ದಿಬ್ಬೂರಹಳ್ಳಿ, ಈ ಎರಡು ಗ್ರಾಮ ಪಂಚಾಯಿತಿಗಳಲ್ಲಿ (ಗ್ರಾಮ ಪರಿಷತ್ತುಗಳು) ಸದ್ದುಗದ್ದಲಗಳಿಲ್ಲದೆ ಪರಿವರ್ತನೆಯುಂಟಾಗಿದೆ. ಕರ್ನಾಟಕವನ್ನು ವಿಕೇಂದ್ರಿಕರಣದ ಚಾಂಪಿಯನ್ ಎಂದು ಪರಿಗಣಿಸಲಾಗಿದೆ; 30 ರಾಜ್ಯಗಳ ಪೈಕಿ ಏಳು ರಾಜ್ಯಗಳು, ಪಂಚಾಯತ್ ಮಟ್ಟದಲ್ಲಿ ಎಲ್ಲಾ 29 ಕಾರ್ಯಗಳನ್ನು, ಅಧಿಕಾರ ವಿಕೇಂದ್ರೀಕರಣಗೊಳಿಸಿವೆ. ಹಲವು ಇತರ ರಾಜ್ಯಗಳಲ್ಲಿ, ಈ ಅಧಿಕಾರಗಳು ರಾಜ್ಯ ಸರ್ಕಾರದಲ್ಲಿಯೇ ಉಳಿದಿವೆ.

ಒಮ್ಮೆ ಜಡವಾಗಿದ್ದ ಪಂಚಾಯತ್ ಕಚೇರಿಯು, ಈಗ ಕಾರ್ಯಚಟುವಟಿಕೆಗಳಿಂದ ತುಂಬಿಹೋಗಿದೆ. ತನ್ನ ವಾರ್ಷಿಕ ಗ್ರಾಮ ಅಭಿವೃದ್ಧಿ ಯೋಜನೆಗಳ ಮೇಲ್ವಿಚಾರಣೆಗೆ ಗ್ರಾಮ ಪಂಚಾಯಿತಿಯು ಮಾಸಿಕ ಮೇಲ್ವಿಚಾರಣಾ ವ್ಯವಸ್ಥೆಯ ಏರ್ಪಾಡು ಮಾಡಿದೆ. ನಿಷ್ಕ್ರಿಯಗೊಂಡಿದ್ದ ಬಿವಿಎಸ್ (ಮಕ್ಕಳ ಅಭಿವೃದ್ಧಿ ಸಮಿತಿ) ಮತ್ತು ಎಸ್‌ಡಿಎಮ್‌ಸಿಯಂಥ ಕಡ್ಡಾಯ ಸಮಿತಿಗಳು, ಮಕ್ಕಳ ಸಮಗ್ರ ಅಭಿವೃದ್ಧಿಯ ಮೇಲ್ವಿಚಾರಣೆಗೆ ಶ್ರದ್ಧೆಯಿಂದ ಸಭೆಯನ್ನು ನಡೆಸಲು ಆರಂಭಿಸಿವೆ.

ಈ ಎರಡು ಗ್ರಾಮ ಪಂಚಾಯಿತಿಗಳ ಅಧಿಕಾರ್ಯವ್ಯಾಪ್ತಿಯಡಿಯಲ್ಲಿನ ಗ್ರಾಮಗಳಲ್ಲಿ ಈಗ ಸುಸ್ಥಿತಿಯಲ್ಲಿರುವ ಬೀದಿ ದೀಪಗಳಿವೆ. ಪಡಿತರ ಅಂಗಡಿಗಳು, ಸಬ್ಸಿಡಿ ಆಹಾರ ಕಾರ್ಯಜಾಲವಾದ ಪಿಡಿಎಸ್ ಬಗ್ಗೆ ಕಡ್ಡಾಯ ಮಾಹಿತಿಯನ್ನು ಪ್ರದರ್ಶಿಸುತ್ತವೆ. ಅಧಿಕಾರಿಗಳು ನೀರಿಗೆ ಸಂಬಂಧಿಸಿದ ನಾಗರಿಕರ ದೂರುಗಳನ್ನು ಪರಿಹರಿಸಲು ವಾರದ 24 ಗಂಟೆಗಳ ಕಾಲ ಲಭ್ಯರಿರುತ್ತಾರೆ.

2013–14ರಲ್ಲಿ, ಊರಕುಂಟೆ ಮಿತ್ತೂರು ಗ್ರಾಮ ಪಂಚಾಯಿತಿಯು, ಶೌಚಾಲಯಗಳ ನಿರ್ಮಾಣದ ರಾಷ್ಟ್ರೀಯ ಯೋಜನೆಯಾದ ಈ ಮೊದಲಿನ ***ನಿರ್ಮಲ ಭಾರತ ಅಭಿಯಾನದ*** *ಅಡಿಯಲ್ಲಿ ಅತೀ ಹೆಚ್ಚು ಸಂಖ್ಯೆಯ ಶೌಚಾಲಯಗಳನ್ನು ನಿರ್ಮಿಸಿದೆ.*

ಈ ಬಹಳಷ್ಟು ವ್ಯವಸ್ಥಿತ ಬದಲಾವಣೆಗೆ, ***ಅರ್ಘ್ಯಂ*** ಎಂಬ ಸರ್ಕಾರೇತರ ಸಂಸ್ಥೆಯು ಯೋಜಿಸಿ, ತರುವಾಯದಲ್ಲಿ ಲಾಭ–ರಹಿತ ***ಆವಂತಿಕಾ*** ಪ್ರತಿಷ್ಠಾನಕ್ಕೆ ಪರಿವರ್ತನೆಯಾದ, ಗ್ರಾಮ ಪಂಚಾಯಿತಿ ಸಂಘಟನಾ ಅಭಿವೃದ್ಧಿ (ಜಿಪಿಒಡಿ) ಇದು, ಈ ನಾವಿನ್ಯತಾ ರೂಪುರೇಷೆಯಿಂದ ಉತ್ತೇಜನ ಪಡೆದಿದೆ. ಈ ರೂಪುರೇಷೆಯನ್ನು ಸೃಜಿಸಲು ಗ್ರಾಮ ಪಂಚಾಯಿತಿಗಳು ಸ್ವತಃ ಕೊಡುಗೆ ನೀಡಿವೆ; ಹಾಗೂ ಅದನ್ನು ತಮ್ಮ ಗ್ರಾಮಗಳಲ್ಲಿ ಅನುಷ್ಠಾನಕ್ಕಾಗಿ ಅಳವಡಿಸಿಕೊಳ್ಳಲಾಗಿದೆ. ಜಿಪಿಒಡಿ ರೂಪುರೇಷೆಯು, ಗ್ರಾಮ ಪಂಚಾಯಿತಿಗಳು, ಸುಪ್ತವಾಗಿರುವ ಅಪಾರ ಸಾಮರ್ಥ್ಯವನ್ನು ಹೊಂದಿದ್ದು, ಶಕ್ತಿಶಾಲಿ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಬಹುದು ಎಂಬ ತತ್ವವನ್ನು ಅವಲಂಬಿಸಿದೆ.

ಆವಂತಿಕಾ ಪ್ರತಿಷ್ಠಾನವು, ಈ ಎರಡು ಗ್ರಾಮ ಪಂಚಾಯಿತಿಗಳ ವ್ಯವಸ್ಥಿತ ಸಾಮರ್ಥ್ಯ ನಿರ್ಮಾಣಕ್ಕಾಗಿ, ಅವುಗಳ ಧ್ಯೇಯವನ್ನು ಅವುಗಳ ಕಾರ್ಯ, ರಚನೆಗಳು, ಸಂಪನ್ಮೂಲಗಳು ಮತ್ತು ಉತ್ತೇಜಕಗಳೊಂದಿಗೆ, ಸರಿಹೊಂದಿಸುವ ಮೂಲಕ ಅವುಗಳೊಂದಿಗೆ ಕಾರ್ಯನಿರ್ವಹಿಸುತ್ತಿವೆ.

ಉದಾಹರಣೆಗೆ, ಊರಕುಂಟೆ ಮಿತ್ತೂರಿನಲ್ಲಿ, ಪಂಚಾಯಿತಿ ಸದಸ್ಯರು "ಪಾರದರ್ಶಕ ಮತ್ತು ಉತ್ತಮ ಆಡಳಿತ ನಿರ್ವಹಣೆಯ ಮೂಲಕ ಸಮಗ್ರ ಸುಸ್ಥಿರ ಅಭಿವೃದ್ಧಿ"ಯಾಗಿ ತಮ್ಮ ಧ್ಯೇಯವನ್ನು ಒಟ್ಟಾಗಿ ಯೋಜಿಸಿ, ಅದಕ್ಕೆ ಸಂವಾದಿಯಾಗಿ ಕಾರ್ಯೋದ್ದೇಶಗಳನ್ನು ರೂಪಿಸಿದರು ಹೊಣೆಗಾರಿಕೆಯನ್ನು ಹಂಚಿಕೊಳ್ಳಬಹುದು, ಆದರೆ ಉತ್ತರದಾಯಿತ್ವ ಒಬ್ಬ ವ್ಯಕ್ತಿಯದ್ದಾಗಿರುತ್ತದೆ ಎಂಬ ಆಡಳಿತ ತತ್ತ್ವಕ್ಕನುಗುಣವಾಗಿ, ಪಂಚಾಯಿತಿ ಸದಸ್ಯರು ಪ್ರತಿಯೊಬ್ಬರೂ ತಮ್ಮ ತಮ್ಮ ಅಧಿಕಾರ ಕ್ಷೇತ್ರವನ್ನು ಗುರುತಿಸಿ ಅದನ್ನು ವಹಿಸಿಕೊಂಡರು. ಉದಾಹರಣೆಗೆ, ಮುಖ್ಯ ಉತ್ಪಾದನೆ ಎಂದು ಕರೆಯಲಾದ ಅಧಿಕಾರ ಕ್ಷೇತ್ರವನ್ನು ಸೃಜಿಸಿ, ಕೃಷಿ, ಪಶು ಸಂಗೋಪನೆ ಮತ್ತು ಕೆಲಸ ಕಾರ್ಯಕ್ರಮಗಳಂಥ ಜೀವನೋಪಾಯದ ಕಾರ್ಯಗಳ ವ್ಯಾಪ್ತಿಗೆ ಜವಾಬ್ದಾರರನ್ನಾಗಿಸಲಾಯಿತು. ಈ ವ್ಯವಸ್ಥೆಯು **ಸರಪಂಚ್** ಪ್ರಾಬಲ್ಯವುಳ್ಳ ವ್ಯವಸ್ಥೆಗೆ ಪ್ರತಿಯಾಗಿ ನಾಯಕತ್ವ ನೀಡುವಲ್ಲಿ ಪರಿಣಮಿಸಿತಾದ್ದರಿಂದ, ಪಂಚಾಯಿತಿ ಆಡಳಿತದಲ್ಲಿ ಹೆಚ್ಚಿನ ಪಾರದರ್ಶಕತೆಗೆ ದಾರಿ ಮಾಡಿಕೊಟ್ಟಿತು. ಯಾವ ಪಂಚಾಯಿತಿ ಸದಸ್ಯರಿಗೆ, ಪಾತ್ರಗಳನ್ನು ಮತ್ತು ಜವಾಬ್ದಾರಿಗಳನ್ನು ಕುರಿತು ವಿವರಿಸಲಾಯಿತೋ, ಅವರು ಮಾಲಿಕತ್ವ ಮತ್ತು ಉತ್ತರದಾಯಿತ್ವದ ಭಾವನೆ ಮೂಡಿದ್ದನ್ನು ಒಪ್ಪಿಕೊಂಡರು.

**ಕಥೆ 3**

### ಆಂಧ್ರ ಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ಜುವ್ವಾಲಪಾಲೆಮ್‌ನ ಯಶಸ್ವಿ ಕಥೆ

ಆಂಧ್ರ ಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿನ ಜುವ್ವಾಲಪಾಲೆಮ್ ಎಂಬ ಸಣ್ಣ ಗ್ರಾಮದ ಜನಸಂಖ್ಯೆ 3,700 ಇದ್ದು, ಬಂಗಾಳ ಕೊಲ್ಲಿಯ ಕರಾವಳಿ ಹತ್ತಿರದಲ್ಲಿದೆ. ದಶಕಗಳಿಂದ, ಗ್ರಾಮಸ್ಥರ ಆರೋಗ್ಯವು, ಕುಡಿಯುವ ನೀರಿನ ಸೌಲಭ್ಯದ ಕೊರತೆ, ಬಯಲು ಶೌಚಾಲಯದಿಂದ ಅತ್ಯಂತ ಕಡಿಮೆ ಸ್ವಚ್ಛತೆ ಮತ್ತು ತ್ಯಾಜ್ಯ ವಿಲೆ ವ್ಯವಸ್ಥೆಯ ಕೊರತೆಯ ಕಾರಣದಿಂದ ಅತ್ಯಂತ ಹೆಚ್ಚು ಬಾಧಿತ ಪ್ರದೇಶವಾಗಿತ್ತು.

ಪಂಚಾಯಿತಿಯ ಚುನಾಯಿತ ಪ್ರತಿನಿಧಿಗಳು ತೆಗೆದುಕೊಂಡ ಉಪಕ್ರಮಗಳು, ಜುವ್ವಾಲಪಾಲೆಮ್ ಗ್ರಾಮಕ್ಕೆ *"ನಿರ್ಮಲ ಗ್ರಾಮ ಪುರಸ್ಕಾರ"ವನ್ನು ಗಳಿಸಿಕೊಟ್ಟಿರುವುದು ಮಾತ್ರವಲ್ಲದೆ, ಗ್ರಾಮವನ್ನು ಜೀವಿಸಲು ಅತ್ಯಂತ ಆರೋಗ್ಯಕರ ಸ್ಥಳವನ್ನಾಗಿ ಪರಿವರ್ತಿಸಿದೆ.*

ಪ್ರಾರಂಭದಲ್ಲಿ, ಪಂಚಾಯಿತಿಯು, ಸಮಾಜದ ವಿವಿಧ ಕಡೆಯಿಂದ ಸಾಕಷ್ಟು ವಿರೋಧವನ್ನು ಮತ್ತು ಅಸಹಕಾರವನ್ನು ಎದುರಿಸಿತ್ತು, ಆದರೂ, ಕ್ರಮೇಣ ಅವರಿಗೆ ಸ್ವಚ್ಛತಾ ಅರಿವು ಆಂದೋಲನಗಳ ಮೂಲಕ ಸಾಮೂಹಿಕವಾಗಿ ಮನವರಿಕೆ ಮಾಡಿಕೊಡಲಾಯಿತು ಹಾಗೂ ಇದರಲ್ಲಿ ಮಕ್ಕಳು ಬಹು ದೊಡ್ಡ ಪಾತ್ರವನ್ನು ವಹಿಸಿದರು. ಗ್ರಾಮವನ್ನು ಬಯಲು ಶೌಚಾಲಯದಿಂದ ಮುಕ್ತವಾಗಿರಿಸಲು ಗ್ರಾಮಸ್ಥರನ್ನು ಪ್ರಮಾಣ ಮಾಡಲು ಕೇಳಲಾಯಿತು ಮತ್ತು ಬಯಲು ಶೌಚ ಪದ್ಧತಿಯ ವಿರುದ್ಧ ಹೋರಾಡಲು ಗ್ರಾಮಸ್ಥರಲ್ಲಿ ಐಕ್ಯತೆಯನ್ನು ತೋರಿಸಲು ಮಾನವ ಸರಪಳಿಯನ್ನು ಸಹ ರೂಪಿಸಲಾಯಿತು.

ಶೇಕಡ 100ರಷ್ಟು ನೈರ್ಮಲ್ಯ ಸಾಧಿಸುವುದರೊಂದಿಗೆ, ಉದ್ದೇಶಿತ ಗ್ರಾಮವು, ನೀರಿನಿಂದ ಬರುವ ಸಾಂಕ್ರಾಮಿಕ ರೋಗಗಳ ಪ್ರಮಾಣ ಕಡಿಮೆಯಾಗುವಂಥ ಇತರ ಹಲವಾರು ಬದಲಾವಣೆಯನ್ನು ಗಮನಿಸಿತು ಮತ್ತು ಮಕ್ಕಳ ಆರೋಗ್ಯವನ್ನು ಹೆಚ್ಚಿಸಲು, ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿ ಊಟದಲ್ಲಿ ನಿಯತಕಾಲಿಕವಾಗಿ ಮೊಟ್ಟೆಗಳನ್ನು ವಿತರಿಸಲಾಯಿತು.

ವಿಶಿಷ್ಟ ತ್ಯಾಜ್ಯ ವಿಲೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಯಿತು. ಅದರಲ್ಲಿ, ಸೈಕಲ್ ರಿಕ್ಷಾ ಅಥವಾ ಎತ್ತಿನ ಬಂಡಿ ಮಾಧ್ಯಮದ ಮೂಲಕ ಪ್ರತಿಯೊಂದು ಕುಟುಂಬದಿಂದ ಪ್ರತಿ ದಿನ ತಾಜ್ಯವನ್ನು ಸಂಗ್ರಹಿಸಲಾಯಿತು ಮತ್ತು ಅದನ್ನು ಒಂದು ಸಾಮಾನ್ಯ ಸ್ಥಳಕ್ಕೆ ತೆಗೆದುಕೊಂಡು ಹೋಗಿ, ಅಲ್ಲಿ ಅದನ್ನು ಮರುಬಳಕೆ ಮಾಡಬಹುದಾದ ಮತ್ತು ಜೈವಿಕವಾಗಿ ಕೊಳೆಯಬಹುದಾದ ತ್ಯಾಜ್ಯವನ್ನಾಗಿ ವಿಂಗಡಿಸಿ, ಸಾರ್ವಜನಿಕ ಆರೋಗ್ಯವನ್ನು ಸುರಕ್ಷಿತವಾಗಿರಿಸಲು ಸೂಕ್ತ ರೀತಿಯಲ್ಲಿ ವಿಲೆ ಮಾಡಲಾಯಿತು.

ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ, ಸಂರಕ್ಷಿತ ನೀರು ಪೂರೈಕೆ ವ್ಯವಸ್ಥೆಯ ಜೊತೆಗೆ ಗ್ರಾಮಸ್ಥರಿಗೆ, ಅತ್ಯಂತ ಕಡಿಮೆ ವೆಚ್ಚದಲ್ಲಿ ಎಂದರೆ, ಸಾರ್ವಜನಿಕರಿಗೆ ಪ್ರತಿ ಲೀಟರ್ ನೀರಿಗೆ 12 ಪೈಸೆಯಂತೆ ಮತ್ತು ಶಾಲೆಗಳು ಹಾಗೂ ಆಸ್ಪತ್ರೆಗಳಿಗೆ ಉಚಿತವಾಗಿ ಅಂತರಾಷ್ಟ್ರೀಯ ಗುಣಮಟ್ಟದ ಖನಿಜಯುಕ್ತ ನೀರನ್ನು ಸಹ ಒದಗಿಸಲಾಯಿತು.

***ಮೂಲ: ಇಂಡಿಯಸ್ಪೆಂಡ್.ಕಾಮ್, ಫೆಬ್ರವರಿ 14, 2015; ಮಾಧವಿ ರಾಜಾಧ್ಯಕ್ಷ***

**ಕಥೆ 4**

### ಗ್ರಾಮ ಪಂಚಾಯಿತಿಗಳ ಚುನಾಯಿತ ಮಹಿಳಾ ಮುಖಂಡರು: ಕೋವಿಡ್–19 ಹೊಣೆಗಾರಿಕೆಯಲ್ಲಿ ನಿರ್ಣಾಯಕ ಪಾತ್ರಗಳು

ಗ್ರಾಮ ಪಂಚಾಯಿತಿಯ ಮಹಿಳಾ ಮುಖಂಡರು, ಕೋವಿಡ್–19, ಖಂಡಾಂತರ ಸಾಂಕ್ರಾಮಿಕ ರೋಗ ನಿವಾರಣೆಗಾಗಿ, ಪ್ರಜ್ಞಾವಂತರಾಗಿ ಮತ್ತು ನಾವಿನ್ಯತೆಯಿಂದ ಮತ್ತು ಜಾಣ್ಮೆಯಿಂದ ಪರಿಹಾರ ಕ್ರಮಗಳನ್ನು ಜಾರಿಗೊಳಿಸಿದರು.

ರಾಜಸ್ಥಾನದ ನಾಗಪುರ ತಹಸಿಲ್‌ನ ಭಾಡ್ಲಿಯಾ ಗ್ರಾಮದ ***ಸರಪಂಚ್ ರಾಧಾ ದೇವಿ***ಯು, ಶಾಲಾ ಅವಧಿಯಲ್ಲಿ ಮಧ್ಯಾಹ್ನದ ಬಿಸಿ ಊಟ ತಯಾರಿಸಲು ನೀರು ತರಲು ಬಾಲಕಿಯರನ್ನು ಒತ್ತಾಯಿಸುವುದರಿಂದ, ಸರ್ಕಾರಿ ಶಾಲೆಯ ಪ್ರಾಂಶುಪಾಲರನ್ನು ತಡೆದು, ಆ ಬಾಲಕಿಯರನ್ನು ಅವರ ತರಗತಿಗಳಿಗೆ ಕಳುಹಿಸಿದರು. ರಾಧಾ 5ನೇ ತರಗತಿಗೆ ಶಾಲೆ ತೊರೆದಿದ್ದು, ಈಗ ಆಕೆ ಶಾಲೆ ತೊರೆಯುವ ವಿದ್ಯಾರ್ಥಿನಿಯರ ಸಂಖ್ಯೆಯನ್ನು ಕಡಿಮೆಗೊಳಿಸಿ, ಅವರ ದಾಖಲಾತಿಯನ್ನು ಹೆಚ್ಚಿಸಲು ತನ್ನ ಪಂಚಾಯಿತಿಯಲ್ಲಿ ಸಕ್ರಿಯ ಪಾತ್ರ ವಹಿಸುತ್ತಿರುವರು.

ಇಂದು ಭಾರತದಲ್ಲಿ, ಗ್ರಾಮ ಪಂಚಾಯಿತಿಗಳ (ಗ್ರಾಮ ಪರಿಷತ್ತುಗಳ), ಸುಮಾರು 13.45 ಲಕ್ಷ ಮಹಿಳಾ ಚುನಾಯಿತ ಪ್ರತಿನಿಧಿಗಳಿದ್ದಾರೆ. ಅವರಲ್ಲಿ ಬಹುತೇಕರು, ಆಡಳಿತಾತ್ಮಕ ಕರ್ತವ್ಯಗಳನ್ನು ನೆರವೇರಿಸುವ ತಿಳುವಳಿಕೆ, ತಜ್ಞತೆ ಮತ್ತು ಅನುಭವದ ಕೊರತೆಯಿಂದಾಗಿ ನಾಮಮಾತ್ರ ಮುಖಂಡರಾಗಿರುವರು. ಅವರ ಇತಿಮಿತಿಗಳು, ಅನಕ್ಷರಸ್ಥತೆ, ಲಿಂಗ ತಾರತಮ್ಯ ಮತ್ತು ತತ್ಸಂಬಂಧಿ ನಿರ್ಬಂಧಗಳಿಂದ ತೀವ್ರಗೊಂಡಿದ್ದು, ಅದು ಯೋಜನೆ ಸಿದ್ಧಪಡಿಸುವ ವಿಷಯಗಳಲ್ಲಿ, ನಿರ್ಣಯ ಕೈಗೊಳ್ಳುವಲ್ಲಿ ಮತ್ತು ಅನುಷ್ಠಾನದಲ್ಲಿ ತಮ್ಮ ಪುರುಷ ಸಂಬಂಧಿಗಳ ಮೂಲಕ ಬದಲಿ ಪ್ರಾತಿನಿಧ್ಯಕ್ಕೆ ದಾರಿ ಮಾಡಿಕೊಟ್ಟಿದೆ.

ಈ ಸಮಸ್ಯೆಗಳು ಎಷ್ಟೇ ಇದ್ದರೂ, ಭಾರತದಲ್ಲಿ ಮಹಿಳಾ **ಸರಪಂಚರ,** ವಿಶ್ವದಲ್ಲಿಯೇ ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಮಹಿಳೆಯರ ಅತಿ ದೊಡ್ಡ ಸಂಸ್ಥೆಯನ್ನಾಗಿಸಿದೆ. ಆರೋಗ್ಯ, ಸ್ವಚ್ಛತೆ ಮತ್ತು ಪೌಷ್ಟಿಕತೆ ಹಾಗೂ ವಿವಿಧ ಸರ್ಕಾರಿ ಕಾರ್ಯಕ್ರಮಗಳ ಪ್ರಯೋಜನಗಳ ಬಗ್ಗೆ ಅರಿವು ಮೂಡಿಸುವ ಕುರಿತು ಗಮನ ಕೇಂದ್ರೀಕರಿಸುವುದರೊಂದಿಗೆ ಸಮರ್ಥ ಸಮುದಾಯವನ್ನು ಸಿದ್ಧಗೊಳಿಸಿ, ದುರ್ಬಲ ಜನರೊಂದಿಗೆ ಸಂಪರ್ಕ ಸಾಧಿಸುವ ಅವರ ಸಾಮರ್ಥ್ಯವು, ಇತರರಲ್ಲಿ ಅವರನ್ನು ಕೋವಿಡ್–19 ಹರಡುವಿಕೆಯನ್ನು ಒಳಗೊಳ್ಳುವಲ್ಲಿ ರಚನಾತ್ಮಕ ಪಾತ್ರಗಳನ್ನು ವಹಿಸಬಹುದಾಗಿರುವ ಪರಿಣಾಮಕಾರಿ ಮುಖಂಡರನ್ನಾಗಿಸಿದೆ.

***ಮೂಲ: ಗ್ರಾಮೀಣ ಪರಿವರ್ತನೆಯ 101 ಕಥೆಗಳು nrega.raj.nic.in › pdmn ›***

**ಕಥೆ 5**

### ಸಕ್ರಿಯರಾಗಿರುವ ಗ್ರಾಮ ಪಂಚಾಯಿತಿಯ ಮಹಿಳಾ ಮುಖಂಡರು

ಕೋವಿಡ್–19 ಬಿಕ್ಕಟ್ಟುಗಳಿಗೆ ಗುರಿಯಾಗುವುದರಿಂದ ಗ್ರಾಮೀಣ ಭಾರತವನ್ನು ರಕ್ಷಿಸಲು ಅತಿ ಮುಖ್ಯ ಪಾತ್ರಗಳನ್ನು ವಹಿಸಿದ ರಾಧಾ ದೇವಿಯಂಥ ಗ್ರಾಮ ಪಂಚಾಯಿತಿಯ ಮಹಿಳಾ ಮುಖಂಡರ ಕಥೆಗಳು, ಮಾರ್ಚ್–2020ರಲ್ಲಿನ ರಾಷ್ಟ್ರವ್ಯಾದ್ಯಂತದ ಲಾಕ್‌ಡೌನ್ ಪ್ರಾರಂಭದಿಂದಲೇ ಅಲ್ಲೊಂದು ಇಲ್ಲೊಂದು ಹೊರಬರುವುದಕ್ಕೆ ಪ್ರಾರಂಭವಾದವು. ಬ್ಲಾಕ್ ಮತ್ತು ಜಿಲ್ಲಾ ಆಡಳಿತ ಸಂಸ್ಥೆಗಳಿಂದ ಮಾರ್ಗದರ್ಶನ ಪಡೆದ ಈ ಮಹಿಳಾ ಮುಖಂಡರು, ಪಂಚಾಯತ್ ಕಾರ್ಯದರ್ಶಿಗಳ ಮತ್ತು ಅವರ ಸಂಬಂಧಪಟ್ಟ ಗ್ರಾಮಗಳ ಪ್ರಮುಖ ವ್ಯಕ್ತಿಗಳ ಬೆಂಬಲದೊಂದಿಗೆ, ಅವರ ಸಾಮಾಜಿಕ–ಸಾಂಸ್ಕೃತಿಕ ಸಂದರ್ಭಗಳಿಗೆ ಸಮಂಜವೆನಿಸುವಂಥ ಸ್ಥಳೀಯ ಪರಿಹಾರಗಳನ್ನು ಯೋಜಿಸಿದರು ಮತ್ತು ಅನುಷ್ಠಾನಗೊಳಿಸಿದರು.

ಕುಟುಂಬಗಳೊಂದಿಗೆ ಆರೋಗ್ಯ ಕಾರ್ಯಕರ್ತರನ್ನು ಸಂಪರ್ಕಿಸಲು ಸಮುದಾಯದಲ್ಲಿ ಕೋವಿಡ್–19 ತಡೆಗಟ್ಟುವುದಕ್ಕಾಗಿ ಸರ್ಕಾರದ ಮಾರ್ಗಸೂಚಿಗಳನ್ನು ಕುರಿತು ಅರಿವು ಮೂಡಿಸುವ, ಆಹಾರ ಸುರಕ್ಷತೆ ಕಾರ್ಯಕ್ರಮಗಳನ್ನು ಚಾಲನೆಗೊಳಿಸಲು ಜೀವನೋಪಾಯ ಅವಕಾಶಗಳಿಗೆ ಹೆಸರುಗಳನ್ನು ನೋಂದಾಯಿಸುವ ಮತ್ತು ನಿಗಾ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಪಾತ್ರ ವಹಿಸುವ ಇವೇ ಮೊದಲಾದ ಮಹಿಳಾ ಚುನಾಯಿತ ಪ್ರತಿನಿಧಿಗಳ ಪಾತ್ರವು ಅತ್ಯಂತ ನಿರ್ಣಾಯಕವಾದುದಾಗಿದೆ.

ವಿಪತ್ತು ನಿರ್ವಹಣೆಯಲ್ಲಿ ಯಾವುದೇ ಸೂಕ್ತ ಪರಿಚಯಾತ್ಮಕ ತರಬೇತಿ (ಓರಿಯಂಟೇಷನ್) ಇಲ್ಲದೆ, ಗ್ರಾಮ ಪಂಚಾಯಿತಿಗಳ ಈ ಮಹಿಳಾ ಮುಖಂಡರು, ಸ್ಥಳೀಯ ಸಮುದಾಯದ ಸಾಮಾಜಿಕ ಪರಿಸರಗಳಿಗೆ ಮತ್ತು ಅಗತ್ಯತೆಗಳಿಗೆ ಸಂವೇದನಾಶೀಲರಾಗಿ, ನಾವಿನ್ಯತೆಯಿಂದ ಮತ್ತು ಸಹಜ ಪ್ರೇರಣೆಯಿಂದ ಪರಿಹಾರ ಕ್ರಮಗಳನ್ನು ಕುರಿತು ಚಿಂತಿಸಿ, ಅವುಗಳನ್ನು ಜಾರಿಗೊಳಿಸಿದ್ದಾರೆ.

**ಕಥೆ 6**

**ಸಮುದಾಯದೊಂದಿಗೆ ಆರೋಗ್ಯ ಕಾರ್ಯಕರ್ತರನ್ನು ಸಂಪರ್ಕಿಸುವುದು**

ರಾಜಸ್ಥಾನದ ಅಳ್ವಾರ್‌ನ ಕಳಸರ ಗ್ರಾಮ ಪಂಚಾಯಿತಿ ಸದಸ್ಯೆ ಮಂಗಲೇಶ ಎಂಬುವವರು, ಮಾರ್ಚ್–2020ರಲ್ಲಿ ಕೋವಿಡ್–19 ಹರಡುತ್ತಿರುವುದನ್ನು **ಸರಪಂಚ್ ಮತ್ತು ಪಂಚಾಯತ್ ಕಾರ್ಯದರ್ಶಿಯು** ಅವರ ಮಾಸಿಕ ಪಂಚಾಯತ್ ಸಭೆಯಲ್ಲಿ ದೃಢಪಟ್ಟಾಗ ತಬ್ಬಿಬ್ಬಾದಳು ಮತ್ತು ಅವರನ್ನು ರಕ್ಷಣಾ ಕೆಲಸವನ್ನು ಚುರುಕುಗೊಳಿಸಲು ಕೋರಿದಳು. ಪ್ರಾರಂಭದಲ್ಲಿ ಉಂಟಾದ ಆಘಾತದಿಂದ ಹೊರಬಂದು, ಆ ಸಮಯದಲ್ಲಿ ಈ ಖಂಡಾಂತರ ರೋಗದ ಬಗ್ಗೆ ಹೆಚ್ಚು ಅರಿವು ಹೊಂದಿರದೇ ಇದ್ದಾಗ್ಯೂ, ಆಕೆಗೆ **ಸರಪಂಚ್** ನೀಡಿದ ಸೂಚನೆಗಳನ್ನು ಅನುಸರಿಸಿ, ತನ್ನ ವಾರ್ಡ್‌ನಲ್ಲಿ ವಾಸಿಸುತ್ತಿರುವ ಕುಟುಂಬಗಳನ್ನು ರಕ್ಷಿಸುವಲ್ಲಿ ಸಕ್ರಿಯವಾಗಿ ಪಾತ್ರವಹಿಸಿದಳು.

ಆಕೆಯು, ಸಮುದಾಯ ಸದಸ್ಯರು ಮತ್ತು ಆಶಾ ಕಾರ್ಯಕರ್ತರನ್ನು ಮತ್ತು ಆರೋಗ್ಯ ಇಲಾಖೆಯ ವೈದ್ಯರ ತಂಡವನ್ನು ಒಳಗೊಂಡು ಆರೋಗ್ಯ ಪಾಲನೆ ಮಾಡುವ ವೃತ್ತಿಪರರ ನಡುವೆ ಸಂಪರ್ಕ ಸೇತುವಾಗಿ ಒದಗಿಬಂದಳು ಹಾಗೂ ಅವರೊಂದಿಗೆ ಮನೆ ಮನೆ ಸಮೀಕ್ಷೆಗಳಲ್ಲಿ ಜೊತೆಯಾಗಿ, ಪರಿಶೀಲನೆ ಕೈಗೊಳ್ಳಲು ನೆರವಾದಳು. ಈ ಅವಕಾಶವನ್ನು ಆಕೆಯು, ಗ್ರಾಮೀಣ ಕುಟುಂಬಗಳಲ್ಲಿ ಪಾಲನೆ ಒದಗಿಸುವ ಮಹಿಳೆಯರೊಂದಿಗೆ ಸಂವಾದ ನಡೆಸಲು ಬಳಸಿಕೊಂಡು, ಇತರ ವಿಷಯಗಳೊಂದಿಗೆ ಉತ್ತಮ ವೈಯಕ್ತಿಕ ಸ್ವಚ್ಛತೆ, ಮಕ್ಕಳ ವಿಶೇಷ ಪಾಲನೆಯಂಥ ವಿಷಯಗಳನ್ನು ಕುರಿತು ಅವರಿಗೆ ಮಾರ್ಗದರ್ಶನ ನೀಡಿದಳು.

**ಕಥೆ 7**

**ಜೀವನೋಪಾಯ ಅವಕಾಶಗಳಿಗೆ ಹೆಸರು ನೋಂದಾಯಿಸುವುದು**

ಮರು–ವಲಸೆಯ ಒತ್ತಡವನ್ನು ಕುರಿತು ಪರ್ಯಾಲೋಚಿಸಿದಲ್ಲಿ, ಉದ್ಯೋಗಾವಕಾಶಗಳ ಮೇಲೆ ಹಾಗೂ ಗ್ರಾಮೀಣ ಕೆಲಸಗಾರರ ಮೇಲೆ ಇದು ನಿರುದ್ಯೋಗದ ಅಸ್ಪಷ್ಟ ಅಪಾಯವನ್ನು ಹೇರುತ್ತದೆ, ಸುಮೋತಾ ದೇವಿ ಮತ್ತು ಮಾಹಾ ದೇವಿ ಎಂಬ ಹರ್ಯಾಣದ ಮಹೇಂದ್ರಘಡದ ದೋಂಖೇರಾ ಗ್ರಾಮದ ಪಂಚಾಯಿತಿ ಸದಸ್ಯೆಯರು, ಎಮ್‌ಜಿಎನ್‌ಆರ್‌ಇಜಿಎ ಕಾಮಗಾರಿಯ ವ್ಯಾಪ್ತಿಯನ್ನು ಹೆಚ್ಚು ಮಾಡಬೇಕೆಂದು ಸರಂಪಂಚರಿಗೆ ಸಲಹೆ ನೀಡಿದರು, ತತ್ಪರಿಣಾಮವಾಗಿ, ಸರಿ ಸುಮಾರು 200 ಹೊಸ ಎಮ್‌ಜಿಎನ್‌ಆರ್‌ಇಜಿಎ ಜಾಬ್ ಕಾರ್ಡ್‌ಗಳನ್ನು ವಿತರಿಸಲಾಯಿತು ಮತ್ತು ಕೆರೆ ತೋಡುವ, ರಸ್ತೆ ನವೀಕರಿಸುವ, ಮುಂತಾದಂಥ ನಿರ್ಮಾಣ ಕಾಮಗಾರಿಗಳಲ್ಲಿ ಜನರನ್ನು ನಿಯೋಜಿಸಲಾಯಿತು.

ದೋಂಖೇರಾ ಗ್ರಾಮದ ಮಹಿಳಾ ಸರಪಂಚರು ಸಹ, ಸಂಬಂಧಪಟ್ಟ ಸರ್ಕಾರಿ ಕಾರ್ಯನಿರ್ವಾಹಕರೊಂದಿಗೆ, ಐಸಿಡಿಎಸ್ ಮತ್ತು ಎಮ್‌ಡಿಎಮ್‌ಎಸ್ ಫಲಾನುಭವಿಗಳಿಗೆ ಮನೆ ಮನೆಗೆ ಪಡಿತರ ವಿತರಿಸುವ ಕಾರ್ಯದಲ್ಲಿ ಸ್ವತಃ ತೊಡಗಿಕೊಂಡರು.

**ಕಥೆ 8**

**ಸಮುದಾಯದಲ್ಲಿ ಅರಿವು ಮೂಡಿಸುವುದು**

ಬಿಹಾರದ ಕಲ್ಯಾಣಪುರದ ಲಡೌರ ಗ್ರಾಮದ ಪಂಚಾಯತ್ ಸದಸ್ಯೆ ಸೀತಾ ದೇವಿಯು, ಕೋವಿಡ್–19 ತಡೆಗಟ್ಟುವುದಕ್ಕೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗಸೂಚಿಗಳ ಬಗ್ಗೆ ತನ್ನ ವಾರ್ಡ್‌ನ ಜನತೆಗೆ, ಮುಖ್ಯವಾಗಿ ಮಹಿಳೆಯರಲ್ಲಿ ಅರಿವು ಮೂಡಿಸಲು ಮನೆ ಮನೆಗೂ ಭೇಟಿ ನೀಡಿದಳು. ಸಾಮಾಜಿಕ ಅಂತರದ ಮಾನದಂಡಗಳು, ಕೈ ತೊಳೆಯುವುದು ಮತ್ತು ಸೋಪಿನ ಬಳಕೆ, ವೈಯಕ್ತಿವಾಗಿ ಮತ್ತು ಕುಂಟುಂಬ ಮಟ್ಟದಲ್ಲಿ ದೈನಂದಿನ ಸ್ವಚ್ಛತೆ ಕಾಪಾಡಿಕೊಳ್ಳುವುದು, ಸುತ್ತಮುತ್ತಲಿನ ಪರಿಸರವನ್ನು ನಿರ್ಮಲವಾಗಿಟ್ಟುಕೊಳ್ಳುವುದು, ಹೊರಗಿನ ಜನರ ಮೇಲೆ ನಿಗಾ ಇರಿಸುವುದು, ಹೊರಗಿನ ಜನರನ್ನು ಮನೆಗಳ ಒಳಗೆ ಬರಲು ಅವಕಾಶ ನೀಡದಿರುವುದು, ಜನದಟ್ಟಣೆಯ ಪ್ರದೇಶಗಳಿಗೆ ಹೋಗುವುದನ್ನು ತಪ್ಪಿಸುವುದು ಮತ್ತು ಇಂಥಹುವೇ ಹಲವಾರು ವಿಷಯಗಳನ್ನು ಒಳಗೊಂಡಂತೆ, ಮಾಡಬೇಕಾದ ಮತ್ತು ಮಾಡಬಾರದ ಕೆಲಸಗಳ ಬಗ್ಗೆ ತನ್ನ ವಾರ್ಡ್‌ನಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ಮಾಹಿತಿ ನೀಡುವ ಕಾರ್ಯವನ್ನು ಆಕೆಯು ವಹಿಸಿಕೊಂಡಿದ್ದಳು.

ಬಿಹಾರದ ಸಮಷ್ಟಿಪುರದ ಹಾಜಪುರ್ವ ಗ್ರಾಮದಲ್ಲಿ, ಮುನ್ನಿ ದೇವಿಯು, 2020ರ ಏಪ್ರಿಲ್ ತಿಂಗಳ ಸಭೆಯಲ್ಲಿ, ಮುಖಿಯಾ ಮತ್ತು ಪಂಚಾಯತ್ ಕಾರ್ಯದರ್ಶಿಯೊಂದಿಗೆ ಹಾಗೂ ಗ್ರಾಮದ ಪ್ರಮುಖ ಜನರೊಂದಿಗೆ ಸೇರಿಕೊಂಡು ಕೋವಿಡ್–19 ಹರಡುವಿಕೆಯನ್ನು ನಿಯಂತ್ರಿಸುವ ಕಾರ್ಯಚಟುವಟಿಕೆಗಳ ನೀಲನಕ್ಷೆಯನ್ನು ಸಿದ್ಧಪಡಿಸಿದಳು.

ಅತ್ಯಂತ ಬಡ ಜನರು, ಸರ್ಕಾರದ ಚಾಲ್ತಿ ಕಾರ್ಯಕ್ರಮಗಳ ಪ್ರಯೋಜನವನ್ನು ಪಡೆಯುವುದು ಮುಖ್ಯವೆಂದು ಮುನ್ನಿ ದೇವಿಯು ಯೋಚಿಸಿದಳು. **ಪ್ರಧಾನ ಮಂತ್ರಿ ಉಜ್ವಲ ಯೋಜನೆ,** ಟಿಪಿಡಿಎಸ್, ಪಿಂಚಣಿಗಳು, ಮುಂತಾದಂಥ ಆಯ್ದ ಸಾಮಾಜಿಕ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳ ಉಪಬಂಧಗಳನ್ನು ಪರಿಷ್ಕರಿಸುವ ಬಗ್ಗೆ ಮಾಹಿತಿ ಪ್ರಸಾರ ಮಾಡಲು ಆಕೆಯು ಕುಟುಂಬಗಳಿಗೆ ಭೇಟಿ ನೀಡಿದಳು.

**ಕಥೆ 9**

**ನಿಗಾ ವ್ಯವಸ್ಥೆಯಲ್ಲಿ ಸಕ್ರಿಯ ಪಾತ್ರ**

ಹರಿಯಾಣದ ಮಹೇಂದ್ರಘಡದ ಪಂಚೋಟಾ ಗ್ರಾಮದ **ಸರಪಂಚ**ಳಾದ ಚಂದ್ರಕಲಾ ದೇವಿಯು, ಇಡೀ ಗ್ರಾಮವನ್ನು ಸ್ಯಾನಿಟೈಜೇಷನ್ ಪ್ರಕ್ರಿಯೆಗೆ ಒಳಪಡಿಸಲು ಏರ್ಪಾಡು ಮಾಡಿ, ಮೇಲ್ವಿಚಾರಣೆ ನಡೆಸಿದಳು. ಆಕೆಯು ಗ್ರಾಮಕ್ಕೆ ಮರಳುತ್ತಿದ್ದ ಕಾರ್ಮಿಕರ ಮೇಲೆ ಕಠಿಣ ನಿಗಾ ವಹಿಸಿ, ಬ್ಲಾಕ್ ಪ್ರಾಧಿಕಾರಿಗಳು ಹೊರಡಿಸಿದ ಮಾರ್ಗಸೂಚಿಗಳನುಸಾರ ತಪಾಸಣೆಗಾಗಿ ಅವರನ್ನು **ನರ್ನೌಲ್ ತಹಸಿಲ್**ಗೆ ಕಳುಹಿಸಿ ಪರಿಸ್ಥಿತಿ ನಿರ್ವಹಿದಳು. ಕಠಿಣ ನಿಗಾ ವಹಿಸಲು ಆಕೆಯು, ಪಂಚಾಯಿತಿ ಸದಸ್ಯರಿಗೆ ಮತ್ತು ಗ್ರಾಮದ ಪ್ರಮುಖ ವ್ಯಕ್ತಿಗಳಿಗೆ, ಚೆಕ್–ಪೋಸ್ಟ್‌ಗಳನ್ನು ಸ್ಥಾಪಿಸುವ ಮೂಲಕ ಪ್ರವೇಶ ಮತ್ತು ನಿರ್ಗಮನ ಸ್ಥಳಗಳಲ್ಲಿ ಸುರಕ್ಷತೆ ಕಾಪಾಡುವ ಜವಾಬ್ದಾರಿ ನೀಡಿದಳು. ಆಕೆಯು ಈ ಕಾರ್ಯಚಟುವಟಿಕೆಯಲ್ಲಿ ದಿನದ ಸಮಯದಲ್ಲಿ ಮಹಿಳೆಯರನ್ನು ಮತ್ತು ರಾತ್ರಿ ಸಮಯದಲ್ಲಿ ಪುರುಷರನ್ನು ತೊಡಗಿಸಿದ್ದಳು.

**ಕಥೆ 10**

**ಆಹಾರ ಸುರಕ್ಷತೆ ಕಾರ್ಯಕ್ರಮಗಳನ್ನು ಸಕ್ರಿಯಗೊಳಿಸುವುದು: ಐಸಿಡಿಎಸ್ ಮತ್ತು ಎಮ್‌ಡಿಎಮ್‌ಎಸ್**

ಹರಿಯಾಣದ ತಾವೂರ್‌ನ ರಣ್ಯೈಕಿ ಗ್ರಾಮದ ಪಂಚಾಯತ್ ಸದಸ್ಯೆ ಸಂತೋಷ ಎಂಬಾಕೆಯು, ದೀರ್ಘಾವಧಿ ಲಾಕ್‌ಡೌನ್ ಕಾರಣದಿಂದಾಗಿ ಆಹಾರ ಸುರಕ್ಷತಾ ಕಾರ್ಯಕ್ರಮಗಳು ಕಾರ್ಯನಿರ್ವಹಿಸದಿದ್ದ ಪರಿಣಾಮವಾಗಿ, ಮಹಿಳೆಯರು ಮತ್ತು ಮಕ್ಕಳಲ್ಲಿ ಅಪೌಷ್ಟಿಕತೆಯ ಹೆಚ್ಚಿನ ಪ್ರಕರಣಗಳು ಕಂಡುಬರುತ್ತಿದ್ದ ಬಗ್ಗೆ ನಿರ್ದಿಷ್ಟವಾಗಿ ಕಾಳಜಿ ವಹಿಸಿದಳು. ಅಂಗನವಾಡಿ ಕಾರ್ಯಕರ್ತೆಯರು ಒಂದು ದಿನ ತನ್ನ ಫಲಾನುಭವಿಗಳಿಗೆ ಪಡಿತರ ಒದಗಿಸುವುದನ್ನು ಮುಂದುವರಿಸುವ ಕುರಿತು ಸಲಹೆಗಳನ್ನು ಕೋರಿ ಆಕೆಯನ್ನು ಭೇಟಿಯಾಗುವವರೆಗೆ, ತನ್ನ ಗ್ರಾಮದಲ್ಲಿ ಐಸಿಡಿಎಸ್ ಅನುಷ್ಠಾನ ಬಹುತೇಕ ಪೂರ್ಣಗೊಂಡಿತ್ತು.

ಸಂತೋಷ್, ಚಿಕ್ಕ ಮಕ್ಕಳಿಗೆ ಮತ್ತು ಗರ್ಭಿಣಿ ಮಹಿಳೆಯರಿಗೆ ಐಸಿಡಿಎಸ್ ಪಡಿತರವನ್ನು ಮನೆ ಮನೆಗೂ ವಿತರಿಸುವ ಸಲಹೆಯನ್ನು ನೀಡಿದಳು. ಆಕೆಯ ತನ್ನ ಗ್ರಾಮದ ಸರ್ಕಾರಿ ಶಾಲಾ ಆವರಣಕ್ಕೆ ಸಹ ಭೇಟಿ ನೀಡಿ, ವಿದ್ಯಾರ್ಥಿಗಳಿಗೆ ಎಮ್‌ಡಿಎಮ್‌ಎಸ್ ಅಡಿಯಲ್ಲಿ ಆಹಾರ ವಿತರಿಸುವಾಗ, ಮಾಸ್ಕ್ ಧರಿಸಲು ಮತ್ತು ಸಾಮಾಜಿ ಅಂತರಗಳ ಸೂಚನೆಗಳನ್ನು ಪಾಲಿಸಲು ಅಡುಗೆಯವರಿಗೆ ಮಾರ್ಗದರ್ಶನ ನೀಡಿದಳು.

ಈ ರೀತಿಯ ಕಥೆಗಳು, ಕೋವಿಡ್–19 ತಡೆಯಲ್ಲಿ ಮತ್ತು ಸಂರಕ್ಷಣೆಯಲ್ಲಿ, ಗ್ರಾಮ ಪಂಚಾಯಿತಿಯ ಮಹಿಳಾ ಮುಖಂಡರ ಕರ್ತೃತ್ವ ಮತ್ತು ತೊಡಗುವಿಕೆಯನ್ನು, ಅನುಮಾನವೇ ಇಲ್ಲದಂತೆ ವ್ಯಕ್ತಪಡಿಸುತ್ತವೆಯಾದರೂ, ಭಾರತದಲ್ಲಿ ಚುನಾಯಿತರಾದ ಮಹಿಳಾ ಪ್ರತಿನಿಧಿಗಳ ಬಹು ದೊಡ್ಡ ಸಂಖ್ಯೆಗೆ ಹೋಲಿಸಿದರೆ ಅತ್ಯಲ್ಪವಾಗಿವೆ.

ಬಹುದೊಡ್ಡ ಸಂಖ್ಯೆ ಮಹಿಳಾ ಮುಖಂಡರು ಇಂತಹ ಕಾರ್ಯಗಳಲ್ಲಿ ತೊಡಗಿಕೊಳ್ಳದೆ, ಮೌನವಾಗಿ ಉಳಿದಿದ್ದಾರೆ. ತಮ್ಮ ನಾಯಕತ್ವದ ಕರ್ತವ್ಯಗಳನ್ನು ನಿಭಾಯಿಸಲು ಇಚ್ಚೆಯುಳ್ಳಂಥವರು ಸಹ, ಸೀಮಿತ ಬೆಂಬಲದ ಕಾರಣದಿಂದ ಹಾಗೂ ಪಂಚಾಯತ್ ಸಮಿತಿಗಳೊಂದಿಗೆ ಮತ್ತು ಜಿಲ್ಲಾ ಪರಿಷತ್ತುಗಳೊಂದಿಗೆ ಸಂಪರ್ಕದ ಕೊರತೆಯಿಂದ, ಜೊತೆಗೆ ಕುಟುಂಬಗಳು ಹಾಗೂ ಸಮಾಜದಿಂದ ಬೆಂಬಲ ಮತ್ತು ಪ್ರೋತ್ಸಾಹದ ಕೊರತೆಯಿಂದ ಹಾಗೆ ಮಾಡುವುದರಿಂದ ನಿರ್ಬಂಧಿತರಾಗಿದ್ದಾರೆ.

**ಕಥೆ 11**

**ತಳಮಟ್ಟದಿಂದ ಕಾರ್ಯನಿರ್ವಹಿಸುವುದು (ಬಾಟಮ್–ಅಪ್): ನಿಯೋಜಿತರನ್ನು ತೊಡಗಿಸುವುದು**

ಕೋವಿಡ್–19 ಹರಡುವಿಕೆಯನ್ನು ತಡೆಗಟ್ಟುವಲ್ಲಿ ಗ್ರಾಮ ಪಂಚಾಯಿತಿಗಳ ಮಹಿಳಾ ಸದಸ್ಯರ ಪಾತ್ರವು, ಕಟ್ಟುನಿಟ್ಟಾದ ಉಪಶಮನ ಪ್ರಯತ್ನಗಳು, ಲಾಕ್‌ಡೌನ್ ನಂತರದ ಹಂತದಲ್ಲಿಯೂ ಸಹ ಅತ್ಯಂತ ನಿರ್ಣಾಯಕವಾದುದಾಗಿದೆ. ಈ ಖಂಡಾಂತರ ಸಾಂಕ್ರಾಮಿಕ ರೋಗವು, ದುರ್ಬಲ ವರ್ಗಗಳ ಜನರೊಂದಿಗೆ ಕಾರ್ಯನಿರ್ವಹಣೆಯಲ್ಲಿ ತೊಡಗಲು ಗ್ರಾಮ ಪಂಚಾಯಿತಿ ಮಹಿಳಾ ಸದಸ್ಯರಿಗೆ ಅವಕಾಶಗಳ ಹೆಬ್ಬಾಗಿಲನ್ನೇ ತೆರೆಯಿತು. ಈ ಹೊತ್ತಿನಲ್ಲಿ ಅವರು ಮಾಡಬೇಕಾದದು, ಹೆಚ್ಚು ನೇರವಾಗಿ ಬ್ಲಾಕ್ ಮತ್ತು ಜಿಲ್ಲಾ ಆಡಳಿತ ಸಂಸ್ಥೆಗಳಿಂದ ಬೆಂಬಲದ ಆಸರೆಯನ್ನು ಪಡೆದುಕೊಳ್ಳುವುದು.

ಮೊದಲನೆಯದಾಗಿ, ಗ್ರಾಮ ಪಂಚಾಯಿತಿಯ ಮಹಿಳಾ ಸದಸ್ಯರು, ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ಸಮುದಾಯ–ಆಧಾರಿತ ವಿಪತ್ತು ನಿರ್ವಹಣಾ ಯೋಜನೆಗಳನ್ನು ರೂಪಿಸಲು ಸಾಧ್ಯವಾಗುವಂತಾಗಲು ಅವರಿಗೆ ರೋಗ ತಡೆ, ಉಪಶಮನ, ಸಿದ್ಧತೆ, ಪ್ರತಿಸ್ಪಂದನೆ ಮತ್ತು ಪುನಶ್ಚೇತನಗೊಳ್ಳುವ ಹಂತಗಳನ್ನು ಒಳಗೊಂಡು ವಿಪತ್ತು ನಿರ್ವಹಣೆ ಕುರಿತು ಮೂಲಭೂತವಾದ ಸವಿವರವಾದ ಪರಿಚಯಾತ್ಮಕ ತರಬೇತಿಯನ್ನು ನೀಡಬೇಕು.

ಎರಡನೆಯದಾಗಿ, ಸುಸ್ಥಿತಿಯಲ್ಲಿರುವ ಶೌಚಾಲಯಗಳನ್ನು ಒಳಗೊಂಡಂತೆ, ಸೌಲಭ್ಯಸಹಿತ ಮಹಿಳಾ–ಸ್ನೇಹಿ ಪಂಚಾಯತ್ ಘರ್ ಅಥವಾ ಭವನದ ನಿರ್ಮಾಣವನ್ನು ಕೂಡಲೇ ಕೈಗೊಳ್ಳುವಂಥ, ಗ್ರಾಮ ಪಂಚಾಯಿತಿಯ ಮಹಿಳಾ ಮುಖಂಡರ ನಿರ್ಬಂಧ–ರಹಿತ ಕಾರ್ಯನಿರ್ವಹಣೆಯನ್ನು ಖಚಿತಪಡಿಸುವುದು.

ಮೂರನೆಯದಾಗಿ, ಮುಂಬರುವ ತಿಂಗಳುಗಳಲ್ಲಿ ಸಾಮಾಜಿಕ ಅಂತರದ ಮಾನದಂಡಗಳು, ಗ್ರಾಮ ಪಂಚಾಯಿತಿಗಳ ನಿಯತ ಸಭೆಗಳನ್ನು ಮತ್ತು ತರಬೇತಿ ನಡೆಸಲು ತಡೆ ಒಡ್ಡಬಹುದಾದರೂ, ಕೆಲವೇ ನಿಮಿಷಗಳೊಳಗೆ ಮಾಹಿತಿಯನ್ನು ಹಂಚಿಕೊಳ್ಳಲು ವಾಟ್ಸ್‌ಆ್ಯಪ್‌ನಂಥ ಆ್ಯಪ್‌ಗಳ ಬಳಕೆ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳ ಮೂರು ಹಂತಗಳ ನಡುವೆ ಸಂಪರ್ಕಗಳನ್ನು ಏರ್ಪಡಿಸುವುದು, ಖಂಡಾಂತರ ಸಾಂಕ್ರಾಮಿಕ ರೋಗ ಹರಡಿದ ಈ ಸಮಯದಲ್ಲಿ ಮತ್ತು ನಂತರ ಸಹ ಅತ್ಯಂತ ಪರಿಣಾಮಕಾರಿಯಾಗುವುದು.

ಹರಿಯಾಣದ ನೂಹ್‌ನ ಸೋಂಖ್ ಗ್ರಾಮದ ಸರಪಂಚ್ ನಿರ್ಮಲ ಎಂಬಾಕೆಯು, ಬ್ಲಾಕ್‌ನ ಸರಪಂಚ್‌ರನ್ನು ಒಳಗೊಂಡಂತೆ ವಾಟ್ಸ್‌ಆ್ಯಪ್ ಗುಂಪಿನ ಮೂಲಕ ಬ್ಲಾಕ್ ಮಟ್ಟದ ಪ್ರಾಧಿಕಾರಿಗಳಿಂದ ನಿಯತ ಮಾಹಿತಿ ಹಂಚಿಕೆಯು, ಸಂಬಂಧಪಟ್ಟ ಮಾಹಿತಿಯನ್ನು ಪಡೆಯಲು ಮತ್ತು ಸೂಕ್ತ ರೀತಿಯಲ್ಲಿ ಕೋವಿಡ್–19 ಒಳಗೊಳ್ಳುವ ಅನುಷ್ಠಾನ ಕ್ರಮಗಳನ್ನು ಕೈಗೊಳ್ಳಲು ಸಹಾಯಕವಾಯಿತು ಎಂದು ಹೇಳಿದ್ದಾಳೆ.

ಅಂತಿಮವಾಗಿ, ಕುಟುಂಬ ಸದಸ್ಯರ ಮತ್ತು ಗ್ರಾಮೀಣ ಪ್ರದೇಶಗಳಲಿನ ವ್ಯಾಪಕ ಸಾಮಾಜಿಕ ಪರಿಸರದ ಒಟ್ಟಾರೆ ಬೆಂಬಲ ಮತ್ತು ಸಹಕಾರದ ಮೂಲಕ ಸಾಮಾಜಿಕ ಬಂಡವಾಳ ಸೃಜನೆ ಕುರಿತು ಒತ್ತು ನೀಡಿರುವುದು, ಗ್ರಾಮ ಪಂಚಾಯಿತಿಯ ಮಹಿಳಾ ಸದಸ್ಯೆಯರು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದನ್ನು ಸಾಧ್ಯವಾಗುವಂತೆ ಮಾಡುವಲ್ಲಿ ಅತ್ಯಂತ ಸಮರ್ಥ ಬೆಂಬಲವಾಗಿದೆ.

ವಿಶೇಷವಾಗಿ, ಗ್ರಾಮ ಪಂಚಾಯಿತಿಯ ಮಹಿಳಾ ಸದಸ್ಯರಿಗಾಗಿ ಯೋಜಿಸಿದ ರಚನಾತ್ಮಕ ಸಾಮರ್ಥ್ಯ ನಿರ್ಮಾಣ ಅಧಿವೇಶನ (ಸಭೆ)ಗಳನ್ನು, ಸರ್ಕಾರವು, ಇತರ ವಿಷಯಗಳ ಜೊತೆಗೆ, ತುರ್ತು ಸನ್ನಿವೇಶಗಳಲ್ಲಿ ಅಳವಡಿಸಿಕೊಳ್ಳುವ ವಿಶ್ವಾಸ ಮೂಡಿಸುವ, ಸಾರ್ವಜನಿಕವಾಗಿ ಭಾಷಣ ಮಾಡುವ ಮತ್ತು ನಾಯಕತ್ವದ ಗುಣಲಕ್ಷಣಗಳನ್ನು ಬೆಳೆಸುವ ಕುರಿತು ಗಮನ ಕೇಂದ್ರೀಕರಿಸುವುದರೊಂದಿಗೆ ಏರ್ಪಡಿಸಬಹುದಾಗಿದೆ. ಇದು, ಮಹಿಳಾ ಮುಖಂಡರು, ತಮ್ಮ ಅರಿವು, ಸಾಮರ್ಥ್ಯ ಮತ್ತು ಕೌಶಲ್ಯಗಳನ್ನು ಹೆಚ್ಚಿಸಿಕೊಂಡು ಮುಂಚೂಣಿ ವಾರಿಯರ್ಸ್ ಆಗಿ ಅವರನ್ನು ಸಿದ್ಧಗೊಳಿಸುವಲ್ಲಿ ಸಹಾಯಕವಾಗುವುದು.

ಗ್ರಾಮ ಪಂಚಾಯಿತಿಗಳ ಮಹಿಳಾ ಮುಖಂಡರು, ಸಂಪೂರ್ಣ ಉತ್ಸಾಹದಿಂದ ಮತ್ತು ಬದ್ಧತೆಯೊಂದಿಗೆ ಖಂಡಾಂತರ ಸಾಂಕ್ರಾಮಿಕ ರೋಗ ಹರಡಿದ್ದ ಅವಧಿಯಲ್ಲಿ ಜವಾಬ್ದಾರಿಗಳನ್ನು ವಹಿಸಿಕೊಂಡಿರುವುದನ್ನು ತೋರಿಸಲು ತಳಮಟ್ಟದಿಂದ ಇಂಥ ಹಲವಾರು ಉದಾಹರಣೆಗಳನ್ನು ನೀಡಬಹುದಾಗಿದೆ. ಸೂಕ್ತ ತರಬೇತಿ ಮತ್ತು ತಜ್ಞತೆಯ ಕೊರತೆಯು, ಈ ಸಾಂಕ್ರಾಮಿಕ ರೋಗದ ಆಸ್ಫೋಟನೆ ಅವಧಿಯಲ್ಲೂ ತಮ್ಮ ಗ್ರಾಮಗಳ ಮತ್ತು ದುರ್ಬಲ ಜನರ ರಕ್ಷಣೆಯ ಅವರ ಸಂಕಲ್ಪವನ್ನು ಹತ್ತಿಕ್ಕಲು ಆಗಲಿಲ್ಲ. ಸ್ವಚ್ಛತೆ ಮತ್ತು ನೈರ್ಮಲ್ಯ ಹೆಚ್ಚಿಸುವ ವಿಷಯಗಳನ್ನು ಕುರಿತು ಗ್ರಾಮೀಣ ಜನರನ್ನು ಸಜ್ಜುಗೊಳಿಸುವಲ್ಲಿ, ಸಮುದಾಯದ ಸಮರ್ಥ ಬದ್ಧತೆಯನ್ನು ಬಳಸುವ ಅವರ ಕಾರ್ಯತಂತ್ರ ಮತ್ತು ಅಂಗನವಾಡಿ ಹಾಗೂ ಆರೋಗ್ಯ ಕಾರ್ಯಕರ್ತರೊಂದಿಗಿನ ಅವರ ಸೌಹಾರ್ದ ಸಂಬಂಧಗಳು ಹಿಂದೆಂದೂ ಕಾಣದ ಈ ಬಿಕ್ಕಟ್ಟಿನ ಸಮಯದಲ್ಲಿ ಅಭೂತಪೂರ್ವವಾಗಿ ಪ್ರಯೋಜನಕಾರಿಯಾಗಿದ್ದನ್ನು ಸಾಬೀತುಪಡಿಸಿವೆ.

ಇದರ ಜೊತೆಗೆ, ಸಮಾಜದ ಮತ್ತು ಕುಟುಂಬದ ಸಂಪೂರ್ಣ ಬೆಂಬಲವು, ಮಹಿಳಾ ಮುಖಂಡರನ್ನು ಬದಲಾವಣೆಯ ಹರಿಕಾರರನ್ನಾಗಿಸುವಲ್ಲಿ ಸಾಧನವಾಗಿ ಒದಗಿಬಂದಿವೆ. ತಮ್ಮ ಗ್ರಾಮಗಳಲ್ಲಿ ಕೋವಿಡ್–19 ತಡೆಗಟ್ಟುವ ಪ್ರಕ್ರಿಯೆಗಳನ್ನು ಪ್ರಧಾನವಾಗಿ ಮುನ್ನಡಿಸಿದ ಮಹಾರಾಷ್ಟ್ರದ, ಔರಂಗಾಬಾದ್‌ನ ವಣೆಗಾಂವ್ ಗ್ರಾಮದ ವೈಶಾಲಿ ಚೋಪಡೆಯಂಥ ಮಹಿಳಾ ಸರಪಂಚರ ಯಶಸ್ವಿ ಕಥಾನಕಗಳು, ಸಾಮರ್ಥ್ಯ ಅಭಿವೃದ್ಧಿ ಮತ್ತು ಸಾಮಾಜಿಕ ಬೆಂಬಲದ ಸಂಯೋಜನೆಯು, ಭಾರತದಲ್ಲಿ ಗ್ರಾಮ ಪಂಚಾಯಿತಿಗಳ ಮಹಿಳಾ ಮುಖಂಡರನ್ನು ಬದಲಾವಣೆಯ ಹರಿಕಾರರನ್ನಾಗಿಸುವುದನ್ನು ತೋರಿಸಿಕೊಟ್ಟಿದೆ.

***ಕಥೆಗಳು: ಮೂಲ: ಇಂಡಿಯಾ ವಾಟರ್ ಪೋರ್ಟಲ್, 17–06–2020; ದೇಬಿಕಾ ಗೋಸ್ವಾಮಿ***

## ಅನುಬಂಧ 2 : ಸಾರ್ವಜನಿಕ ಸೇವೆಗಳ ಮೇಲ್ವಿಚಾರಣಾ ಸಾಧನ (ಟೂಲ್)

| ಕ್ರ. ಸಂ. | ಸೂಚಕಗಳು | ಜನವರಿ | ಫೆಬ್ರವರಿ | ಮಾರ್ಚ್ |
|---|---|---|---|---|
| | **ಅಂಗನವಾಡಿ ಕೇಂದ್ರ** | | | |
| 1 | ತಿಂಗಳ ಅವಧಿಯಲ್ಲಿ ಎಲ್ಲಾ ಅಂಗನವಾಡಿ ಕೇಂದ್ರಗಳು ತೆರೆದಿದ್ದವೇ? | | | |
| 2 | 3–6 ವಯೋಮಾನದ ಮಕ್ಕಳ ಸಂಖ್ಯೆ | | | |
| 3 | ಅಂಗನವಾಡಿ ಕೇಂದ್ರಗಳಿಗೆ ನಿಯಮಿತವಾಗಿ ಬರುವ 3–6 ವಯೋಮಾನದ ಮಕ್ಕಳ ಸಂಖ್ಯೆ | | | |
| 4 | ಗ್ರಾಮದಲ್ಲಿರುವ 0–3 ವಯೋಮಾನದ ಮಕ್ಕಳ ಸಂಖ್ಯೆ | | | |
| 5 | ಅಪೌಷ್ಟಿಕತೆ ಮತ್ತು ತೀವ್ರ ಅಪೌಷ್ಟಿಕತೆ ಹಂತದಲ್ಲಿರುವ 0–3 ವಯೋಮಾನದ ಮಕ್ಕಳ ಸಂಖ್ಯೆ | | | |
| 6 | ಕಳೆದ ತಿಂಗಳು ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ತೂಕವನ್ನು ಅಳತೆ ಮಾಡಲಾಗಿತ್ತೇ? | | | |
| 7 | ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಕಳೆದ ವಾರ ಸಿದ್ಧಪಡಿಸಿದ ಊಟದಲ್ಲಿ ಎಲ್ಲಾ ದಿನಗಳಂದು ದ್ವಿದಳ ಧಾನ್ಯಗಳನ್ನು ಮತ್ತು ತರಕಾರಿಗಳನ್ನು ನೀಡಲಾಗಿತ್ತೇ? | | | |
| 8 | ಕಳೆದ ತಿಂಗಳ ಅವಧಿಯಲ್ಲಿ ಎಲ್ಲಾ ಕೇಂದ್ರಗಳಲ್ಲಿ ಪೌಷ್ಟಿಕ ಆಹಾರದ ಕಿಟ್‌ಅನ್ನು ವಿತರಿಸಲಾಗಿತ್ತೇ? | | | |
| 9 | ಕಳೆದ ತಿಂಗಳಲ್ಲಿ ಮಕ್ಕಳಿಗೆ ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಹಾಲನ್ನು ವಿತರಿಸಲಾಗಿತ್ತೇ? | | | |
| 10 | ಕಳೆದ ತಿಂಗಳಲ್ಲಿ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಹಾಗೂ ಹಾಲುಣಿಸುವ ತಾಯಂದಿರಿಗೆ ನಿಗದಿಪಡಿಸಿದ ವೇಳಾಪಟ್ಟಿಯನುಸಾರ ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಮೊಟ್ಟೆಗಳನ್ನು ನೀಡಲಾಗಿತ್ತೇ? | | | |
| 11 | ಕಳೆದ ತಿಂಗಳಲ್ಲಿ ಎಸ್‌ಎಎಮ್ ಮತ್ತು ಎಮ್‌ಎಎಮ್ ಮಕ್ಕಳಿಗೆ ಮೊಟ್ಟೆಗಳನ್ನು ಮತ್ತು ಹಾಲನ್ನು ನೀಡಲಾಗಿತ್ತೇ? | | | |
| 12 | ಚಿಕಿತ್ಸೆಕ ಸೇವೆಗಳಿಗೆ (ಪಿಹೆಚ್‌ಸಿ, ಎನ್‌ಆರ್‌ಸಿ) ಕರೆದುಕೊಂಡು ಹೋಗಲಾದ ಮಕ್ಕಳ ಸಂಖ್ಯೆ | | | |
| | **ಪೂರಕ ಆಹಾರ ನೀಡುವುದು** | | | |
| 13 | ಪೂರಕ ಆಹಾರ ನೀಡಲು ಪ್ರಾರಂಭಿಸಿರದ 6–9 ತಿಂಗಳ ವಯೋಮಾನದ ಮಕ್ಕಳ ಸಂಖ್ಯೆ | | | |
| | **ಆರೋಗ್ಯ ಸೇವೆಗಳು** | | | |
| 14 | ರೋಗಪ್ರತಿರಕ್ಷಣೆ/ವಿಹೆಚ್‌ಎನ್‌ಡಿಗಾಗಿ ಕಳೆದ ತಿಂಗಳು ಎಎನ್‌ಎಮ್ ಬಂದಿದ್ದರೇ? | | | |
| 15 | ಎಲ್ಲಾ ಸಣ್ಣ ಗ್ರಾಮಗಳ ಎಲ್ಲಾ ಮಕ್ಕಳಿಗೆ ಸೂಕ್ತ ವಯಸ್ಸಿನಲ್ಲಿ ಲಸಿಕೆ ಹಾಕಲಾಗಿದೆಯೇ? | | | |
| 16 | ಗರ್ಭಿಣಿ ಮಹಿಳೆಯ ರಕ್ತದೊತ್ತಡ ಮಾಪನವನ್ನು ವಿಹೆಚ್‌ಎನ್‌ಡಿಯಲ್ಲಿ ಮಾಡಲಾಗಿದೆಯೇ | | | |
| 17 | ಎಎನ್‌ಎಮ್ ಉಚಿತವಾಗಿ ರೋಗಿಗಳಿಗೆ ಔಷಧಿಗಳನ್ನು ನೀಡುತ್ತಿರುವರೇ? | | | |
| | | | | |

| | | | | |
|---|---|---|---|---|
| 18 | ಎಲ್ಲಾ ಆಶಾ ಕಾರ್ಯಕರ್ತರು ತಮ್ಮೊಂದಿಗೆ 10ಕ್ಕಿತ ಹೆಚ್ಚು ಕ್ಲೋರೋಕ್ವಿನ್ ಮಾತ್ರೆಗಳನ್ನು ತೆಗೆದುಕೊಂಡು ಹೋಗುತ್ತಿರುವರೇ | | | |
| 19 | ಗಂಭೀರ ಸ್ಥಿತಿಯಲ್ಲಿರುವ ರೋಗಿಗಳನ್ನು, ಹೆರಿಗೆ ಪ್ರಕರಣಗಳನ್ನು, ಅನಾರೋಗ್ಯಪೀಡಿತ ನವಜಾತ ಶಿಶುಗಳ ಪ್ರಕರಣಗಳನ್ನು, ಮುಂತಾದವರನ್ನು ಆರೋಗ್ಯ ಸೌಲಭ್ಯ ಒದಿಗಿಸುವ ಸಂಬಂಧದಲ್ಲಿ ಕರೆದುಕೊಂಡು ಹೋಗಲು ಸಾರಿಗೆ ಸೌಲಭ್ಯಗಳು ಲಭ್ಯವಿವೆಯೇ? | | | |
| 20 | ಕಳೆದ ತಿಂಗಳಲ್ಲಿ ಮನೆಯಲ್ಲೇ ಹೆರಿಗೆಯಾದ ಪ್ರಕರಣಗಳ ಸಂಖ್ಯೆ | | | |
| 21 | ಕಳೆದ ತಿಂಗಳಲ್ಲಿ ದಾಖಲಾದ ಡೈರಿಯಾ ಪ್ರಕರಣಗಳ ಸಂಖ್ಯೆ | | | |
| 22 | ಕಳೆದ ತಿಂಗಳಲ್ಲಿ ದಾಖಲಾದ ಜ್ವರ ಸಂಬಂಧಿ ಪ್ರಕರಣಗಳ ಸಂಖ್ಯೆ | | | |
| **ಆಹಾರ ಸುರಕ್ಷತೆ** | | | | |
| 23 | ಕಳೆದ ತಿಂಗಳಲ್ಲಿ ಎಲ್ಲಾ ಪಡಿತರ ವಸ್ತುಗಳನ್ನು ಪಡಿತರ ಅಂಗಡಿಯಲ್ಲಿ ಒದಗಿಸಲಾಗಿತ್ತೇ? | | | |
| 24 | ವೃದ್ಧಾಪ್ಯ ಪಿಂಚಣಿ ಪಡೆಯುತ್ತಿರುವವರು ಅದನ್ನು ಸಕಾಲದಲ್ಲಿ ಪಡೆಯುತ್ತಿರುವರೇ? | | | |
| 25 | ಎಮ್‌ಎನ್‌ಆರ್‌ಇಜಿಎ ಮಜೂರಿ ಸಂದಾಯವನ್ನು ಸಕಾಲದಲ್ಲಿ ಮಾಡಲಾಗಿದೆಯೇ? | | | |
| **ಶಿಕ್ಷಣ** | | | | |
| 26 | ಶಾಲೆಗೆ ಗೈರುಹಾಜರಾಗುತ್ತಿರುವ 6–16 ವಯೋಮಾನದ ಬಾಲಕಿಯರ ಸಂಖ್ಯೆ | | | |
| 27 | ಕಳೆದ ತಿಂಗಳಲ್ಲಿ ಎಲ್ಲಾ ಶಾಲಾ ಶಿಕ್ಷಕರು ನಿಯಮಿತವಾಗಿ ಶಾಲೆಗೆ ಬಂದಿದ್ದರೇ? | | | |
| **ಮಧ್ಯಾಹ್ನದ ಬಿಸಿ ಊಟ** | | | | |
| 28 | ಎಲ್ಲಾ ಶಾಲೆಗಳಲ್ಲಿ (8ನೇ ತರಗತಿವರೆಗಿನ ಮಕ್ಕಳಿಗೆ) ಕಳೆದ ವಾರ ಎಲ್ಲಾ ದಿನಗಳಲ್ಲಿ ನೀಡಿದ ಊಟದಲ್ಲಿ ದ್ವಿದಳ ಧಾನ್ಯ ಮತ್ತು ತರಕಾರಿಗಳು ಇತ್ತೇ? | | | |
| **ಕೈ ಪಂಪ್/ ಸಾರ್ವಜನಿಕ ನಲ್ಲಿ** | | | | |
| 29 | ಇಂದಿನವರೆಗೆ ಎಷ್ಟು ಕೈಪಂಪುಗಳು ಸುಸ್ಥಿತಿಯಲ್ಲಿಲ್ಲ? | | | |
| 30 | ಇಂದಿನವರೆಗೆ ನಿಂತ ನೀರಿನಲ್ಲಿರುವ ಕೈಪಂಪುಗಳ ಸಂಖ್ಯೆ | | | |
| **ಪ್ರತ್ಯೇಕ ಕುಟುಂಬ ಶೌಚಾಲಯಗಳು** | | | | |
| 31 | ಪ್ರತ್ಯೇಕ ಕುಟುಂಬದಲ್ಲಿ ಶೌಚಾಲಯಗಳನ್ನು ನಿರ್ಮಿಸಿದ ಮತ್ತು ಬಳಸುತ್ತಿರುವ ಕುಟುಂಬಗಳ ಸಂಖ್ಯೆ | | | |
| 32 | ಶೌಚಾಲಯಗಳಿಗೆ ನಿಯತವಾಗಿ ನೀರು ಪೂರೈಕೆಯಾಗುತ್ತಿದೆಯೇ? | | | |
| **ಇತರೆ** | | | | |
| 33 | ಕಳೆದ ತಿಂಗಳಲ್ಲಿ ಮಹಿಳೆಯರ ಮೇಲೆ ದೌರ್ಜನ್ಯವೆಸಗಿದ ಪ್ರಕರಣಗಳ ಸಂಖ್ಯೆ | | | |
| 34 | ವರದಿಯಾದ ಬಾಲ್ಯ ವಿವಾಹ ಪ್ರಕರಣಗಳ ಸಂಖ್ಯೆ | | | |

**ಉಲ್ಲೇಖಗಳು**


- ನರಿಷಿಂಗ್ ಇಂಡಿಯ: ನ್ಯಾಷನಲ್ ನ್ಯೂಟ್ರಿಷನ್ ಸ್ಟ್ರಾಟಜಿ, ನೀತಿ ಆಯೋಗ, ಭಾರತ ಸರ್ಕಾರ, 2017.
- ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆಗಳ ಸಿದ್ಧತೆಗಾಗಿ ಮಾರ್ಗಸೂಚಿಗಳು, ಪಂಚಾಯತ್ ರಾಜ್ ಮಂತ್ರಾಲಯ, ಭಾರತ ಸರ್ಕಾರ, 2018.
- ಮಕ್ಕಳು ಮತ್ತು ಕಾನೂನಿಗೆ ಸಂಬಂಧಿಸಿದಂತೆ ಆಹಾರ ಹಕ್ಕು ಕುರಿತು ಮತ್ತೆ ಮತ್ತೆ ಕೇಳಲಾಗುವ ಪ್ರಶ್ನೆಗಳು, ಮಗು ಮತ್ತು ಕಾನೂನು ಕೇಂದ್ರ (ಸಿಸಿಎಲ್) ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ಯುನಿವರ್ಸಿಟಿ, 2013.
- ರಾಷ್ಟ್ರೀಯ ಆಹಾರ ಸುರಕ್ಷತೆ ಅಧಿನಿಯಮ, 2013ರ ಅನುಷ್ಠಾನವನ್ನು ಗಮನಿಸುವುದು ಮತ್ತು ರಾಜ್ಯ ನಿಯಮಗಳ ಸ್ಥಿತಿಗತಿ: ದಕ್ಷಿಣ ರಾಜ್ಯಗಳನ್ನು ಗಮನಿಸಿ, ಮಗು ಮತ್ತು ಕಾನೂನು ಕೇಂದ್ರ (ಸಿಸಿಎಲ್) ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ಯುನಿವರ್ಸಿಟಿ, 2017.
- ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳ ಕಾರ್ಯನಿರ್ವಾಹಕರಿಗೆ ಪೌಷ್ಟಿಕತೆ ಸಂಬಂಧಿತ ತರಬೇತಿ ಮಾದರಿ, ಮಗು ಮತ್ತು ಕಾನೂನು ಕೇಂದ್ರ (ಸಿಸಿಎಲ್) ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ಯುನಿವರ್ಸಿಟಿ, 2018